ಶ್ರೀ ಸ್ವಾಮಿ ರಾಮತೀರ್ಥ

ಸೋತು ಸೊರಗಿರುವ ಹಿಂದುಸ್ತಾನದ ಇಂದಿನ ಜೀವನದಲ್ಲಿ ಕಷ್ಟಗಳೆದುರಾಗಲು ಕಂಡು ನಗುವ, ನೋವನ್ನು ಮಂದಹಾಸದಿಂದೆದುರಿಸುವ ಈ ಆನಂದಾತ್ಮನ ಸಂದೇಶವು ಅಗತ್ಯವಾಗಿ ಬೇಕಾಗಿದೆ.

ಸ್ವಾಮಿಗಳ ನೆನಪನ್ನು ಅಜರಾಮಗೊಳಿಸಲು ನನ್ನ ಕೈಲಾದದ್ದನ್ನೆಲ್ಲಾ ಮಾಡಲು ಬಯಸುತ್ತೇನೆ. ಅವರನ್ನರಿತು ಪ್ರೀತಿಸಿದವರಿಗೂ, ಅವರ ನಂತರ ಬೆಳೆದಿರುವ ವಿದ್ಯಾರ್ಥಿ ಜೀವನಕ್ಕೂ ಅಂಥ ನೆನಪು ಉತ್ಸಾಹದಾಯಕವಾಗಿರುವುದು. ಈ ಗ್ರಂಥದ ಪ್ರಕಾಶನದಿಂದ ಈ ಫಲವು ಲಭಿಸಲಿ.

ಶ್ರೀ ದೀನಬಂಧು **ಸಿ. ಎಫ್. ಆಂಡ್ರೂಸ್.**

ಲೇಖಕರು :
ಚಿ. ಸದಾಶಿವಯ್ಯ
ಅಧ್ಯಾಪಕ, ಬೆಂಗಳೂರು ನಗರ.

ಶರ... ...ನ್ಸೀಸ್,
...ಸವನಗುಡಿ ಪೋಸ್ಟ್, ಬೆಂಗಳೂರು.

ಬೆಲೆ : ಒಂದು ರೂಪಾಯಿ

ಮು॥ ಶ್ರೀ. ಶ್ರೀ. ಮಂದಾಕಿನೀಬಾಯಿಯವರ ಚಿ. ಸದಾಶಿವಯ್ಯ
ಕರಕಮಲದಲ್ಲಿ - ಕಾಣಿಕೆ 26.4.46

ಶ್ರೀ ಸ್ವಾಮಿ ರಾಮತೀರ್ಥ

||

ಚಿ. ಸದಾಶಿವಯ್ಯ
ಅಧ್ಯಾಪಕರು, ಬೆಂಗಳೂರು ನಗರ

ಪ್ರಕಾಶಕರು:
ಶರತ್ ಏಜನ್ಸೀಸ್
ಬಸವನಗುಡಿ ಪೋಸ್ಟ್
ಬೆಂಗಳೂರು

ಮುದ್ರಕರು:
ಸುಬೋಧ ವಿದ್ಯುನ್ಮುದ್ರಣಾಲಯ
ಬೆಂಗಳೂರು ನಗರ

ಪ್ರಕಾಶಕರ ಮಾತು

ಶ್ರೀ ಸ್ವಾಮಿ ರಾಮತೀರ್ಥರ ಜೀವಿತ ಪರಿಚಯವನ್ನು ಈ ಪುಟ್ಟ ಪುಸ್ತಕದಲ್ಲಿ ನಿರೂಪಿಸಿರುವ ಶ್ರೀ. ಚಿ. ಸದಾಶಿವಯ್ಯನವರು ಕನ್ನಡಿಗರಿಗೆ ಅಪರಿಚಯಸ್ಥರಲ್ಲ. ಅವರ ಮಾಂಗಲ್ಯ, ರಹಸ್ಯ, ಸಿಂಹ, ಜಯಶ್ರೀ, ಕನ್ಯಾಸೆರೆ, ಶಾಂತಿ ಮೊದಲಾದ ಅನೇಕ ನಾಟಕಗಳನ್ನು ಓದಿ, ನೋಡಿದ ಕನ್ನಡಿಗರು ಶ್ರೀಯುತರ ರಚನಾ ಚಾತುರ್ಯವನ್ನು ಚೆನ್ನಾಗಿ ಅರಿತಿರಲೇಬೇಕು. ಅದರಿಂದ ಅವರ ಬರವಣಿಗೆಯ ವಿಚಾರವನ್ನಾಗಲಿ, ಅವರನ್ನು ರಂಗಭೂಮಿಯ ಮೇಲೆ ನೋಡಿ ಮೆಚ್ಚಿದ ಕಲಾ ಪ್ರೇಮಿಗಳಿಗೆ ಅವರ ನಟನಾಚಾತುರ್ಯದ ವಿಚಾರವಾಗಿಯಾಗಲಿ ಹೇಳಬೇಕಾದ ಅವಶ್ಯಕತೆಯಿಲ್ಲ.

ಅವರೇ ಸ್ವತಃ ಅಧ್ಯಾಪಕರಾಗಿದ್ದು, ವಿದ್ಯಾರ್ಥಿ ವರ್ಗಕ್ಕೆ ಉಪಯುಕ್ತವಾಗುವಂತೆ ಸ್ವಾಮಿ ರಾಮರ ಜೀವನದ ವಿದ್ಯಾರ್ಥಿ ಜೀವನವನ್ನೇ ಹೆಚ್ಚು ವಿಸ್ತರಿಸಿ, ಅದಕ್ಕೆ ಪೋಷಕವಾಗುವ ಅವರ ಜೀವನದಲ್ಲಿನ ಮುಖ್ಯ ಅಂಶಗಳನ್ನು ಸೇರಿಸಿ ಈ ಜೀವಿತ ಪರಿಚಯವನ್ನು ಮಾಡಿಕೊಟ್ಟಿದ್ದಾರೆ.

ಈ ಪುಸ್ತಕವನ್ನು ಪ್ರಕಾಶಿಸಲು ಅನುಮತಿ ಕೊಟ್ಟುದಕ್ಕೆ ಅವರಿಗೂ, ಬಹು ಬೇಗನೆ ಮುದ್ರಿಸಿಕೊಟ್ಟ ಸುಬೋಧ ವಿದ್ಯುನ್ ಮುದ್ರಣಾಲಯದ ವ್ಯವಸ್ಥಾಪಕರುಗಳಿಗೂ ನಮ್ಮ ಕೃತಜ್ಞತೆಯನ್ನು ಸಲ್ಲಿಸುತ್ತೇವೆ.

ತಾ|| ೩೦-೩-೧೯೪೩ — ಶರತ್ ಏಜನ್ಸೀಸ್

ಪೀಠಿಕೆ

ಪ್ರಕೃತಿಯು ತನ್ನ ಸಕಲಸಂಪತ್ತು, ಶಕ್ತಿ, ಸೌಂದರ್ಯ, ಸೌಭಾಗ್ಯಗಳನ್ನೆಲ್ಲಾ ಧಾರೆಎರೆದಿರುವ ದೇಶವನ್ನು-ಭೂಸ್ವರ್ಗವನ್ನು ಈ ಜಗತ್ತಿನಲ್ಲಿ ಹುಡುಕಬೇಕಾದರೆ, ನಾನು ಹಿಂದೂಸ್ತಾನದ ಕಡೆಗೆ ಬೆರಳು ತೋರಿಸುವೆ. ಮಾನವನ ಮನಸ್ಸು ಯಾವ ಗಗನದಡಿಯಲ್ಲಿ ಸಂಪೂರ್ಣ ವಿಕಾಸಗೊಂಡು ದಿವ್ಯ ಫಲದಾಯಕವಾಗಿರುವುದೋ, ಜೀವನದ ಗಹನ ಸಮಸ್ಯೆಗಳನ್ನು ಕುರಿತು ದೀರ್ಘ ತಪಸ್ಸುಮಾಡಿರುವುದೋ, ಮತ್ತೂ ಆ ಸಮಸ್ಯೆಗಳಿಗೆ ಪ್ಲೇಟೋಕ್ಯಾಂಟರನ್ನು ಅಧ್ಯಯನಮಾಡಿರುವವರೂ ಸಹಾ ಗಮನಿಸಬೇಕಾದಂಥ ಪರಿಹಾರಗಳನ್ನು ಕಂಡುಹಿಡಿದಿರುವುದೋ ಅಂಥ ದೇಶವು ಯಾವುದೆಂದು ನನ್ನನ್ನು ಕೇಳಿದರೆ, ನಾನು ಹಿಂದುಸ್ತಾನದ ಕಡೆಗೆ ಬೆರಳು ತೋರಿಸುವೆ. ಇಲ್ಲಿ-ಯೂರೋಪಿನಲ್ಲಿ ಗ್ರೀಕರ ಮತ್ತು ರೋಮನ್‌ರ ಜೊತೆಗೆ ಒಂದುಸೆಮೆಟಿಕ್ ಸಂತತಿಯಾದ ಜ್ಯೂಗಳ ಚಿಂತನೆಯಲ್ಲೇ ಬೆಳೆಸಲ್ಪಟ್ಟಿರುವ ನಾವು ನಮ್ಮ ಆಂತರಿಕ ಜೀವನವನ್ನು ಪರಿಪೂರ್ಣಗೊಳಿಸಿಕೊಂಡು, ಹೆಚ್ಚು ವಿಕಾಸಗೊಳಿಸಿಕೊಂಡು, ಅಪಾರಗೊಳಿಸಿಕೊಂಡು, ಹೆಚ್ಚು ಸಂಸ್ಕೃತಿಗೊಳಿಸಿಕೊಂಡು, ಕೇವಲ ಈ ಜನ್ಮಕ್ಕೇ ಅಲ್ಲ, ರೂಪಾಂತರಹೊಂದಿದ ಅನಂತ ಜನ್ಮಕ್ಕೂ ಅಗತ್ಯವಾಗಿ ಬೇಕಾಗಿರುವ ಮದ್ದನ್ನು ಯಾವ ಸಾಹಿತ್ಯದಿಂದ ಸೆಳೆಯಬೇಕಾಗಿದೆಯೆಂದು ನನ್ನನ್ನೇ ಪ್ರಶ್ನಿಸಿಕೊಂಡರೆ, ಮತ್ತೆ ನಾನು ಹಿಂದೂಸ್ತಾನದ ಕಡೆಗೆ ಬೆರಳುತೋರಿಸುವೆ.

ಮಾನವನ ಮನಸ್ಸಿನ ಯಾವ ಬಗೆಯಾದ ವಿಕಾಸವನ್ನು ನೀವು ಅಧ್ಯಯನಮಾಡಲು ಆರಿಸಿದರೂ, ಭಾಷೆಯಾಗಲೀ, ಧರ್ಮವಾಗಲೀ, ಪುರಾಣವಾಗಲೀ, ತತ್ವವಿಚಾರವಾಗಲೀ, ಕಾಯಿದೆಕಟ್ಟುಗಳಾಗಲೀ, ಆಚಾರವ್ಯವಹಾರಗಳಾಗಲೀ, ಪುರಾತನ ಕಲೆಗಳಾಗಲೀ, ಪುರಾತನ ವಿಜ್ಞಾನವಾಗಲೀ, ಯಾವುದನ್ನು ಅಧ್ಯಯನ ಮಾಡಬೇಕಾದರೂ - ನಿಮಗಿಷ್ಟವಿರಲಿ, ಇಷ್ಟವಿಲ್ಲದಿರಲಿ ಹಿಂದೂಸ್ತಾನಕ್ಕೇನೇ ಹೋಗಬೇಕು. ಏಕೆಂದರೆ ಮಾನವನ

ಇತಿಹಾಸದ ಅಪೂರ್ವ, ಅಮೂಲ್ಯ ಉಪದೇಶಭರಿತ ವಿಚಾರ ರತ್ನಗಳು ಹಿಂದೂಸ್ತಾನದಲ್ಲಿ, ಕೇವಲ ಹಿಂದೂಸ್ತಾನದಲ್ಲಿ ಮಾತ್ರ ಶೇಖರಿಸಲ್ಪಟ್ಟಿವೆ

(ಫ್ರೆಡರಿಕ್ ಮ್ಯಾಕ್ಸ್‌ಮುಲ್ಲರ್ ೧೮೮೨ರಲ್ಲಿ ಮಾಡಿದ ಕೇಂಬ್ರಿಡ್ಜ್ ಭಾಷಣಗಳಿಂದ)

* * *

ಉಪನಿಷತ್ತುಗಳಷ್ಟು ಫಲದಾಯಕವಾದ, ಉತ್ಕರ್ಷಕವಾದ, ಉದ್ಧಾರಕರವಾದ ಅಧ್ಯಯನವು ಜಗತ್ತಿನಲ್ಲಿ ಮತ್ತೊಂದಿಲ್ಲ. ಉಪನಿಷತ್ತುಗಳೇ ನನ್ನ ಜೀವನದ ಶಾಂತಿ ಸಮಾಧಾನವಾಗಿರುವುವು.

(ಷೋಪೆನ್‌ಹಾರ್)
ಜರ್ಮನಿ.

* * *

ಉಪನಿಷತ್ತುಗಳು ನನ್ನ ಜೀವನದಲ್ಲಿ ಅಪಾರ ಸುಖಶಾಂತಿಗಳನ್ನೊದಗಿಸಿವೆ.

ದಾರಾಶಿಕೋ (ಸಮ್ರಾಟ್ ಷಾಹಜಹಾನ ಜ್ಯೇಷ್ಠಪುತ್ರ.)

* * *

ಮಹಾ ಹೃದಯಗಳ ಅನುಭವದಿಂದ ಹೊರಬಂದ ಜೀವಂತ ನುಡಿಗಳ ಸತ್ಯಾರ್ಥವನ್ನು ಯಾವ ಒಂದು ಸಂಪ್ರದಾಯದ ತತ್ವವಿಚಾರ ವಿಮರ್ಶೆಯೂ ಸಂಪೂರ್ಣವಾಗಿ ಸ್ಪಷ್ಟಪಡಿಸಲಾರದು. ಆ ನುಡಿಗಳು ಅನಂತವಾಗಿ ವ್ಯಕ್ತಿಗಳ ಜೀವನದ ಭಾಷ್ಯಗಳಿಂದ ನಿದರ್ಶಿಸಲ್ಪಟ್ಟು ವಿವರಿಸಲ್ಪಡಬೇಕಾಗುವುದು; ಆಗ ಒಂದೊಂದು ಹೊಸ ಜ್ಞಾನೋದಯದಿಂದಲೂ ಅವು ಹೆಚ್ಚು ಅವರ್ಣನೀಯವಾಗುವುವು.

(ಶ್ರೀ. ರಬೀಂದ್ರನಾಥ ಠಾಕೂರ್‌ರು.)

F. 524—ಸುಬೋಧ ವಿದ್ಯುನ್ಮುದ್ರಣಾಲಯದಲ್ಲಿ ಮ್ಯಾನೇಜರ್ ಬಿ. ರಂಗನಾಥರಾಯರವರು ಮುದ್ರಿಸಿದರು.

ಮೆಚ್ಚಿಕೆ

(ಶ್ರೀ ದೀನಬಂಧು ಸಿ. ಎಫ್. ಆಂಡ್ರೂಸ್‌ರು ಸ್ವಾಮಿ ರಾಮತೀರ್ಥರ ಭಾಷಣಗಳ ಸಂಪುಟಕ್ಕೆ ಬರೆದಿರುವ ಮುನ್ನುಡಿಯಿಂದ.)

ನಾನು ಪಂಜಾಬಿನಲ್ಲಿ ವಾಸಿಸಿದ್ದರ ಫಲವಾಗಿ ಸ್ವಾಮಿರಾಮರ ಹೆಸರನ್ನು ಗೌರವಿಸಲು ಕಲಿತಿದ್ದೇನೆ. ಅವರ ಹೆಸರನ್ನು ಕೇಳಿದ ಮಾತ್ರದಿಂದಲೇ ಮೇಲಿಂದ ಮೇಲೆ ಜನರು ಮುಖಗಳು ಅರಳುವುದನ್ನು ನೋಡಿದ್ದೇನೆ........ ಹಿಂದೂಸ್ಥಾನದ ವಿದ್ಯಾರ್ಥಿ ಜೀವನವು ದೈಹಿಕ ಸುಖದಲ್ಲಿ ಹೆಚ್ಚು ಮುಳುಗಿ ಹೋಗಿ, ಆಧ್ಯಾತ್ಮಿಕಜೀವನದ ವಿಚಾರದಲ್ಲಿ ಅಗಾಧ ಅಲ್ಲೋಲ ಕಲ್ಲೋಲ ವೆದ್ದಿದ್ದ ಸಮಯದಲ್ಲಿ ಸ್ವಾಮಿರಾಮರು ಜನ್ಮತಾಳಿದರು. ಸರ್ಕಾರೀ ಪಾಠಶಾಲೆಗಳಲ್ಲಿ ಧಾರ್ಮಿಕ ಬೋಧೆಯನ್ನು ಪೂರ್ಣ ತಳ್ಳಿಹಾಕಿ ಪಾಶ್ಚಾತ್ಯ ವಿಜ್ಞಾನವನ್ನು ಕಲಿಸುವುದರ ಫಲವಾಗಿ, ಧರ್ಮದ ಬಗ್ಗೆ ಈ ಬಗೆಯ ತಿರಸ್ಕಾರ ಅನಾದರಗಳು ಉಂಟಾದುವು. ಅಂದು ಪಂಜಾಬಿನ ವಿದ್ಯಾರ್ಥಿ ಜೀವನದಲ್ಲಿ ಕೇವಲ ಪ್ರಾಪಂಚಿಕ ಸುಖಾನ್ವೇಷಣವೇ ಪ್ರಸಿದ್ಧವಾಗಿ ಬೆಳೆದಿದ್ದಿತು.

ತ್ಯಾಗಮೂರ್ತಿಯಾದ ರಾಮರ ಆತ್ಮವು ಈ ಬಗೆಯ ಕೇವಲ 'ಸಂಪಾದಿಸು ಖರ್ಚುಮಾಡು' ಎಂಬ ವಾತಾವರಣಕ್ಕೆ ತಂದ ಸಂದೇಶೋಪದೇಶಗಳು ಸಕಲರ ದೃಷ್ಟಿಯನ್ನೂ ಸೆಳೆದುವು. ಸ್ವಾಮಿ ರಾಮರು ಶೈಶವ್ಯದಿಂದಲೂ ಅಪಾರ ಆತ್ಮ ಸಾಕ್ಷಾತ್ಕಾರಾಕಾಂಕ್ಷೆಯಿಂದ ಬೆಳೆದರಲ್ಲದೆ, ಅವರ ಸಮಸ್ತ ಪ್ರಕೃತಿ ಸ್ವಭಾವಗಳೂ ಅವರನ್ನು ಶುದ್ಧ ಧಾರ್ಮಿಕ ಜೀವನದ ಕಡೆಗೇ ನಡೆಸುತ್ತಿದ್ದುವು.

ಸ್ವಾಮಿಗಳ ಬರವಣಿಗೆಯಲ್ಲಿ ಶಿಶುಸಹಜವಾದ ಸರಳತೆಯೂ, ಅಪಾರ ಆತ್ಮ ಸಂಯಮ, ಕಷ್ಟ ಸಹಿಷ್ಣುತೆಗಳಿಂದ ಒದಗಿ ಬಂದು ಉಕ್ಕಿ ಹರಿಯುವ ಆನಂದೋತ್ಸಾಹಗಳೂ ತೊಳಗಿ ಕಾಣುತ್ತವೆ. ಶಾಂತಿಯಲ್ಲಿ ಐಕ್ಯತೆ ಹೊಂದಿರುವ, ಮತ್ತೂ ತಾನು ಕಂಡ ಈ ಅಮೂಲ್ಯ ಆನಂದ ಸಾಗರವನ್ನು ಇತರರಿಗೂ ತೋರಿಸಲು ಹವಣಿಸುತ್ತಿರುವ ಆತ್ಮನನ್ನ ಈ ಬರವಣಿಗೆಗಳಲ್ಲಿ ಕಾಣುತ್ತೇವೆ.

ಜಗತ್ತಿನ ಸಂಪತ್ತು, ಐಶ್ವರ್ಯ, ಆಶಾಮೋಹಗಳು, ಭೋಗವೈಭವಗಳೂ—ಈ ಸಮಸ್ತವನ್ನೂ ಸ್ವಾಮಿರಾಮರು ಮರುಮಾತಿಲ್ಲದೆ ಬದಿಗೊತ್ತಿಬಿಟ್ಟಿದ್ದಾರೆ. ಅಧಿಕಾರ, ಅಂತಸ್ತುಗಳ ಸ್ವಾಧೀನದಿಂದ ಚಿಗಿದೇಳುವ ಆಶಾಮೋಹಗಳ ಬಿರುಗಾಳಿಗಳು, ಅವರ ಜೀವನ ಪ್ರವಾಹವು ಆನಂದಸಾಗರದೊಂದಿಗೆ ಮಿಲನವಾದ ಶಾಂತಿ ಪ್ರದೇಶವನ್ನು ಸೋಕಲೂ ಎಡೆಯಿಲ್ಲ. ಅವರ ಅಂತರಿಕ ಜೀವನದಲ್ಲಿ ಅವುಗಳ ನೆರಳು ಬೀಳಲೂ ಅವಕಾಶವಿಲ್ಲ. ಅವರಿಗೆ ಅವು ಅರ್ಥವೇ ಆಗುವಂತಿಲ್ಲ. ಅವುಗಳ ವಿಚಾರವಾಗಿ ನುಡಿಯುವಾಗ ಅವರ ಶಿಶುಸಹಜವಾದ ಸರಳ ಗುಣವು ವ್ಯಕ್ತವಾಗುತ್ತದೆ; ಅವರು ತಮ್ಮ ನೆಮ್ಮದಿಯ ನೆಲೆಯಿಂದ ಅವನ್ನು ಕಂಡು ಹುಡುಗ ನಗುವನ್ನು ನಕ್ಕುಬಿಡುತ್ತಾರೆ; ಕೋಮಲ ಹಾಸ್ಯದಿಂದ ಅವನ್ನು ಅಣಕಿಸಿಬಿಡುತ್ತಾರೆ.

ಅವರಲ್ಲಿ ನಾವು ಕಾಣುವ ಎರಡನೆಯ ಗುಣವೆಂದರೆ ತಡೆಯಿಲ್ಲದೆ ಹರಿಯುವ ದಾನಬುದ್ಧಿ; ಮಾತ್ಸರ್ಯ–ಕಿಚ್ಚುಗಳ ಹೆಸರನ್ನೂ ಕೇಳರಿಯದ ಅಪಾರ ದಯೆ. ಜನರನ್ನು ಸದಾ ಒಲಿಸಿಕೊಳ್ಳಲು ಯತ್ನಿಸುತ್ತಾರೆಯೇ ಹೊರತು ಅಟ್ಟುವುದಿಲ್ಲ. ತಮಗೆ ಅನ್ಯವಾದ ಮತಾವಲಂಬಿಗಳೊಂದಿಗೆ ವ್ಯವಹರಿಸುವಾಗಂತೂ ಈ ಸದ್ಗುಣವು ಹೆಚ್ಚು ಪ್ರಕಾಶವಾಗುತ್ತದೆ. ಅವರು ಸದಾ ವಿನಯ, ನಯ, ಸಹಾನುಭೂತಿ ಯುಕ್ತರಾಗಿದ್ದಾರೆ.

ಸ್ವಾಮಿಗಳ ಜೀವನ ಮತ್ತು ಬರವಣಿಗೆಗಳಲ್ಲಿ ನಾನು ಗಮನಿಸಬಯಸುವ ಮೂರನೆಯ ಸದ್ಗುಣವೆಂದರೆ ಅವರ ಅಪಾರ, ಅಗಾಧ ಆನಂದ. ಸರ್ವಸಂಗ ಪರಿತ್ಯಾಗ ಮಾಡಿದ ಕಾರಣ, ಒಂದಿಗೇನೇ ತಮ್ಮ ಸುಖಸಂತೋಷವನ್ನು ಬಿಟ್ಟು ಕುಳಿತಂಥ ಮಂಕು ಮುನಿಗಳಲ್ಲ ಸ್ವಾಮಿರಾಮ. ಅವರು ಅನುಭವಿಸಿದ ರೀತಿಯಲ್ಲಿ ದೈಹಿಕ ಶ್ರಮ, ಕಷ್ಟಗಳನ್ನು ಮತ್ತೆ ಯಾರೂ ಅನುಭವಿಸಲಾರರು; ಆದರೆ ಇದು ಅವರ ಹೃದಯವನ್ನು ಹುಳಿಮಾಡಲಿಲ್ಲ; ಅವರ ಸಂದೇಶವನ್ನು ಕಠಿಣ ಮಾಡಲಿಲ್ಲ; ಅದಕ್ಕೆ ಪ್ರತಿಯಾಗಿ ಅವರ ಮನಸ್ಸು ಆನಂದದಿಂದ ತುಂಬಿ ನಿರ್ಮಲವಾಗಿದ್ದಿತು. ಇವಕ್ಕೆ ಅದರ ಭಾಷಣಗಳ ಶಿರೋನಾಮೆಯೇ ಸಾಕ್ಷಿಯಾಗಿದೆ. "ಅಂತರಿಕ ಸೌಖ್ಯ" "ನಿಮ್ಮ ಗೃಹಗಳನ್ನು ಸುಖಮಯವಾಗಿ ಮಾಡುವುದು ಹೇಗೆ?" "ಸೌಖ್ಯದ ನೆಲೆವೀಡು" ಇತ್ಯಾದಿ.

ಸ್ವಾಮಿಗಳ ವಾಣಿಯೆಲ್ಲಾ ತಮ್ಮ ಸ್ವಾನುಭವವೇ ಹೊರತು ಇತರರ ನುಡಿಗಳಲ್ಲ. ತಾವೇ ಆನಂದ ಮೂರ್ತಿಗಳಾಗಿ ಆ ಆನಂದವನ್ನು ಜಗತ್ತಿಗೆ ಹಂಚಲು ಬಯಸುತ್ತಾರೆ. ಅವರ ಭಾಷಣವು ಈ ಆನಂದದ ವಿಚಾರವಾದಾಗಲಂತೂ ಅವರ ಆನಂದಕ್ಕೆ ಎಲ್ಲೆಯೇ ಇಲ್ಲ.

ಸೋತುಸೊರಗಿರುವ ಹಿಂದುಸ್ತಾನದ ಇಂದಿನ ಜೀವನದಲ್ಲಿ, ಕಷ್ಟಗಳೆದುರಾಗಲು ಕಂಡು ನಗುವ, ನೋವನ್ನು ಮಂದಹಾಸದಿಂದೆದುರಿಸುವ ಈ ಆನಂದಾತ್ಮನ ಸಂದೇಶವು ಅಗತ್ಯವಾಗಿ ಬೇಕಾಗಿದೆ.

ಅವರ ಕಾವ್ಯಮಯವಾದ ಸೃಷ್ಟಿಯಲ್ಲಿನ ಪ್ರೇಮವು ಜೀವನದಲ್ಲಿದ್ದಷ್ಟೇ ಪ್ರಬಲವಾಗಿ ಮರಣದಲ್ಲೂ ಇದ್ದಿತು. ಆತ್ಮೋತ್ಸರ್ಗ, ತ್ಯಾಗಗಳಲ್ಲಿ ಅವರ ಅಪಾರ ಶ್ರದ್ಧೆ ; ಸತ್ಯಾನ್ವೇಷಣೆಯ ಪಿಪಾಸಿಗಾಗಿ ಸರ್ವ ಪರಿತ್ಯಾಗ ; ತಾವು ಸಾಧಿಸಿದ ಆತ್ಮವಿಜಯೋತ್ಸವದ ಅಪಾರ ಆನಂದೊತ್ಸಾಹ ; ಇವೆಲ್ಲದರಿಂದ ಅವರು ಮೈಮರೆತು ಹಾಡುವ ಹಾಡುಗಳು ತತ್ವವೇತ್ತನ ಹಿಂದಿರುವ ನಿಜವಾದ ಕವಿಯನ್ನು ತೋರಿಸುತ್ತವೆ.

ಸ್ವಾಮಿಗಳ ಕವಿಹೃದಯದಲ್ಲಂತೂ ನನ್ನ ಪೂರ್ಣ ಏಕೀಭಾವವಿದೆ. ನಾನು ಉಪನಿಷತ್ತುಗಳಲ್ಲಿನ ಕವಿತೆಗಳನ್ನೂ, ಭಗವದ್ಗೀತೆಯನ್ನೂ ಪಠಿಸುವಾಗ ಉಂಟಾಗುವ ಅನುಭವವೇ ಅವರ ಕವಿತೆಗಳನ್ನು ಪಠಿಸುವಾಗಲೂ ಆಗುವುದು.

ಸ್ವಾಮಿಗಳ ನೆನಪನ್ನು ಅಜರಾಮರಗೊಳಿಸಲು ನನ್ನ ಕೈಲಾದದ್ದನ್ನೆಲ್ಲಾ ಮಾಡಲು ಬಯಸುತ್ತೇನೆ. ಅವರನ್ನರಿತು ಪ್ರೀತಿಸಿದವರಿಗೂ, ಅವರ ನಂತರ ಬೆಳೆದಿರುವ ವಿದ್ಯಾರ್ಥಿ ಜೀವನಕ್ಕೂ ಅಂಥ ನೆನಪು ಉತ್ಸಾಹದಾಯಕವಾಗಿರುವುದು. ಈ ಗ್ರಂಥದ ಪ್ರಕಾಶನದಿಂದ ಈ ಫಲವು ಲಭಿಸಲಿ.

* * *

(ಸ್ವಾಮಿ ಶ್ರದ್ಧಾನಂದರ ಬರವಣಿಗೆಯಿಂದ)

ವೈಯಕ್ತಿಕ ಮತ್ತೂ ರಾಷ್ಟ್ರೀಯ ಸ್ವಾವಲಂಬನದ ಮೂರ್ತಿವರ್ಾ ಸಂದೇಶ–ಸ್ವಾಮಿರಾಮರು. ಸಾಮಾನ್ಯವಾಗಿ ಪ್ರತಿಯೊಬ್ಬ ಭಾರತೀಯನೂ ನಿರ್ಭಯನೂ, ಸ್ವಾವಲಂಬಿಯೂ ಆಗಲು ಯತ್ನಿಸುತ್ತಿರುವ ಈ ಸುಸಮಯದಲ್ಲಿ ಸ್ವಾಮಿರಾಮರ ಜೀವನ ಚರಿತ್ರೆಯು ಎಲ್ಲರ ಪಾರಾಯಣಕ್ಕೂ ಅನು

ಕೂಲವಾಗಿದೆ. ಸ್ವಾಮಿ ರಾಮರ ಜೀವನದಲ್ಲಿ ನನಗೆ ಬಹು ಮೆಚ್ಚಿಕೆಯಾದ ದ್ದೆಂದರೆ ದೈಹಿಕ ಮತ್ತು ಭೌತಿಕವಿಚಾರಗಳ ಹಿಡಿತದಿಂದ ಬಿಡುಗಡೆಹೊಂದಿದ ಅವರ ಆತ್ಮ. ಹಿಂದೂ'ಸನ್ಯಾಸಿ' ಎಂಬ ಹೆಸರು ಬೈಗುಳಿನ ಮಾತಾಗಿದ್ದಂದು, ರಾಮರು ಜಗತ್ತಿನ ಸಮಸ್ತ ಆಶಾಪಾಶಗಳನ್ನು ಕಿತ್ತೊಗೆದು, ಗಾಳಿಯಂತೆ ಸ್ವತಂತ್ರರಾಗಿದ್ದರು. ಪ್ರಾಪಂಚಿಕ ಅಂತಸ್ತು ಗೌರವಗಳು ಅವರ ದೃಷ್ಟಿಯಲ್ಲಿ ತೃಣಕ್ಕಿಂತಲೂ ಕಡೆಯಾಗಿದ್ದುದರಿಂದ ಅವರು ಸನ್ಯಾಸಿಗಳಾದರು. ಇಂದು ಸನ್ಯಾಸಿಗಳೆನಿಸಿಕೊಂಡಿರುವವರಿಗೆ ಅನುಸರಿಸಲು ಮಾದರಿಯಾಗಿದ್ದರು; ಅವರ ಚರಿತ್ರೆಯು ಅಷ್ಟು ಉಚ್ಚವಾಗಿದ್ದಿತು. ಅವರು ಸರಳಜೀವನ ಮತ್ತು ಉತ್ತಮ ಚಿಂತನೆಯಮಾದರಿಯಾಗಿದ್ದರು. ಅವರ ಉನ್ನತ ಆಧ್ಯಾತ್ಮಿಕ ಜೀವನದಿಂದ ಅಮೆರಿಕನ್ನರು ಬೆರಗಾದರು; ಪ್ರೆಸಿಡೆಂಟ್ ರೂಝುವೆಲ್ಟ್‌ನೂ ಸಹ ಅವರನ್ನು ಕಾಣಲುಬಂದನು. ರಾಮರು ಅತ್ಯುತ್ಕೃಷ್ಟ ದೇಶಾಭಿಮಾನಿಗಳು. ಅವರು ತಮ್ಮ ಸರ್ವಸ್ವವನ್ನೂ ಮಾತೃಭೂಮಿಯ ವೇದಿಕೆಯಲ್ಲಿ ಅರ್ಪಿಸಿಬಿಟ್ಟರು.

(ಸರ್ದಾರ್ ಪೂರ್ಣಸಿಂಹರ ಬರವಣಿಗೆಯಿಂದ)

ಈಶ್ವರನನ್ನು ಗೆಲ್ಲಲು ಅಪಾರ ಸಾಹಸಪಟ್ಟು ಗೆದ್ದ, ಸ್ವಾರ್ಥವನ್ನು—ಮಮಕಾರವನ್ನು ದೂಳಿನಲ್ಲಿ ತುಳಿದು ಮೆಟ್ಟಿ ಈಶ್ವರನಲ್ಲಿ ಐಕ್ಯತೆಪಡೆದ, ಬ್ರಹ್ಮವಿದ್ಯೆಯ ಸಾಕ್ಷಾತ್ಕಾರವು ಪೂರ್ಣ ಸ್ವಾತಂತ್ರ್ಯಕ್ಕೆ ಹಾದಿಯೆಂಬುದನ್ನೂ, ಜಗತ್ತಿನ ಸಮಸ್ತ ಕಷ್ಟನಿಷ್ಠೂರದ ಸಮಸ್ಯೆಗಳ ಬಿಡುಗಡೆಯೂ ಈ ಆತ್ಮ ಸಾಕ್ಷಾತ್ಕರದ ಉನ್ನತ ಅಂತಸ್ತಿನಲ್ಲೇ ಅಡಗಿರುವುದೆಂಬುದನ್ನೂ ತಮ್ಮ ಜೀವಮಾನದಲ್ಲೇ ಸಾಧಿಸಿ ತೋರಿಸಿದ - ಸ್ವಾಮಿ ರಾಮರು ವಿದ್ಯಾವಂತ ಭಾರತೀಯರ ಮಧ್ಯೆ ದಿವ್ಯವಾಗಿ ನಿಂತಿದ್ದಾರೆ. ಪಂಜಾಬಿನ ಒಬ್ಬ ಕೇವಲ ಬ್ರಾಹ್ಮಣ ಬಾಲಕನು ಈ ದಿನಗಳಲ್ಲಿ ನಮ್ಮ ಕಣ್ಣೆದುರಿಗೇನೇ ಉಪನಿಷತ್ತು ವೇದವೇದಾಂತಗಳನ್ನು ರಚಿಸಿದ ಜ್ಞಾನಿಗಳ ಋಷಿಗಳ ಸಾಕ್ಷಾತ್ಕಾರವನ್ನು ತನ್ನ ಜೀವನದಲ್ಲಿ ಸಾಧಿಸಿ ತೋರಿಸಿ, ಪ್ರತಿಬಿಂಬಿಸಿರುವುದು, ಅಪಾರಶ್ರದ್ಧೆ, ಭಕ್ತಿ, ಆತ್ಮಸಂಯಮ, ಅಪೂರ್ವಭಕ್ತಿ, ಮಾನಸಿಕ ಶ್ರಮ, ಅದ್ಭುತ ಚಿತ್ತ ಸ್ಥೈರ್ಯಗಳ ಪವಾಡವಾಗಿದೆ.

ಶ್ರೀ ಸ್ವಾಮಿ ರಾಮತೀರ್ಥ

ಮುರಲೀವಾಲಾದಲ್ಲಿ

ವೇದಗಳ ಜನ್ಮಭೂಮಿಯಾದ ಪವಿತ್ರ ಪಂಚನದ ಪ್ರಾಂತದಲ್ಲಿ ಮುರಲೀವಾಲಾ ಎಂಬ ಗ್ರಾಮವೊಂದುಂಟು. ಅಲ್ಲಿ 'ರಾಮಚರಿತ ಮಾನಸ'ವೆಂಬ ಹಿಂದೀ ರಾಮಾಯಣವನ್ನು ರಚಿಸಿ ಪ್ರಖ್ಯಾತರಾದ ಶ್ರೀ ಗೋಸ್ವಾಮಿ ತುಳಸೀದಾಸರ ವಂಶಸ್ಥನಾದ ಗೋಸ್ವಾಮಿ ಹೀರಾನಂದನ ಬಡಕುಟುಂಬದಲ್ಲಿ ದೀಪಾವಳಿಯ ಮರುದಿನವಾದ ಅಂದು ಪುತ್ರ ಜನನವಾಗಿದ್ದಿತು. ೧೮೭೩ನೇ ಇಸವಿ ಅಕ್ಟೋಬರ್ ೨೨ನೇ ತಾರೀಖಿನ ದಿನ ಹೀರಾನಂದನು ಜಾತಕವನ್ನು ಬರೆಯುತ್ತಿದ್ದ ತನ್ನ ವೃದ್ಧ ಮಾವನ ಬಳಿ ನಿರೀಕ್ಷಣಾ ದೃಷ್ಟಿಯಿಂದ ಕುಳಿತಿದ್ದನು. ಜಾತಕದ ಫಲಾಫಲಗಳನ್ನು ಗುಣಿಸುತ್ತಿದ್ದ ವೃದ್ಧನ ಕಣ್ಣುಗಳು ಕ್ರಮವಾಗಿ ಅಶ್ರುಪೂರಿತವಾದುವು. ಹೀರಾನಂದನ ಹೃದಯವು ತಲ್ಲಣಿಸಿತು. ಒಂದೆರಡು ನಿಮಿಷಗಳಲ್ಲಿಯೇ ವೃದ್ಧನ ಮುಖದಲ್ಲಿ ಮುಗುಳ್ನಗೆಯ ಸುಕ್ಕುಗಳು ಕಂಡುಬಂದವು. ಹೀರಾನಂದನು "ಆರ್ಯಾ! ಭವಿಷ್ಯವು ಹೇಗಿರುವುದು?" ಎಂದು ಪ್ರಶ್ನಿಸಿದನು. ವೃದ್ಧನು ಗಂಭೀರ ಧ್ವನಿಯಿಂದ ನುಡಿದನು. "ಈ ಮಗುವಿನ ಜನನ ನಕ್ಷತ್ರದಿಂದ ಕಂಡುಬರುವುದು ಇದಕ್ಕೆ ಕೆಲವೇ ದಿನಗಳ ಆಯುಸ್ಸು-ಇಲ್ಲವೇ ಶೀಘ್ರದಲ್ಲಿಯೇ ಮಾತೃವಿಯೋಗ. ಒಂದುವೇಳೆ ಮಗುವೇ ಉಳಿದುಕೊಂಡು ದೊಡ್ಡವನಾದರೆ ಅವನು ಮಹಾತ್ಮನಾಗುವನು. ತತ್ಫಲವಾಗಿ ಲೋಕ ಕಲ್ಯಾಣವೂ, ಗೋಸ್ವಾಮಿಗಳ ವಂಶೋದ್ಧಾರವೂ ಆಗುವುದು."

ಜನ್ಮಪತ್ರ

ಶ್ರೀ ಸಂವತ್ ೧೯೩೦ ವಿಕ್ರಮೀಯ ಶಕೆ ೧೭೯೫ ಶಾಲೀವಾಹನೆ ಶ್ರೀ ಸೂರ್ಯೆ ದಕ್ಷಿಣಾಯನೆ ಶರದೃತೌ ಕಾರ್ತಿಕಮಾಸೆ ಶುಕ್ಲಪಕ್ಷೆ ತಿಥೌ ಪ್ರತಿ

ಪದಾಯಾಂ ಬುಧವಾಸರೆ ಘಡೀ ೨೫ ಪಲ್ ೫೫ ಸ್ವಾತಿನಕ್ಷತ್ರೆ ೩೧।೨೫ ಪ್ರೀತಿಯೋಗೇ ೨೯।೪೯ ಬವಕರಣೆ ಪಂಚಾಂಗೆ ಶ್ರೀ ಸೂರ್ಯೋದಯಾದಿಷ್ಟೆ ೩೪।೪೮ ಶುಭಲಗ್ನೋದಯೆ ಶ್ರೀಮದ್ಗೋಸ್ವಾಮಿ ರಾಮಮಲಾತ್ಮಜ ಗೋಸ್ವಾಮಿ ಹೀರಾನಂದ ಗೃಹೆ ಪುತ್ರೋಜಾತಃ ರಾಶಿನಾಮ್ ಸ್ವಾತಿ ನಕ್ಷತ್ರಾತ್ ಅಂತ್ಯಚರಣೆ ತಾರಾಚಂದ್ರ ಇತಿ ತುಲಾರಾಶಿ: ವ್ಯವಹಾರ ನಾಮ ತೀರ್ಥರಾಮ ಇತಿಲೋಕೇ ಪ್ರಸಿದ್ಧಃ.

೧ ಮೇಷ, ರಾಹು	೧೨ ಮೀನ	೧೧ ಕುಂಭ	೧೦ ಶನಿ, ಮಕರ
೨ ವೃಷಭ	ಜನ್ಮಲಗ್ನ		೯ ಧನ, ಮಂಗಳ
೩ ಮಿಥುನ			೮ ವೃಶ್ಚಿಕ
೪ ಕರ್ಕ	೫ ಸಿಂಹ	೬ ಕನ್ಯಾ, ಬೃಹಸ್ಪತಿ ಶುಕ್ರ,	೭ ತು, ಕೆ, ಸೂ, ಚ, ಬು.

ಮುಂದೆ ಇದರ ಫಲವು ಈ ರೀತಿ ಬರೆಯಲ್ಪಟ್ಟಿತು :—

ಬಾಲಕನು ಸಾಂಸಾರಿಕ ಸುಖದುಃಖವನ್ನು ಒಗೆದು ಪರಮಾನಂದ ಸಾಗರದಲ್ಲಿ ಈಸುವನು. ಮತ್ತೂ ಸಾಂಸಾರಿಕ ಪ್ರೇಮ ನದಿಯನ್ನು ದಾಟಿ ಈಶ್ವರೀ ಪ್ರೇಮದಲ್ಲಿ ಐಕ್ಯನಾಗುವನು. ಪ್ರಪಂಚ ಪರ್ಯಟನ ಮಾಡುವನು. ತನ್ನ ವಂಶವನ್ನು ಉದ್ಧರಿಸಿ ದೇಶದ ಕೀರ್ತಿಯನ್ನು ಮೆರೆಸುವನು.

೧. ಈ ಮಗುವು ತಾಯಿಯ ಹಾಲನ್ನು ಕುಡಿಯುವುದಿಲ್ಲ.

೨. ಬಹಳ ವಿದ್ಯಾ ಪ್ರಾಪ್ತಿಯಾಗುವುದು.

೩. ತಪಸ್ಸು ಮಾಡುವನು ಮತ್ತು ಭಜನೆಯಲ್ಲಿ ಲವಲೀನನಾಗುವನು.
೪. ತನ್ನ ಇಪ್ಪತ್ತೆಂಟನೆಯ ವಯಸ್ಸಿನಲ್ಲಿ ವಿರಕ್ತನಾಗಿ ಈಶ್ವರ ದರ್ಶನಲಾಲಸೆಯಿಂದ ವಾನಪ್ರಸ್ಥನಾಗುವನು.
೫. ಕೀರ್ತಿವಂತನಾಗುವನು.
೬. ಮೂವತ್ತು ನಲವತ್ತು ವರುಷ ವಯಸ್ಸಿನ ಮಧ್ಯೆ ನೀರಿನ ಗಂಡ ವಿದೆ ಇತ್ಯಾದಿ.

ಕೆಲವು ದಿನಗಳಲ್ಲಿಯೇ ಜಾತಕದ ಫಲವು ನಿಜವಾಯಿತು. ತಾಯಿಯು ಹಸುಗೂಸನ್ನು ಬಿಟ್ಟು ಪರಂಧಾಮವನ್ನೈದಿದಳು. ತಬ್ಬಲಿಯಾದ ಮಗುವು ಹಸುವಿನ ಹಾಲನ್ನು ಆಶ್ರಯಿಸಿ ಬೆಳೆಯ ಬೇಕಾಯಿತು. ಈ ರೀತಿ ತಾಯಿಹಾಲಿಲ್ಲದೆ ಬೆಳೆದ ತೀರ್ಥರಾಮನು ಬಾಲ್ಯದಲ್ಲೂ, ಸ್ವಲ್ಪ ಕಾಲದವರೆಗೆ ತಾರುಣ್ಯದಲ್ಲೂ ಕೂಡ ಬಹು ನಿರ್ಬಲನಾಗಿ ಆಗಿಂದಾಗ್ಗೆ ದೇಹಾಲಸ್ಯದಿಂದ ಕೂಡಿರುತ್ತಿದ್ದನು. ಆದರೆ ಅವನ ಶ್ರದ್ಧಾ ಸಾಹಸ ಸತತ ಪ್ರಯತ್ನಗಳಿಂದ ಎಂಥ ದೃಢಕಾಯನಾದನೆಂಬುದು ಮುಂದೆ ಸ್ಪಷ್ಟವಾಗುತ್ತದೆ. ಬಡವನಾದ ಹೀರಾನಂದನು ಪೆಶಾವರ್ ಮತ್ತು ಸ್ವಾತ್ ಪಟ್ಟಣಗಳ ಬ್ರಾಹ್ಮಣ ಕುಟುಂಬ ಗಳ ಪೌರೋಹಿತ್ಯದಿಂದ ಜೀವನವನ್ನು ನಡೆಯಿಸುತ್ತಿದ್ದನು. ಆದಕಾರಣ ಈ ತಬ್ಬಲಿ ಮಗುವನ್ನು ಸಾಕುವ ಭಾರವು ಅಣ್ಣನಾದ ಗೋಸ್ವಾಮಿ ಗುರು ದಾಸನನ್ನು ಮತ್ತು ಅವನ ವೃದ್ಧ ಸೋದರತ್ತೆಯನ್ನೂ ಸೇರಿತು. ಗುರು ದಾಸನ ಪತ್ನಿಯೂ ಸಹ ಮಗುವನ್ನು ವಿಶ್ವಾಸದಿಂದ ನೋಡಿಕೊಳ್ಳುತ್ತಿದ್ದಳು. ದೈವಭಕ್ತಿ ಪೂರಿತಳಾದ ಈಕೆಯು ತಾನು ದೇವಾಲಯಕ್ಕೆ ಹೋಗುವಾಗ ಲ್ಲೆಲ್ಲಾ ತೀರ್ಥರಾಮನೆಂದು ನಾಮಕರಣವಾದ ಈ ಮಗುವನ್ನು ತಪ್ಪದೇ ತನ್ನ ಸಂಗಡ ಕರೆದುಕೊಂಡು ಹೋಗುತ್ತಿದ್ದಳು. ಆ ಶೈಶವದಲ್ಲೇ ತೀರ್ಥರಾಮನಿಗೆ ಶಂಖ ಜಾಗಟೆಗಳ ನಾದವನ್ನಾಗಲೀ, ವೇದ ಮಂತ್ರಗಳ ಘೋಷಣೆಯನ್ನಾಗಲೀ, ಓಂಕಾರ ನಾದವನ್ನಾಗಲೀ ಕೇಳುವುದೆಂದರೆ ಬಹು ಪ್ರೀತಿ. ಎಷ್ಟೇ ಹಟಮಾಡಿ ಅಳುತ್ತಿದ್ದರೂ ಆ ಧ್ವನಿಯು ಕಿವಿಗೆ ಬೀಳುತ್ತಲೇ ತಟ್ಟನೆ ಅಳುವನ್ನು ನಿಲ್ಲಿಸಿ ಆನಂದದಿಂದ ಕೈ ತಟ್ಟುವನು.

ತೀರ್ಥರಾಮನಿಗೆ ಕೇವಲ ಎರಡು ವರುಷದ ಮಗುವಾಗಿರುವಾಗಲೇ ವಜೀರಾಬಾದ್ ತಹಸೀಲ್‌ನ ವೆರೋಕಿಯ ರಾಮಚಂದ್ರ ಪಂಡಿತರೆಂಬುವರ

ಹೆಣ್ಣುಕೂಸಿನೊಂದಿಗೆ ವಿವಾಹದ ಒಪ್ಪಂದವಾಗಿಬಿಟ್ಟಿತ್ತು. ಮುಂದೆ ಅವರ ಹತ್ತನೆಯ ವಯಸ್ಸಿನಲ್ಲಿಯೇ ಮದುವೆಯೂ ಆಗಿಹೋಯಿತು. ಈ ಅರಿವಿಲ್ಲದ ವಯಸ್ಸಿನಲ್ಲಿ ನಡೆದ ಈ ವಿವಾಹದ ಬಗ್ಗೆ ರಾಮರು ಏನು ಹೇಳಲೂ, ಏನು ಮಾಡಲೂ, ತೋರದವರಾಗಿದ್ದರೂ ಮುಂದೆ ಇದರಿಂದ ತಮ್ಮ ವಿದ್ಯಾಭ್ಯಾಸಕ್ಕುಂಟಾದ ಎಡರುತೊಡರುಗಳನ್ನಂತೂ ಅನುಭವಿಸಿಯೇ ತೀರಬೇಕಾಯಿತು. ಅಸಾಧಾರಣ ಸಂಕಲ್ಪ ಶ್ರದ್ಧಾಸ್ಥೈರ್ಯಗಳ ಮೂರ್ತಿಯಾದ ರಾಮರೊಬ್ಬರು ಈ ತೊಡರೊಂದಿಗೇನೇ ಎಡವುತ್ತಾ ಕುಗ್ಗದೆ ಮುನ್ನುಗ್ಗಿ ತಮ್ಮ ಪುರುಷಾರ್ಥವನ್ನು ಸಾಧಿಸಿಕೊಳ್ಳಬಲ್ಲವರಾದರು.

ಅಂತೂ ತೀರ್ಥರಾಮನು ಐದು ವರುಷದ ಬಾಲಕನಾದನು. ಅಂದಿನಿಂದಲೂ ಈತನಿಗೆ ಏಕಾಂತದಲ್ಲಿಯೇ ಪ್ರೇಮ. ಕಂಡವರು "ಹುಡುಗ ಮಂಕಾಗಿರುವನು" ಎಂದುಕೊಳ್ಳುತ್ತಿದ್ದರು. ಆ ಬಾಲ್ಯದಿಂದಲೂ ರಾಮಾಯಣ ಮಹಾಭಾರತದ ಕಥೆಗಳನ್ನು ಕೇಳುವುದೆಂದರೆ ಬಾಲಕನಿಗೆ ಪ್ರೇಮ. ಕಥೆಗಳು ಈ ಎಳೆಯ ಬಾಲಕನ ಹೃದಯದಮೇಲೆ ಉಂಟುಮಾಡುತ್ತಿದ್ದ ಪರಿಣಾಮಗಳನ್ನು ಅವನ ಮುಖಮುದ್ರೆಯಿಂದ ಕಾಣುವವರು ಆಶ್ಚರ್ಯಪಡುತ್ತಿದ್ದರು.

ಐದನೇ ವರುಷದ ಹುಟ್ಟಿದ ಹಬ್ಬವಾದನಂತರ ಮುರಲೀವಾಲಾದಲ್ಲಿದ್ದ ಉರ್ದು ಪ್ರೈಮರಿ ಪಾಠಶಾಲೆಗೆ ಸೇರಿಸಲ್ಪಟ್ಟನು. ಅಲ್ಲಿ ತೀರ್ಥರಾಮನು ಮೌಲ್ವಿಯನ್ನು ಬಹು ಭಕ್ತಿಯಿಂದ ಕಾಣುತ್ತಾ, ತನ್ನ ಹತ್ತನೇ ವಯಸ್ಸಿನೊಳಗೆ ಉರ್ದು, ಪರ್ಶಿಯನ್ ಭಾಷೆಗಳನ್ನು ಓದಿ ಬರೆಯುವುದರಲ್ಲಿ ಜಯಶಾಲಿಯಾದುದಲ್ಲದೆ, ಪರ್ಶಿಯನ್ ಭಾಷೆಯ ಕಷ್ಟಸಾಧ್ಯವಾದ "ಗುಲಿಸ್ತಾನ್", "ಬೋಸ್ತಾನ್" ಎಂಬ ಗ್ರಂಥಗಳನ್ನು ಬಾಯಿಪಾಠಮಾಡಿ ತನ್ನ ಮೌಲ್ವಿಯ ಮೆಚ್ಚಿಗೆಯನ್ನು ಪಡೆದನು. ಈಮಧ್ಯೆ ತನ್ನ ಮೌಲ್ವಿಯಿಂದ ಊಟಕ್ಕೆ ಅವಕಾಶ ಬೇಡುವುದಕ್ಕೆ ಬದಲಾಗಿ ಕಥಾಶ್ರವಣಕ್ಕೆ ಬಿಡುವನ್ನು ಕೇಳಿಕೊಂಡು ಬಂದುಬಿಡುತ್ತಿದ್ದನು.

ತೀರ್ಥರಾಮನಿಗೆ ಆಟಪಾಟಗಳಲ್ಲಿ ಉತ್ಸಾಹವಿರಲಿಲ್ಲ. ಹಗಲನ್ನೆಲ್ಲಾ ಓದುವುದರಲ್ಲೇ ಕಳೆಯುತ್ತಿದ್ದನು; ಸಂಜೆಯಲ್ಲಿ ಬಿಡುವಾಗುತ್ತಲೇ ಪವಿತ್ರ ಗ್ರಂಥಗಳ ಶ್ರವಣಕ್ಕಾಗಿ ಧರ್ಮಶಾಲೆಗೆ ಹೋಗಿ ಕೂಡುತ್ತಿದ್ದನು. ರಾತ್ರಿಗೆ

ಹಿಂದಿರುಗಿ ಬಂದು, ಭೋಜನಾನಂತರ ತಾನು ಕೇಳಿದ್ದನ್ನೆಲ್ಲಾ ಚಾಚೂ ತಪ್ಪದೆ ಪಠಿಸುತ್ತಾ ಕೇಳುತ್ತಿದ್ದ ಸಂಟರಿಷ್ಟರಿಗೆ ಪರಮಾಶ್ಚರ್ಯವನ್ನುಂಟು ಮಾಡುತ್ತಿದ್ದನು

ಆ ಪಾಠಶಾಲೆಯಲ್ಲಿ ತೀರ್ಥರಾಮನ ವಿದ್ಯಾಭ್ಯಾಸವು ಮುಗಿದಿದ್ದಿತು. ಶಾಲೆಯನ್ನು ಬಿಡುವಾಗ ಮೌಲ್ವಿಯು ಕಂಬನಿದುಂಬಿ ಬಾಲಕನನ್ನು ಬೀಳ್ಕೊಟ್ಟನು. ಅಂದಿನಿಂದಲೇ ಈ ಪ್ರೇಮಮೂರ್ತಿಯ ಪ್ರಭಾವವು ಹೀಗಿದ್ದಿತು ಇವನ ಗುರುಭಕ್ತಿಯು ಹೇಗಿದ್ದಿತೆಂದರೆ, ಒಂದು ದಿನ ತಂದೆಯನ್ನು ಕುರಿತು—"ಅಪ್ಪಾ! ನನಗೆ ಇಂತಹ ವಿದ್ಯಾಮೃತವನ್ನು ಪಾನಮಾಡಿಸಿ ಸಾಕಿದ ಮೌಲ್ವಿಗಳಿಗೆ, ನಮ್ಮ ಮನೆಯ ಹಾಲುಕೊಡುವ ಹಸುವನ್ನಾದರೂ ಕೊಟ್ಟುಬಿಡೋಣ" ಎಂದಿದ್ದನು.

ಬಾಲಕನ ಮುಂದಿನ ವಿದ್ಯಾಭಿವೃದ್ಧಿಗೆ ತಕ್ಕ ಪಾಠಶಾಲೆಯು ಸಣ್ಣ ಗ್ರಾಮವಾದ ಮುರಲೀವಾಲಾದಲ್ಲಿ ಇರಲಿಲ್ಲ. ಆದಕ್ಕಾಗಿ ಅಲ್ಲಿಂದ ಹದಿನೈದು ಮೈಲಿ ದೂರದಲ್ಲಿದ್ದ ಗುಜರ್‌ವಾಲಾ ಪಟ್ಟಣಕ್ಕೆ ಬರಬೇಕಾಗಿದ್ದಿತು. ಅಲ್ಲಿನ ಸ್ಪೆಷಲ್ ಕ್ಲಾಸಿಗೆ ಸೇರಿ ಇಂಗ್ಲೀಷ್‌ನಲ್ಲಿ ಉತ್ತೀರ್ಣನಾಗಿ ೧೮೮೭ರಲ್ಲಿ ಮಿಡಲ್ ಕ್ಲಾಸಿಗೆ ಸೇರಿಸಲ್ಪಟ್ಟನು. ಈ ವೇಳೆಗೆ ಬಾಲಕನಿಗೆ ೧೨ ವರ್ಷ ವಯಸ್ಸು. ಅಲ್ಲಿ ಹೀರಾನಂದನ ಮಿತ್ರ ಭಗತ್ ಧನ್ನಾರಾಮ್ ಎಂಬ ಒಬ್ಬ ವಿಚಿತ್ರ ವ್ಯಕ್ತಿ ಇದ್ದನು. ತೀರ್ಥರಾಮನು ಹತ್ತನೇ ವಯಸ್ಸಿನಲ್ಲಿಯೇ ತನ್ನವರನ್ನೆಲ್ಲಾ ಬಿಟ್ಟು, ಹೊಸ ಊರಿಗೆ, ಹೊಸಬನಾಗಿ ಬಂದು ಈ ಧನ್ನಾರಾಮನ ರಕ್ಷಣೆಯಲ್ಲಿ ಸೇರಿದನು. ಬಾಲಕನ ಬೆಳೆಯುವ ಮನಸ್ಸಿನಮೇಲೆ ಈ ಪೋಷಕನ ಪ್ರಭಾವವು ಎಷ್ಟು ಪ್ರಬಲವಾಗಿತ್ತೆಂಬುದನ್ನು ಕಾಣುವ ಮೊದಲು ಈ ವಿಚಿತ್ರ ಮನುಷ್ಯನ ಸ್ಥೂಲ ಪರಿಚಯವನ್ನು ಮಾಡಿಕೊಳ್ಳೋಣ.

ಗುಜರ್‌ವಾಲಾದಲ್ಲಿ

ಧನ್ನಾರಾಮನ ತಂದೆ ಜೋಹರ್‌ಮಲ್ ಎಂಬ ಕುಚುಗಾರನು. ತಾಯಿಯು ಇವನನ್ನು ಶೈಶವದಲ್ಲೇ ಬಿಟ್ಟು ಕಾಲಗತಿಯನ್ನೈದಿದ್ದಳು. ಧನ್ನಾ

ರಾಮನು ಪ್ರಚಂಡ ಬುದ್ಧಿಶಾಲಿ. ತನ್ನ ತರಗತಿಯ ಜೊತೆಯವರೆಲ್ಲರನ್ನೂ ಬಹು ಜಾಗ್ರತೆಯಾಗಿ ಮೀರಿಸುತ್ತಿದ್ದನು. ಅವರೆಲ್ಲರೂ ಸೇರಿ ಇವನ ಮೇಲೆ ಇಲ್ಲದ ಸಲ್ಲದ ದೋಷಾರೋಪಣೆಮಾಡಿ ಅವನ ಅವಮಾನವಾಗಿ ಶಾಲೆಯನ್ನು ಬಿಡುವ ಹಾಗೆ ಮಾಡಿದರು. ಅಂದಿನಿಂದ ಮನಸ್ಸು ರೋಸಿದ ಧನ್ನಾರಾಮನು ವ್ಯಾಸಂಗವನ್ನು ಬಿಟ್ಟು ತನ್ನ ತಂದೆಯ ಕಸುಬನ್ನು ಕಲಿಯಲು ಕೈಹಾಕಿದನು. ಅಂಗಡಿಯ ಕೆಲಸದಿಂದ ಬಿಡುವು ಸಿಕ್ಕದಾಗಲೆಲ್ಲಾ ಕುಸ್ತಿ, ಗರುಡಿ ವಿದ್ಯೆಗಳಲ್ಲಿ ಕಾಲ ಕಳೆಯುತ್ತಿದ್ದನು. ಅವನ 19ನೆಯ ವಯಸ್ಸಿನಲ್ಲಿ ಆ ಊರಿಗೆ ಬಂದ ದೊಡ್ಡ ಜಟ್ಟಿಯೊಬ್ಬನನ್ನು ಬಡಿದು ಸೋಲಿಸಿದನು. ಮತ್ತು ಜನರು ಬೆನ್ನುತಟ್ಟಲು ಬಂದಾಗ ಈ ಜಯಕ್ಕೆ ದೇವರೇ ಕಾರಣವೆಂದು ವಿನಯದಿಂದ ಹೇಳಿದನು. ಈತನ ಹೃದಯವು ಬಹು ಸಾಧುವಾಗಿದ್ದಿತು. ಸುಧಾಮನ ಕತೆಯನ್ನು ಕೇಳಿದಾಗ ಕಣ್ಣೀರು ಸುರಿಸುತ್ತಿದ್ದನು. ಮನಸ್ಸು ದೇಹಗಳ ಮೇಲೆ ಅಪಾರ ಸ್ವಾಧೀನವನ್ನು ದೊರಕಿಸಿಕೊಳ್ಳಬೇಕೆಂಬುದು ಈತನ ಅಭಿಲಾಷೆ. ಇದಕ್ಕಾಗಿ ಬೇಸಿಗೆಯ ದಿನಗಳಲ್ಲಿ ಕಂಬಳಿಯನ್ನು ಹೊದ್ದುಕೊಂಡು ಕುಳಿತುಕೊಳ್ಳುತ್ತಿದ್ದನು. ಅಂತೆಯೇ ಬಹು ಚಳಿಯ ದಿನಗಳಲ್ಲಿ ಬೆನ್ನಮೇಲೆ ಬಟ್ಟೆ ಇಲ್ಲದೆ ಅಲೆದಾಡುತ್ತಿದ್ದನು. ಒಂದೊಂದು ಸಲ ಪಕ್ಕೆಗಳು ನೋಯುವವರೆಗೂ ದಿನಗಟ್ಟಲೆ ನಗುತ್ತಾ ಕುಳಿತುಬಿಡುತ್ತಿದ್ದನು. ಹಲವು ವೇಳೆ ಮೂಗು ಜೀವಿಯಂತೆ ಮೌನವಾಗಿ ಇದ್ದು ಬಿಡುತ್ತಿದ್ದನು. ಕೇಳಿದ ತತ್ವಗಳನ್ನು ಅಭ್ಯಾಸಬಲದಿಂದ ಸಾಧಿಸಿ ಬಿಡುವುದು ಅವನ ಹುಟ್ಟುಗುಣವಾಗಿದ್ದಿತು. ಒಮ್ಮೆ 'ನಾವೆಲ್ಲರೂ ಈಶ್ವರ ಸ್ವರೂಪವೆ' ಎಂಬ ತತ್ವವನ್ನು ಕೇಳಿ ಅಂದಿನಿಂದ ಕಂಡಕಂಡವರನ್ನೆಲ್ಲಾ 'ಖುದಾ' (ಈಶ್ವರ) ಎಂದು ಕರೆಯತೊಡಗಿದನು. ಪರಿಣಾಮವಾಗಿ ಜನರೆಲ್ಲರೂ ಇವನನ್ನು 'ಖುದಾ' ಎಂದೇ ಸಂಭೋದಿಸುತ್ತಿದ್ದರು. ಆದರೂ ಧನ್ನಾರಾಮನ ಹೃದಯವು ವಿಮುಖವಾಗಿ ದುಃಖಿಸುತ್ತಿತ್ತು. ಈ ಸಮಯದಲ್ಲಿ ಯಾವನೋ ಗುರುವಿನ ದರುಶನವಾಗಿ ಅವನೊಡನೆ ಕಾಡಿಗೆ ಹೊರಟು ಹೋದನೆಂದೂ, ಅಲ್ಲಿ ಹಲವು ಸಿದ್ಧಿಗಳನ್ನು ಕರಗತಮಾಡಿಕೊಂಡು ಹಿಂದಿರುಗಿದನೆಂದೂ ಹೇಳುತ್ತಾರೆ. ಅಂತೂ ತೀರ್ಥರಾಮನ ಆಗಮನದ ವೇಳೆಗೆ ಭಗತ್ ಧನ್ನಾರಾಮನ ಹೆಸರೂ, ಆತನ ಅದ್ಭುತ ಶಕ್ತಿಯೂ, ದೂರ

ದೂರದವರೆಗೂ ಪ್ರಸಿದ್ಧವಾಗಿದ್ದುವು. ತೀರ್ಥರಾಮನು ತನ್ನ ಹತ್ತನೇ ವಯಸ್ಸಿನಲ್ಲಿ ಬಂದು ಇಂತಹ ವಿಚಿತ್ರ ವ್ಯಕ್ತಿಯ ಸಂರಕ್ಷಣೆಯಲ್ಲಿ ಶರಣು ಹೋದನು.

ಗುಜರನ್‌ವಾಲಾ ಹೈಸ್ಕೂಲಿನಲ್ಲಿ ತೀರ್ಥರಾಮನು ವಿದ್ಯಾರ್ಥಿಯಾದನು. ಮನೆಯಲ್ಲಿ ಭಗತ್ ಧನ್ನಾರಾಮನ ಬಳಿ ಕುಳಿತು ಆತನೇ ತನ್ನ ಗುರುವೂ, ಸರ್ವಸ್ವವೂ ಎಂಬ ಅನನ್ಯ ಭಕ್ತಿಯಿಂದ ಬಾಲಕನು ಅವನ ಉಪದೇಶಗಳನ್ನು ಕೇಳುವನು; ತನ್ನ ಪಾಠ ಪ್ರವಚನಗಳಿಂದ ಅಲ್ಪ ಸ್ವಲ್ಪ ಬಿಡುವು ದೊರೆತಾಗಲೆಲ್ಲಾ ತನ್ನ ಗುರುವಿನ ಉಪದೇಶಾಮೃತವನ್ನು ಪಾನ ಮಾಡಲು ಆತುರನಾಗಿ ಓಡಿಬರುವನು. ಈ ಸಮಯದಲ್ಲಿಯೇ ಈತನು ತನ್ನ ಶಿಷ್ಯನಿಗೆ ಯೋಗವಾಸಿಷ್ಠವನ್ನು ಆಮೂಲಾಗ್ರವಾಗಿ ಉಪದೇಶ ಮಾಡಿದನೆಂದೂ, ಶಿಷ್ಯನು ಅಸಾಧಾರಣವಾದ ಪ್ರತಿಭೆಯನ್ನು ತೋರಿ ಶ್ರದ್ಧಾ ಭಕ್ತಿಸಂಪನ್ನನಾಗಿ ಈ ಕ್ಲಿಷ್ಟ ಗ್ರಂಥವನ್ನು ಸಾಧಿಸುತ್ತಿದ್ದನೆಂದೂ ತಿಳಿದು ಬರುತ್ತದೆ. ಅಂತೂ ತೀರ್ಥರಾಮನ ಎಳೆಯ ಹೃದಯದಮೇಲೆ ಅಪೂರ್ವ ಪರಿಣಾಮವಾಗಿದ್ದಿತು.

ತೀರ್ಥರಾಮನು ೧೮೮೮ನೇ ಮಾರ್ಚಿಯಲ್ಲಿ, ತನ್ನ ೧೫ನೆಯ ವಯಸ್ಸಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದದ್ದಲ್ಲದೆ, ತನ್ನ ಶಾಲೆಗೆ ಮೊದಲನೆಯವನಾಗಿಯೂ, ಪಂಜಾಬ್ ಯೂನಿವರ್ಸಿಟಿಗೇನೇ ೩೮ನೆಯವನಾಗಿಯೂ ಉತ್ತೀರ್ಣನಾದನು. ಇದರ ಫಲವಾಗಿ ಮುಂದೆ ಕಾಲೇಜು ವಿದ್ಯಾಭ್ಯಾಸದ ಸಹಾಯವಾಗಿ ಗುಜರ್‌ವಾಲಾ ಮುನಿಸಿಪಾಲಿಟಿಯು ಸಣ್ಣ ವಿದ್ಯಾರ್ಥಿವೇತನವನ್ನು ತೀರ್ಥರಾಮನಿಗೆ ಕೊಟ್ಟಿತು. ತನ್ನ ವ್ಯಾಸಂಗವನ್ನು ಮುಂದುವರಿಸಲೋಸುಗ ಗುಜರನ್‌ವಾಲಾವನ್ನೂ, ತನ್ನ ಪ್ರಚಂಡ ಗುರುವನ್ನೂ ಬಿಟ್ಟು, ರಾಜಧಾನಿಯಾದ ಲಾಹೋರಿಗೆ ಪ್ರಯಾಣವನ್ನು ಬೆಳೆಸಿ ಅಲ್ಲಿಯ ಮಿಷನ್ ಕಾಲೇಜಿನ ವಿದ್ಯಾರ್ಥಿಯಾದನು.

ಲಾಹೋರ್‌ನಲ್ಲಿ (೧)

ಆದರೆ ಹೀರಾನಂದನು ಮಗನ ವಿದ್ಯಾಭ್ಯಾಸವು ಸಾಕೆಂದು ಹೇಳಿ ಅವನು ಮುಂದೆ ಕಾಲೇಜಿಗೆ ಸೇರುವ ಅವಶ್ಯಕತೆ ಇಲ್ಲವೆಂದೂ, ಹಿಂದಿರುಗಿ ಕುಟುಂಬ ರಕ್ಷಣೆಗಾಗಿ ಹಣವನ್ನು ದುಡಿಯಲಾರಂಭಿಸಬೇಕೆಂದೂ ಅಪ್ಪಣೆ ಮಾಡಿದನು. ಇದನ್ನು ಕಂಡು ತೀರ್ಥರಾಮನ ಉತ್ಸಾಹ ಭಂಗವಾಯಿತು. ಆದರೆ ಧನ್ನಾರಾಮನ ಉತ್ತೇಜನದಿಂದ ಬಾಲಕನು ಮುಂದೆಬರುವ ಕಷ್ಟಗಳನ್ನು ಧೈರ್ಯದಿಂದ ಎದುರಿಸಿ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಲೇಬೇಕೆಂದು ಸಂಕಲ್ಪಿಸಿ ಅಂತೆಯೇ ಲಾಹೋರಿಗೆ ಹೊರಟು ಬಂದುಬಿಟ್ಟನು. ಇದರಿಂದ ಕೃದ್ಧನಾದ ತಂದೆಯು ತನ್ನಿಂದ ಒಂದು ಕಾಸಿನ ಸಹಾಯವನ್ನೂ ನಿರೀಕ್ಷಿಸ ಕೂಡದೆಂದು ತಿಳಿಸಿಬಿಟ್ಟನು. ಆದರೆ ತೀರ್ಥರಾಮನ ಜ್ಞಾನ ಪಿಪಾಸೆಯು ಈ ಬೆದರಿಕೆಗೆ ಕುಗ್ಗುವಂತಿರಲಿಲ್ಲ. ಲಾಹೋರಿನಲ್ಲಿ ಈ ಅನಾಥನಾದ ಬಾಲಕನು ಎಂತೆಂತಹ ಕಷ್ಟಗಳನ್ನು ಅನುಭವಿಸುತ್ತಾ, ಮುರುಕು ಕೋಣೆಗಳಲ್ಲಿ ವಾಸಿಸುತ್ತಾ, ಹರುಕು ಬಟ್ಟೆಗಳನ್ನುಟ್ಟು ಹೊತ್ತಿಗೆ ಸರಿಯಾಗಿ ಅನ್ನ ಆಹಾರಗಳಿಲ್ಲದಿದ್ದರೂ ಸಹಾ ನಗುಮುಖದಿಂದ ಹೇಗೆ ತನ್ನ ವ್ಯಾಸಂಗವನ್ನು ಮುಂದುವರಿಸುತ್ತಾ ತನ್ನ ಗೆಳೆಯರಿಗೂ, ತನ್ನ ಗುರುಗಳಿಗೂ, ಸರ್ವಪ್ರಿಯನಾಗಿದ್ದನೆಂಬುದು ಆತನ ಈ ಕೆಳಗಿನ ಪತ್ರಗಳಿಂದ ಸ್ಪಷ್ಟವಾಗುವುದು. ಇವುಗಳಲ್ಲಿ ಒಂದೆರಡು ಹೊರತು ಮಿಕ್ಕ ಪತ್ರಗಳೆಲ್ಲವೂ, ತನ್ನ ಗುರುವಾದ ಧನ್ನಾರಾಮನಿಗೆ ಬರೆದುವು. ಈ ಪತ್ರಗಳ ಹತ್ತು ವರ್ಷದ ಅವಧಿಯಲ್ಲಿ ತೀರ್ಥರಾಮನ ಹೃದಯವು ಹೇಗೆ ಸುಜ್ಞಾನದಿಂದ ಪ್ರಫುಲ್ಲಿತವಾಗಿ ಬರಬರುತ್ತಾ ಈಶ್ವರ ಪ್ರೇಮದಿಂದ ತುಂಬಿ ಆತನನ್ನು ಚೈತನ್ಯಸ್ವಾಮಿಯಂತೆ ಪ್ರೇಮಾನಂದ ಮೂರ್ತಿಯನ್ನಾಗಿ ಮಾಡಿತೆಂಬುದು ಸ್ಪಷ್ಟವಾಗುವುದು.

೧೮-೫-೧೮೮೮ : ಮಿರ್ಷ ಕಾಲೇಜಿಗೆ ಸೇರಿದೆ. ತಿಂಗಳಿಗೆ ಒಂದು ರೂಪಾಯಿನಂತೆ ಬಾಡಿಗೆಗೆ ಒಂದು ಮನೆಸಿಕ್ಕಿತು. ಪಂಜಾಬ್ ಪ್ರಾಂತ್ಯದ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಪ್ರಾಂತಕ್ಕೆಲ್ಲಾ ೩೮ನೆಯವನಾಗಿ ಉತ್ತೀರ್ಣನಾದೆ. ಆದರೆ ವಿದ್ಯಾರ್ಥಿವೇತನ ಸಿಕ್ಕಲಿಲ್ಲ. ಈಗ ಕಾಲೇಜಿಗೆ ೪ರೂ. ೮ಆ. ಫೀಜು ಕೊಡಬೇಕಾಗಿದೆ.

೧೨-೬-೧೮೮೮ : ಮಹಾರಾಜ ರಣಜಿತ್‌ಸಿಂಗರ ಸಮಾಧಿಯ ಬಳಿಯ ಮನೆಯಲ್ಲಿ ಏಕೆ ಹೋಗಿ ವಾಸಿಸಲಿಲ್ಲವೆಂದು ಕೇಳುತ್ತೀರಿ. ಕಾರಣ ವೇನೆಂದರೆ ಆ ಸ್ಥಳದಲ್ಲಿ ನನ್ನ ವ್ಯಾಸಂಗಕ್ಕೆ ಅವಶ್ಯಕವಾದ ಏಕಾಂತವಾಗಲಿ, ಸ್ವಾತಂತ್ರ್ಯವಾಗಲಿ ಇರಲಿಲ್ಲ.

೧೮-೧೧-೧೮೮೮ : ನನ್ನನ್ನೂ ನನ್ನ ಸರ್ವಸ್ವವನ್ನೂ ನಿಮ್ಮ ಚರಣ ತಲದಲ್ಲಿ ಸಮರ್ಪಿಸುತ್ತೇನೆ. ಎಲೈ ದೇವಾ ! ಬಹುಶಃ ವಿದ್ಯಾರ್ಥಿವೇತನವು ಸಿಕ್ಕಬಹುದು.

೧೯-೩-೧೮೮೯ : ದೇವಾ ! ವಿದ್ಯಾರ್ಥಿವೇತನವು ಸಿಕ್ಕಿತು.

೧೧-೨-೧೮೯೦ : ಇಂಟರ್‌ಮೀಡಿಯಟ್ ಪರೀಕ್ಷೆಗೆ ಫೀಜು ಕಳುಹಿಸ ಬೇಕು. ಭಗವಾನ್‌ದಾಸರಿಂದ ಇನ್ನೂ ಹಣಬರಲಿಲ್ಲ. ನನ್ನ ಶ್ರಮದಲ್ಲಿ ನನಗೆ ನಂಬಿಕೆಯಿಲ್ಲ; ನಿಮ್ಮ ದಯವನ್ನೇ ನಂಬಿದೇನೆ. ನಿಮ್ಮ ಅಪ್ಪಣೆ ಯಾದರೆ ನಾನು ಪರೀಕ್ಷೆಗೆ ಕೂಡುತ್ತೇನೆ. ಇಲ್ಲದಿದ್ದರೆ ಪರೀಕ್ಷೆಗೆ ಕೂಡು ವುದಿಲ್ಲ; ಹಣವನ್ನೂ ಕಳುಹಿಸುವುದಿಲ್ಲ.

೧೩-೨-೧೮೯೦ : ಈ ವಿಚಾರವು ನನ್ನ ಇಷ್ಟವನ್ನು ಅವಲಂಬಿಸಿರುವು ದೆಂದು ತಿಳಿದಿದ್ದೆ ; ಅದು ತಪ್ಪು ; ನಮ್ಮ ಕಾಲೇಜಿನ ಪ್ರಿನ್ಸಿಪಾಲ್ ಸಾಹೇ ಬರು ನನ್ನ ಹೆಸರನ್ನು ಮೇಲಕ್ಕೆ ಕಳುಹಿಸಿ ಬಿಟ್ಟಿದ್ದರು. ಕಾರಣ ನಾನು ಪತ್ರಗಳಿಗೆ ಸಹಿಮಾಡಬೇಕಾಗಿ ಬಂತು. ಆದುದರಿಂದ ನಾನು ಪರೀಕ್ಷೆಗೆ ಹೋಗಲೇಬೇಕು. ಇದಕ್ಕೆ ಬೇಕಾದ ಹಣ ಭಗವಾನ್‌ದಾಸರಿಂದ ಬಂದಿದೆ. ಕ್ಷಮಿಸಿರಿ: ಮನ್ನಿಸಿರಿ ; ನಾನು ನಿಮ್ಮ ಗುಲಾಮ.

೧೮-೨-೧೮೯೦ : ಈ ದಿನ ಕಾಲೇಜಿನಿಂದ ಹಿಂತಿರುಗಿ ಬರುವಾಗ ಪರೀಕ್ಷೆಯ ಫಲಿತಾಂಶವನ್ನು ನೋಡಲು ಹೋದೆ. ಇನ್ನೂ ಹೊರಬಿದ್ದಿರಲಿಲ್ಲ. ನಾನು ಮತ್ತೆ ಮುಕುಂದಲಾಲನನ್ನು ಕಳುಹಿಸಿದ್ದೆ. ಗುಜರಾತ್, ಹಫೀಜಾ ಬಾದ್, ಸ್ಯಾಲ್‌ಕೋಟ್, ವಿದ್ಯಾರ್ಥಿಗಳ ಹೆಸರುಗಳನ್ನೆಲ್ಲಾ ಯಾರೋ ಹುಡುಗರು ಹರಿದುಹಾಕಿಬಿಟ್ಟಿದ್ದರು. ಈ ಸ್ಥಳಗಳ ವಿದ್ಯಾರ್ಥಿಗಳು ಹೆಚ್ಚಾಗಿ ತೇರ್ಗಡೆಯಾದುದನ್ನು ನೋಡಿ ಸೈರಿಸದೆ ಮತ್ಸರದಿಂದ ಯಾರೋ ಮಾಡಿದ ದುಷ್ಟತನವಿದು.

[೧೮೯೦ನೆಯ ಎಫ್. ಎ. ಪರೀಕ್ಷೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದು ಉತ್ತೀರ್ಣರಾದರು. ಮಧ್ಯೆ ಮಧ್ಯೆ ದೇಹಾಲಸ್ಯವಾಗಿರುತ್ತಿದ್ದರೂ, ಇದು ವರೆಗೂ ವ್ಯಾಸಂಗಮಾಡಿದ ಪರ್ಶಿಯನ್ನನ್ನು ಬಿಟ್ಟು, ಹೊಸದಾಗಿ ಸಂಸ್ಕೃತ ವನ್ನು ತೆಗೆದುಕೊಂಡಿದ್ದರೂ, ಹೀಗೆ ಪ್ರಥಮ ಸ್ಥಾನವನ್ನು ಪಡೆದದ್ದು ಅವರ ಅಪಾರ ಜ್ಞಾನಪ್ರೇಮ, ಶ್ರದ್ಧಾ ಸಾಹಸ, ಏಕಾಗ್ರಚಿತ್ತತೆಯ ನಿರ್ದಿಷ್ಟ ಉದಾಹರಣೆಯಾಗಿದೆ. ಅಂತೂ ಇದರಿಂದ ಅವರಿಗೆ ಮುಂದೆ ಸರ್ಕಾರದ ವಿದ್ಯಾರ್ಥಿ ವೇತನವೇ ದೊರೆಯಿತು. ಮುಂದೆ ಕೇವಲ ಇದೊಂದೇ ಸಹಾಯ ವನ್ನವಲಂಬಿಸಿ ಈಶ್ವರನಲ್ಲಿ ಅನನ್ಯ ಭಕ್ತಿಯಿಟ್ಟು ಅದೇ ಕಾಲೇಜಿನಲ್ಲಿ ಬಿ ಎ. ಪರೀಕ್ಷೆಗೆ ಓದಲಾರಂಭಿಸಿದರು.]

೧೦-೩-೧೮೯೦ : ಈಶ್ವರನು ದಯಾಮಯನೆಂದೂ, ಶಾಂತಿನಿಧಿ ಯೆಂದೂ ಹೇಳುತ್ತಾರೆ. ಹೀಗಿರುವಾಗ ನೀವೇಕೆ ಕೋಪಿಸುತ್ತೀರಿ ? ನೀವೇಕೆ ನನ್ನನ್ನು ಕ್ಷಮಿಸರಿ ? ನೀವು ದಿವ್ಯ ದೃಷ್ಟಿಯಿಂದ ನನ್ನಲ್ಲಿ ಯಾವುದೋ ದೋಷವನ್ನು ಕಂಡಿರಬೇಕು. ಅದರ ಸಲುವಾಗಿ 'ನಿಮ್ಮ ತೀರ್ಥರಾಮನು ನಿಮ್ಮವನಾಗಿಯೂ ದೇವರನ್ನು ನೋಡದೆ ಹೋದನಲ್ಲಾ' ಎಂದು ಇತರರು ನಿಮ್ಮನ್ನು ಹಾಸ್ಯ ಮಾಡುವರೆಂದು ಹೀಗೆ ಮಾಡಿರುವಿರೇನೋ ಎಂದೆನಿಸು ತ್ತದೆ. ಆದರೆ ಸದಾ–'ಕ್ಷಮಿಸಿರಿ : ನನ್ನ ದೋಷವನ್ನೆಣಿಸದಿರಿ' ಎಂದು ಬೇಡುತ್ತೇನೆ.

ನೀವು ನನ್ನನ್ನು ಕರೆದರೆ, ಬರಲು ಕಂಡಿಹೆನು ಇದೊಂದು ಬಾಗಿಲ
ನೀವು ನನ್ನನ್ನು ಹೋಗಟ್ಟಿದರೆ, ಕಂಡಿಹೆನು ಇದೊಂದೇ ಬಾಗಿಲ
ಬೇರೆ ಬಾಗಿಲ ನಾನರಿಯೆ,
ಈ ನನ್ನ ಸಿರವ ಕಂಡಿಹೆನು
ಅದಕೊಂದು ನೆಲೆಯನರಿತಿಹೆನು
ಅದೇ ನಿಮ್ಮ ಬಾಗಿಲಿನ ಹೊಸ್ತಿಲಯ್ಯಾ (ಪರ್ಶಿಯನ್‌ನಿಂದ)

೨೦-೩-೧೮೯೦ : ಪರ್ಶಿಯನ್ ಪರೀಕ್ಷೆಯು ಮುಗಿಯಿತು. ಗಣಿತವೂ ಆಯಿತು. ಬಹು ಕಠಿಣಪಾಠ. ಆದರೆ ನೀವು ದಯಾವಂತರಾಗಿರುವಾಗ ಯಾವುದೂ ಕಷ್ಟವಿಲ್ಲ.

೨೩-೩-೧೯೪೦ : ಈ ದಿನ ಬಹು ಕಠಿಣವಾದ ಪ್ರಶ್ನಪತ್ರಗಳು. ಭೌತ ಶಾಸ್ತ್ರ ಬಹು ಕಠಿಣವಾಠ.

೬-೬.೧೯೪೦ : ನೀವೇಕೆ ನನಗೆ ಬರೆಯುವುದಿಲ್ಲ? ನನ್ನ ಕೈಲಾದಷ್ಟೂ ಮಾಡುತ್ತಿದ್ದೇನೆ; ಆದರೆ ಮಾಡಬೇಕಾದದ್ದಿನ್ನೂ ಇದೆ. ನಾನು ನಿಮ್ಮಲ್ಲಿಗೆ ಬರಲಾರೆ. ಹೆಸರಿಗೆ ಎರಡು ದಿನಗಳ ರಜವಿದೆ; ಕಾಲೇಜ್ ಕೆಲಸವನ್ನು ಈ ಎರಡು ದಿನದಲ್ಲಿ ಮುಗಿಸಲಾಗುವುದಿಲ್ಲ. ನಿಮ್ಮಪ್ಪಣೆಯನ್ನು ನಡೆಸಲಾರದಿರುವುದನ್ನು ಅನ್ಯಥಾ ಭಾವಿಸಬಾರದು.

೧೧-೬-೧೯೪೦ : ಪ್ರಿನ್ಸಿಪಾಲರು ನೇತ್ರವೈದ್ಯರಿಗೆ ಒಂದು ಪತ್ರವನ್ನು ಕೊಟ್ಟಿದ್ದರು. ಅವರು ನಾನು ಒಂದು ಕನ್ನಡಕವನ್ನು ಹಾಕಿಕೊಳ್ಳಬೇಕೆಂದು ಬರೆದು ಕೊಟ್ಟಿದ್ದಾರೆ. ಅದಕ್ಕಾಗಿ ಬೊಂಬಾಯಿಗೆ ಐದು ರೂಪಾಯಿ ಕಳುಹಿಸಬೇಕು.

೨೫.೬-೧೯೪೦ : ಬೊಂಬಾಯಿನಿಂದ ನನ್ನ ಕನ್ನಡಕ ಬಂತು. ಅದನ್ನು ತೆಗೆದುಕೊಂಡು ವೈದ್ಯರಲ್ಲಿಗೆ ಹೋದೆ. ಅವರು ನೋಡಿ ಸರಿಯಾಗಿದೆ ಎಂದು ಹೇಳಿದರು. ಈಗ ತರಗತಿಯಲ್ಲಿ ನನಗೆ ಬೋರ್ಡು ಚೆನ್ನಾಗಿ ಕಾಣುತ್ತದೆ. ವೈದ್ಯರು ಹೇಳಿದಂತೆ ನಾನು ಕನ್ನಡಕವನ್ನು ಹಾಕಬೇಕೆಂದೂ, ಅದರಿಂದ ದೂರದ ವಸ್ತುಗಳೆಲ್ಲವೂ ಸ್ಫುಟವಾಗಿ ಕಾಣುವುವೆಂದೂ, ಪ್ರಿನ್ಸಿಪಾಲರು ಹೇಳುತ್ತಾರೆ. ಆದುದರಿಂದಲೇ ಕನ್ನಡಕವನ್ನು ಹಿಂತಿರುಗಿ ಕೊಟ್ಟಿಲ್ಲ. ಈ ಕನ್ನಡಕದ ವಿಚಾರವಾಗಿ ತಮ್ಮ ಅಭಿಪ್ರಾಯವೇನು ?

೧೯-೭-೧೯೪೦ : ಆಗಸ್ಟ್ ೧ರಿಂದ ನಮಗೆ ರಜಾ ಪ್ರಾರಂಭ. ಈ ದಿನ ಜುಲೈ ೧೯. ನಾನು ನಿಮ್ಮಿಂದ ವಿಮುಖನಾದೆನೆಂದು ಸರ್ವಥಾ ಭಾವಿಸಬೇಡಿರಿ. ಒಬ್ಬನು ಒಂದು ಕಾರ್ಯವನ್ನು ಆರಂಭಿಸಿದ ನಂತರ ಅದನ್ನು ನಡೆಸುವಾಗ ಅದರಲ್ಲಿ ಪ್ರಜ್ಞಾಶಾಲಿಯಾಗುತ್ತಾನೆ; ಮತ್ತು ಅದನ್ನು ಉತ್ತಮವಾಗಿ ಹೇಗೆ ಮಾಡಬಹುದೆಂಬು ಅರಿಯುತ್ತಾನೆ. ಮುಂದೆ ಅದನ್ನು ಹೆಚ್ಚು ಚಿಂತನೆಯಿಲ್ಲದೆ ಮಾಡುವ ರೀತಿನೀತಿಗಳನ್ನು ತಿಳಿಯುತ್ತಾನೆ. ಅದು ಏಕೆ ? ಹೇಗೆ? ಎಂದು ಅವನು ಹೇಳಲಾರನು; ಆದರೆ ಅದನ್ನು ಕೇವಲ ಸಂಸ್ಕಾರ ವಾಸನೆಯಿಂದ ಮಾಡಲು ತಿಳಿಯುತ್ತಾನೆ. ನಾನು ಕಾರಣಗಳನ್ನು ವಿವರಿಸಲಾರೆ; ಏಕೆಂದರೆ ಕಾರ್ಯಗಳ ಕಾರಣಗಳನ್ನು ಹುಡುಕುವುದು

ವೇದಾಂತಿಗಳ ಕೆಲಸ. ಪ್ರತಿಯೊಬ್ಬನೂ ವೇದಾಂತಿಯಲ್ಲ; ಆದರೆ ಪ್ರತಿಯೊಬ್ಬನೂ ಕಾರಣಗಳನ್ನು ಹುಡಕದೆ ತನ್ನತನ್ನ ಕೆಲಸಗಳನ್ನು ಅಚ್ಚುಕಟ್ಟಾಗಿ ಮಾಡಬಲ್ಲನು. ನಾನು ಚಿಕ್ಕ ಹುಡುಗನಾಗಿದ್ದಾಗ ಅನೇಕ ಪದ್ಯಗಳ ತಾಳ, ಪ್ರಾಸ, ಯತಿ, ಗತಿಗಳನ್ನು ತೀರ್ಮಾನಿಸುತ್ತಿದ್ದೆ. ಅದನ್ನು ಸಕಾರಣವಾಗಿ ಹೇಳಲು ಅರಿಯದವನಾಗಿದ್ದೆ. ಈಗ ಹತ್ತು ವರ್ಷಗಳನಂತರ ಛಂದಃಶಾಸ್ತ್ರವನ್ನು ಸಂಪೂರ್ಣ ಅರಿತ ಮೇಲೂ ಕೂಡ, ಅಂದಿನ ನನ್ನ ತೀರ್ಮಾನಗಳು ಸರಿಯಾಗಿದ್ದುವೆಂದು ತಿಳಿಯುತ್ತೇನೆ. ಅಂದು ನಾನು ಕಾರಣಗಳನ್ನು ಕೊಡಲಾರದವನಾದ್ದರಿಂದ ನನ್ನ ತೀರ್ಮಾನಗಳು ತಪ್ಪೆಂದಾಗಲಾರದು. ನನ್ನಲ್ಲಿ ವಿವೇಚನಾಶಕ್ತಿ ಇದ್ದಿತು—ಆದರೆ ನನಗೆ ಅದರ ಅರಿವಿರಲಿಲ್ಲ. ಇದರಿಂದ ಸ್ವಚ್ಛವಾದ ವಿವೇಚನಾ ಶಕ್ತಿಯುಳ್ಳ ಮನುಷ್ಯನು ಸದಾ ಕಾರಣಗಳನ್ನು ಒದಗಿಸಬೇಕಾದ ಅಗತ್ಯವಿಲ್ಲ. ಈ ಮನುಷ್ಯನು ಪರಿಶುದ್ಧನೆಂದೂ, ತನ್ನ ಅಂತಃಕರಣದಂತೆ ನಡೆಯುವವನೆಂದೂ ತಿಳಿದ ಮೇಲೆ ಹಲವು ಬಾರಿ ನಾವು ಕಾರಣಗಳಿಗಾಗಿ ಒತ್ತಾಯಪಡಿಸದೆ ಅವನ ತೀರ್ಪನ್ನು ಒಪ್ಪಿಕೊಳ್ಳಬೇಕು.

ನಾನು ತಮ್ಮ ಮಾತನ್ನು ಉಲ್ಲಂಘಿಸುತ್ತೇನೆಂದು ಎಂದೂ ತಿಳಿದಿಲ್ಲ. ನಾನು ಮಾಡುವುದನ್ನೆಲ್ಲಾ ಕೇವಲ ನಿಮ್ಮಲ್ಲಿನ ಶ್ರದ್ಧೆಯಿಂದಲೇ ಮಾಡುತ್ತೇನೆಂದು ತಾವು ತಿಳಿಯಬೇಕು.

ನಾನು ರಜವನ್ನು ತಮ್ಮೊಡನೆ ಗುಜರ್‌ವಾಲಾದಲ್ಲಿ ಕಳೆಯಬೇಕೆಂದು ಹೇಳುತ್ತೀರಿ; ತಾವು ಹೇಳಿದಂತೆ ನಾನು ಅಲ್ಲಿಗೆ ಬರಲೇಬೇಕು. ಹೇಗಾದರೂ ಬರುತ್ತೇನೆ; ಆದರೆ ರಜವನ್ನೆಲ್ಲಾ ಅಲ್ಲಿಯೇ ಕಳೆಯಲಾರೆ. ನಾನು ಹಾಗೆ ಮಾಡಲಾರೆ. ಇದಕ್ಕೆ ಕಾರಣಗಳನ್ನು ವಿವರಿಸುತ್ತಾ ಕಾಲವನ್ನು ವ್ಯರ್ಥಮಾಡಲು ಇಷ್ಟವಿಲ್ಲದಿದ್ದರೂ, ಕೆಲವು ಕಾರಣಗಳನ್ನು ಹೇಳುತ್ತೇನೆ. ನಾನು ನಿಮ್ಮ ನಂಬಿಕೆಗೆ ದ್ರೋಹಿಯಾಗಿಲ್ಲವೆಂದೂ, ತಮ್ಮ ಬಗ್ಗೆ ನನಗಿರುವ ಶ್ರದ್ಧೆಯಲ್ಲಿ ಎಂದಿಗೂ ಅನುಮಾನವಿಡಬಾರದೆಂದೂ ನಿಮ್ಮನ್ನೊಪ್ಪಿಸಲು ಹೀಗೆ ಕಾರಣಗಳನ್ನು ತಿಳಿಸುತ್ತೇನೆ.

ನನ್ನ ಕಾರಣಗಳೇನೆಂದರೆ :–ತನ್ನ ಸ್ನೇಹಿತರನ್ನೂ, ನೆಂಟರಿಷ್ಟರನ್ನೂ ಸಂಧಿಸಲು ಊರಿಗೆ ಹೋಗುವುದಕ್ಕೂ ಲಾಹೋರಿನಲ್ಲೇ ಇರುವುದಕ್ಕೂ

ವ್ಯತ್ಯಾಸವನ್ನು ಈಗ ತಾನೆ ಅರಿತಿದ್ದೇನೆ. ಅಲ್ಲಿ ಎಲ್ಲರ ಮಧ್ಯೆ ನನ್ನ ವ್ಯಾಸಂಗಕ್ಕೆ ಸಾಕಾದಷ್ಟು ಏಕಾಂತವೇ ಸಿಗದೇ ಹೋಗುವುದಲ್ಲದೆ ಜಟಿಲ ಪ್ರಶ್ನೆಗಳನ್ನು ಬಿಡಿಸಲು ಬೇಕಾದ ಚುರುಕು ಬುದ್ಧಿಯೂ ಮಂದವಾಗುವುದು. ಹೀಗೆ ಸ್ಥಳಕ್ಕೆ ಹಿಂತಿರುಗುವುದರಿಂದ ಸೂಕ್ಷ್ಮ ವಿಚಾರಗಳನ್ನು ಅರಿತು ಗ್ರಹಿಸಲು ಬೇಕಾದ ಬುದ್ಧಿಶಕ್ತಿಯನ್ನು ಕಳೆದುಕೊಂಡು ಜಡನಾಗುತ್ತಾನೆ. ಕಾರಣವೇನೆಂದರೆ ಮನಸ್ಸು ದೈಹಿಕ ಸುಖವಿಲಾಸಗಳ ಸಂಪರ್ಕದಿಂದ ಪತಿತವಾಗುತ್ತದೆ. ಈ ರೀತಿ ಕೆಟ್ಟ ಸಹವಾಸದಿಂದ ಮನಸ್ಸು ಹಾಳಾಗುವುದು* ಲಾಹೋರನ್ನು ಬಿಟ್ಟು ಎಲ್ಲಿ ಹೊರಗೆ ಹೋದರೂ ಸರಿಯೆ. 'ಲಾಹೋರೇನೂ ಅರಣ್ಯವಲ್ಲ; ಇಲ್ಲಿಯೂ ಜನರನ್ನು ಸಂಧಿಸುವೆ'ನೆಂದು ನೀವು ಹೇಳಬಹುದು. ಸತ್ಯ; ಆದರೆ ನಾನು ಇಲ್ಲಿ ಸಂಧಿಸುವುದು ಅಪರಿಚಿತರನ್ನು; ಅಲ್ಲದೆ ಅರಿಚಿತರಾದರೂ ಸರಿಯೇ ನನ್ನ ಮನೆಯಲ್ಲಿ ನನ್ನ ಜನರನ್ನು ಸಂಧಿಸುವಷ್ಟು ಮಮತೆಯಿಂದಲ್ಲ. ಲಾಹೋರಿನಲ್ಲಿ ನಾನು ಜನರನ್ನು ಸಂಧಿಸುತ್ತೇನೆ. ಆದರೆ ನನ್ನ ಧ್ಯಾನವು ಅವರಲ್ಲಿ ಹೋಗುವುದಿಲ್ಲ. ಅದೆಲ್ಲ ಕೇವಲ ಔಪಚಾರಿಕ ಭೇಟಿ. ಆದರೆ ನನ್ನವರೊಂದಿಗೆ ನನ್ನ ಮನಃಪೂರ್ವಕವಾಗಿ ಬೆರೆಯಬೇಕಾಗುವುದು. ಅಲ್ಲದೆ ಲಾಹೋರಿನಲ್ಲಿ ನನಗೆ ಕೇವಲ ವಿದ್ಯಾರ್ಥಿಗಳು ಮಾತ್ರ ಪರಿಚಯಸ್ಥರಾಗಿದ್ದಾರೆ; ಇವರ ಭೇಟಿಯು ಉತ್ಕೃಷ್ಟವಾಗಿರುವುದು. ಹೀಗೆ ನನ್ನಂತೆಯೇ ಮತ್ತೆ ಯಾರಾದರೂ ಲಾಹೋರಿನಲ್ಲಿ ಇರುತ್ತಾರೆಯೇ ಎಂದು ನೀವು ಕೇಳಬಹುದು. ಅಹುದು ದಯಮಾಡಿ ಕೇಳಿರಿ. ಪಂಜಾಬ್ ಪ್ರಾಂತ್ಯಕ್ಕೆಲ್ಲಾ ಪ್ರಥಮ ಸ್ಥಾನದಲ್ಲಿ ಉತ್ತೀರ್ಣನಾದ ರಾಮದೀರ್ಥ ಸಹ ಒಂದು ದಿನವಾದರೂ ಅವನ ಸ್ಥಳಕ್ಕೆ ಹೋಗುವುದಿಲ್ಲ.

ಶ್ರಮಪಡದೆ, ಕಠಿಣ ಶ್ರಮಪಡದೆ ಯಾವನೂ ಪ್ರಕಾಶಿಸನು. ನಾನು ಕಠಿಣ ಶ್ರಮಿಯು; ಅನೇಕ ಉತ್ತಮ ವಿದ್ಯಾರ್ಥಿಗಳು ತಮ್ಮ ತಮ್ಮ ಮನೆಗಳಿಗೆ ಹೋಗಿರುವರೆಂಬುದು ನಿಜ; ಆದರೆ ಅವರವರ ಮನೆಗಳಲ್ಲಿ ಅವರ ವ್ಯಾಸಂಗಕ್ಕೆ ಅಗತ್ಯವಾದ ಅನುಕೂಲಗಳಿರುವುವೆಂದು ನಂಬುತ್ತೇನೆ; ಅಲ್ಲದೆ ಅವರಲ್ಲಿ ಬಹುಮಂದಿ ನನ್ನಂತೆ ವಿವಾಹಿತರಲ್ಲ. ಒಂದುವೇಳೆ ವಿವಾಹಿತರಾಗಿದ್ದರೂ ಸಹ ತಮ್ಮ ಮನಸ್ಸು ಬಾಹ್ಯದ ಭೋಗ ವಸ್ತುಗಳ ಕಡೆಗೆ ಚಲಿಸಲೆಡೆ

*ಈ ವೇಳೆಗೆ ತೀರ್ಥರಾಮನ ವಿವಾಹವಾಗಿತ್ತೆಂದು ಹಿಂದೆಯೇ ಹೇಳಲ್ಪಟ್ಟಿದೆ.

ಗೊಂಡದಷ್ಟು ಸ್ಥಿರ ಬುದ್ಧಿಯುವರಾಗಿರಬಹುದು. ಆದರೆ ನನಗೆ ಅಷ್ಟು ಸ್ಥೈರ್ಯ ವಿಲ್ಲ ; ನನ್ನ ಮನಸ್ಸು ಕೆಟ್ಟದೆಂದು ಭಯ.

ಜನರು ಮೆದುಳಿಂದು ಹೇಳುವುದೂ ಸಹ ಸಾಧನೆ ಮತ್ತು ಕಠಿಣ ಪರಿಶ್ರಮ ದಿಂದ ಉತ್ತಮವಾಗುತ್ತದೆ. ಶ್ರಮಪಡದೆ ಯಾವನಾದರೂ ವಿದ್ಯಾರ್ಥಿಯು ಉತ್ತಮ ರೀತಿಯಲ್ಲಿ ಉತ್ತೀರ್ಣನಾದರೆ, ಅವನು ಕೇವಲ ಉತ್ತೀರ್ಣನಾದನೆ ಹೊರತು ಅವನಿಗೆ ವ್ಯಾಸಂಗದ ಆನಂದವು ಲಭಿಸುವುದಿಲ್ಲ. ವಿದ್ಯಾರ್ಥಿ ಜೀವನದ ಆನಂದವನ್ನು ಕೊಡುವುದು ಕಠಿಣವಾದ ಪರಿಶ್ರಮ.

ನನ್ನ ವ್ಯಾಸಂಗದಿಂದ ನನ್ನನ್ನು ತಪ್ಪಿಸಿ ಬಿಡಬೇಡಿ. ನಾನು ನಿಮ್ಮನ್ನು ಬಿಟ್ಟು ದೂರದೇಶಗಳಿಗೆ ಹೋಗಿರುವೆನೆಂದು ತಿಳಿಯಿರಿ. ನನಗೆ ಎರಡು ವರ್ಷಗಳ ಕಾಲ ಬಿಡುವು ಕೊಡಿರಿ. ಮಗನು ಹಿಂತಿರುಗಿದಂದು ನಿಮ್ಮವನು ರಣರಂಗದಲ್ಲಿ ಯುದ್ಧಮಾಡುತ್ತಿರುವ ಯೋಧನು "ತಾನು ಯಾರ ಭಟನು ? ತನ್ನ ರಾಜನೆಲ್ಲಿದ್ದಾನೆ ? ಅವನ ತನ್ನ ಸಂಬಂಧವೆಂತಹುದು ?" ಎಂಬ ವಿಚಾರವನ್ನು ಲೆಕ್ಕಿಸದೆ, ತನ್ನ ಕರ್ತವ್ಯವನ್ನು ಮಾತ್ರ ಹೃತ್ಪೂರ್ವಕವಾಗಿ ಮಾಡುತ್ತಿರುವವರೆಗೂ ಅವನು ರಾಜಭಟನೇ—ಅನ್ಯನಲ್ಲ ; ಅಲ್ಲದೆ ಅವನೇ ನಿಜವಾದ ಭೃತ್ಯ. ನನ್ನ ಸಂಗತಿಯೂ ಹೀಗಿದೆ. . ನಾನು ಗುಜರ್ರವಾಲಾಗೆ ಬರದಿರುವುದರಿಂದ ನಿಮ್ಮ ಮಾತನ್ನು ಮೀರುತ್ತಿರುವೆನೆಂದು ಎಣಿಸಬೇಡಿ.

೨-೧೨-೧೮೯೦ : ಈ ದಿನ ಕಾಲೇಜಿಗೆ ಹೋದೆ. ನನಗೆ ಫ್ರೀಷಿಪ್ ಸಿಕ್ಕುವುದರಲ್ಲಿ ಸಂದೇಹ. ಇದುವರೆಗೂ ನನ್ನ ಅರ್ಧ ಫೀಜನ್ನು ನನ್ನ ಪ್ರೊಫೆಸರರು ಗಿಲ್‌ಬರ್ಟ್ಸ್‌ನರು ಕೊಡುತ್ತಿದ್ದರು. ಈಗ ನನ್ನಿಂದ ಕಾಲೇಜಿ ನಲ್ಲಿ ಆಗಬಹುದಾದ ಯಾವ ಕೆಲಸವೂ ಇಲ್ಲವಾದ್ದರಿಂದ 'ನಾನು ಮುಂದೆ ಸಹಾಯಮಾಡಲಾರೆ'ನೆಂದು ಹೇಳಿಬಿಟ್ಟರು. ನನ್ನ ಕೈಲಾಗುವ ಯಾವ ಕೆಲಸವಾದರೂ ಕಾಲೇಜಿನಲ್ಲಿದ್ದರೆ ನನಗೆ ಫ್ರೀಷಿಪ್ ಸಿಕ್ಕುವುದು.

೪-೧೨-೧೮೯೦ : ನಿಮ್ಮ ಪತ್ರ ಬಂದಿತು. ನಾನು ನಿಮ್ಮನ್ನೇ ಅವ ಲಂಬಿಸಿರಬಹುದೆಂದು ಬಲ್ಲೆ. ನಗದು ಫೀಜು ಕೊಡಬೇಕಾದದ್ದೂ ನೀವೇ ; ಅಥವಾ ಇತರರ ಅಂತಃಕರಣವನ್ನು ಪ್ರವೇಶಿಸಿ, ಪ್ರಿನ್ಸಿಪಾಲರ ಮತ್ತು ಪ್ರೊಫೆಸರರ ದಯದಿಂದ ನಾನು ಫೀಜೇ ಕೊಡದಂತೆ ಮಾಡುವವರೂ ನೀವೇ.

೧೮-೧-೧೮೯೧ : ಪ್ರಿನ್ಸಿಪಾಲರ ಕೆಲವು ವ್ಯಾಖ್ಯಾನಗಳನ್ನು ನಕಲು ಮಾಡುವ ಕೆಲಸಕ್ಕಾಗಿ ನನಗೆ ಅವರು ಫ್ರೀಷಿಪ್ ಕೊಟ್ಟಿದ್ದಾರೆ.

೩೦-೩-೧೮೯೧ : ನಾನು ಖಾಯಿಲೆಯಾಗಿಯೂ ಮತ್ತು ಬಹು ನಿರ್ಬಲನಾಗಿಯೂ ಇದ್ದೇನೆಂದು ತಿಳಿದು, ಪ್ರಿನ್ಸಿಪಾಲರು ವ್ಯಾಯಾಮ ಮಾಡಿದ ಹೊರತು ನಾನು ಕಾಲೇಜನ್ನು ಬಿಡದಂತೆ ನೋಡಿಕೊಳ್ಳುವಂತೆ ರುಕ್ನುದೀನ್‌ರಿಗೆ ಹೇಳಿದ್ದಾರೆ.

೨-೪-೧೮೯೧ : ಗಣಿತಶಾಸ್ತ್ರದ ಅಂಕಗಳ ಪರಮಾವಧಿಯನ್ನು ೧೫೦ ರಿಂದ ೧೩೦ಕ್ಕೆ ಇಳಿಸಿ, ಇತರ ಪಾಠಗಳ ಅಂಕಗಳನ್ನು ಹೆಚ್ಚಿಸಬೇಕೆಂದು ವಿಶ್ವ ವಿದ್ಯಾನಿಲಯದವರು ಎಣಿಸಿದ್ದಾರೆ. ಎಂದರೆ ಇತರ ಪಾಠಗಳನ್ನು ಗಣಿತ ಶಾಸ್ತ್ರದ ಅಂತಸ್ತಿಗೆ ಸಮಾನವಾಗಿ ಮಾಡಬೇಕೆಂದು ಅವರು ಬಯಸಿದಂತಾಯಿತು. ಇದು ಘೋರ. ಖಂಡಿತ ಪಾಪಕರ! ಉದ್ಯೋಗ–ನಿರುದ್ಯೋಗಗಳಿಗಿರುವ ವ್ಯತ್ಯಾಸವನ್ನೇ ಅಳಿಸಿಬಿಡಬೇಕೆಂದು ಅವರಾಶೆಯೆಂದೆನಿಸುತ್ತದೆ. ನಮ್ಮ ಗಣಿತಶಾಸ್ತ್ರದ ಪ್ರೊಫೆಸರ್ ಇದಕ್ಕೆ ಪ್ರತಿಯಾಗಿ ಹೊಡೆದಾಡುವೆನೆಂದು ಹೇಳಿದ್ದಾರೆ. ನೋಡಬೇಕು ಏನಾಗುತ್ತದೊ.

೭-೪-೧೮೯೧ : ಬೆಳಿಗ್ಗೆ ತಿರುಗಾಡಲು ಹೋಗಿದ್ದೆ. ಹಿಂತಿರುಗಿ ಬರುವ ವೇಳೆಗೆ ಕೊಠಡಿಯ ಬೀಗ ಒಡೆದಿದ್ದಿತು. ಬಾಗಿಲು ತೆಗೆಯಲ್ಪಟ್ಟಿತ್ತು. ಒಳಗಿದ್ದ ಒಂದು ಲೋಟಾ ಬಟ್ಟಲೂ ಸಹ ಮಾಯವಾಗಿದ್ದುವು. ದೇವರ ದಯೆಯಿಂದ ನನ್ನ ಪುಸ್ತಕಗಳನ್ನು ಮುಟ್ಟಿರಲಿಲ್ಲ. ಕಳ್ಳನು ತನ್ನ ಟೋಪಿಯನ್ನು ಮರೆತುಹೋಗಿದ್ದ.

೯-೫-೧೮೯೧ : ಲಾಲ ಅಯೋಧ್ಯಾವಾಸಿ ನನಗಾಗಿ ಎರಡು ಮನೆಗಳನ್ನು ನೋಡಿರುವುದಾಗಿ ಹೇಳಿದರು. ಒಂದರಲ್ಲಿ ಆರ್ಯಸಮಾಜದ ಹಕೀಂರಾಯ್ ಇದ್ದಾರೆ. ಅದು ನನಗಿಷ್ಟವಿಲ್ಲ. ಮತ್ತೊಂದು ನಾನೀಗಿರುವುದರಷ್ಟೇ ಅನುಕೂಲವಾಗಿದೆ. ಅಲ್ಲದೆ ಅದರಲ್ಲಿರುವ ದೊಡ್ಡ ಕುಂದೆಂದರೆ ಇದು—ಆ ಮನೆಯ ಒಡೆಯನು ನನ್ನಿಂದ ಬಾಡಿಗೆಯನ್ನು ತೆಗೆದುಕೊಳ್ಳುವುದಿಲ್ಲವಂತೆ; ಆದರೆ ನಾನು ಅವನ ಮಗನಿಗೆ ಮನೆಯ ಉಪಾಧ್ಯಾಯನಾಗಿರಬೇಕಂತೆ; ಅಂದರೆ ತಿಂಗಳಿಗೊಂದು ರೂಪಾಯಿ ಬಾಡಿಗೆ ಕೊಡುವುದಕ್ಕೆ ಪ್ರತಿಯಾಗಿ, ತಿಂಗಳಿಗೆ ೨೫ ರೂಪಾಯಿ ಪಾಠಹೇಳುವ ಕೆಲಸಮಾಡುವುದು.

ಆತನು ನನಗೆ ಬಿಟ್ಟಮನೆ ಕೊಡುವ ಹಂಗಂತೂ ಕಡೆಯವರೆಗೂ ನಿಂತೇ ನಿಲ್ಲುವುದು. ಈ ಕಾರಣದಿಂದಲೇ ಈ ಎರಡನೇ ಮನೆಗೆ ಹೋಗಲು ನನಗೆ ಇಷ್ಟವಿಲ್ಲ.

೧೧-೫-೧೮೯೧ : ನನ್ನ ಮಂಚದ ಹಗ್ಗವೆಲ್ಲಾ ಕಿತ್ತುಹೋಯಿತು ಆದುದರಿಂದ ೧ ಆಣೆ, ೩ ಕಾಸು ಖರ್ಚುಮಾಡಿ ಹಗ್ಗವನ್ನು ಕಟ್ಟಿಸಿದ್ದೇನೆ. ಈ ಮಂಚವನ್ನು ನೋಡಿ ನನಗೆ ಬಹು ಸಂತೋಷ.

೧೯-೫-೧೮೯೧ : ಇಂದು ನಾನು ಕಾಲೇಜಿಗೆ ಹೋಗುತ್ತಲೇ ನನ್ನ ಸಹಪಾಠಿಗಳೆಲ್ಲರೂ ಬಂದು ಮುತ್ತಿಕೊಂಡು “ಪ್ರಿನ್ಸಿಪಾಲರ ಅಪ್ಪಣೆಯಾಗಿದೆ; ಈಗ ನೀನು ಬಂದು ಬೋರ್ಡಿಂಗ್ ಹೌಸ್‌ನಲ್ಲಿರಬೇಕು” ಎಂದು ಹೇಳಿದರು. ಎರಡು ಮೂರು ಘಂಟೆಗಳನಂತರ ಕಾಲೇಜಿನ ವೈದ್ಯರು ಸಿಕ್ಕಿ “ನೀನು ಪ್ರಿನ್ಸಿಪಾಲರ ಹೊಸ ಅಪ್ಪಣೆಯನ್ನು ಕೇಳಲಿಲ್ಲವೆ?” ಎಂದರು. ನಾನು ‘ನನ್ನ ತಾಯಿತಂದೆಗಳ ಸಲಹೆಯನ್ನು ಕೇಳಬೇಕು’ ಎಂದೆ. (ತಾಯಿತಂದೆಗಳೆಂದರೆ ತಾವೆ ಎಂದು ನನ್ನ ಅಭಿಪ್ರಾಯ) “ಹೇಗೂ ಪ್ರಿನ್ಸಿಪಾಲರ ಅಪ್ಪಣೆಯನ್ನು ನಡೆಯಿಸಲೇಬೇಕು” ಎಂದು ಅವರು ಹೇಳಿದರು.

ಕಾಲೇಜಾದನಂತರ ಪ್ರಿನ್ಸಿಪಾಲರು “ನೀನು ಬಂದು ಕಾಲೇಜ್ ಹಾಸ್ಟಲಿನಲ್ಲಿರಬೇಕೆಂದು ನಿನ್ನ ಕ್ಷೇಮಕ್ಕೋಸ್ಕರವೇ ಅಪ್ಪಣೆಮಾಡಿದ್ದೇನೆ” ಎಂದರು. ನಿಜವಾದ ವಿಚಾರವೇನೆಂದರೆ, ನನ್ನ ಸಹಪಾಠಿಗಳು ಬಂದು ನಾನು ಈ ಗೂಡಿನಲ್ಲಿರುವುದನ್ನು ನೋಡಿದ್ದರು: ಅಲ್ಲದೆ ನನಗೆ ಊಟಕ್ಕಿರುವ ತೊಂದರೆಯನ್ನು, ಪ್ರತಿದಿನವೂ ಅಷ್ಟುದೂರ ನಡೆಯಬೇಕಾದ ಶ್ರಮವನ್ನೂ ಗಮನಿಸಿ, ಸಹಾನುಭೂತಿಯಿಂದ, ನನಗೆ ಅರಿವಿಲ್ಲದಂತೆ ಈ ಷಡಯಂತ್ರವನ್ನು ರಚಿಸಿ, ನನ್ನನ್ನು ಹಾಸ್ಟೆಲ್‌ಗೆ ಎಳೆದುಕೊಳ್ಳುವ ಪ್ರಯತ್ನಮಾಡಿದ್ದಾರೆ. ಅವರು ನನ್ನನ್ನು ಇಲ್ಲಿ ಇರಗೊಡುವುದಿಲ್ಲ. ಅಲ್ಲಿನ ಊಟವಸತಿಗಳಿಗೆ ನಾನು ೩ರೂ. ೯ ಆಣೆ. ಮಾತ್ರ ಕೊಡಬೇಕಾಗುವುದು. ಯಾವ ವಾತಾವರಣದಲ್ಲಿದ್ದರೂ ಏಕಾಗ್ರಚಿತ್ತದಿಂದ ಕೆಲಸ ಮಾಡುವುದು ಆವನವನ ಶಕ್ತ್ಯನುಸಾರವಾಗಿದೆ. ವ್ಯಾಸಂಗಕ್ಕೆ ಹಾಸ್ಟಲ್ ಕೆಟ್ಟದ್ದೇನೂ ಅಲ್ಲ. ಅಲ್ಲಿನ ವಿದ್ಯಾರ್ಥಿಗಳನೇಕರು ಪರೀಕ್ಷೆಯಲ್ಲಿ ಈ ಪ್ರಾಂತಕ್ಕೆ ಮೊದಲನೆಯವರಾಗಿ ಉತ್ತೀರ್ಣರಾಗಿದ್ದಾರೆ.

ಹನ್ನೆರಡಾಣೆ ಬಾಳುವ ಪುಸ್ತಕಗಳನ್ನು ಕೊಂಡೆ. ಈಗ ನನ್ನ ಬಳಿ ಒಂದು ದಮಡಿ ಸಹಾ ಇಲ್ಲ. ಅಯೋಧ್ಯಾಪ್ರಸಾದರನ್ನು ನೋಡುತ್ತೇನೆ.

ನಾನು ಹಾಸ್ಟಲಿಗೆ ಹೋಗಬಾರದೆಂದು ನಿಮ್ಮ ಅಭಿಪ್ರಾಯವಾಗಿದ್ದರೆ ಪ್ರಿನ್ಸಿಪಾಲರಿಗೆ ಏನು ಉತ್ತರ ಹೇಳಬೇಕೆಂದು ತಿಳಿಸಿರಿ.

೨೩-೫-೧೮೯೧ : ಕಾಲೇಜಿನಿಂದ ಹಿಂತಿರುಗಿ ಬಂದು ಬಾಗಿಲು ತೆರೆಯು ತ್ತಲೇ ಒಂದು ಹಾವು ನುಗ್ಗಿ ಬಂದಿತು ; ಅದು ಬಹಳ ವಿಷಭರಿತವಾದದ್ದು. ನಾನು ಕಿರುಚುತ್ತಲೇ ಅಕ್ಕಪಕ್ಕದ ಮನೆಯವರು ಬಂದು ಅದನ್ನು ಕೊಂದು ಹಾಕಿದರು.

ಕಾಲೇಜಿನ ಎಲ್ಲರಿಗೂ ನಾನಿಲ್ಲಿ ವಾಸಿಸುವುದು ಅನಿಷ್ಟವಾಗಿದೆ. ನಾನು ಹಾಸ್ಟಲಿಗೆ ಹೋಗಬೇಕೆಂದು ಬಯಸುತ್ತಾರೆ. ಎಲ್ಲಾದರೂ ಸರಿ ನನ್ನ ವ್ಯಾಸಂಗದಲ್ಲಿ ಏಕಾಗ್ರತೆ ಇರುವುದನ್ನು ಈಗಿನಿಂದಲೂ ಅಭ್ಯಾಸಿಸದಿದ್ದರೆ, ಮುಂದೆ ಜನರ ಮಧ್ಯೆ ವಾಸಿಸುವುದೇ ಕಷ್ಟವಾಗುವುದೆಂದು ಅವರು ಹೇಳು ತ್ತಾರೆ. ನೀರಿಗಿಳಿಯದೆ ದಡದಲ್ಲಿ ನಿಂತು ಮನುಷ್ಯನು ಎಷ್ಟು ಬಯಸಿದರೂ ಈಜು ಕಲಿಯಲಾರನೆಂದೆನ್ನುತ್ತಾರೆ.

ಮನುಷ್ಯನು ಬೇಕಾದಂತೆಲ್ಲಾ ಅಂಥ ಏಕಾಂತವೂ ನಿರ್ಜನ ಪ್ರದೇಶವೂ ಸಿಗುವುದು ಕಷ್ಟವೆಂದು ಹೇಳುತ್ತಾರೆ. ನಾನು ಕೇವಲ ಒಬ್ಬಂಟಿಗನಾಗಿರುವ ಅಭ್ಯಾಸವನ್ನು ಬಿಡಬೇಕೆಂದು ಹೇಳುತ್ತಾರೆ. ಗುಂಪಿನ ಮಧ್ಯೆ ಇರುವಾಗಲೂ ಸಹ ಮನಸ್ಸನ್ನು ಏಕಾಗ್ರತೆಯಲ್ಲಿ ನಿಲ್ಲಿಸಿ ವ್ಯಾಸಂಗ ಮಾಡುವುದೂ ಸಹ ಅಭ್ಯಾಸವಾಗುವುದೆಂದು ಕಾಲೇಜ್ ವೈದ್ಯರೂ ಸಹ ಹೇಳಿ ಹುರಿದುಂಬಿಸು ತ್ತಾರೆ. ಈ ಒಂದು ಭಯ ಹೊರತು ಹಾಸ್ಟೆಲಿನಲ್ಲಿ ಎಲ್ಲಾ ವಿಧವಾದ ದೈಹಿಕಾನುಕೂಲಗಳುಂಟು. ಅಂತೂ ನಾನು ಹಾಸ್ಟಲಿಗೆ ಹೋಗುವುದು ಅತ್ಯಗತ್ಯವೆಂದೂ ಅದನ್ನು ತಪ್ಪಿಸಿಕೊಳ್ಳಲಾರನೆಂದೂ ಕಾಣಿಸುತ್ತದೆ. ನಾನು ಇಲ್ಲಿರುವಷ್ಟು ಏಕಾಗ್ರತೆಯಿಂದ ನಡೆಯುವಂತೆ ಆಶೀರ್ವದಿಸಿರಿ.

೨೫-೫-೧೮೯೧ : ಈಗ ಎಲ್ಲಾ ಲೆಕ್ಕಾಚಾರಗಳೂ ಸಿಕ್ಕಿವೆ. ನಾನು ಹಾಸ್ಟಲಿಗೆ ಹೋದರೆ:—(೧) ರಜಾ ತಿಂಗಳುಗಳಲ್ಲಿ ನಾನು ಹಾಸ್ಟಲಿಗೆ ಏನನ್ನೂ ಕೊಡಬೇಕಾಗಿಲ್ಲ. (೨) ನಾನು ಊಟ ಮಾಡಿದಷ್ಟು ದಿನಕ್ಕೆ

ಮಾತ್ರ ದುಡ್ಡು ಕೊಡಬೇಕು. (೩) ನನ್ನ ಅತಿಥಿಗಳು ಯಾರಾದರೂ ಬಂದರೆ ಅವರೂಟಕ್ಕೆ ಮಾತ್ರ ಕೊಡಬೇಕು.

ನಾನು ಹಾಸ್ಟಲ್ ಅಧಿಕಾರಿಗಳ ಬಳಿಗೆ ಹೋಗಿ ನನ್ನ ತಂದೆತಾಯಿಗಳು ಈ ಹಣವನ್ನು ಕೊಡಲಾರರೆಂದು ಹೇಳಿದೆ. ಅವರು ಲೆಕ್ಕಾಚಾರ ಹಾಕಿ ತಿಂಗಳಿಗೆ ಈಗಿನ ಖರ್ಚಿಗಿಂತ ೧ ರೂ. ಮಾತ್ರ ಹೆಚ್ಚಾಗುವುದೆಂದು ಹೇಳಿದರು. ಅಲ್ಲದೆ ಹಾಸ್ಟಲಿನಲ್ಲಿ ಉತ್ತಮವಾದ ಊಟ ಸಿಕ್ಕುವುದರಿಂದ ನಾನು ಮತ್ಯಾವುದಾದರೂ ಖರ್ಚನ್ನು ೧ ರೂಪಾಯಿನಷ್ಟು ತಗ್ಗಿಸಬಹುದೆಂದು ಬುದ್ಧಿವಾದ ಹೇಳಿದರು. ಅಲ್ಲದೆ ನನ್ನ ಸಹಪಾಠಿಗಳಿಂದ ಪುಸ್ತಕಗಳನ್ನು ಎರವಲಾಗಿ ತೆಗೆದುಕೊಂಡು ಓದಬಹುದಾದ್ದರಿಂದ ಪುಸ್ತಕಗಳನ್ನು ಕೊಳ್ಳುವ ಕಷ್ಟವೂ ಇಲ್ಲವೆಂದು ತಿಳಿಸಿದರು. ಅಲ್ಲದೆ ಈ ಮಧ್ಯೆ ಅಲ್ಲಿ ನನಗೆ ಮತ್ತೆ ಯಾವುದಾದರೂ ಅನಾನುಕೂಲಗಳು ಕಂಡುಬಂದರೆ ರಜಾ ಮುಗಿಯುತ್ತಲೇ ಬೇಕಾದರೆ ಅಲ್ಲಿಂದ ಬಿಟ್ಟು ಬರಬಹುದೆಂದೂ ಹೇಳಿದರು.

೫-೧೨-೧೮೯೨ : ನಿಮಗೆ ಬರೆಯುವುದಕ್ಕಾಗಿ ಹತ್ತಿರ ಕಾರ್ಡನ್ನು ಇಟ್ಟುಕೊಂಡಿದ್ದೇನೆ. ಆದರೆ ಯಾವುದೋ ಗಣಿತದ ಪ್ರಶ್ನೆಯನ್ನು ಬಿಡಿಸುವುದರಲ್ಲಿ ತೊಡಗಿದ್ದೆ. ಕಾರಣ ಕಾರ್ಡನ್ನು ಬರೆದು ಮುಗಿಸಲು ಅವಕಾಶವಾಗಲಿಲ್ಲ. ಕಾಲೇಜಿನ ಇತರ ಕೆಲಸಗಳು ನಿಂತುಬಿಟ್ಟಿವೆ. ೨೮ ಘಂಟೆಗಳ ನಂತರ ಗಣಿತದ ಒಂದು ಪ್ರಶ್ನೆಯನ್ನು ಬಿಡಿಸಿದ್ದೇನೆ.

೨೧-೨-೧೮೯೨ : ನಾನಿನ್ನೂ ಕಾಲೇಜು ಹಾಸ್ಟಲಿಗೆ ಹೋಗಲು ಆಗಲಿಲ್ಲ. ಈ ದಿನ ಹೋಗಬಹುದು. ಈ ದಿನ ನನ್ನ ಕೋಣೆಯಲ್ಲಿ ಮತ್ತೆ ಕಳುವಾಯಿತು. ನನ್ನ ಹಾಸಿಗೆ, ಚಾಪೆ, ಕೆಲವು ಪಾತ್ರೆಗಳು ಮಾಯವಾದುವು. ಹಾಸಿಗೆಯಲ್ಲಿದ್ದ ನನ್ನ ಬಟ್ಟೆಗಳೂ ಹೋದವು. ಆದರೆ ನನ್ನ ಪುಸ್ತಕಗಳು ಸುರಕ್ಷಿತವಾಗಿವೆ. ಲಾಲಾ ಜ್ವಾಲಾಪ್ರಸಾದರೂ ಮತ್ತು ಝುಂಡೂ ಮಲ್‌ರೂ "ಗೋಸ್ವಾಮಿ ! ನೀವೇನೂ ಚಿಂತೆ ಪಡಬೇಡಿ. ನಿಮಗೆ ಬೇಕಾದ ಬಟ್ಟೆಬರೆಗಳನ್ನು ಕೊಡಿಸುತ್ತೇವೆ" ಎಂದು ಸಮಾಧಾನಪಡಿಸಿದರು.

೧೧-೬-೧೮೯೨ : ಈ ದಿನ ಯಾರೋ ಮಹನೀಯರು ನನಗೆ ಕೊಡುವಂತೆ ಹೇಳಿ ಪ್ರಿನ್ಸಿಪಾಲರ ಬಳಿ ೫೩ರೂ. ಗಳನ್ನು ಕೊಟ್ಟು ಹೋಗಿದ್ದರು. ಪ್ರಿನ್ಸಿಪಾಲರು ನನ್ನನ್ನು ಕರೆದು ಇದನ್ನು ತೆಗೆದುಕೋ ಎಂದು ಹೇಳಿ

ಕೊಟ್ಟರು. ನಾನು ಆ ಮಹನೀಯರ ಹೆಸರನ್ನು ಕೇಳಿದೆ. ಅವರು ಹೇಳಲಿಲ್ಲ. ಪ್ರಿನ್ಸಿಪಾಲರೇ ಈ ರೀತಿ ಮಾಡಿರಬಹುದು. ಅದರಲ್ಲಿ ಅರ್ಧವನ್ನು ಕಾಲೇಜಿಗಾಗಿ ಇಟ್ಟುಕೊಂಡು ಇನ್ನರ್ಧವನ್ನು ಮಾತ್ರ ನನಗೆ ಕೊಡುವಂತೆ ಹೇಳಿದೆ; ಅದಕ್ಕೆ ಅವರು ಒಪ್ಪಲಿಲ್ಲ. ಆದ್ದರಿಂದ ಹಣವನ್ನು ನಾನು ತೆಗೆದುಕೊಳ್ಳಬೇಕಾಯಿತು. ತೆಗೆದುಕೊಂಡು ಅದನ್ನು ಲಾಲಾ ಅಯೋಧ್ಯ ಪ್ರಸಾದರಿಗೆ ಕೊಟ್ಟೆ.

೯-೭-೧೮೯೨: ನಿನ್ನೆ ರಾತ್ರಿ ಒಂದು ಬಟ್ಟಲು ಹಾಲು ಕುಡಿಯ ಬೇಕೆಂದು ಪೇಟೆಗೆ ಹೋಗಿದ್ದಾಗ ನನ್ನದೊಂದು ಪಾದರಕ್ಷೆ ಕಳೆದು ಹೋಯಿತು. ಯಾರೋ ಅದನ್ನು ಮೂಲೆಗೆ ತಳ್ಳಿರಬೇಕು. ಎಷ್ಟು ಹುಡುಕಿದರೂ ಸಿಕ್ಕಲಿಲ್ಲ. ಮಾರನೆ ದಿನ ಒಂದು ಕಾಲಿಗೆ ನನ್ನದೊಂದು ಪಾದರಕ್ಷೆಯನ್ನೂ ಮತ್ತೊಂದು ಕಾಲಿಗೆ ನಾನು ವಾಸಿಸುವ ಮನೆಯ ಮುದುಕಿಯೊಬ್ಬಳ ಪಾದರಕ್ಷೆಯನ್ನೂ ಹಾಕಿಕೊಂಡು ಶಾಲೆಗೆ ಹೋದೆ. ಆದುದರಿಂದ ಸಂಜೆಗೆ ಒಂಭತ್ತುಕಾಲಾಣೆ ಕೊಟ್ಟು ಒಂದು ಹೊಸ ಜೊತೆಯನ್ನು ಕೊಳ್ಳಬೇಕಾಯಿತು.

[ರಾಮರು ಬಿ. ಎ. ಪರೀಕ್ಷೆಗೆ ಕುಳಿತ ಈ ವರ್ಷ ಇಂಗ್ಲಿಷ್ ಉತ್ತರ ಪುಸ್ತಕಗಳನ್ನು ಪರೀಕ್ಷಿಸುವುದರಲ್ಲಿ ಅಪಾರ ಗಲಿಬಿಲಿಯಾಗಿಬಿಟ್ಟು, ತರಗತಿಯಲ್ಲಿ ಬಹು ಉತ್ತಮರಾಗಿದ್ದ ವಿದ್ಯಾರ್ಥಿಗಳು ಫೇಲ್ ಆಗಿ ಹೋಗಿ, ಪ್ರಿನ್ಸಿಪಾಲರು ಪರೀಕ್ಷೆಗೆ ಕಟ್ಟಿಸುವುದಕ್ಕೇ ಅನುಮಾನಿಸಿದಂಥ ವಿದ್ಯಾರ್ಥಿಯು ಪ್ರಥಮ ಸ್ಥಾನದಲ್ಲಿ ಉತ್ತೀರ್ಣನಾಗಿ ಬಿಟ್ಟನು. ಹೀಗೆ ಫೇಲ್ ಆದವರ ಪೈಕಿ ರಾಮರೂ ಒಬ್ಬರು. ಇಂಗ್ಲೀಷಿನಲ್ಲಿ ಕೇವಲ ಮೂರು ಅಂಕಗಳು ಕಡಿಮೆ ಬಂದು ಫೇಲ್ ಆಗಿದ್ದರೂ, ಒಟ್ಟು ಅಂಕಗಳಲ್ಲಿ ಯೂನಿವರ್ಸಿಟಿಗೇನೇ ಪ್ರಥಮ ಸ್ಥಾನದಲ್ಲಿದ್ದರು.

ಇದರ ಫಲವಾಗಿ ವಿಶ್ವವಿದ್ಯಾನಿಲಯದಲ್ಲಿ ಬಹಳ ಗದ್ದಲವೆದ್ದು, ಚರ್ಚೆಗಳಾಗಿ, ಕಡೆಗೆ "ಐದು ಅಂಕಗಳೊಳಗೇ ಕಡಿಮೆ ಬಂದು ಫೇಲ್ ಆದ ವಿದ್ಯಾರ್ಥಿಗಳು ತಮ್ಮ ಉತ್ತರ ಪುಸ್ತಕಗಳನ್ನು ಮತ್ತೆ ಸರಿನೋಡಿಸಬಹುದು" ಎಂದು ತೀರ್ಮಾನವಾಯಿತು. ಆದರೆ ಈ ಕಾಯಿದೆಯು ಮಾರನೆಯ ವರುಷದಿಂದ ಜಾರಿಗೆ ಬರುವುದಾದ್ದರಿಂದ ರಾಮರಿಗೆ ಹೇಗೂ ಸಹಾಯ

ವಾಗಲಿಲ್ಲ. ರಾಮರಿಗಂತೂ, ಇದುವರೆಗೆ ಬರುತ್ತಿದ್ದ ವಿದ್ಯಾರ್ಥಿವೇತನವು ನಿಂತುಹೋಯಿತು; "ಇಪ್ಪತ್ತೊಂದು ವರ್ಷದೊಳಗಿನ ವಯಸ್ಸಿನ ಬಿ.ಎ., ಅಥವಾ ಎಂ.ಎ, ಪಾಸ್‌ಮಾಡಿದ ಒಬ್ಬ ವಿದ್ಯಾರ್ಥಿಗೆ ಗಣಿತ ಶಾಸ್ತ್ರವನ್ನು ಅಭ್ಯಸಿಸಲು ಇಂಗ್ಲೆಂಡಿಗೆ ಹೋಗಿ ಅಧ್ಯಯನ ಮಾಡುವ ಅನುಕೂಲಕ್ಕಾಗಿ 'ಸ್ಟೇಟ್-ವಿದ್ಯಾರ್ಥಿ ವೇತನವೊಂದು' ಅದೇ ವರುಷವೇ ಮಂಜೂರಾಯಿತು; ಅದಕ್ಕೆ ರಾಮರೇ ಗುರ್ತಿಸಲ್ಪಟ್ಟಿದ್ದರು; ಆದರೆ ಬಿ.ಎ. ಯಲ್ಲಿ ಫೇಲ್ ಆದಕಾರಣ ಅದೂ ಕೈತಪ್ಪಿತು.

ಈ ಆಘಾತವು ಅವರ ಕೋಮಲ ಹೃದಯವನ್ನು ಅಲ್ಲೋಲಕಲ್ಲೋಲ ಮಾಡಿಬಿಟ್ಟಿತು. "ಎದೆಯು ಒಡೆದು ಹೋಗುವುದೆನ್ನುವಷ್ಟು ಭಯ ವಾಯಿತು; ಸುದ್ದಿಯು ಸಿಡಿಲು ಬಡಿದಂತೆ ಕಿವಿಗೆ ಬಿದ್ದಿತು. ಕಣ್ಣೀರು ಧಾರೆ ಧಾರೆಯಾಗಿ ಕೆನ್ನೆಗಳ ಮೇಲೆ ಹರಿಯಿತು. ಪ್ರಚಂಡ ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿರುವಂತೆ ಅನುಭವವಾಯಿತು. ತಂದೆಯು ಮೊದಲೇ ಸಹಾಯ ಮಾಡುವುದಿಲ್ಲವೆಂದಂತೂ ಹೇಳಿಬಿಟ್ಟಿದ್ದರು; ಜೊತೆಗೆ ಪತ್ನಿ ಯನ್ನೂ ಕರೆತಂದು ಬಿಟ್ಟುಬಿಟ್ಟರು. ವಿದ್ಯಾರ್ಥಿ ವೇತನವೊಂದರ ಭರವಸೆ ಯಿಂದ ಈ ಸ್ಥಿತಿಗೆ ಎದೆಗುಂದಿರಲಿಲ್ಲ; ಈಗ ಅದೂ ಕೈತಪ್ಪಿದ ಕಾರಣ, ಅಸಹಾಯನಾದ ರಾಮನ ಮನಸ್ಸನ್ನು ಮಂಕು ಕವಿದುಬಿಟ್ಟಿತು. ಇಂತಹ ಅತ್ಯಂತ ಕಠಿಣ ಪರಿಸ್ಥಿತಿಯಲ್ಲಿ ಅವನ ಮನಸ್ಸಿಗೆ ಶಾಂತಿಯನ್ನುಂಟುಮಾಡು ವುದೆಂದರೆ ಈಶ್ವರನ ದಯೆಯನ್ನು ನೆನೆಯುವುದು. ಕೋಡಿ ಹರಿಯು ತ್ತಿರುವ ಕಣ್ಣೀರಿನಿಂದ ಕೂಡಿ 'ತ್ವಮೇವ ಮಾತಾ ಚ ಪಿತಾತ್ವಮೇವ। ತ್ವಮೇವ ಬಂಧುಶ್ಚ ಸಖಾತ್ವಮೇವ॥ ತ್ವಮೇವ ವಿದ್ಯಾ ದ್ರವಿಣಂ ತ್ವಮೇವ। ತ್ವಮೇವ ಸರ್ವಂ ಮಮದೇವ ದೇವ' ॥ ಎಂದು ನೊಂದ ಹೃದಯ ಅಂತ ರಾಳದಿಂದ ನುಡಿಯುತ್ತಿದ್ದ. ಈ ಸಮಯದಲ್ಲಿ ಈಶ್ವರನಲ್ಲಿ ರಾಮನ ಒಂದೇ ಪ್ರಾರ್ಥನೆ ಏನೆಂದರೆ 'ದೇವಾ ಈಗ ರಾಮನು ಸಂಪೂರ್ಣ ನಿನ್ನ ವನು. ಅವನ ಹೃದ್ಯದ ಕರ್ತವ್ಯವೆಂದರೆ ನಿನ್ನ ಪವಿತ್ರ ನಾಮವನ್ನು ಜಪಿಸು ವುದು. ಅವನು ನಿನ್ನ ಸಹಾಯವನ್ನು ದುರುಪಯೋಗಪಡಿಸುವುದಿಲ್ಲ. ಅಗತ್ಯವಾದಾಗ ಅವನಿಗೆ ಸಹಾಯ ನೀಡು ದೇವಾ! ಅದು ನಿನ್ನ ಕರ್ತವ್ಯ. ರಾಮನ ಶರೀರವು ಅವನದಲ್ಲ. ಅವನು ಸರ್ವಸ್ವವನ್ನೂ ನಿನಗೇ ಅರ್ಪಿಸಿ

ಬಿಟ್ಟಿರುವನು. ರಾಮನು ಈಗ ಸಂಪೂರ್ಣ ನಿನ್ನವನು. ನಿನಗೆ ಅವನನ್ನು ಕಾಪಾಡುವುದಿದ್ದರೆ ಕಾಪಾಡು; ಇಲ್ಲದಿದ್ದರೆ ನಿನ್ನ ಮನಬಂದಂತೆ ಅವನನ್ನು ಮಾಡು" ಎಂದು. (ಹೀಗೆಂದು ಮುಂದೇ ಅವರೇ ಹೇಳಿದ್ದಾರೆ.)

ಲಾಹೋರ್‌ನಲ್ಲಿ (೨)

ಮತ್ತೆ ಕಾಲೇಜಿಗೆ ಬಿ.ಎ. ತರಗತಿಗೆ ಸೇರಿದ ಮರುದಿನವೇ ಕಾಲೇಜಿನ ಸಿಪಾಯಿ ಮಾರುಪಾತ ಲಾಲಾ ಝುಂಡೂಮಲ್‌ರು ಬಂದು ಇವರನ್ನು ತಮ್ಮಲ್ಲೇ ಬಂದಿರುವಂತೆ ಕೇಳಿಕೊಂಡರಲ್ಲದೆ, ಮುಂದೆ ಇವರಿಗೆ ಬಾಡಿಗೆ ಇಲ್ಲದೆ ಪುಟ್ಟಮನೆಯನ್ನೂ ಕೊಟ್ಟು, ಬಟ್ಟೆಬರೆಗಳನ್ನು ಕೊಡಿಸುತ್ತಿದ್ದರು. ಈತನ ನೆಂಟನೂ. ಹಿಂದೆ ರಾಮರ ಉಪಾಧ್ಯಾಯನೂ ಆಗಿದ್ದ ಪಿ. ರಘುನಾಥ್‌ಮಲ್ (ಆಸಿಸ್ಟೆಂಟ್ ಸರ್ಜನ್) ಕೂಡ ಆಗಾಗ ಇವರಿಗೆ ಧನಸಹಾಯ ಮಾಡುತ್ತಿದ್ದರು.

೨-೧೦-೧೮೯೨: ನಾನು ಮತ್ತೆ ಕಾಲೇಜನ್ನು ಸೇರಿದೆ. ಕಾಲೇಜಿನ ಹಲ್ವಾಯಿ (ತಿಂಡಿ ಮಾಡುವವನು) ಝುಂಡುಮಲ್‌ರು ತಮ್ಮೊಂದಿಗೆ ನಾನು ಊಟಮಾಡಬೇಕೆಂದು ಪ್ರೀತಿಯಿಂದ ಬರಹೇಳಿದ್ದಾರೆ. ಅವರು ಒತ್ತಾಯ ಪಡಿಸಿದ್ದರಿಂದ ಅವರ ಆತಿಥ್ಯವನ್ನು ಸ್ವೀಕರಿಸಿದ್ದೇನೆ. ಊಟ ಚೆನ್ನಾಗಿದ್ದರೆ ಮುಂದೆ ಅಲ್ಲಿಯೇ ಊಟಮಾಡುತ್ತೇನೆ.

೯-೧೦-೧೮೯೨: ನಾನು ಝುಂಡುಮಲ್‌ರಲ್ಲಿಯೇ ಊಟಮಾಡುತ್ತಿರುತ್ತೇನೆ. ಅವರ ಪ್ರೀತ್ಯಾದರಗಳನ್ನು ನನ್ನ ಮನಸ್ಸು ಮೆಚ್ಚಿದೆ. ನೀವಿಲ್ಲಿ ಬಂದಾಗ ಅವರ ಆತಿಥ್ಯದಲ್ಲಿ ನಾನಿರಬಾರದೆಂದು ಎನಿಸಿದರೆ ಬಿಟ್ಟುಬಿಡುತ್ತೇನೆ.

೯-೧೦-೧೮೯೨: ಇಂದಿನಿಂದ ನಮ್ಮ ಕಾಲೇಜಿನ ತರಗತಿಗಳಾರಂಭ. ಪಾಠವನ್ನು ಕೊಡಿಸಿರೆಂದು ಯಾವ ಪ್ರೊಫೆಸರನ್ನೂ ಕೇಳಲಾಗಲಿಲ್ಲ. ಬಹದ್ದೂರ್‌ಚಂದರು ಸಿಕ್ಕಿದ್ದರು. ಎಗ್ಸಿಕ್ಯುಟಿವ್ ಇಂಜಿನಿಯರ್ ಲಾಧಾರಾಮ್ ಎಂಬುವರ ಮನೆಯಲ್ಲಿ ಒಬ್ಬ ಹುಡುಗನಿಗೆ ಪಾಠ ಹೇಳುವವರು ಬೇಕೆಂದು ಹೇಳಿದರು. ಅಲ್ಲಿ ಎರಡು ಘಂಟೆಯ ಪಾಠದಿಂದ

೧೫ ರೂಪಾಯಿ ಸಿಕ್ಕಬಹುದು. ನನ್ನ ಸಲುವಾಗಿ ಯಾವುದಾದರೂ ಅನುಕೂಲವಾಗಬಹುದೆಂದು ನಂಬಿದ್ದೇನೆ.

೯-೧೦-೧೮೯೨ : ನಾನು ವಾಸಿಸುತ್ತಿದ್ದ ಮನೆಯ ಛಾವಣಿಯು ಮಳೆಯ ದೆಸೆಯಿಂದ ಕುಸಿದು ಬಿದ್ದಿತು. ಝುಂಡುಮಲ್‌ರು ನನ್ನ ಪುಸ್ತಕ ಸಾಮಾನುಗಳನ್ನು ಉಳಿಸಿದರು. ನನಗಿನ್ನೂ ಯಾವುದೂ ಮನೆ ಸಿಕ್ಕಲಿಲ್ಲ. ನಿನ್ನೆ ರಾತ್ರಿ ಝುಂಡುಮಲ್‌ರ ಮನೆಯಲ್ಲೇ ಊಟಮಾಡಿ ಮಲಗಿದ್ದೆ.

೧೮-೧೦-೧೮೯೨ : ಪಾಠದ ವಿಚಾರವಾಗಿ ಪ್ರೊಫೆಸರ್ ಹತ್ತಿರ ಮಾತನಾಡಿದೆ. ಪರೀಕ್ಷೆಯು ಸಮೀಪಿಸುತ್ತಿರುವುದರ ಕಾರಣ ನಾನು ಕಾಲವನ್ನು ಕಳೆದುಕೊಳ್ಳುವ ಯೋಚನೆ ಮಾಡಕೂಡದೆಂದು ಬುದ್ಧಿ ಹೇಳಿದರು. ಅಲ್ಲದೆ ೧೫ ರೂಪಾಯಿ ಸಂಪಾದನೆಗಿಂತಲೂ ನನ್ನ ಕಾಲವು ಮುಖ್ಯವಾದುದೆಂದು ಹೇಳಿದರು.

ನನ್ನ ಇಬ್ಬರು ಮಿತ್ರರು ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇನೆ. ಒಬ್ಬಾತ ಖಲೀಲ್ ಉಲ್ ರಹಮಾನ್ ಬಿ. ಎ. ಮತ್ತೊಬ್ಬಾತ ಲಾಲಾ ಶಿವರಾಮ್ ಬಿ. ಎ.

೧೩-೧೨-೧೮೯೨ : ನನ್ನ ತರಗತಿಯ ಸಹಪಾಠಿಯೊಬ್ಬನು ನನ್ನಿಂದ ಗಣಿತ ಶಾಸ್ತ್ರವನ್ನು ಹೇಳಿಸಿಕೊಳ್ಳುತ್ತಿದ್ದಾನೆ. ಪ್ರತಿಫಲದ ವಿಚಾರವಾಗಿ ನಾನಿನ್ನೂ ಮಾತನಾಡಿಲ್ಲ. ಆದರೆ ಆತನು ಬಹಳ ಒಳ್ಳೆಯವನು ; ಆದುದರಿಂದ ನನ್ನ ಶ್ರಮವು ಯಾವುದಾದರೊಂದು ರೀತಿ ಫಲಿಸುವುದು.

ಸರ್ದಾರ್ ಪರೀಕ್ಷೆಯು ಇನ್ನು ಕೆಲವು ದಿನಗಳಲ್ಲೇ ಮುಗಿಯುವುದು. ನಾನು ಪಾಠ ಹೇಳುತ್ತಿರುವ ಸಹಪಾಠಿಯು ನನ್ನ ಮನೆ ಬಾಡಿಗೆ, ಹಾಲಿನ ಖರ್ಚಷ್ಟನ್ನಾದರೂ ಕನಿಷ್ಟಪಕ್ಷ ಕೊಡುತ್ತಾನೆ; ಅಲ್ಲದೆ ಸರ್ದಾರರು ಅವರ ಮನೆಯಲ್ಲೇ ಇರುವಂತೆ ನನಗೆ ಹೇಳುತ್ತಿದ್ದಾರೆ. ನೀವು ಇಲ್ಲಿ ಬಂದಾಗ ನೀವು ಹೇಳಿದಂತೆ ಮಾಡುತ್ತೇನೆ.

೨೩-೧-೧೮೯೩ : ನಾನು ಕಾಲೇಜಿಗೆ ಹೋದಾಗ ಪ್ರೊ. 'ಗಿಲ್ಬರ್ಟ್‌ಸನ್' ರವರು ಬರಹೇಳಿದರೆಂದು ಆಳು ಹೇಳಿದ. ಆಗತಾನೇ ತರಗತಿಯ ಗಂಟೆ ಹೊಡೆದಿತ್ತು. ಗಿಲ್ಬರ್ಟ್‌ಸನ್‌ರವರು ಒಂದು ಪೊಟ್ಟಣವನ್ನು ಕೊಟ್ಟರು. ನಾನು ಅದನ್ನು ತೆಗೆದುಕೊಂಡು ತರಗತಿಗೆ ಓಡಿದೆ. ಈ ದಿನ ನನ್ನ ಬಳಿ

ಮೂರು ಕಾಸು ಸಹಾ ಇರಲಿಲ್ಲ. ಮೂರು ಘಂಟೆಗಳ ನಂತರ ಪೊಟ್ಟಣವನ್ನು ಒಡೆದು ನೋಡಲು ಅದರಲ್ಲಿ ೩೦ ರೂಪಾಯಿಗಳಿದ್ದವು. ನಾನು ಆ ದಯಾಳುಗಳಾದ ಪ್ರೊಫೆಸರ್ ಗಿಲ್ಬರ್ಟ್ಸರವರ ಬಳಿಗೆ ಹೋಗಿ ನನಗೆ ಅಷ್ಟು ಹಣ ಬೇಕಿರಲಿಲ್ಲವೆಂದು ಹೇಳಿ ಇಪ್ಪತ್ತು ರೂಪಾಯಿಗಳನ್ನು ಹಿಂತಿರುಗಿಸಲು ಹೋದೆ. ಆದರೆ ಅವರು ಹಣವನ್ನೆಲ್ಲಾ ತೆಗೆದುಕೊಳ್ಳುವಂತೆ ಒತ್ತಾಯ ಪಡಿಸಿದರು. ನೀವು ಈಗ ಬಂದರೆ ಈ ಇಪ್ಪತ್ತು ರೂಪಾಯಿಗಳನ್ನು ತೆಗೆದುಕೊಂಡು, ಅದರಲ್ಲಿ ಸ್ವಲ್ಪ ಎಂದರೆ ನಿಮಗೆ ಇಷ್ಟ ಬಂದಷ್ಟನ್ನು ನಮ್ಮ ತಂದೆಗೆ ಕೊಡಬಹುದು. ನೀವಿಲ್ಲಿಗೆ ಬರಬೇಕೆಂದು ಬಯಸುವುದರಿಂದ ಹಣವನ್ನು ಪೋಷ್ಟಿನ ಮೂಲಕ ಕಳುಹಿಸುವುದಿಲ್ಲ. ನಾನು ಎರಡು ತಿಂಗಳು ಫೀಜ್ ಕೊಡಬೇಕಾದ್ದರಿಂದ ಹತ್ತು ರೂಪಾಯಿಗಳನ್ನು ಇಟ್ಟುಕೊಳ್ಳುತ್ತೇನೆ. ನನ್ನ ಎಂದಿನ ಖರ್ಚುಗಳಿಗೆ ಜ್ವಾಲಾ ಪ್ರಸಾದರನ್ನೇ ನಂಬಿದ್ದೇನೆ.

೧೨-೨-೧೮೯೩ : ನಾನು ಹಾಸ್ಟಲಿಗೆ ಬಂದಿದ್ದೇನೆ. ಮಧ್ಯಾಹ್ನದ ಊಟವನ್ನು ಹಾಸ್ಟಲಿನಲ್ಲಿಯೂ, ರಾತ್ರಿಯ ಊಟವನ್ನು ಝುಂಡುಮಲ್‌ರಲ್ಲಿಯೂ ಮಾಡುತ್ತಿದ್ದೇನೆ. ಮಧ್ಯಾಹ್ನದ ಊಟವನ್ನು ಹಾಸ್ಟಲಿನಲ್ಲಿ ಮಾಡಲು ಕೂಡ ಅವರಿಂದ ಬಿಡಿಸಿಕೊಳ್ಳುವುದು ಕಷ್ಟವಾಯಿತು. ನನ್ನ ಸ್ಥಳದ ಹೆಸರನ್ನು "ಮುರಲೀವಾಲಾ'' ದಿಂದ "ಮುರಾರಿವಾಲಾ" ಎಂದು ಮಾಡಿಕೊಳ್ಳಬೇಕೆಂದು ಇಚ್ಛಿಸುತ್ತೇನೆ. (ಮುರಾರಿ ಎಂದರೆ ದೇವರು.)

೧೮-೨-೧೮೯೩ : ಝುಂಡುಮಲ್ಲರು ಎರಡು ಕುರ್ತಾಗಳನ್ನೂ ಒಂದು ಪರಾಯನ್ನೂ ಹೊಲಿಸಿಕೊಟ್ಟರು. ಅಲ್ಲದೆ ಅವಶ್ಯಕವಾದಾಗ ಜ್ವಾಲಾ ಪ್ರಸಾದರ ಯಾವ ಉಡುಪನ್ನು ಉಪಯೋಗಿಸಲೂ ಸ್ವಾತಂತ್ರವಿದೆ. ಕಾರಣ ಎಲ್ಲಾ ಸರಿಯಾಗಿದೆ.

[ಮುಂದೆ ಬಿ.ಎ. ಟೆಸ್ಟ್ ಪರೀಕ್ಷೆಯಲ್ಲಿ ಮೊದಲನೇ ಗುಂಪಿಗೆ ಬೇಕಾದ ಅಂಕಗಳಿಗಿಂತ ೬೦ ಅಂಕಗಳನ್ನು ಹೆಚ್ಚಾಗಿ ಪಡೆದು ಪ್ರಥಮ ಸ್ಥಾನದಲ್ಲಿ ತೇರ್ಗಡೆ ಹೊಂದಿದರು. ಆಗ ಅವರಿಗೆ ಎಷ್ಟು ಅಪಾರ ಆತ್ಮವಿಶ್ವಾಸವಿದ್ದಿತೆಂದರೆ ಪರೀಕ್ಷಕನು ೧೩ ಪ್ರಶ್ನೆಗಳನ್ನು ಕೊಟ್ಟು ಯಾವುದಾದರೂ ೯ ಪ್ರಶ್ನೆಗಳನ್ನು ಮಾತ್ರ ಬಿಡಿಸುವಂತೆ ಹೇಳಿದ್ದರೆ, ಇವರು ಹದಿಮೂರು ಪ್ರಶ್ನೆಗಳನ್ನೂ ಬಿಡಿಸಿ ಉತ್ತರಬರೆದು, ಪರೀಕ್ಷಕನಿಗೆ ಬೇಕಾದ ಒಂಭತ್ತು ಉತ್ತರ

ಸರಿನೋಡುವಂತೆ ಬರೆದುಬಂದರು. ಆದರೆ ಪ್ರಶ್ನೆಪತ್ರಿಕೆಯೇನೂ ಸುಲಭವಾಗಿತ್ತೆಂದು ತಿಳಿಯಕೂಡದು; ಕೊಟ್ಟಿದ್ದ ಅವಧಿಯಲ್ಲಿ ಇತರ ವಿದ್ಯಾರ್ಥಿಗಳು ಮೂರು ಅಥವಾ ನಾಲ್ಕು ಪ್ರಶ್ನೆಗಳನ್ನು ಬಿಡಿಸಿ ಉತ್ತರ ಬರೆದು ಬಂದುದೇ ದೊಡ್ಡ ಸಾಧನೆಯಾಗಿದ್ದಿತು. ಇವರಿಗೆ ಗಣಿತದಲ್ಲಿ ೧೫೦ ಅಂಕಗಳಿಗೆ ೧೪೮ ಅಂಕಗಳು ದೊರೆತವು.]

೧೧-೩-೧೮೯೩ : ನನ್ನ ರೋಲ್ ನಂಬರು ಬಂದಿದೆ. ಪರೀಕ್ಷೆಯಲ್ಲಿ ಗಣಿತಶಾಸ್ತ್ರದಲ್ಲಿ ೧೫೦ಕ್ಕೆ ೧೪೮ ನಂಬರು ಸಿಕ್ಕಿತು.

೧೭-೪-೧೮೯೩ : ಮಿತ್ರನೊಬ್ಬನ ಕಾಗದ.

ತೀರ್ಥರಾಮ್ ! ಧನ್ಯವಾದಗಳು ! ಬಿ. ಎ. ಪರೀಕ್ಷೆಯಲ್ಲಿ ಪ್ರಾಂತ್ಯಕ್ಕೆಲ್ಲಾ ಪ್ರಥಮ ಸ್ಥಾನದಲ್ಲಿ ಉತ್ತೀರ್ಣನಾಗಿದ್ದೀ.

[ಮುಂದೆ ೧೮೯೩ರಲ್ಲಿ ಬಿ. ಎ. ಪರೀಕ್ಷೆಯಲ್ಲಿ ಪಂಜಾಬ್ ಪ್ರಾಂತಕ್ಕೆಲ್ಲಾ ಮೊಲನೆಯವರಾಗಿ ತೇರ್ಗಡೆಹೊಂದಿದರು. ಮೊದಲನೇ ಭಾಗದಲ್ಲೇನೆ ೩೧೦ ಅಂಕಗಳು ದೊರೆತವು. ಜೊತೆಗೆ ತಿಂಗಳಿಗೆ ೬೦ ರೂಪಾಯಿನಷ್ಟು ಎರಡು ವಿದ್ಯಾರ್ಥಿ ವೇತನಗಳು, ಒಂದು ಸ್ವರ್ಣಪದಕ, ಒಂದು ಗೌ॰ ಮತ್ತು ಇತರ ಬಹುಮಾನಗಳೂ ದೊರೆತವು. ಇಷ್ಟೆಲ್ಲಾ ಅವರ ಅನನ್ಯ ಈಶ್ವರ ಭಕ್ತಿ ಮತ್ತು ದೃಢಸಂಕಲ್ಪದ ಫಲವಾಗಿತ್ತು. ಈಗ ಅವರಿಗೆ ೧೯॥ ವರ್ಷ ವಯಸ್ಸು; ಇದುವರೆಗೂ ಓದಿದ ಮಿರ್ಷ ಕಾಲೇಜಿನಲ್ಲಿ ಎಂ ಎ. ತರಗತಿ ಇಲ್ಲದರಕಾರಣ ಲಾಹೋರಿನ ಗವರ್ನಮೆಂಟ್ ಕಾಲೇಜಿನಲ್ಲಿ ಗಣಿತ ಶಾಸ್ತ್ರದ ಎಂ. ಎ. ತರಗತಿಗೆ ಸೇರಿದರು. ತಮ್ಮ ಅಧ್ಯಯನದ ಜೊತೆಗೆ ತಾವು ಎರಡು ವರ್ಷ ಓದಿದ ತಮ್ಮ ಶಾಲೆಯಾದ ಫೋರ್ಮನ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಗಣಿತಶಾಸ್ತ್ರದ (ಗೌರವ) ಪ್ರೊಫೆಸರ್ ಆಗಿ ವೇತನವಿಲ್ಲದೆ ಕೆಲಸ ಮಾಡಿದರು. ಬೋಧಿಸುವುದೆಂದರೆ ಅವರಿಗೆ ಅಷ್ಟು ಪ್ರೇಮ.

೧೧-೭-೧೮೯೩ : ನಾನು ಪಾಠಹೇಳುತ್ತಿದ್ದ ಬಾ........ನು (ಮಿಡಲ್ ಸ್ಕೂಲ್) ಮಾಧ್ಯಮಿಕ ಶಾಲಾಪರೀಕ್ಷೆಯಲ್ಲಿ ಮೊದಲು ಫೇಲ್ ಆಗಿದ್ದ ; ಆದರೆ ಉತ್ತರ ಪುಸ್ತಕಗಳನ್ನು ಮತ್ತೆ ಸರಿನೋಡಿಸಲು ಉತ್ತೀರ್ಣನಾಗಿ ಬಿಟ್ಟ. ಎಂತಹ ಸಂತೋಷ !

೧೩-೭-೧೮೯೩: ನಾನು ನದಿಯ ದಡಕ್ಕೆ ಹೋಗಿದ್ದೆ. ಅಲ್ಲಿ ದೋಣಿಗಳ ಸೇತುವೆಯ ಮೇಲೆ ಅಡ್ಡಾಡುತ್ತಿದ್ದಾಗ ಗವರ್ನಮೆಂಟ್ ಕಾಲೇಜಿನ ಮಿಸ್ಟರ್ ಬೆಲ್ ಸಾಹೇಬರು ಅಲ್ಲಿಗೆ ಬಂದರು. ನನ್ನನ್ನು ಬಹು ವಿಶ್ವಾಸದಿಂದ ಮಾತನಾಡಿಸಿದರು. ಬಹು ಹೊತ್ತು ಮಾತನಾಡಿದರು. ನನ್ನ ಕನ್ನಡಕದ ವಿಚಾರ ಕೇಳಿದರು; ನಂತರ ನಾನು ಛತ್ರಿಯನ್ನೇಕೆ ಉಪಯೋಗಿಸುವುದಿಲ್ಲವೆಂದು ಮುಂತಾಗಿ ಕೇಳಿದರು. ಆಗ ಹನಿಹಾಕುತ್ತಿತ್ತು; ಆದ್ದರಿಂದಲೇ ಛತ್ರಿಯ ವಿಚಾರ ಕೇಳಿದರು. ನನ್ನನ್ನು ತಮ್ಮ ಬಂಡಿಯಲ್ಲಿ ಕೂಡಿಸಿಕೊಂಡು ಗವರ್ನಮೆಂಟ್ ಕಾಲೇಜಿನವರೆಗೂ ಕರೆದುಕೊಂಡು ಹೋದರು. ಬಂಡಿಯಲ್ಲಿ ನನಗೆ ನೆನಪಿದ್ದ ಹಲವು ಇಂಗ್ಲೀಷ್ ಪದ್ಯಗಳನ್ನು ಪಠಿಸಿದೆ. ನನಗೆ ಇದ್ದ ಪಠ್ಯ ಪುಸ್ತಕಗಳ ಜೊತೆಗೆ ನನ್ನ ಪಾಠಗಳಿಗೆ ಸಂಬಂಧಪಟ್ಟ ಇತರ ಐದಾರು ಪುಸ್ತಕಗಳನ್ನಾದರೂ ಓದುತ್ತಿರುವೆನೆಂದು ಹೇಳಿದೆ. ನನ್ನ ಈ ವಿಚಾರವನ್ನೆಲ್ಲಾ ಕೇಳಿ ಅವರಿಗೆ ಬಹಳ ಸಂತೋಷವಾಯಿತು. ನಂತರ ನನ್ನ ತಾಯಿತಂದೆಗಳನ್ನು ವಿಚಾರಿಸಿ, ಅವರು ಹಣವಂತರೇ ಎಂದು ಪ್ರಶ್ನಿಸಿದರು. ಅವರು ಬಹು ಬಡವರೆಂದು ಹೇಳಿದೆ. ಪರೀಕ್ಷೆಯಾದ ನಂತರ ಏನು ಮಾಡಬೇಕೆಂದಿದ್ದೇನೆಂದು ಕೇಳಿದರು. ನನ್ನ ಭವಿಷ್ಯದ ವಿಚಾರವಾಗಿ ಇನ್ನೂ ಯಾವ ಬಯಕೆಯೂ ಇಲ್ಲವೆಂದು ತಿಳಿಸಿದೆ. ನನಗೆ ಯಾವುದಾದರೂ ಇಚ್ಛೆಯಿದ್ದರೆ ಆಜೀವ ಪರ್ಯಂತವೂ ನನ್ನ ಒಂದೊಂದು ಉಚ್ಛ್ವಾಸ, ನಿಚ್ಛ್ವಾಸವನ್ನೂ ಮಾನವ ಕೋಟಿಯ ಸೇವೆಯಲ್ಲಿ ಕಳೆಯಲು ಇಚ್ಛಿಸುವೆನೆಂದೂ, ಮಾನವ ಕೋಟಿಯ ಸೇವೆಯೇ ಈಶ್ವರಪೂಜೆಯೆಂದೂ, ಹೇಳಿದೆ. 'ನನ್ನ ಉತ್ತಮ ಸೇವೆಯೆಂದರೆ ಅವರಿಗೆ ಗಣಿತ ಶಾಸ್ತ್ರವನ್ನು ಕಲಿಸುವುದು' ಎಂದು ಹೇಳುತ್ತಿದ್ದೆ. ಈ ವೇಳೆಗೆ ಗವರ್ನಮೆಂಟ್ ಕಾಲೇಜಿನ ಕಾಂಪೌಂಡಿನಲ್ಲಿದ್ದ ಅವರ ಮನೆಯ ಬಳಿಗೆ ಬಂದೆವು. ಅವರು ನನ್ನನ್ನು ಕಾಲೇಜಿನ ವ್ಯಾಯಾಮ ಶಾಲೆಗೆ ಕರೆದುಕೊಂಡು ಹೋಗಿ, ವಿದ್ಯಾರ್ಥಿಗಳು ಬಗೆಬಗೆಯ ವ್ಯಾಯಾಮಗಳನ್ನು ಮಾಡುತ್ತಿರುವುದನ್ನು ತೋರಿಸಿ, ನಾನು ಯಾವ ಬಗೆಯ ವ್ಯಾಯಾಮ ಮಾಡುತ್ತಿರುವೆನೆಂದು ಕೇಳಿದರು. ನಾನು ನನ್ನ ಮಂಚವನ್ನೆತ್ತುವ ವ್ಯಾಯಾಮ ಮಾಡುತ್ತೇನೆಂದು ಹೇಳಿದೆ. ಆಗ ಅವರು ಒಂದು ಮಂಚವನ್ನುರುಳಿಸಿದರು. ಅದರ ಕಾಲುಗಳನ್ನು ಹಿಡಿದು

ಕೊಂಡು ನೂರು ಬಾರಿ ಎತ್ತಿದೆ. ಅಲ್ಲಿದ್ದವರ ಪೈಕಿ ಯಾರೂ ಇಪ್ಪತ್ತು ಬಾರಿಗಿಂತಲೂ ಹೆಚ್ಚಾಗಿ ಎತ್ತಲಾಗಲಿಲ್ಲ. ಇವೆಲ್ಲವನ್ನೂ ನೋಡಿ ಅವರೆಲ್ಲರಿಗೂ ನಮಸ್ಕಾರ ಮಾಡಿ ಮನೆಗೆ ಹೊರಟರು. ಆಗ ನಾನು ಮುಂದೆ ಹೋಗಿ "ಸರ್ ! ನೀವು ತೋರಿಸಿದ ದಯೆಗಾಗಿ ಬಹಳ ವಂದಿಸುತ್ತೇನೆ" ಎಂದು ಹೇಳಿದೆ. ಅವರು ವಂದಿಸಿ ಹೊರಟು ಹೋದರು.

೧೮-೮-೧೮೯೩ : ನಾನು ಯೋಗವಾಸಿಷ್ಠವನ್ನು ಓದಲಾರಂಭಿಸಿದ್ದೇನೆ.

೨೫-೧೨-೧೮೯೩ : ಈ ದಿನ ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯರಾದ ದಾದಾಭಾಯಿ ನವರೋಜಿಯವರು ೩ ಘಂಟೆಯ ರೈಲಿನಿಂದ ಇಲ್ಲಿಗೆ ಬಂದರು. ಪಟ್ಟಣದ ಜನರು ಬಹು ಆನಂದದಿಂದ ಅವರನ್ನು ಸ್ವಾಗತಿಸಿದರು. ಜನರ ಉತ್ಸಾಹಕ್ಕೆ ಪಾರವೇ ಇರಲಿಲ್ಲ. ಕಾಂಗ್ರೆಸ್ ಪಕ್ಷದ ಜನರಂತೂ ಅವರಿಗೆ ಬ್ರಹ್ಮ ಅಥವಾ ವಿಷ್ಣುವಿನ ಸ್ಥಾನವನ್ನೇ ಕೊಟ್ಟಿದ್ದರು. ಪಟ್ಟಣದ ಹಲವು ಭಾಗಗಳಲ್ಲಿ ಚಿನ್ನದ ಕಮಾನು ಕಟ್ಟುಗಳ ಮಂಟಪಗಳೂ ಕಟ್ಟಲ್ಪಟ್ಟಿದ್ದವು. ಈಗ ಅವರ ಮೆರವಣಿಗೆ ಆಗುತ್ತಿದೆ. ಮೆರವಣಿಗೆಯಲ್ಲಿ ಸಹಸ್ರಾರು ಜನರಿದ್ದಾರೆ; ಜನರು ಆನಂದಮಗ್ನರಾಗಿದ್ದಾರೆ. ಆದರೆ ಇಷ್ಟೆಲ್ಲಾ ನನ್ನ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಿಲ್ಲ. ಈ ಸಂತೋಷವೆಲ್ಲಾ ಯಾವುದರ ಸಲುವಾಗಿ ? ಈ ಬಗೆಯ ನನ್ನ ಮನಸ್ಸಿನ ಪರಿಸ್ಥಿತಿಗಾಗಿ ದೇವರಿಗೆ ಕೃತಜ್ಞನಾಗಿದ್ದೇನೆ.

೨೮-೧೨-೧೮೯೩ : ಅಂದರೆ ನೀವು ಕೋಪಗೊಂಡಿದ್ದೀರಿ. ಪರಿಪಕ್ವವಿಲ್ಲದ ನನ್ನನ್ನು ಕ್ಷಮಿಸಿರಿ; ನನ್ನ ತಪ್ಪುಗಳನ್ನು ಮನ್ನಿಸಿರಿ. ಜನರು ಸವಾರಿ ಮಾಡುವುದನ್ನು ಬೀಳುತ್ತಾ ಏಳುತ್ತಲೇ ಕಲಿಯುತ್ತಾರೆ. ಈಜುವವರು ಮುಳುಗೇ ಕಲಿಯಬೇಕು. ನಿಮಗೆ ಹಣಬೇಕಾದಲ್ಲಿ ಇಲ್ಲಿಂದ ಸ್ವಲ್ಪವನ್ನು ಕಳುಹಿಸುವೆನು. ನೀವು ನನ್ನೊಂದಿಗೆ ಕೋಪಗೊಳ್ಳಕೂಡದು. ಈ ವರ್ಷ ಹೊಸ ಪುಸ್ತಕಗಳಿಗಾಗಿ ಸ್ವಲ್ಪ ಹಣವನ್ನೂ ಸಹ ವೆಚ್ಚಮಾಡಿಲ್ಲ ; ನನ್ನ ಪಠ್ಯಪುಸ್ತಕಗಳನ್ನು ಮಾತ್ರ ಕೊಂಡಿದ್ದೇನೆ. ಪುಸ್ತಕಗಳನ್ನು ಕೊಳ್ಳುವ ಅಭ್ಯಾಸ ನನಗಿತ್ತು. ಆದರೆ ಅದನ್ನು ಬಿಟ್ಟುಬಿಟ್ಟಿದ್ದೇನೆ. ಮತ್ತು ನನ್ನ ಸ್ವಂತಕ್ಕೋಸ್ಕರ ಬಹು ಸ್ವಲ್ಪ ಹಣವನ್ನು ವೆಚ್ಚಮಾಡಬೇಕೆಂದು ಸದಾ ಯೋಚಿಸುತ್ತಿರುತ್ತೇನೆ. ಹಾಲಿಗೆ ಮಾತ್ರ ಸ್ವಲ್ಪ ಖರ್ಚು ಮಾಡುತ್ತೇನೆ.

ಕಾಂಗ್ರೆಸ್ಸಿಗೆ ಹಿಂದೂಸ್ಥಾನದ ವಾಕ್ಪಟುಗಳು ಬಂದಿದ್ದರೆಂದು, ಕಲಾ ಚಾತುರ್ಯವನ್ನು ಕಲಿಯಬೇಕೆಂದು ಅಲ್ಲಿಗೆ ಹೋಗಿದ್ದನಷ್ಟೆ. ಆ ದಿನ ನವರೋಜಿಯವರನ್ನು ಸ್ವಾಗತಿಸುವ ಸಮಯದಲ್ಲಿ ಜನಸಾಮಾನ್ಯರಂತೆ ನಾನು ಮೈಮರೆಯಲಿಲ್ಲವೆಂದು ಸಂತೋಷ. ಅಲ್ಲದೆ ಕಾಂಗ್ರೆಸ್‌ನವರ ವಾಗ್ಝೋರಣೆಯು ನನಗೆ ಯಾವ ಸಂತೋಷವನ್ನಾಗಲೀ, ಹೃದಯೋತ್ಕರ್ಷವನ್ನಾಗಲೀ, ಉಂಟುಮಾಡಲಿಲ್ಲ. ಶುಷ್ಕಶಬ್ದಾಡಂಬರವಾಗಿದ್ದಿತು.

೧೦-೧-೧೯೩೪ : ನನ್ನ ಸಹೋದರಿಯ ಮರಣದ ವಾರ್ತೆಯನ್ನು ಕೇಳಿದೆ. ಬಹು ದುಃಖವಾಯಿತು. ಆದರೆ ನನ್ನ ದುಃಖವನ್ನು ಹೇಳಿಕೊಂಡು ಪ್ರಯೋಜನವಿಲ್ಲ. ಘಂಟೆಗಳ ಕಾಲ ಬಿಕ್ಕಿ ಬಿಕ್ಕಿ ಅತ್ತೆ. ಆಕೆಯನ್ನು ಪ್ರೀತಿಸುತ್ತಿದ್ದಷ್ಟು ಮತ್ಯಾರನ್ನೂ ಪ್ರೀತಿಸುತ್ತಿರಲಿಲ್ಲ.

೧೪-೧-೧೯೩೪ : ಡಿಗ್ರಿ ಪದವಿಯನ್ನು ಪಡೆಯುವ ಸಲುವಾಗಿ ಬೇಕಾದ ಗೌನನ್ನು ಎಲ್ಲಿಂದ ತರುವುದೆಂದು ಯೋಚನೆಯಾಗಿದೆ. ಅದಕ್ಕೆ ೭೦ ರೂಪಾಯಿ ಬೇಕಾಗುತ್ತದೆ. ಅದನ್ನು ಎರವಲಾಗಿ ಎಲ್ಲಿಂದ ತರಲೂ ಸಾಧ್ಯವಾಗಲಿಲ್ಲ. ಈ ವರ್ಷ ನಾನು ಬಹಳ ಹಣ ವೆಚ್ಚಮಾಡಿದ್ದೇನೆ. ಲಕ್ಷ್ಮಣದಾಸರು ಸಿಕ್ಕಿದ್ದರು. ಗೌನ್ ಎರವಲಿಗೆ ಸಿಕ್ಕಲಿಲ್ಲ. ಸಾಧ್ಯವಾದರೆ ಹಕೀಂರಾಯರಿಂದ ಗೌನನ್ನು ತರಿಸಿ ಕೊಟ್ಟರಿ.

ನಮ್ಮ ಪ್ರೊಫೆಸರ್ ತಮ್ಮ ಗೌನನ್ನು ಕೊಡುವುದಾಗಿ ಹೇಳಿದರು. ಆದರೆ ಅದು ಅಮೇರಿಕನ್ ರೀತಿಯಲ್ಲಿ ಹೊಲೆಯಲ್ಪಟ್ಟಿದೆ. ಅದನ್ನು ಸ್ವಲ್ಪ ಬದಲಾಯಿಸಿ, ೫ ರೂಪಾಯಿನಲ್ಲಿ ಒಂದು ಶೀರ್ಷಿಕೆಯನ್ನು ಮಾಡಿಸಿಬಿಟ್ಟರೆ ನನ್ನ ಕೆಲಸಕ್ಕೆ ಬರುವುದು.

ಅವರು ಎಂ. ಎ. ಗೆ ಓದುತ್ತಿದ್ದಾಗಿನ ದಿನಚರಿಯನ್ನು ಈ ಪತ್ರದಿಂದ ತಿಳಿಯಬಹುದು :—

೮-೩-೧೯೩೪ : ಮುಂಜಾನೆ ಐದು ಘಂಟೆಗೆ ಎದ್ದು ಏಳು ಘಂಟೆಯ ವರೆಗೆ ಅಧ್ಯಯನ ಮಾಡುತ್ತೇನೆ. ನಂತರ ಪ್ರಾತಃಕರ್ಮ, ವ್ಯಾಯಾಮ ಸ್ನಾನಗಳನ್ನು ಮುಗಿಸಿ ಪಂಡಿತ್‌ಜೀಯವರಲ್ಲಿಗೆ ಹೊರಟು, ಹಾದಿಯಲ್ಲಿ ಓದುತ್ತಾ ಹೋಗುತ್ತೇನೆ. ಅಲ್ಲಿ ಒಂದು ಘಂಟೆಯ ನಂತರ ಊಟಮಾಡಿ ಅವರೊಂದಿಗೆ ಗಾಡಿಯಲ್ಲಿ ಕಾಲೇಜಿಗೆ ಹೋಗುತ್ತೇನೆ. ಕಾಲೇಜಿಂದ

ಹಿಂದಿರುಗುವಾಗ ಹಾದಿಯಲ್ಲಿ ಹಾಲು ಕುಡಿದು ಮನೆಗೆ ಬಂದು, ಕೆಲವು ನಿಮಿಷಗಳನಂತರ ರಾವಿ ನದಿಯ ದಡಕ್ಕೆ ಹೋಗಿ ಅಲ್ಲಿ ಅರ್ಧ ಘಂಟೆ ತಿರುಗಾಡುತ್ತಿರುತ್ತೇನೆ. ಹಿಂದಿರುಗುವಾಗ ತೋಟ ತುಡಿಕೆಗಳ ಮಾರ್ಗವಾಗಿ ಊರನ್ನು ಸುತ್ತಿಕೊಂಡು ಬಂದು, ಕತ್ತಲಾಗುವವರೆಗೆ ಮನೆಯ ಮಹಡಿಯ ಬಿಸಿಲು ಮಚ್ಚೆಯ ಮೇಲೆ ಪುಸ್ತಕ ಹಿಡಿದು ಓದುತ್ತಾ ತಿರುಗಾಡುತ್ತಿರುತ್ತೇನೆ ಕತ್ತಲಾಗುತ್ತಲೇ ಸ್ವಲ್ಪ ವ್ಯಾಯಾಮಮಾಡಿ ೭ ಘಂಟೆಯವರೆಗೆ ಓದುತ್ತೇನೆ. ನಂತರ ಊಟಮಾಡಿ ನನ್ನ ವಿದ್ಯಾರ್ಥಿ 'ಪ್ರೇಮ್'ಗೆ ಪಾಠ ಹೇಳಲು ಹೋಗುತ್ತೇನೆ. ಹಿಂದಿರುಗಿ ಬಂದು ಮತ್ತೆ ವ್ಯಾಯಾಮಮಾಡಿ ಹತ್ತೂವರೆ ಘಂಟೆವರೆಗೆ ಕುಳಿತು ಅಧ್ಯಯನ ಮಾಡುತ್ತೇನೆ. ನಂತರ ಮಲಗಿ ನಿದ್ರಿಸುತ್ತೇನೆ. ಹೊಟ್ಟೆಯು ಹಗುರವಾಗಿರುವಾಗಲೇ ನಾವು ಹರ್ಷಚಿತ್ತರಾಗಿ ಲವಲವಿಕೆಯಿಂದಿರುವುದೆಂದು ನನ್ನ ಅನುಭವ; ಮತ್ತೂ ಹಾಗಿದ್ದರೆ ನಮ್ಮ ಜ್ಞಾಪಕ ಶಕ್ತಿ ಚುರುಕಾಗಿರುವುದು. ಅಲ್ಲದೆ ಪರಿಶುದ್ಧ ಹೃದಯದಿಂದ ಈಶ್ವರನನ್ನು ಧ್ಯಾನಿಸಲು ಸಾಧ್ಯ. ನಾನಂತೂ ಬಹು ಮಿತವಾಗಿ ತಿನ್ನುತ್ತೇನೆ. ಅಲ್ಲದೆ ತಿಂದದ್ದನ್ನು ಸಂಪೂರ್ಣ ಪಚನ ಮಾಡಿಕೊಂಡೇ ತೀರುತ್ತೇನೆ".

ಎಂ. ಎ. ಪರೀಕ್ಷೆಗೆ ಓದುವುದಕ್ಕಾಗಿ ಗವರ್ನಮೆಂಟ್ ಕಾಲೇಜಿಗೆ ಸೇರಿದಂದು ಗೋಸ್ವಾಮಿಗಳ ವಯಸ್ಸು ಕೇವಲ ಹತ್ತೊಂಬತ್ತೂವರೆ ವರ್ಷ; ಆವೇಳೆಗಾಗಲೇ ಅವರ ಪ್ರಕೃತಿಪ್ರೇಮ, ಚಿತ್ರಕುಶಲತೆಗಳು ಹೇಗೆ ಪ್ರವೃದ್ಧಮಾನ ಹೊಂದುತ್ತಿದ್ದುವೆಂಬುದು ೧೮೯೩ರಲ್ಲಿ ತನ್ನ ಗುರುವಿಗೆ ಬರೆದ ಈ ಪತ್ರದಿಂದ ಸ್ಪಷ್ಟವಾಗುವುದು. "ನಿನ್ನೆ ಇಲ್ಲಿ ಬಹು ಮಳೆ ಸುರಿಯಿತು. ಇಂದು ಕಾಲೇಜಿನಿಂದ ಹೊರಟು, ಓದುತ್ತಾ ಅಲೆದಾಡಿಕೊಂಡು ಮನೆಗೆ ಬರುತ್ತಿದ್ದೆ. ಬಹು ಮನೋಹರ ಸಮಯವಾಗಿದ್ದಿತು. ದೃಷ್ಟಿ ತಿರುಗಿದೆಡೆಯೆಲ್ಲಾ ಜಲಮಯ ಅಥವಾ ಹಚ್ಚನೆಯ ಹುಲ್ಲು ಮುಚ್ಚಿರುವುದು. ತಣ್ಣಗೆ ಬೀಸುತ್ತಿರುವ ಮಂದಮಾರುತನು ಹೃದಯಕ್ಕೆ ಬಹು ಪ್ರಿಯವಾಗಿದ್ದಾನೆ. ಗಗನದಲ್ಲಿ ತೇಲುತ್ತಿರುವ ಮೋಡಗಳು ಒಮ್ಮೆ ಸೂರ್ಯನನ್ನು ಮುಚ್ಚಿಬಿಡುತ್ತಲೂ, ಮತ್ತೊಮ್ಮೆ ಚದುರಿ ಅವನನ್ನು ಪ್ರಕಟಿಸುತ್ತಲೂ ಇವೆ. ಹಳ್ಳಕೊಳ್ಳಗಳಲ್ಲೆಲ್ಲಾ ನೀರು ತುಂಬಿ ಗರ್ಗಳಿಸುತ್ತಾ ಹರಿಯುತ್ತಿದೆ. ಗೋಲ್‌ಬಾಗ್‌ನ ವೃಕ್ಷಗಳು ಫಲಭರಿತವಾಗಿ ಜಗಿಯುತ್ತಿವೆ. ಎಳೆಯ ಕೊಂಬೆಗಳು

ಬಗ್ಗಿ ಪೃಥ್ವಿಯನ್ನು ಚುಂಬಿಸುವಂತಿದೆ. ಪಾರಿವಾಳಗಳು, ಕಾಗೆಗಳು, ಮತ್ತು ಹದ್ದುಗಳು ಬಹು ಸಂತೋಷದಿಂದ ವಾಯುವಿಹಾರ ಮಾಡುತ್ತಿವೆ. ವೃಕ್ಷಗಳ ಮೇಲೆ ಪಕ್ಷಿಗಳು ಆನಂದದಿಂದ ಹಾಡುತ್ತಿವೆ. ವಿಕಸಿತವಾಗಿರುವ ಬಗೆಬಗೆಯ ಪುಷ್ಪಗಳು ನನ್ನ ಸ್ವಾಗತಕ್ಕಾಗಿ ಕಣ್ತೆರೆದು ನಿರೀಕ್ಷಣೆಮಾಡುತ್ತಿರುವುವೋ ಎನ್ನುವಂತಿದೆ. ಪೃಥ್ವಿಯಮೇಲೆ ಹಚ್ಚನೆಯ ಹಸಿರೇನು! ಮಖಮಲ್ ಹಾಸಿಗೆಯನ್ನು ಹಾಸಿದಂತಿದೆ. ಸರೂ, ಸಫೇದಾ ಮೊದಲಾದ ಉನ್ನತ ವೃಕ್ಷಗಳೆಲ್ಲಾ ಈಗತಾನೆ ಸ್ನಾನಮಾಡಿ ಸೂರ್ಯನಕಡೆ ಧ್ಯಾನ ಮಾಡುತ್ತಾ ಒಂದೇ ಕಾಲಿನ ಮೇಲೆ ನಿಂತು ಸಂಧ್ಯೋಪಾಸನೆಯಲ್ಲಿ ಮಗ್ನವಾದಂತಿವೆ. ಅಂತರಿಕ್ಷದ ನೀಲಿಯೂ ಬಿಳುಪೂ ಅದ್ಭುತ ವೈಭವವನ್ನುಂಟುಮಾಡಿವೆ. ಕಪ್ಪೆಗಳು ಮಳೆ ಬಂದ ಸಂತೋಷೋತ್ಸವವನ್ನು ಆಚರಿಸುತ್ತಿವೆ. ದಶದಿಕ್ಕುಗಳಲ್ಲಿಯೂ ಆನಂದಾಹ್ಲಾದಗಳೇ ನುಡಿಯುತ್ತಿವೆ ; ಪೃಥ್ವಿ ಆಕಾಶಗಳ ವಿವಾಹವಾಗುವಂತಿದೆ ; ಈ ಸಮಯದಲ್ಲಿ ತಮ್ಮ ನೆನಪಾಗುತ್ತಿದೆ. ಏಕೆಂದರೆ ತಮಗೆ ಈ ವಸ್ತುಗಳನ್ನೆಲ್ಲಾ ತೋರಿಸಲಾರೆ; ಕೇವಲ ಬರೆದು ಬಿಡುತ್ತೇನೆ.

ಈಗ ಮನೆಗೆ ಬಂದಿದ್ದೇನೆ. ತಮ್ಮ ಪತ್ರ ಸಿಕ್ಕಿತು. ಅತ್ಯಂತ ಹರ್ಷವಾಯಿತು ; ಈಗ ನಾನು ನನ್ನ ಅಧ್ಯಯನಕಾರ್ಯವನ್ನು ಆರಂಭಿಸಿದ್ದೇನೆ. ಏಕೆಂದರೆ ನಾಳಿದ್ದು ಬುಧವಾರ ನಮ್ಮ ಪರೀಕ್ಷೆ ಇದೆ. ಈ ಪತ್ರವನ್ನು ರಸ್ತೆಯಲ್ಲಿ ನಡೆಯುತ್ತಾ ನಡೆಯುತ್ತಾ ಪೆನ್ಸಿಲಿನಿಂದ ಬರೆಯುತ್ತಿದ್ದೆ ; ಮತ್ತೂ ಮನೆಗೆ ಬಂದಮೇಲೆ ಕಾರ್ಡಿನಲ್ಲಿ ಅದನ್ನು ಪ್ರತಿಮಾಡುತ್ತಿದೇನೆ.*

೧೧-೪-೧೮೯೪ : ಈಗತಾನೆ ಒಂದು ದ್ವಿಪದಿಯನ್ನು ಓದಿದೆ. "ಹಣವುಳ್ಳ ಧನಿಕನಿಗಿಂತಲೂ ಜನದಿ ಬರಿಗೈಯ ಬಡವನೇ ಮೇಲು । ಮದಿರೆ ತುಂಬಿದ ಪಾತ್ರೆ ತಲೆಬಾಗಿ ಬಟ್ಟಲಿಗೆ ಮಧುವ ಸುರಿಯುವುದು ॥

* ಅರಾಬಿಕ್ ಲಿಪಿಯಲ್ಲಿ ಇನ್ನೂ ದೀರ್ಘವಾದ ಪತ್ರವನ್ನೂ ಸಹ ಒಂದು ಪೋಸ್ಟ್ ಕಾರ್ಡಿನಲ್ಲಿ ಬರೆಯಬಹುದು. ಅಕ್ಷರಗಳು ಒಂದಕ್ಕೊಂದು ಸೇರಿ ಮಾತ್ರಾಗುವಾಗ ಅವುಗಳ ದೇಹವು ಬಿಡಲ್ಪಟ್ಟು ಸಂಚಾರ ಸೂಚಕ ಬಿಂದುಗಳೇ ಮೊದಲಾದ ಗುರುತುಗಳು ಮಾತ್ರ ಉಳಿಯುವುವು.

೩೦-೮-೧೮೯೪ : ಲಾಲಾ ರಾಮಶರಣ ದಾಸರು ಅವರೊಂದಿಗೆ ಹೋಗಿ ವಾಸಿಸಬೇಕೆಂದು ಒತ್ತಾಯಪಡಿಸುತ್ತಿರುವರು. ನಾನು ಬೇಕಾದ ಕೋಣೆಯನ್ನು ಆರಿಸಿಕೊಳ್ಳುವಂತೆ ಹೇಳುತ್ತಾರೆ. ರಾತ್ರಿಗೆ ಲಾಲಾ ಸಾಹೇಬರು ಕೋಟೆಯ ಒಳಗಿರುವ ತಮ್ಮ ಮನೆಗೆ ಹೋಗುತ್ತಾರೆ. ಈ ಬಂಗಲೆಯಲ್ಲಿ ಆಳುಗಳು ಕಾವಲಿರುತ್ತಾರೆ; ಲಾಲಾ ಸಾಹೇಬರು ಬಹು ಒಳ್ಳೆಯವರು; ಹಿರಿಯ ಸಾಧುಗಳು.

೭-೫-೧೮೯೪ : ನೀವು ಬರಲಿಲ್ಲ. ಯಾವ ಕಾರಣದಿಂದಲೂ ನನ್ನ ಸಂಗಡ ಕುಪಿತರಾಗಬೇಡಿರಿ. ನನ್ನ ವಿದ್ಯಾರ್ಥಿಯು ಬಿ ಎ ಪರೀಕ್ಷೆಯಲ್ಲಿ ಉತ್ತೀರ್ಣನಾದ. ನನಗೆ ಬಹು ಸಂತೋಷವಾಯಿತು.

೧೦-೫-೧೮೯೫ : ಮಹರಾಜ್‌ಜೀ ! ದೇವರು ಬಹು ಒಳ್ಳೆಯವನು. ನಾನು ಆತನನ್ನು ಬಹಳ ಪ್ರೀತಿಸುತ್ತೇನೆ. ಅವನು ಅಷ್ಟು ಮಧುರ; ನೀವು ಅವನೊಂದಿಗೆ ಶಾಂತಿಯಿಂದ ಇರಬೇಕಾದುದೊಂದೇ; ಅವನು ಎಂದೂ ಕಠಿಣನಲ್ಲ. ಅವನಿಗೆ ಆಟದಲ್ಲಿ ಇಷ್ಟ. ಕೆಲವು ವೇಳೆ ನಾವು ''ಕಷ್ಟ''ವೆಂದು ತಿಳಿದುಕೊಳ್ಳುವುದು ಅವನಿಗೆ ಪರಿಹಾಸ್ಯ. ಈಗ ನನಗೆ ಅವನ ವಿಚಾರ ಬಹಳ ಗೊತ್ತು. ನಿಮಗೆ ಎಂದಾದರೂ ಹೇಳುತ್ತೇನೆ.

ನಾನು ಯಾರೊಡನೆಯೂ ಎಂದಿಗೂ ಕುಪಿತನಾಗುವುದಿಲ್ಲ. ನಾನು ಸುಖಿಯಾಗಿದ್ದೇನೆ. ಜನರು ವೃಥಾ ಕೋಪಗೊಂಡು, ಮನಬಂದಂತೆ ನುಡಿಯುತ್ತಾರೆ. ನಾವು ಅವರನ್ನು ಮನ್ನಿಸಬೇಕು. ನಮ್ಮ—ಅವರ ಮಧ್ಯೆ ಶಾಂತಿಯನ್ನು ಸ್ಥಾಪಿಸಬೇಕು. ನೀವು ಅವರಿಂದ ಅಶನವನ್ನು ಸ್ವೀಕರಿಸಬಹುದು, ಬಿಡಬಹುದು. ಅದು ಬೇರೆ ವಿಚಾರ. "ನೀನು ಇಷ್ಟಬಂದಂತೆ ನಡಿ. ಆದರೆ ಮನುಷ್ಯ-ಮನುಷ್ಯನ ಮಧ್ಯೆ ಶಾಂತಿ ನೆಲಸುವಂತೆ ಮಾಡು"-ಕ್ಷಮಾಗುಣವು ಸಾಧುಗಳ ಆಭರಣ. ದೇವರು ನಿಮಗೆ ಅಪಾರ ಶಾಂತಿಯನ್ನು ಕರುಣಿಸುವನೆಂದು ನನಗೆ ಗೊತ್ತು.

೬-೬-೧೮೯೫: ಶನಿವಾರ ನಿಮ್ಮನ್ನು ನೋಡುವೆನೆಂದು ನಂಬಿದ್ದೇನೆ ನನಗೆ ರಜವಿಲ್ಲದುದರಿಂದ ಬರಲಾಗಲಿಲ್ಲ. ಅಲ್ಲದೆ ನನ್ನ ಸ್ಕಾಲರ್‌ಷಿಪ್ ಹಣ ಬಂದಿಲ್ಲ. ಹಣವಿಲ್ಲದೆ ನಾನು ಮನೆಗೆ ಬಂದರೆ ಎಲ್ಲರಿಗೂ ನಿರಾಶೆಯಾಗುವುದಲ್ಲದೆ ನನಗೂ ನೆಮ್ಮದಿ ಎನ್ನಿಸುವುದಿಲ್ಲ.

೮-೬-೧೮೯೪ : ನನ್ನ ಮನಸ್ಸು ಬಹಳ ನೆಮ್ಮದಿಯಾಗಿದೆ. ನನ್ನ ಮನಸ್ಸಿನ ಆಶೆಯೇನೆಂದರೆ "ಅವನ (ಈಶ್ವರನ) ಚರಣ ಧೂಳಿಯು ನನ್ನ ಕಣ್ಣುಗಳಿಗೆ ಕಾಡಿಗೆಯಾಗಲಿ".

೩೧-೮-೧೮೯೪ : ನಾನು ಏಕಾಂತದಲ್ಲಿ ವಾಸವಾಗಿದ್ದೇನೆ. ನೀವೂ ಸಹ ಜಗತ್ತನ್ನು ಬಿಟ್ಟು ನಿಮ್ಮ ಮನೆಯ ಬಿಸಿಲು ಮಚ್ಚೆಯಲ್ಲಿ ಕುಳಿತು ಯೋಗವಾಸಿಷ್ಠದಂತಹ ಗ್ರಂಥಗಳನ್ನು ಓದಬೇಕು. ಮನೆಯ ಛಾವಣಿಗಿಂತ ಯಾವ ಸ್ಥಳದಲ್ಲಿಯೂ ಇದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ.

೨೭-೯-೧೮೯೪ : ಅಹುದು. ಮನಸ್ಸು ಬಹು ಚಂಚಲವಾಗಿ ಚಲಿಸುತ್ತಿದೆ. ಅದನ್ನು ಸ್ವಾಧೀನಮಾಡಿಕೊಳ್ಳುವುದು ಬಹಳ ಕಷ್ಟ. ನಿರಾಹಾರವಿರುವುದು ಉತ್ತಮ. ಅಲ್ಪಾಹಾರ ಮತ್ತು ಪೂರ್ಣ ಪಚನ - ಇವು ದೇವರ ಸತ್ಯಾರ್ಥ.

೧೩-೧೧-೧೮೯೪ : ನನ್ನ ಸಣ್ಣ ಸ್ಕಾಲರ್‌ಷಿಪ್‌ನಿಂದ ೨೫ ರೂಪಾಯಿಯನ್ನೂ, ಬೇರೆ ಸ್ಕಾಲರ್‌ಷಿಪ್‌ನಿಂದ ತಿಂಗಳಿಗೆ ೫ ರೂಪಾಯಿನಂತೆ, ಬರುವ ಎರಡು ತಿಂಗಳೂ ಉಳಿತಾಯಮಾಡಿ, ಒಟ್ಟು ೩೫ ರೂಪಾಯಿಯನ್ನು ಕೂಡಿಸಿದರೆ, ಜೊತೆಗೆ ಅವರು ೧೫ ರೂಪಾಯನ್ನು ಕಳುಹಿಸುವಂತೆಯೂ, ಒಟ್ಟು ೫೦ ರೂಪಾಯಿಗಳನ್ನು ನನ್ನ ಪರೀಕ್ಷೆಯ ಪ್ರವೇಶಧನಕ್ಕಾಗಿ ಉಪಯೋಗಿಸಬೇಕೆಂದು ತಂದೆಯವರು ಕಾಗದ ಬರೆದಿದ್ದಾರೆ. ಆದರೆ ನನ್ನ ನಿವೇದನೆ ಏನೆಂದರೆ—೨೫ ರೂಪಾಯಿನಲ್ಲಿ ಪ್ರತಿತಿಂಗಳು ೧೨ ರೂ. ೪ ಆ. ಫೀಜಗಾಗಿ ಹಿಡಿದುಕೊಳ್ಳುತ್ತಾರೆ. ಖಾಯಿಲೆಯಿಂದೆಸೆಯಿಂದ ಕಾಲೇಜಿಗೆ ಹೋಗದೆ ಇದ್ದ ದಿನಗಳಿಗಾಗಿ ೬೧ ರೂ. ಹಿಡಿದುಕೊಳ್ಳುತ್ತಾರೆ. ನಂತರ ಛಳಿಗಾಲದ ಉಡುಪುಗಳನ್ನು ಕೊಳ್ಳಬೇಕು. ಜೊತೆಗೆ ಬದುಕಿರಬೇಕು. ತಿಂಗಳಿಗೆ ೫ ರೂಪಾಯಿ ಉಳಿಸುವುದು ಬಹು ಕಷ್ಟ. ನಿನ್ನೆ ತಾನೆ ಛಳಿಗಾಲದ ಉಡುಪನ್ನು ಕೊಂಡುಕೊಂಡೆ. ಒಂದು ಜೊತೆ ಷರಾಯಿಗಳು, ಒಂದು ಒಳಅಂಗಿ, ಕಾಶ್ಮೀರದ ಬಟ್ಟೆಯ ಒಂದು ಅಂಗಿ. ಒಟ್ಟು ೭ ರೂ. ೧೨ ಆ. ಕೊಟ್ಟೆ.

ವಿಷಯಗಳನ್ನೆಲ್ಲಾ ನಮ್ಮ ತಂದೆಗೆ ವಿವರಿಸುವುದಿಲ್ಲ. ನನ್ನ ಚಿಕ್ಕಪ್ಪನದರೂ, ಮಾವನವರೂ ಸಹಾಯಮಾಡುವರೆಂದು ನಂಬಿದ್ದೇನೆ. ಚಿಂತೆಯಿಲ್ಲ

ಇದುವರೆಗೂ ಮಾಡಿದಂತೆ ದೇವರೇ ಸಹಾಯಮಾಡುವನು.

೧೬-೧೧-೧೮೯೪: ಕಾರ್ಡನ್ನು ಕೊಂಡುಕೊಳ್ಳಲು ಹತ್ತಿರ ಮೂರು ಕಾಸಿಲ್ಲದಿದ್ದ ಪ್ರಯುಕ್ತ ನಿಮಗೆ ಬರೆಯಲಾಗಲಿಲ್ಲ. ಈ ದಿನ ರಾತ್ರಿ ಹತ್ತು ಗಂಟೆಯಲ್ಲಿ ಲಾಲಾರವರ ಆಫೀಸಿಗೆ ಬಂದು ಈ ಕಾರ್ಡನ್ನು ತೆಗೆದುಕೊಂಡೆ. ನಾನು ಹೊಲೆದು ಸಿದ್ಧವಾಗಿದ್ದ ಉಡುಪನ್ನೇ ಕೊಂಡುಕೊಂಡೆ. ನನ್ನೊಂದಿಗೆ ಒಬ್ಬ ವ್ಯಾಪಾರಸ್ಥನನ್ನು ಕರೆದುಕೊಂಡು ಹೋಗಿದ್ದೆ. ಉಡುಪು ಚೆನ್ನಾಗಿಯೂ ಇದೆ.

೭-೧೨-೧೮೯೪: ನನ್ನಲ್ಲಿ ಹಣವಿಲ್ಲದುದರಿಂದಲೇ ಪತ್ರಬರೆಯಲು ತಡವಾಯಿತು. ನನ್ನ ಸ್ಕಾಲರ್‌ಷಿಪ್ ಸಕಾಲದಲ್ಲಿ ಬರುವುದೆಂದೇ ಯಾರಿಂದಲೂ ಹಣವನ್ನು ಸಾಲವಾಗಿ ತರಲಿಲ್ಲ. ಆ ಹಣ ಬಾರದೆ ಹೋದುದ ರಿಂದಲೇ ಈಗ ಕಾರ್ಡಿಗಾಗಿ ೩ ಕಾಸು ಸಾಲಮಾಡಿದೆ.

೯-೧೨-೧೮೯೪: ಪುಸ್ತಕಗಳನ್ನು ಕೊಂಡುಕೊಳ್ಳುವಾಗ ಹಣದ ಯೋಚನೆ ಮಾಡಬಾರದೆಂಬುದೇ ನನ್ನ ಮತ. ಪುಸ್ತಕದ ಬೆಲೆ ಎಷ್ಟೇ ಹೆಚ್ಚಾಗಿರಲಿ. ಅದನ್ನು ಅದರಲ್ಲಿ ಅಡಗಿರುವ ವಸ್ತುವಿನೊಂದಿಗೆ ತುಲನ ಮಾಡಿನೋಡಿದರೆ, ವಸ್ತುವಿನ ಬೆಲೆ ಅಗಣ್ಯ. ಸಣ್ಣ ಗ್ರಂಥಗಳ ಕೈಬರಹದ ಪ್ರತಿಗಳನ್ನು ಸಂಪಾದಿಸಲು ಹತ್ತಾರು ರೂಪಾಯಿ ವೆಚ್ಚಮಾಡುತ್ತಿದ್ದ ದಿನ ವನ್ನು ನೆನೆಸಿಕೊಳ್ಳಿರಿ. ನನಗೆ ಹಣಕ್ಕೇನೋ ಬಹು ಮುಗ್ಗಟ್ಟಿನ ದಿನಗಳು.

೧೬-೧೨-೧೮೯೪: ಹಾಗಾದರೆ ನೀವು ಕೋಪಗೊಂಡಿದ್ದೀರಾ! ನಾನೇನು ಮಾಡಲಿ. ನಿಮ್ಮ ವಿಚಾರವಾಗಿ ನನ್ನ ಭಾವನೆಯು ರವೆಯಷ್ಟೂ ಬದಲಾವಣೆಯಾಗಿಲ್ಲ. ಆದರೂ ನೀವು ಕುಪಿತರಾಗಿದ್ದೀರಿ. ನೀವು ನನ್ನನ್ನು ಸದಾ ಕ್ಷಮಿಸುವುದು ಉತ್ತಮ. "ನಿಮ್ಮ ಕಟುವಚನಗಳೇ ನನಗೆ ಸವಿನುಡಿ ಗಳು" ಪ್ರಿಯನೆ! ನಿನ್ನ ಕೋಪವು ನನನ್ನು ತೊಂದರೆ ಪಡಿಸಲಾರದು. ನಿನ್ನ ವಿಷವು ನನ್ನನ್ನು ಕೊಲ್ಲಲಾರದು ಪ್ರಿಯನೆ! ನೀವು ಕುಪಿತರಾಗು ವುದಕ್ಕೆ ನಿಜವಾದ ಕಾರಣವು ನಿಮ್ಮ ಕುಕ್ಷಿಯಲ್ಲಿರುವುದೆಂದು ನನ್ನ ಸಮಸ್ತ ವಿದ್ಯಾಬಲದಿಂದಲೂ ಹೇಳುತ್ತೇನೆ.

ನಿಮ್ಮ ಪಾಚನ ಶಕ್ತಿ ಸರಿಯಾಗಿಲ್ಲ. ಈ ಮೇಲಿನ ಔಷಧಿ ಪಥ್ಯ ವನ್ನನುಸರಿಸಿದರೆ ಉತ್ತಮ. ಇದು ನನಗೂ ಬಹು ಗುಣಮಾಡಿದೆ.

೩-೧-೧೮೯೫ : ಈ ದಿನ ಗಿಬ್ಬರ್ಟ್ಸನ್ ಸಾಹೇಬರು ಸರಪಣಿಯೊಂದಿಗೆ ಒಂದು ಗಡಿಯಾರವನ್ನು ಕೊಟ್ಟಿದ್ದಾರೆ. ಅದು ನನ್ನದು : ನಿಮಗೆ ಬೇಕಾದರೆ ಈ ಗಡಿಯಾರವನ್ನು ತೆಗೆದುಕೊಳ್ಳಿರಿ. ಇಲ್ಲದಿದ್ದರೆ ಆ ದೊಡ್ಡ ಗಡಿಯಾರವನ್ನಾದರೂ ತೆಗೆದುಕೊಳ್ಳಿರಿ.

೧೮-೬-೧೮೯೫ : ಚಿಂತೆಯಿಲ್ಲ. ನನ್ನ ಸ್ಥಿತಿ ಹೇಗಿದ್ದರೂ ನೀವು ಹಣಕ್ಕಾಗಿ ಕಷ್ಟಪಡುವುದನ್ನು ನೋಡುವುದಿಲ್ಲ. ಪಂಡಿತ ಗೋಪೀನಾಥರು ಬಂದಿದ್ದರು. ಅವರೇನು ಮಾಡಬಲ್ಲರು ? ಶೀಘ್ರದಲ್ಲೇ ಏನಾದರೂ ಮಾಡಬೇಕು.

೨೫-೬-೧೮೯೫ : ನೀವೇ ಏಕೆ ಬಂದು ನನ್ನನ್ನು ನೋಡಬಾರದು. ನಾನು ಬರಲು ಕಷ್ಟವಾಗುವುದು. ಕಾರಣವೇನೆಂದರೆ ನನ್ನ ಬಳಿ ದುಡ್ಡಿಲ್ಲ. ಎರಡೇ ರೂಪಾಯಿ ಖರ್ಚಾದರೂ, ಆ ಎರಡು ರೂಪಾಯಿಗಳನ್ನು ಹೊಂದಿಸುವುದೇ ಈ ದಿನಗಳಲ್ಲಿ ಕಷ್ಟವಾಗಿದೆ.

[ಇಷ್ಟು ಕಷ್ಟನಿಷ್ಠೂರಗಳ ಮಧ್ಯೆ ಕಳೆಯುತ್ತಿರುವ ವಿದ್ಯಾರ್ಥಿದೆಸೆಯಲ್ಲಿ ತಿಂಗಳಲ್ಲಿ ಹಲವು ದಿನಗಳನ್ನು ಕೇವಲ ಒಂಭತ್ತೇ ಕಾಸಿನ ಖರ್ಚಿನಲ್ಲಿ ಕಳೆಯಬೇಕಾಗಿರುತ್ತಿತ್ತು. "ಚಿಂತೆಯಿಲ್ಲ ದೇವರು ನನ್ನನ್ನು ಪರೀಕ್ಷಿಸಲು ಬಯಸುತ್ತಾನೆ ಅಷ್ಟೆ. ಇಂದಿಗಿಷ್ಟೇ ಸಾಕು." ಎಂದು ಹೇಳಿ ಒಬ್ಬ ಚಪಾತಿಯವನ ಅಂಗಡಿಗೆ ಹೋಗಿ, ಅರ್ಧಾಣೆಯಲ್ಲಿ ಬೆಳಗಿನ ಊಟವನ್ನು ಮುಗಿಸಿ ರಾತ್ರಿಗೆ ಕೇವಲ ಮೂರೇ ಕಾಸಿನಲ್ಲಿ ಕಳೆಯುತ್ತಿದ್ದರು. ಕೆಲವು ದಿನಗಳ ಮೇಲೆ ಒಂದು ದಿನ ಸಂಜೆ ಅಂಗಡಿಯವನು ರೇಗಿ "ನಿತ್ಯವೂ ಒಂಭತ್ತು ಕಾಸಿನ ರೊಟ್ಟಿಯನ್ನು ಕೊಂಡು ಸಾಗುವನ್ನು ಮಾತ್ರ ಬಿಟ್ಟಿ ಬಯಸುತ್ತೀ; ಹೋಗು. ನಾನು ನಿನಗೆ ರೊಟ್ಟಿಯನ್ನೇ ಕೊಡುವುದಿಲ್ಲ" ಎಂದು ಬೈದನು. ಅಂದಿನಿಂದ ಬಾಲಕನು ಕೇವಲ ಒಂದು ಹೊತ್ತಿನ ಅಲ್ಪಾಹಾರದಲ್ಲೇ ದಿನ ರಾತ್ರಿಯನ್ನು ಕಳೆಯಬೇಕಾಗಿ ಬಂತು.

ಇಂತಹ ದಾರುಣ ಬಡತನದ ಮಧ್ಯೆ ನಿಶ್ಚಲವಾದ ಶ್ರದ್ಧಾ ಭಕ್ತಿಗಳಿಂದ ತನ್ನ ವಿದ್ಯಾಭ್ಯಾಸವನ್ನು ಸಾಗಿಸುತ್ತಾ, ವಿದ್ಯಾರ್ಥಿವೇತನಗಳನ್ನು ಗೆಲ್ಲುತ್ತಾ ಅವಕಾಶನಾದಾಗ ಕಿರಿಯರಿಗೆ ಪಾಠವನ್ನು ಹೇಳಿ ಧನಸಹಾಯವನ್ನು ಹೊಂದುತ್ತಾ, ಹೆಂಡತಿ ಮಕ್ಕಳನ್ನು ಸಾಕುವುದರ ಜೊತೆಗೆ ಧನ್ನಾರಾಮನ

ಮತ್ತು ತಂದೆಯ ಬೇಕುಗಳನ್ನು ತೃಪ್ತಿಪಡಿಸುತ್ತಾ, ಕಷ್ಟಪಡುತ್ತಿರುವಾಗಲೇ ಅವರ ಆತ್ಮವು ತನ್ನದೇ ಆದ ನಿರ್ಮಲ ಜಗತ್ತಿನಲ್ಲಿ ವಿಹರಿಸುತ್ತಾ ಈಶ್ವರನಲ್ಲಿ ತಲ್ಲೀನವಾಗಲು ಹವಣಿಸುತ್ತಿತ್ತು.

ಬಿ. ಎ ಪರೀಕ್ಷೆಯ ಫಲಿತಾಂಶವು ಹೊರಬಿದ್ದಂದು "ನಿಮ್ಮ ಮಗನು ಪ್ರಾಂತಕ್ಕೆಲ್ಲಾ ಮೊದಲನೆಯವನಾಗಿ ಉತ್ತೀರ್ಣನಾದನು. ತತ್ಫಲವಾಗಿ ತಿಂಗಳಿಗೆ ೬೦ ರೂಪಾಯಿನ ವಿದ್ಯಾರ್ಥಿವೇತನವು ದೊರೆತಿದೆ. ಇದು ಕೇವಲ ದೈವಸಹಾಯ. ಇಂಥವು ವ್ಯಕ್ತಿಯ ಪ್ರಯತ್ನದ ಫಲವಲ್ಲ" ಎಂದು ತಂದೆಗೆ ಬರೆದರು. ಮತ್ತೂ ತನ್ನ ಸೋದರಮಾವನಿಗೆ "ನನಗೆ ಎರಡು ವಿದ್ಯಾರ್ಥಿ ವೇತನಗಳು ದೊರೆತಿವೆ. ಒಂದು ತಿಂಗಳಿಗೆ ಇಪ್ಪತ್ತೈದು ರೂಪಾಯಿನದು; ಮತ್ತೊಂದು ತಿಂಗಳಿಗೆ ಮೂವತ್ತೈದು ರೂಪಾಯಿನದು. ಇದೆಲ್ಲಾ ಈಶ್ವರನ ಕೃಪೆ!" ಎಂದು ಬರೆದರು.

ಗಣಿತಶಾಸ್ತ್ರದಲ್ಲಿ ಎಂ. ಎ. ಪದವಿ ಪಡೆಯಲು ಲಾಹೋರಿನ ಸರ್ಕಾರೀ ಕಾಲೇಜನ್ನು ಸೇರಿದರು. ಆಗ್ಗೆ (೧೮೯೩ನೇ ಮೇ ತಿಂಗಳು) ಅವರಿಗೆ ಕೇವಲ ೧೯॥ ವರ್ಷ ವಯಸ್ಸು. ಮುಂದೆ ಗಣಿತಶಾಸ್ತ್ರದಲ್ಲಿ ಪ್ರೌಢ ವಿದ್ಯಾಭ್ಯಾಸ ಪಡೆಯಲು ಇಂಗ್ಲೆಂಡಿಗೆ ಹೋಗುವ ಅಭಿಲಾಷೆಯಿಂದ ವಿದ್ಯಾರ್ಥಿವೇತನ ಕ್ಕಾಗಿ ಅರ್ಜಿಹಾಕಿದರು. ಆದರೆ ಅದು ಆ ವರ್ಷ ಶ್ರೀ ಪರಾಂಜಪೆಯವರಿಗೆ ದೊರೆಯಿತು. ಮುಂದೆ ಹಲವು ವರ್ಷಗಳಮೇಲೆ "ರಾಮನು ಗಣಿತಶಾಸ್ತ್ರ ದಲ್ಲಿ ವಿಶಾರದನಾಗಲು ಬಯಸಿದ; ಆದರೆ ಈ ಶರೀರಕ್ಕೆ ಆ ಅನುಕೂಲ ಸಿಗ ದಿದ್ದರೂ, ಮತ್ತೊಬ್ಬ ಭಾರತೀಯನಿಗೆ ಸಿಕ್ಕಿತು. ಹೀಗೆ ಈಶ್ವರನು ನಿಷ್ಕಾಮ ಕರ್ಮಿಗಳ ಆಶೆಯನ್ನು ಪೂರ್ಣಮಾಡುವನು" ಎನ್ನುತ್ತಿದ್ದರು.

೧೮೯೪ನೇ ಫೆಬ್ರವರಿ ೧೬ರಲ್ಲಿ "ಜಗತ್ತಿನಲ್ಲಿ ಆತ್ಮನ ಅವಲಂಬನೆಗೆ ಯೋಗ್ಯವಾದ ವಸ್ತುವು ಯಾವುದೂ ಇಲ್ಲ. ಯಾರು ಈಶ್ವರನಲ್ಲಿ ಅನನ್ಯ ವಿಶ್ವಾಸವಿಟ್ಟಿರುವರೋ ಅವರೇ ಈಶ್ವರೀಯ ಆಶೀರ್ವಾದ ಪಾತ್ರರು. ಅವರೇ ನಿಜವಾದ ಸಂತರು. ಪ್ರಪಂಚವು ತನ್ನ ಸಮಸ್ತ ವೈಭವವಿಜೃಂಭಣೆ ಯೊಂದಿಗೆ ಅಂತಹವರ ಪದತಲದಲ್ಲಿ ಪೂರ್ಣಭಕ್ತಿಯಿಂದ ಶರಣಾಗುವುದು" ಎಂದು ಬರೆದಿರುವರು.]

ಮತ್ತೆ ೧೮೯೪ನೇ ಮಾರ್ಚಿ ೧೯ನೆಯ ಪತ್ರದಲ್ಲಿ:—

ಸತ್ಸಂಗ, ಉತ್ತಮಗ್ರಂಥ ಮತ್ತು ಭಜನೆ - ಶರಣು, ಈ ಮೂರೂ ಜಗತ್ತಿನ ರಾಜಸನ್ನಾಗಿ ಮಾಡಿಬಿಡುತ್ತವೆ; ಮತ್ತು ನಮ್ಮ ಕುಸಂಗವು ಈಶ್ವರನು ನಮ್ಮಿಂದ ಅಪ್ರಸನ್ನನಾಗುವಂತೆ ಮಾಡುತ್ತದೆ. ಈ ಕಾರಣದಿಂದ ನಮ್ಮ ಮೇಲೆ ಬಗೆಬಗೆಯ ಕಷ್ಟಗಳು ಬಂದುಬೀಳುವುವು. ಏಕಾಂತಸೇವನೆಯಿಂದಲೂ ಮತ್ತೂ ಅಲ್ಪಾಹಾರದಿಂದಲೂ ಪರಮಾತ್ಮನು ತಾನೇ ಬಂದು ನಮಗೆ ತನ್ನ ಸತ್ಸಂಗಪ್ರದಾನ ಮಾಡುತ್ತಾನೆ.” ಹೀಗೆಂದು ಬರೆದರು.

[ಈ ವರ್ಷದ ಪತ್ರಗಳಿಂದ ಗೋಸ್ವಾಮಿಗಳ ಆಸ್ತಿಕಭಾವವೂ, ಈಶ್ವರ ಪ್ರೇಮವೂ ತನ್ನ ಗುರುವಿಗಿದ್ದುದಕ್ಕಿಂತಲೂ ಅಧಿಕವಾಗುತ್ತಿದ್ದುದು ಸ್ಪಷ್ಟವಾಗಿ ಕಾಣುತ್ತದೆ; ಈ ಕಾರಣದಿಂದಲೇ ಗುರುವಿನಿಂದ ಉಪದೇಶವನ್ನು ಹೊಂದುವ ಬದಲು ತಮ್ಮಿಂದಲೇ ಉಪದೇಶ ಪ್ರವಾಹವು ಹರಿಯಲಾರಂಭಿಸುತ್ತದೆ. ಇಷ್ಟಾದರೂ ಗೋಸ್ವಾಮಿಗಳ ನಮ್ರತೆಯೂ, ಗುರುಭಕ್ತಿಯೂ ಅತ್ಯಂತ ಪ್ರಶಂಸನೀಯವಾಗಿದೆ. ಸಂಯೋಗವಶದಿಂದ ಯಾವುದಾದರೂ ಕೊರತೆಯನ್ನು ನಿವಾರಿಸಲೋಸುಗ ತಮ್ಮ ಆಂತರಿಕ ಶ್ರದ್ಧೆಯನ್ನು ಗುರುವಿಗೆ ಉಲ್ಲೇಖಿಸಿದರೂ, ಬಹು ಭಯದಿಂದ ಪ್ರೇಮಭರಿತನುಡಿಗಳಿಂದ ಆತನು ಅಪ್ರಸನ್ನನಾಗದಂತೆ ಬರೆಯುತ್ತಿದ್ದರು. ಗುರುವಿನ ಪತ್ರವು ರೋಷಪೂರ್ಣವಾಗಿ, ವ್ಯಂಗಭರಿತವಾಗಿದ್ದರೂ, ಇವರ ಉತ್ತರವು ಬಹಳ ನಮ್ರತಾಪೂರ್ಣವಾಗಿ ಸತ್ಯ-ಭಕ್ತಿಭರಿತವಾಗಿರುತ್ತಿದ್ದಿತು]

೧೮೯೮ನೇ ಜೂನ್ ೪ರ ಪತ್ರ:—

ನಾನು ನಿಯಮಾನುಸಾರ ಪತ್ರಗಳನ್ನು ಸನ್ನಿಧಿಗೆ ಕಳುಹಿಸುತ್ತಿದ್ದೇನೆ; ಆದರೆ ಅವು ತಮಗೆ ತಡವಾಗಿ ತಲುಪುತ್ತಿರಬಹುದು. ಅಥವಾ ಆಳು ಟಪಾಲಿಗೆ ಹಾಕುವುದನ್ನು ಮರೆತುಹೋಗಿರಬಹುದು. ವಸ್ತುತ: ಜಗತ್ತಿನ ಯಾವ ವಸ್ತುವೂ ಅವಿನಾಶಿಯಲ್ಲ. ಯಾವ ಮನುಷ್ಯನು ಈ ವಸ್ತುಗಳಲ್ಲಿ ಭರವಸೆಯಿಡುತ್ತಾನೋ (ಮತ್ತು ತನ್ನ ಪ್ರಸನ್ನತೆಯು ಪರಮಾತ್ಮನನ್ನವಲಂಬಿಸಿರುವಂತಿಡುವುದಿಲ್ಲವೋ) ಅವನಿಗೆ ಅವಶ್ಯಕವಾಗಿ ಹಾನಿಯುಂಟಾಗುವುದು. ಜಗತ್ತಿನ ಹಣವಂತರು ಬಹು ವಸ್ತ್ರಧಾರಿಗಳಾದರೂ ನಗ್ನರಿಗೆ ಸಮಾನವಾಗಿದ್ದಾರೆ. - ಅರ್ಥಾತ್ ಈ ಜನರು ಸಂಪೂರ್ಣ ನಗ್ನರು, ಕಂಗಾಳಿಗಳು. ಆದರೆ ತಮ್ಮನ್ನು ಬಹುವಸ್ತ್ರಧಾರಿಗಳೆಂದು ತಿಳಿದುಕೊಂಡಿದ್ದಾರೆ. ಇಂಥ ಬಹು

ವಸ್ತ್ರಧಾರಿಗಳಾದ ನಗ್ನರಿಂದ ನಮಗೇನು ಸುಖ ಸಿಗಬಲ್ಲದು ? ತಾವು ಈ ದಾಸನಮೇಲೆ ಸದಾ ದಯಾದೃಷ್ಟಿಯನ್ನಿಡಬೇಕು; ಮತ್ತು ತಮ್ಮ ದೀನ ಸೇವಕನೆಂದು ತಿಳಿಯಬೇಕು. ತಾವು ಯಾವ ರೀತಿಯೂ ಚಿಂತಿಸಬೇಕಾಗಿಲ್ಲ; ತಾವು ಸಮಸ್ತ ರೀತಿಯಿಂದಲೂ ಪ್ರಸನ್ನರಾಗಿರಬೇಕು; ಹೇಗೂ ಅಪ್ರಸನ್ನ ವಾಗಬಾರದು. ನಾನು ತಮ್ಮ ಅನುಚರ.''

[ಈ ದಿನಗಳಲ್ಲಿ ಗುರುವು ಮನೆಯಲ್ಲಿನ ತನ್ನ ಸಂಬಂಧಿಗಳೊಂದಿಗೆ ಮನ ಸ್ತಾಪಮಾಡಿಕೊಂಡು, ಈ ಜಗಳದ ವಿವರವನ್ನು ಗೋಸ್ವಾಮಿಗಳಿಗೆ ಬರೆದು ತಿಳಿಸಿದರು. ಗೋಸ್ವಾಮಿಗಳ ತತ್ವವೇತ್ತರ-ಜ್ಞಾನಿಗಳಂಥ ಉತ್ತರದಿಂದ, ಎಂ. ಎ. ಪರೀಕ್ಷೆಗೆ ಓದುವಾಗ ಅವರ ಚಿತ್ತವು ಎಷ್ಟು ಧಾರ್ಮಿಕ ಮತ್ತು ಶಾಂತಿಮಯವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.]

೫-೬-೧೮೯೫ : ಮಹಾರಾಜ್‌ಜೀ ! ಪರಮೇಶ್ವರನು ಬಹು ಒಳ್ಳೆಯ ವನು. ನನಗೆ ಬಹು ಪ್ರಿಯನಾಗಿದ್ದಾನೆ. ತಾವು ಅವನೊಂದಿಗೆ ಮೈತ್ರಿ ಯನ್ನಿಟ್ಟುಕೊಂಡಿರಿ. ತಮ್ಮೊಂದಿಗೆ ಆಗಾಗ ಅವನಾಡುವ ಕಿಂಚಿತ್ ಕಠಿಣ ವ್ಯವಹಾರವು ಅವನ ವಿಲಾಸ ಮಾತ್ರ. ಅವನು ನಿಮ್ಮೊಂದಿಗೆ ನಗುತ್ತಾ ಆಟವಾಡಲು ಬಯಸುತ್ತಾನೆ. ನಗುವವರೊಂದಿಗೆ ನಾವು ಕೋಪಿಸಿಕೊಳ್ಳ ಕೂಡದು. ಮುಂದೆ ಯಾವಾಗಲಾದರೂ ಪತ್ರದಲ್ಲಿ ಅವನ ಹಲವು ವಿಚಾರ ಗಳನ್ನು ವರ್ಣಿಸುತ್ತೇನೆ. ವಾಸ್ತವವಾಗಿಯೂ ಅವನು ಬಹಳ ಮುದ್ದಿನವನು.

........ನನ್ನ ಹೃದಯದಲ್ಲಿ ತಮ್ಮ ಕಡೆಯಿಂದ ಹೀಗೆ ಧ್ವನಿಯಾಯಿತು. 'ಮನುಷ್ಯನ ಪ್ರಾಣಕ್ಕಿಂತ ಹೊರತಾಗಿ ಮತ್ತೊಂದು ವಸ್ತುವಿದೆ; ಅರ್ಥಾತ್ ಪರಮಾತ್ಮ. ಈ ವಸ್ತುವಿನ ಆಶ್ರಯದಿಂದಲೇ ಸಮಸ್ತ ವಸ್ತು ಗಳೂ ಚಲಿಸುತ್ತವೆ. ಜಗತ್ತಿನಲ್ಲಾಗುವ ಸಮಸ್ತವೂ ಅವನಿಚ್ಛೆಯಿಂದಲೇ ಆಗುವುದು. ಮರದ ಬೊಂಬೆಗಳು ಸೂತ್ರದಾರನಿಲ್ಲದೆ ಕುಣಿಯಲಾರವು. ಕೊಳಲು, ಬಾಜಿಸುವವನಿಲ್ಲದೆ ನುಡಿಯಲಾರದು. ಇದೇ ರೀತಿ ಜಗತ್ತಿನಲ್ಲಿ ಜನರು ಈಶ್ವರಾಜ್ಞೆಯಿಲ್ಲದೆ ಯಾವ ಕೆಲಸವನ್ನೂ ಮಾಡಲಾರರು. ಕತ್ತಿಯ ಕೆಲಸವು ಕೊಲ್ಲುವುದೇ ಆದರೂ, ಕೊಲ್ಲುವವನ ಕೈ ಆಡಿದ ಹೊರತು ಅದು ಹೇಗೆ ಕತ್ತರಿಸಲಾರದೋ, ಹಾಗೆಯೇ ಹಲವು ಮನುಷ್ಯರ ಸ್ವಭಾವವು ಎಷ್ಟೇ ಕೆಟ್ಟದ್ದಾಗಿದ್ದರೂ ಸರಿ ಈಶ್ವರನಿಂದ ಪ್ರೇರಣೆಯಾಗದಿದ್ದರೆ ಅವರು ನಮಗೆ

ಕಷ್ಟವನ್ನು ಕೊಡಲಾರರು. ಮಹಾರಾಜನ ಸಂಗಡ ಸಂಧಿ ಮಾಡಿಕೊಳ್ಳು ವುದರಿಂದ ಸಿಕ್ಕ ರಾಜ್ಯಾಧಿಕಾರಿಗಳನ್ನೆಲ್ಲ ಹೇಗೆ ಮಿತ್ರರಾಗಿ ಬಿಡುತ್ತಾರೋ, ಅಂತೆಯೇ ಪರಮಾತ್ಮನನ್ನು ಪ್ರಸನ್ನನಾಗಿ ಒಲಿಸಿಕೊಂಡುಬಿಟ್ಟರೆ ಸಮಸ್ತ ಸೃಷ್ಟಿಯೇ ನಮ್ಮದಾಗುವುದು.

ಮಹಾರಾಜ್‌ಜೀ! ತಮ್ಮ ಕೃಪಾಪತ್ರವು ತಲುಪಿತು; ಅತ್ಯಂತ ಹರ್ಷವಾಯಿತು. ಮಹಾರಾಜ್ ಜೀ! ತಾವು ಇಲ್ಲಿರಲು ಇಚ್ಛಿಸಿದರೆ ಬಹು ಸಂತೋಷ. ಇಲ್ಲವೇ ಅಲ್ಲೇ ತಮಗೊಬ್ಬ ಆಳಿನ ಆವಶ್ಯಕತೆಯಿದ್ದಲ್ಲಿ ಆಳನ್ನು ಗೊತ್ತು ಮಾಡಿಬಿಡಿರಿ. ಇಷ್ಟು ಖರ್ಚಾಗುತ್ತಿರುವಲ್ಲಿ ಇನ್ನೊಬ್ಬ ಆಳಿನ ಖರ್ಚನ್ನೂ ಪರಮಾತ್ಮನು ಹೇಗೂ ಒದಗಿಸುವನು. ನನ್ನಲ್ಲೇನೂ ಭಿನ್ನವಿಲ್ಲ. ತಮ್ಮ ಚಿತ್ತವಿದ್ದಂತೆ ಮಾಡಿರಿ.

ನನಗೆ ಯಾರ ಮೇಲೂ ಸ್ವಲ್ಪವೂ ಕ್ರೋಧವಿಲ್ಲ. ನಾನು ಬಹಳ ಪ್ರಸನ್ನನಾಗಿದ್ದೇನೆ. ಬಹಳವಾಗಿ ಕ್ರೋಧಿಗಳಾದ ಮನುಷ್ಯರ ಬಾಯಿಂದ ಹಲವಾರು ಮಾತುಗಳು ಕೇಳಿಬರುತ್ತವೆ. ಆದರೆ ನಾವು ಅವೆಲ್ಲವನ್ನೂ ಕ್ಷಮಿಸಬೇಕು; ತಾವೂ ಕ್ಷಮಿಸಿರಿ. ತಾವು ಅವರೊಂದಿಗೆ ಅಗತ್ಯವಾಗಿ ಸಮಾಧಾನ ಮಾಡಿಕೊಳ್ಳಿರಿ. ಇಷ್ಟವಿದ್ದರೆ ಅವರೂಟವನ್ನು ಸ್ವೀಕರಿಸಬಹುದು ಇಲ್ಲದಿದ್ದರೆ ಬಿಡಬಹುದು, ಆದರೆ ಅಗತ್ಯವಾಗಿ ಸಮಾಧಾನ ಮಾಡಿಕೊಳ್ಳ ಬೇಕು, ಸಂಧಿಮಾಡಿಕೊಳ್ಳಬೇಕು; ಮತ್ತು ಅಪರಾಧಗಳೆಲ್ಲವನ್ನೂ ಮನ್ನಿಸಿ ಬಿಡಬೇಕು. ಸಾಧುಗಳಿಗೆ ಕ್ಷಮಾಗುಣವೇ ಭೂಷಣ.

ತಾವು ಈಚೆಗೆ ಇಚ್ಛಾರಹಿತರಾಗಿದ್ದಿರಿ. ಆದುದರಿಂದ ತಮ್ಮ ತಂದೆ ಯವರು ತಮ್ಮಲ್ಲಿಗೆ ಬಂದಿದ್ದರು. ಈ ಪತ್ರವು ತಾನಾಗಿ ದೀರ್ಘವಾಗಿ ಬಿಟ್ಟಿತು. ಕ್ಷಮಿಸಿರಿ. ಪರಮೇಶ್ವರನು ತಮಗೆ ಆನಂದವನ್ನು ನೀಡಲಿ.

ತಮ್ಮ ದೀನದಾಸ—ತೀರ್ಥರಾಮ.

[ಎಂ. ಎ. ಪರೀಕ್ಷೆಗೆ ಓದುತ್ತಿರುವ ಸಮಯದಲ್ಲಿ ಕೇವಲ ಹಾಲನ್ನೇ ಮುಖ್ಯ ಆಹಾರ ಮಾಡಿಕೊಂಡು ನಿರ್ವಹಿಸತೊಡಗಿದರು.]

೧೧-೩-೧೮೯೫ರಲ್ಲಿ ಮಹಾರಾಜ್ ಜೀ! ನಾನು ಈ ದಿನಗಳಲ್ಲಿ ಕೇವಲ ಹಾಲನ್ನು ಕುಡಿದು ನಿರ್ವಹಣ ಮಾಡುತ್ತಿದ್ದೇನೆ; ನನ್ನ ಬುದ್ಧಿಯೂ ಬಹು ಚುರುಕಾಗಿ ಕೆಲಸಮಾಡುತ್ತಿದೆ. ಶರೀರ ಬಲವೂ ಕುಗ್ಗಿಲ್ಲ; ಮನಸ್ಸಂತೂ

ಪರಿಶುದ್ಧವಾಗಿದೆ. ತಾವು ಇದೇ ರೀತಿ ಕೇವಲ ಹಾಲನ್ನೇ ಆಹಾರವನ್ನಾಗಿ ಮಾಡಿಕೊಳ್ಳುವ ಅಭ್ಯಾಸಕ್ಕೆ ಬಂದರೆ ನನಗೆ ಬಹು ಸಂತೋಷವಾಗುವುದು. ಖರ್ಚಿನ ವಿಚಾರವಾಗಿ ಸ್ವಲ್ಪವೂ ಚಿಂತಿಸಬೇಡಿ. ಇತರ ಆಹಾರಕ್ಕಿಂತ ಹಾಲಿನದೇನೂ ಹೆಚ್ಚು ಖರ್ಚಾಗಲಾರದು. ಒಂದುವೇಳೆ ಆದರೂ ಚಿಂತೆ ಯಿಲ್ಲ—ಎಂದು.

ವಸ್ತುತಃ ಈ ಅಭ್ಯಾಸದಿಂದ ಗೋಸ್ವಾಮಿಗಳ ಶಕ್ತಿಯು ಹೆಚ್ಚಿತು. ಹಿಂದಿದ್ದ ದುರ್ಬಲತೆಯು ದೂರವಾಗುತ್ತಾ ಬಂದಿತು; ಅಲ್ಲದೆ ಇವರು ನಿರಂತರವಾಗಿ ಮಾಡುತ್ತಿದ್ದ ಮಾನಸಿಕ ಕಾರ್ಯ ಕಲಾಪಗಳಿಂದಲೂ ಆಯಾಸ ಕಾಣುತ್ತಿರಲಿಲ್ಲ. ಗಣಿತ ಶಾಸ್ತ್ರದಲ್ಲಿ ಇವರ ಪ್ರಖ್ಯಾತಿಯನ್ನು ಕೇಳಿ ಬಿ. ಎ., ಎಂ. ಎ. ತರಗತಿಯ ವಿದ್ಯಾರ್ಥಿಗಳು ಇವರಲ್ಲಿಗೆ ಕಲಿಯಲು ಬರುತ್ತಿದ್ದರು. ಒಬ್ಬ ಇಂಗ್ಲಿಷ್ ವಿದ್ಯಾರ್ಥಿಗೂ ತಮ್ಮ ಕರ್ತವ್ಯವೆನ್ನುವಂತೆ ಪಾಠ ಹೇಳುತ್ತಿದ್ದರು. ತಮ್ಮ ಕಾಲೇಜಿಗೆ ಕೇವಲ ಒಂದು ಘಂಟೆ ಕೆಲಸ ಕ್ಕಾಗಿ ಹೋಗಿ ಬರುತ್ತಿದ್ದರು. ಮಿಕ್ಕ ಸಮಯದಲ್ಲೆಲ್ಲಾ ಮಿಷನ್ ಕಾಲೇಜಿನ ಎಫ್. ಎ., ಬಿ. ಎ. ತರಗತಿಯ ವಿದ್ಯಾರ್ಥಿಗಳಿಗೆ ಪಾಠ ಹೇಳಿಕೊಡುತ್ತಿದ್ದರು. ಹೀಗೆ ಗವರ್ನಮೆಂಟ್ ಕಾಲೇಜಿನಲ್ಲಿ ಎಂ. ಎ. ಪರೀಕ್ಷೆಗೆ ಅಧ್ಯಯನ ಮಾಡು ತ್ತಿದ್ದರ ಜೊತೆಗೆ ಮಿಷನ್ ಕಾಲೇಜಿನಲ್ಲಿ ಗೌರವ ಪ್ರೊಫೆಸರ್ ಆಗಿ ಕೆಲಸ ಮಾಡುತ್ತಿದ್ದರು. ಜೊತೆಗೆ ಇತರ ಪ್ರೊಫೆಸರುಗಳೂ ತಮ್ಮ ಗಣಿತಶಾಸ್ತ್ರದ ಪತ್ರಗಳನ್ನು ಪರೀಕ್ಷಿಸಲೂ ಇವರಲ್ಲಿಗೇ ಬರುತ್ತಿದ್ದರು. ಹೀಗೆ ದಿನ ರಾತ್ರಿ ಎನ್ನದೆ ಶ್ರಮಿಸುತ್ತಿದ್ದರು.]

೩-೭-೧೮೯೫ರಲ್ಲಿ ತಮ್ಮ ಗುರುವಿಗೆ:—

ನಾನು ನೆನ್ನೆಯಲ್ಲ ಬಹಳ ಕೆಲಸದಲ್ಲಿ ತೊಡಗಿದ್ದುದರಿಂದ ರಾತ್ರೆ ಎರಡು ಗಂಟೆಗೆ ನಿದ್ರಿಸಿದೆ; ಇಂದು ಬೆಳಿಗ್ಗೆ ಐದು ಗಂಟೆಗೆದ್ದುಬಿಟ್ಟೆ. ಈ ಕಾರ ಣದಿಂದ ನೆನ್ನೆ ತಮಗೆ ಪತ್ರ ಬರೆಯಲಿಲ್ಲ. ಕ್ಷಮಿಸಿರಿ. ಮಿಷನ್ ಕಾಲೇಜಿನ ವಿದ್ಯಾರ್ಥಿಗಳು ಬಹು ಸಂತೋಷಪಡುತ್ತಾರೆ. ಅದು ತಮ್ಮ ದಯವೇ —ಎಂದು ಬರೆದರು.

ಹೀಗೆ ಅವರ ಕೆಲಸವು ಹೆಚ್ಚಿದಂತೆಲ್ಲಾ ಆನಂದವೂ ಅಪಾರವಾಗುತ್ತಿ ದ್ದಿತು; ಮತ್ತು ಸಾಫಲ್ಯದ ರಹಸ್ಯವೂ ಅವರಿಗೆ ಚೆನ್ನಾಗಿ ಅರಿವಿದ್ದಿತು.

೪-೩-೧೮೯೪ರಲ್ಲಿ ಗುರುವಿಗೆ:—

ಬಹು ಸಮಯದನಂತರ ನಾನು ಇಂದು ವಿನಯ ಪತ್ರವನ್ನು ಕಳುಹಿಸ ತೊಡಗಿದ್ದೇನೆ. ಈ ದಿನಗಳಲ್ಲಿ ನನಗೆ ಬಹಳ ಕೆಲಸವಿರುತ್ತದೆ; ಈ ದಿನ ಐದು ಗಂಟೆಗಳಿಗಿಂತ ಕಡಿಮೆ ನಿದ್ರಿಸಿದ್ದೇನೆ. ಪ್ರೊಫೆಸರ್‌ಗಳ ಕೆಲಸವನ್ನೂ ಮಾಡುತ್ತೇನೆ. ಉತ್ತಮ ಸರ್ಟಿಫಿಕೇಟುಗಳು ದೊರಕಿವೆ. ತಾವು ಸರ್ವ ಪ್ರಕಾರವೂ ಪ್ರಸನ್ನರಾಗಿರಿ; ಯಾವ ರೀತಿಯಲ್ಲೂ ಚಿಂತೆಗೊಳಗಾಗಬೇಡಿ. ನನ್ನ ಅಭಿಪ್ರಾಯದಲ್ಲಿ ತಾವು ಯಾವ ಕೆಲಸವನ್ನು ಮಾಡಬಯಸಿದರೂ, ಮನಸ್ಸನ್ನು ಕಿಂಚಿತ್ ಸಹಾ ತೂಗಗೊಡಬೇಡಿರಿ. (ಅದನ್ನು ತೂಗದಂತೆ ನಿಶ್ಚಲ ಮತ್ತು ನಿಸ್ಪಂದವಾಗಿಡಿರಿ) ಆದರೆ ಆ ಕೆಲಸ ಮಾಡುವುದಕ್ಕೆ ನಮ್ಮ ಇಂದ್ರಿಯಗಳನ್ನು ಸ್ಥಿರವಾಗಿ, ನಿಶ್ಚೇಷ್ಟಿತವಾಗಗೊಡಬಾರದು. ಅವು ಆಡುತ್ತಾ ಚಲಿಸುತ್ತಿರಬೇಕು; ಕರ್ಮದಲ್ಲಿ ಅತ್ಯಂತ ಪ್ರವೃತ್ತವಾಗಿರಬೇಕು. ಈ ಪ್ರಕಾರದಿಂದ ನಮಗೆ ಅವಶ್ಯವಾಗಿಯೂ ಶೀಘ್ರದಲ್ಲಿ ಸಿದ್ಧಿಪ್ರಾಪ್ತವಾಗು ವುದು. ಕೃಷ್ಣಜೀ ಸಹಾ ಹೀಗೆಯೇ ಹೇಳಿದ್ದಾನೆ—ಎಂದು ಬರೆದರು. ವಿದ್ಯಾರ್ಥಿ ಜೀವನದಲ್ಲೇ ಗೋಸ್ವಾಮಿಗಳಿಗೆ ಕೃಷ್ಣನ ಗೀತೆಯನ್ನು ಪಠಿಸುವ ಅಭಿರುಚಿಯು ಬಹಳವಾಗಿದ್ದಿತು. ಇದರ ವಿಚಾರವಾಗಿ ಮತ್ತೊಂದು ಕಡೆ ತನ್ನ ಗುರುವಿಗೆ ಹೀಗೆಂದು ಬರೆದಿದ್ದಾರೆ—"ನನಗೆ ಈಗತಾನೇ ಗೀತೆಯ ಭೋಗವು ಸಿಗುತ್ತಿದೆ. ಇದು ಪರಮೋತ್ತಮ ಗ್ರಂಥ. ಇದನ್ನು ಅರಿತು ಪಠಿಸುವುದರಿಂದ, ಸಾಂಸಾರಿಕ ಪುರುಷನಿಗೆ ತನ್ನ ಶರೀರದಮೇಲೆ ಇರುವಷ್ಟು ಮಮತೆ ವಿಶ್ವಾಸಗಳು ಪರಮೇಶ್ವರನ ಮೇಲೆ ಪಠಿಸಿದವನಿಗುಂಟಾಗುವುದು".

ವಿದ್ಯಾರ್ಥಿವೇತನದ ರೂಪದಲ್ಲಿ ತಿಂಗಳಿಗೆ ಅರವತ್ತು ರೂಪಾಯಿಗಳು ಬರುತ್ತಿದ್ದರೂ, ಗೃಹಸ್ಥಿ ಮತ್ತು ಇತರ ಖರ್ಚುಗಳ ಕಾರಣದಿಂದ ತಿಂಗಳ ಆರಂಭದಲ್ಲೇ ಅವರ ಹತ್ತಿರ ಒಂದು ಬಿಡಿಕಾಸೂ ಉಳಿಯುತ್ತಿರಲಿಲ್ಲ. ಇಂಥ ಮುಗ್ಗಟ್ಟಿನ ದಿನಗಳಲ್ಲಿ ಎಂ. ಎ. ಪರೀಕ್ಷೆಗಾಗಿ ಪ್ರವೇಶ ಧನವನ್ನು ಕಳುಹಿಸ ಬೇಕಾಗಿ ಬಂದಿತು. ಇಂಥ ಪರಿಸ್ಥಿತಿಯೊದಗುತ್ತಲೇ ಗೋಸ್ವಾಮಿಗಳು ಸಂಪೂರ್ಣ ಶ್ರದ್ಧಾಭಕ್ತಿಯಿಂದ ಈಶ್ವರನಲ್ಲಿ ಚಿತ್ತೈಕ್ಯಮಾಡಿ, ಸಂಕಲ್ಪರಹಿತ ರಾಗುತ್ತಿದ್ದುದು ಅವರಿಗೆ ಸ್ವಾಭಾವಿಕವಾಗಿ ಬಿಟ್ಟಿದ್ದಿತು. ಹೊರತು ಎಂದೂ ಕೊರಗಿ ನಿರುತ್ಸಾಹಿಗಳಾಗುತ್ತಿರಲಿಲ್ಲ. ಅಂತೆಯೇ ೧೩-೧೧-೧೮೯೪ರಲ್ಲಿನ

ತಮ್ಮ ಪತ್ರದಲ್ಲಿ "ಇದುವರೆಗೂ ಸಹಾಯಮಾಡುತ್ತಾ ಬಂದಿರುವ ಪರಮಾತ್ಮನೇ ಈಗಲೂ ಅಗತ್ಯವಾಗಿ ಸಹಾಯಮಾಡುವನು. ಸಾಹಸರಹಿತನಾಗಬೇಕಾದ ಅಗತ್ಯವು ಸ್ವಲ್ಪವೂ ಇಲ್ಲ'' ಎಂದು ಬರೆದರು. ಈ ಅಪೂರ್ವ ಶರಣಾಗತಿಯ ಪ್ರತ್ಯಕ್ಷ ಫಲವೋ ಎಂಬಂತೆ ತಮ್ಮ ದೊಡ್ಡಪ್ಪನಿಂದ ಸಹಾನುಭೂತಿಪೂರ್ಣ ಪತ್ರವೊಂದು ಬಂದಿತು. ಅದರ ವಿಚಾರವಾಗಿ ೨೧-೧೧-೧೮೯೪ರಲ್ಲಿ ತನ್ನ ಗುರುವಿಗೆ "ದೊಡ್ಡಪ್ಪನ ಪತ್ರ ಬಂತು. ಪರೀಕ್ಷೆಯ ಪ್ರವೇಶ ಧನವನ್ನು ತನ್ನಿಂದ ಹೊರತು ಮತ್ತೆ ಯಾರಿಂದಲೂ ತೆಗೆದುಕೊಳ್ಳಕೂಡದೆಂದು ಬರೆದಿರುವರು. ಪರಮಾತ್ಮನ ಗುಣವನ್ನು ಯಾವ ಬಾಯಿಂದ ಹಾಡುಲು ಸಾಧ್ಯ !" ಎಂದು ಬರೆದರು.

ಈ ಸಹಾಯದಿಂದ ಎಂ. ಎ. ಪರೀಕ್ಷೆಗೆ ಕೂತರು. ಮುಂದೆ ೧೮೯೫ನೆಯ ಏಪ್ರಿಲ್‌ನಲ್ಲಿ ಫಲಿತಾಂಶವು ಹೊರಬಿದ್ದಿತು. ಅತ್ಯಂತ ಸಫಲತಾ ಪೂರ್ವಕ ಉತ್ತೀರ್ಣರಾಗಿದ್ದರು. ಅಂದು ತಮ್ಮ ಕೃಪಾಳು ಉಪಕಾರಿಯೂ ಸಹಾಯಕರೂ ಆದ ಡಾಕ್ಟರ್ ರಘುನಾಥಮಲ್‌ಗೆ ಬರೆದ ಪತ್ರದಲ್ಲಿ "ಈ ದಿನ ಫಲಿತಾಂಶವು ಹೊರಬಿದ್ದಿತು. ಪರಮಾತ್ಮನು ದಯಮಾಡಿದ್ದಾನೆ. ನಾನು ಪಾಸಾಗಿದ್ದೇನೆ. ಪರೀಕ್ಷೆಯು ಬಹಳ ಕಠಿಣವಾಗಿದ್ದಿತು. ಭಾರತವರ್ಷದ ಯಾವ ಯೂನಿವರ್ಸಿಟಿಯಲ್ಲೂ ಗಣಿತದಲ್ಲಿ ಇಂಥ ಕಠಿಣ ಪ್ರಶ್ನೆಗಳು ಬಂದಿರಲಿಲ್ಲ. ಇದು ಕೇವಲ ಪರಮಾತ್ಮನ ದಯೆ ಮತ್ತು ತಮ್ಮ ಆಶೀರ್ವಾದದ ಫಲ" ಎಂದು ಬರೆದರು.

ಬಿ ಎ. ಪರೀಕ್ಷೆಯಲ್ಲಿ ಉತ್ತೀರ್ಣವಾದಂತೆ ಪೂರ್ಣಾಂಕವನ್ನು ಪಡೆಯದಿದ್ದರೂ, ಎ ಮತ್ತು ಬಿ ಎರಡು ಭಾಗಗಳಿಂದಲೂ ಸಫಲತೆಯನ್ನು ಪಡೆದರು ; ಇದರಿಂದ ಪೂರ್ವ ಪಂಜಾಬ್ ಯೂನಿವರ್ಸಿಟಿಯಲ್ಲಿ ಯಾವ ವಿದ್ಯಾರ್ಥಿಗೂ ಇಷ್ಟು ಅಂಕಗಳು ಸಿಕ್ಕಿರಲಿಲ್ಲ. ಹೀಗೆ ಮೇಲಿಂದ ಮೇಲೆ ಜಯಭೇರಿನ ನಾದವು ಮೊಳಗುತ್ತಿದ್ದರೂ ಗೋಸ್ವಾಮಿಗಳ ಹೃದಯಮಂದಿರದಲ್ಲಿ ಅಹಂಕಾರದ ಕರಾಳ ಛಾಯೆಯು ಇಣಿಕಲೂ ಅವಕಾಶವಿರಲಿಲ್ಲ; ಪ್ರತಿಯಾಗಿ ಅಹಂಕಾರವಳಿದು ಹೋಗಿ ಅಪೂರ್ವ ವಿನಯ ಶ್ರದ್ಧಾ ಭಕ್ತಿ, ಈಶ್ವರನಲ್ಲಿ ಅನನ್ಯ ಶರಣು ಈ ಜ್ಯೋತಿಗಳೇ ಜಾಜ್ವಲ್ಯಮಾನವಾಗಿ ಅಲ್ಲಿ ಬೆಳಗುತ್ತಾ ನಿರ್ಮಲಾತ್ಮನನ್ನು ತೊಳಗಿಸುತ್ತಿದ್ದುವು. ಪ್ರತಿ ಸಂದರ್ಭದಲ್ಲೂ ''ಇದು

ಈಶ್ವರನ ಕೃಪೆ. ಇದು ನಿಮ್ಮ ಆಶೀರ್ವಾದ ಫಲ. ಇದು ಕೇವಲ ಗುರು ಕೃಪೆ” ಎಂದು ಸಮಸ್ತವನ್ನೂ ಈಶ್ವರಾರ್ಪಣಮಾಡಿಬಿಡುತ್ತಿದ್ದರು. ಅವರ ಗುರು ಭಕ್ತಿಯು ಎಷ್ಟು ಅಭೇದವಾಗಿದ್ದಿತ್ತೆಂದರೆ ೧೮-೪-೧೮೯೫ರಲ್ಲಿ ಫಲಿತಾಂಶವು ಹೊರಬೀಳುವುದಕ್ಕೆ ಮೊದಲು ಧನ್ನಾಮಲ್‌ಗೆ ಬರೆಯುತ್ತಾ “ತಾವು ನಡೆಸಿರುವ ಎಂ ಎ. ಪರೀಕ್ಷೆಯ ಫಲಿತಾಂಶವು ಇನ್ನೂ ಹೊರಬಿದ್ದಿಲ್ಲ. ತಾವು ಪಾಸಾದ ಸುದ್ದಿಯನ್ನು ಕೇಳಿದರೆ ನನಗೆ ಬಹಳ ಸಂತೋಷವಾಗುವುದು. ಇವೆಲ್ಲಾ ತಮ್ಮ ಕೆಲಸವೇ. ನನಗೇನೂ ಆತುರವಿಲ್ಲ; ನಿಮ್ಮ ಸುದ್ದಿಯು ಎಂದು ಹೊರಬೀಳಲೆಂದು ಸಂಕಲ್ಪಿಸಿರುವಿರೋ ಅಂದೇ ಸರಿ” ಎಂದಿರುವರು.

ಲಾಹೋರ್‌ನಲ್ಲಿ (೨)

ಎಂ. ಎ. ಪರೀಕ್ಷೆಯ ಫಲಿತಾಂಶವು ತಿಳಿದುಬರುವ ಮೊದಲೇ ಗೋಸ್ವಾಮಿಗಳಿಗೆ ಬರೇಲಿ ಕಾಲೇಜ್‌ನಲ್ಲಿ ಉಪಾಧ್ಯಾಯ ಪದವಿಯು ಸಿಕ್ಕಲಿತ್ತೆಂದು ಅವರ ಪತ್ರಗಳಿಂದ ತಿಳಿದುಬರುತ್ತದೆ. ಅಲ್ಲದೆ ಪೆಶಾವರ್ ಸ್ಕೂಲಿನ ಹೆಡ್‌ಮಾಸ್ಟರ್ ಕೆಲಸವೂ ದೊರಕುವಂತಿತ್ತು. ಆದರೆ ಮತ್ತೆ ಏನೋ ಕಾರಣದಿಂದ ಈ ಸ್ಥಳಗಳಲ್ಲಿ ಒಂದಕ್ಕೂ ಹೋಗಲಾಗಲಿಲ್ಲ.

೧೫-೭-೧೮೯೫: ಪೆಷಾವರ್ ಸ್ಕೂಲೊಂದರ ಮುಖ್ಯೋಪಾಧ್ಯಾಯ ಪದವಿಯು ಬಿಡುವಾಗಿದೆ. ಆದರೆ ಸಂಬಳ ತಿಂಗಳಿಗೆ ಐವತ್ತೋ, ಅರವತ್ತೋ; ಬಹಳ ಕಡಿಮೆ.

೧೬-೭-೧೮೯೫: ದೀನದಯಾಳರ ಐದು ಭಾಷಣಗಳನ್ನು ಕೇಳಿದೆ. ಸ್ವಾರಸ್ಯವಾಗಿದ್ದುವು.

೧೭-೭-೧೮೯೫: ಪೆಷಾವರ್ ಸ್ಕೂಲಿನ ಮುಖ್ಯೋಪಾಧ್ಯಾಯ ಪದವಿಯ ವಿಚಾರವಾಗಿ ಬೆಲ್ ಸಾಹೇಬರಲ್ಲಿ ಪ್ರಸ್ತಾಪಿಸಿದೆ. ಅವರು ಅಲ್ಲಿಗೆ ಹೋಗಬೇಡವೆಂದು ಹೇಳಿದರು. ನನಗೆ ಗೊತ್ತಿಲ್ಲ. ಹೇಗೂ ನಾನು ಸುಖಿಯಾಗಿದ್ದೇನೆ. ನನ್ನಲ್ಲಿ ಹಣವಾಗಲೀ, ಅವಕಾಶವಾಗಲೀ ಇಲ್ಲದಿರುವುದರಿಂದ ಅಲ್ಲಿಗೆ ಬರಲಾರೆ.

೨೦-೭-೧೮೯೫: ಅಮೃತಸರ್ ಕೆಲಸದ ವಿಚಾರವಾಗಿ ವಿವರಗಳೇ

ನೆಂದು ಪ್ರೊಫೆಸರ್ ಬೆಲ್ ಸಾಹೇಬರು ಕೇಳಿದರು. ಈ ವಿವರಗಳಿಗಾಗಿ ಅಮೃತಸರ್ ಕಾಲೇಜಿನ ಪ್ರಿನ್ಸಿಪಾಲರನ್ನು ಹೋಗಿ ಕಾಣಲೇ ಎಂದು ನನ್ನ ಪ್ರೊಫೆಸರ್ ಸಲಹೆಯನ್ನು ಕೇಳಲೇಬೇಕು. ಶೀತವಾಗಿ ಬಹು ಮುಜುಗರ ವಾಗಿದೆ. ಪಂಡಿತ ದೀನದಯಾಳರು ಇನ್ನೂ ಭಾಷಣ ಮಾಡುತ್ತಿದ್ದಾರೆ.

ಮುಂದೆ ಒಂದು ಪತ್ರದಲ್ಲಿ "ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲ್ ಮಿ॥ ಬೆಲ್ ಮತ್ತು ಇತರ ಕಾಲೇಜುಗಳ ಪ್ರಿನ್ಸಿಪಾಲರು ನನಗೆ ಬಹಳವಾಗಿ ಹೇಳಿ ತಮ್ಮ ಕಾಲೇಜಿನಲ್ಲಿ ಗಣಿತಶಾಸ್ತ್ರದ ಪ್ರೊಫೆಸರ್ ಕೆಲಸವು ಖಾಲಿಯಾ ಗುವತನಕ ಎಫ್.ಎ ,ಬಿ.ಎ , ಪರೀಕ್ಷೆಯ ವಿದ್ಯಾರ್ಥಿಗಳಿಗೆ ಪ್ರವೇಟ್ ತರಗತಿ ಗಳನ್ನಾರಂಭಿಸಿ ನಡೆಸುತ್ತಿರುವಂತೆ ಒತ್ತಾಯ ಮಾಡುತ್ತಿದ್ದಾರೆ" ಎಂದು ಬರೆದಿದ್ದಾರೆ. ಮುಂದೆ ೧೮೯೫ನೇ ಮೇ ತಿಂಗಳಲ್ಲಿ ಮಿ॥ ಬೆಲ್‌ಸಾಹೇಬನೇ ತನ್ನ ಖರ್ಚಿನಲ್ಲಿ ಈ ಸಂಬಂಧದ ಪ್ರಕಟನೆಗಳನ್ನು ಅಚ್ಚುಹಾಕಿಸಿ ಗೋಡೆ ಗಳಮೇಲೆ ಹಚ್ಚಿಸಿದನು. ಕೆಲವು ದಿನಗಳಲ್ಲೇ ತರಗತಿಗಳು ಪ್ರಾರಂಭವಾಗಿ ಬಿಟ್ಟವು. ಎಫ್.ಎ. ಪರೀಕ್ಷೆಯ ವಿದ್ಯಾರ್ಥಿಗಳು ತಿಂಗಳಿಗೆ ಹತ್ತು ರೂಪಾಯಿ ನಂತೆಯೂ, ಬಿ.ಎ., ಪರೀಕ್ಷೆಯ ವಿದ್ಯಾರ್ಥಿಗಳು ತಿಂಗಳಿಗೆ ಹದಿನೈದು ರೂಪಾಯಿನಂತೆಯೂ ಫೀಜ್ ಕೊಡುತ್ತಿದ್ದರು. ಈ ತರಗತಿಗಳ ಜೊತೆಗೆ ತಮ್ಮಿಂದ ಗಣಿತಶಾಸ್ತ್ರವನ್ನು ಅಧ್ಯಯನಮಾಡಲು ಬರುತ್ತಿದ್ದ ಇಬ್ಬರು ಇತರ ಪ್ರೊಫೆಸರ್‌ಗಳಿಗೂ ಗೋಸ್ವಾಮಿಗಳು ಪಾಠ ಹೇಳಿಕೊಡುತ್ತಿದ್ದರು. ಎಂ. ಎ. ಪರೀಕ್ಷೆಗಾಗಿ ದುಡಿದ ಶ್ರಮದಿಂದ ಮೊದಲೇ ಕದಲಿದ್ದ ಗೋಸ್ವಾಮಿಗಳ ಆರೋಗ್ಯವು ಈ ಬಿಡುವಿಲ್ಲದ ಪರಿಶ್ರಮದಿಂದ ಇನ್ನೂ ಹದಗೆಟ್ಟಿತು. ಕಡೆಗೆ ವಿವಶರಾಗಿ ಆರೋಗ್ಯಸುಧಾರಣೆಯ ನಿಮಿತ್ತ ತಮ್ಮ ಗ್ರಾಮವಾದ ಮುರಲೀ ವಾಲಾಗೆ ಪ್ರಯಾಣಮಾಡಿದರು.

ಕೆಲವು ತಿಂಗಳ ನಂತರ ಆರೋಗ್ಯವಂತರಾಗಿ ಮತ್ತೆ ಲಾಹೋರ್‌ಗೆ ಹಿಂದಿರುಗಿದರು; ನಂತರ ನೌಕರಿಗೆ ಸೇರುವ ಮೊದಲು ಅಲ್ಲಿನ ಸಾರ್ವಜನಿಕ ಕಾರ್ಯಗಳಲ್ಲಿ ಭಾಗವಹಿಸಲಾರಂಭಿಸಿದರು. ೧೮೯೫ನೇ ಜುಲೈ ೪ರಲ್ಲಿನ ಪತ್ರದಿಂದ ತಿಳಿದುಬರುವಂತೆ ಗೋಸ್ವಾಮಿಗಳು ಅಲ್ಲಿನ ಸನಾತನ ಧರ್ಮ ಸಭೆಯ ಶಿಕ್ಷಾಸಮಿತಿಗೆ ಸದಸ್ಯರಾದದ್ದಲ್ಲದೆ, ಅಲ್ಲಿನ ಎಂಟ್ರೆನ್ಸ್ ತರಗತಿಯ ಪರೀಕ್ಷಾ ಭಾರವೂ ಇವರಿಗೆ ಒಪ್ಪಿಸಲ್ಪಟ್ಟಿತು. ಮುಂದೆ ಕೆಲವೇ ದಿನದಲ್ಲಿ

ಸಭೆಯ ಸಮಸ್ತ ಕಮಿಟಿಗಳಿಗೂ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಈ ಸಾರ್ವಜನಿಕ ಸೇವೆಗಳೊಂದಿಗೆ ಗೋಸ್ವಾಮಿಗಳಿಗೆ ಚಿತ್ರಕಲೆಯನ್ನು ಅಭ್ಯಸಿಸಬೇಕೆಂಬ ಅಭಿಲಾಷೆಯುಂಟಾಯಿತು. ಆಗ ಲಾಹೋರಿನ ವೈದಿಕ ಕಾಲೇಜಿನ ಪ್ರಿನ್ಸಿಪಾಲರಾದ ಲಾಲಾ ಹಂಸರಾಜ್‌ರನ್ನು ಭೇಟಿಮಾಡಿ, ಅಲ್ಲಿ ಚಿತ್ರಕಲೆಯನ್ನು ಕಲಿಯಲು ಅನುಮತಿಪಡೆದು - ೫-೧೧-೧೮೯೫ರಲ್ಲಿ ತನ್ನ ಗುರುವಿಗೆ ಹೀಗೆ ಬರೆದರು. "ಲಾಲಾ ಹಂಸರಾಜ್‌ರನ್ನು ಕಂಡಿದ್ದೆ. ಅವರಿಂದ ಫೀಜ್ ಇಲ್ಲದೆ ಚಿತ್ರಕಲೆಯನ್ನು ಕಲಿಯಲು ಅಪ್ಪಣೆ ದೊರೆತಿದೆ - ವೈದಿಕ್ ಕಾಲೇಜಿನಲ್ಲಿ. ತಾವು ದಾಸನಮೇಲೆ ದಯಾದೃಷ್ಟಿಯನ್ನಿಡಿರಿ".

೧೮೯೫ರ ಕೊನೆಯ ವೇಳೆಗೆ ಸೈಲ್‌ಕೋಟೆಯ ಅಮೇರಿಕನ್ ಮಿಷನ್ ಹೈಸ್ಕೂಲಿನ ಎರಡನೆಯ ಉಪಾಧ್ಯಾಯರಾಗಿ ತಿಂಗಳಿಗೆ ಎಂಭತ್ತು ರೂಪಾಯಿ ಸಂಬಳದ ಮೇಲೆ ಸೇರಿದರು. ರಾಮರು ಕೋಟಿಗಳ ಅಂಕಿಗಳನ್ನೊಳಗೊಂಡ ಲೆಕ್ಕಗಳನ್ನು ಸಹಾ ಮನಸ್ಸಿನಲ್ಲೇ ಲೆಕ್ಕಿಸಿ ಹೇಳುವರೆಂದು ವಿದ್ಯಾರ್ಥಿಗಳಲ್ಲಿ ಪ್ರಸಿದ್ಧರಾದರು. ದೂರದಿಂದೆಲ್ಲಾ ವಿದ್ಯಾರ್ಥಿಗಳು ಮುತ್ತಿಕೊಳ್ಳುತ್ತಿದ್ದರು. ಅಲ್ಲದೆ ಅವರು ರಾಮರೊಂದಿಗೆ ಎಷ್ಟು ಸಲಿಗೆಯಿಂದಿರುತ್ತಿದ್ದರೆಂದರೆ, ಅವರು ಕೇಳಿದ್ದನ್ನೆಲ್ಲಾ ಇವರು ಅನುಮಾನಿಸದೆ ಕೊಡುತ್ತಿದ್ದರು. ಮಿಠಾಯಿನವನ ಅಂಗಡಿಗೆ ಹೋಗಿ ರಾಮರ ಲೆಕ್ಕದಲ್ಲಿ ಯಾವ ವಿದ್ಯಾರ್ಥಿ ಬೇಕಾದರೂ ತನಗೆ ಇಷ್ಟವಾದಷ್ಟು ಹಾಲನ್ನು ಕುಡಿಯಬಹುದಾಗಿತ್ತು. ಹೀಗೆ ತಮ್ಮ ಸಂಬಳವನ್ನೆಲ್ಲಾ ವಿದ್ಯಾರ್ಥಿಗಳಿಗಾಗಿ ವೆಚ್ಚ ಮಾಡುತ್ತಾ ತಾವು ಕೇವಲ ಸರಳ, ಸಾತ್ವಿಕ, ನಿಸ್ವಾರ್ಥ, ದಯಾಮಯ ಜೀವನವನ್ನು ನಡೆಸುತ್ತಿದ್ದರು.

ಇಲ್ಲಿ ನಮೂದಿಸಿರುವ ಘಟನೆಯೊಂದರಿಂದ ಗೋಸ್ವಾಮಿಗಳ ಸರಳತೆಯೂ ಪವಿತ್ರತೆಯೂ ಸ್ಪಷ್ಟವಾಗುತ್ತದೆ. ಸೈಲ್ ಕೋಟೆಗೆ ಕೆಲಸಕ್ಕಾಗಿ ಬಂದ ಕೆಲವು ದಿನಗಳಲ್ಲೇ ಹತ್ತಿರವಿದ್ದ ಹಣವೆಲ್ಲಾ ಖರ್ಚಾಗಿಬಿಡಲು, ಅನಿವಾರ್ಯವಾದ ಅವಶ್ಯಕತೆಗಾಗಿ ಅಲ್ಲಿನ ಒಬ್ಬ ಪರಿಚಿತನಿಂದ ಹತ್ತು ರೂಪಾಯಿಗಳ ಸಾಲವನ್ನು ತೆಗೆದುಕೊಂಡರು. ವ್ಯಾವಹಾರಿಕ ಜಗತ್ತಿನಲ್ಲಿ ಒಂದಲ್ಲ ಒಂದುವೇಳೆ ಪ್ರತಿಯೊಬ್ಬನೂ ಇತರರಿಂದ ಸಾಲ ತೆಗೆದುಕೊಳ್ಳುತ್ತಾನೆ; ಮತ್ತು ಅದನ್ನು ಹೇಳಿದ ಕಾಲದಲ್ಲಿ ಹಿಂದಿರುಗಿಸಲೂ ಪ್ರಯತ್ನಿಸುತ್ತಾನೆ;

ಆದರೆ ನಿಸ್ವಾರ್ಥದ, ಸರಳ ಸ್ವಭಾವದ ಮತ್ತು ಈಶ್ವರಭಕ್ತಿಯಲ್ಲಿ ಮಿಂದ ಗೋಸ್ವಾಮಿಗಳಂಥವರು ಸಾಲವನ್ನು ತೀರಿಸುವ ರೀತಿಯೇ ವಿಚಿತ್ರ. ಇವರು ಮುಂದಿನ ತಿಂಗಳಿಂದ ಪ್ರಾರಂಭಿಸಿ ತಾವು ಆ ಊರಿನಲ್ಲಿರುವಷ್ಟು ಕಾಲದಲ್ಲಿ ಪ್ರತಿತಿಂಗಳೂ ಆತನಿಗೆ ಹತ್ತು ರೂಪಾಯಿಗಳಂತೆ ಕೊಡುತ್ತಾ ಇದ್ದರು. ಆತನು ಸಲಸಲಕ್ಕೂ ತೆಗೆದುಕೊಳ್ಳಲೊಲ್ಲದೆ ಹೋಗುತ್ತಿದ್ದ ; ಆದರೆ ಆತನ ಉಪಕಾರವನ್ನು ಸದಾ ಸ್ಮರಿಸುವಸಲುವಾಗೆಂದು ಹೇಳಿ ಒತ್ತಾಯದಿಂದ ಆತನ ಕೈಲಿ ಹತ್ತು ಹತ್ತು ರೂಪಾಯಿಗಳನ್ನಿಟ್ಟು ಬರುತ್ತಿದ್ದರು.

ಸ್ಯೆಲ್‌ಕೋಟೆಗೆ ಬರುವ ಮೊದಲು ಲಾಹೋರ್‌ನ ಸನಾತನ ಧರ್ಮ ಸಭೆಯನ್ನಂತೂ ತಮ್ಮ ಸೇವೆಯಿಂದ ಸಜೀತಗೊಳಿಸಿ ಬೆಳಗಿದ್ದರು. ಇಲ್ಲಿಗೆ ಬಂದಮೇಲೆ ಇಲ್ಲಿನ ಸನಾತನ ಧರ್ಮಸಭೆಗೂ, ಇತರ ಸತ್ಸಂಗಿಗಳಿಗೂ ತಮ್ಮ ಪ್ರೇಮಪೂರ್ಣ ಉಪದೇಶಗಳಿಂದ ಅಮೃತಪಾನ ಮಾಡಿಸುತ್ತಿದ್ದರು. ೧೮-೧೦-೧೮೯೯ರಲ್ಲಿ ತಮ್ಮ ಗುರುವಿಗೆ "ತಮ್ಮ ದಯೆಯಿಂದ ಇಲ್ಲಿಗೆ ಬರುವ ಸಮಸ್ತ ಬಾಲಕರೂ ಈಶ್ವರ ಭಾವದಲ್ಲಿ ಬೆರೆತಿದ್ದಾರೆ; ಅಲ್ಲದೆ ಭಜನೆಯನ್ನೂ ಕೂಡ ಮಾಡುತ್ತಿರುತ್ತಾರೆ" ಎಂದು ಬರೆದರು. ಮತ್ತೆ ೨೧-೧೦-೧೮೯೯ರ ಪತ್ರದಲ್ಲಿ "ನೆನ್ನೆ ಸನಾತನ ಧರ್ಮ ಸಭೆಯವರು ನನ್ನ ವ್ಯಾಖ್ಯಾನವನ್ನು ಪ್ರಕಟಿಸಿರಲಿಲ್ಲ. ಆದರೂ ತಮ್ಮ ಕೃಪೆಯಿಂದ ನನ್ನ ಭಾಷಣವು ಆರಂಭಿಸಿರುವಲ್ಲೇ ಸನಾತನ ಧರ್ಮ ಮಂದಿರದ ಮೈದಾನವು ಜನರಿಂದ ಕಿಕ್ಕಿರಿದು ತುಂಬಿಹೋಯಿತು. ಡಿಪ್ಯುಟಿ ಸಾಹೇಬರೇ ಮೊದಲಾಗಿ ದೊಡ್ಡ ದೊಡ್ಡ ಪದವೀಧರರೂ ಬಂದಿದ್ದರು. ದೇಶಾಭಿಮಾನದ ವಿಚಾರವಾಗಿಯೂ ಮಾತನಾಡಿದೆ. ಜನರ ಕಣ್ಣುಗಳು ಅಶ್ರುಪೂರ್ಣವಾಗಿದ್ದುದು ದೃಷ್ಟಿಗೋಚರವಾಗುತ್ತಿದ್ದಿತು. ಮೇಲಿಂದ ಮೇಲೆ ಚಪ್ಪಾಳೆಗಳ ಬಡಿತವೂ ಕೇಳಿಬರುತ್ತಿದ್ದಿತು" ಎಂದು ಬರೆದರು.

ಮುಂದೆ "ಸ್ಯೆಲ್ ಕೋಟೆಯ ಸನಾತನ ಧರ್ಮಸಮಾಜಕ್ಕೆ ನಾನಿಲ್ಲಿರುವುದರಿಂದ ಹೊಸ ಜೀವ ಕಳೆಬಂದಿತು. ನಾನೂ ಆ ಸಭೆಯ ಸೇವೆಮಾಡಿದ ಮೇಲೆ ಆನಂದೋನ್ಮತ್ತನಾಗುತ್ತೇನೆ. ಈ ಆನಂದದ ಮುಂದೆ ಸಾಮ್ರಾಜ್ಯಗಳೇ ಬೆಲೆಯಿಲ್ಲದವಾಗಿ ಕಾಣಿಸುತ್ತವೆ. ಇಲ್ಲಿನ ಭಾರತೀಯರೂ ಇಂಗ್ಲಿಷರೂ, ಸಮಸ್ತರೂ ನನ್ನ ಬಗ್ಗೆ ಬಹು ವಿಶ್ವಾಸ ದಯೆಗಳಿಂದ ಕೂಡಿದಾರೆ". ಎಂದು ಸೋದರ ಮಾವನಿಗೆ ಬರೆದರು.

ಅಲ್ಲಿಂದ ಸ್ಯೆಲ್ ಕೋಟೆಯ ಮಿಷನ್-ಹೈಸ್ಕೂಲಿನ ಬೋರ್ಡಿಂಗ್ ಹೌಸ್‌ನ ಸೂಪರಿಂಡೆಂಡೆಂಟರಾಗಿ ಕೆಲವು ತಿಂಗಳು ಕೆಲಸಮಾಡುವಲ್ಲಿ ಲಾಹೋರಿನ ಮಿಷನ್ ಕಾಲೇಜಿನಲ್ಲಿ ಪ್ರೊಫೆಸರ್ ಕೆಲಸವು ಸಿಕ್ಕುವಂತಾಯಿತು. ೧೮೯೬ರ ವೇಳೆಗೆ ತಾವು ಬಿ. ಎ. ಪರೀಕ್ಷೆ ಪೂರ್ತಿ ಅಧ್ಯಯನ ಮಾಡಿದ ಫೋರ್ಮನ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಗಣಿತ ಶಾಸ್ತ್ರದ ಪ್ರೊಫೆಸರ್ ಪದವಿಯು ಖಾಲಿಯಾಗಲು, ಆ ಸ್ಥಳಕ್ಕೆ ಗೋಸ್ವಾಮಿಗಳು ನೇಮಿಸಲ್ಪಟ್ಟರು. ಆಗ ಅವರಿಗೆ ಕೇವಲ ಇಪ್ಪತ್ತೇಳು ವರುಷ ವಯಸ್ಸು. ಆ ದಿನಗಳಲ್ಲಿ ಅವರು (ಡಾಕ್ಟರ್ ಆಫ್ ಸೈನ್ಸ್) ಡಿ. ಎಸ್‌ಸಿ. ಡಿಗ್ರಿಗಾಗಿ ಅಧ್ಯಯನ ಮಾಡುತ್ತಿದ್ದರು. ಅದುವರೆಗೂ ಯಾವ ಭಾರತೀಯನಿಗೂ ಆ ಡಿಗ್ರಿಯು ದೊರಕಿರಲಿಲ್ಲ. ಆದರೆ ಅವರಿಗೆ ಮಾರಹೇಳಲಿದ್ದ ಅಪ್ರತಿಮ ಅಭಿಲಾಷೆಯಲ್ಲಿ ಈ ಅಧ್ಯಯನಕ್ಕೆ ಸಾಕಷ್ಟು ಅವಕಾಶ ಸಿಕ್ಕದೆ ಕಡೆಗೆ ಬಿಡಬೇಕಾಗಿ ಬಂತು.

ಹೀಗೆ ಪ್ರೊಫೆಸರ್ ಪದವಿಗೆ ಬಂದನಂತರ ಅವರ ಚಿತ್ತಪ್ರವೃತ್ತಿಯು ತರಂಗ ತರಂಗವಾಗಿ ವೈರಾಗ್ಯ ಸಾಗರದಲ್ಲಿ ಲೀನವಾಗುತ್ತಿದ್ದಿತು. ಸಂಬಳವು ಬಂದೊಡನೆಯೇ ತಮ್ಮ ಖರ್ಚುಗಳಿಗಾಗಿ ಒಂದು ಅಥವ ಎರಡು ರೂಪಾಯಿಗಳನ್ನು ಮಾತ್ರ ಇಟ್ಟುಕೊಂಡು ಮಿಕ್ಕ ಹಣವನ್ನೆಲ್ಲಾ ಅವರವರಿಗೆ ಕೊಟ್ಟು ಬಿಡುತ್ತಿದ್ದರು. ಈ ದಿನಗಳಲ್ಲಿ ಬರೆದ ಪತ್ರಗಳು:—

೨೧-೧೨-೧೮೯೫: ನನ್ನ ಸ್ವಂತ ಕಾಲೇಜ್ ಎಂದರೆ ಮಿಷನ್ ಕಾಲೇಜಿನಲ್ಲಿಯೇ ನನ್ನನ್ನು ಗಣಿತದ ಪ್ರೊಫೆಸರ್ ಆಗಿ ನೇಮಿಸಿದ್ದಾರೆ. ಈ ಕೃಪೆಗಾಗಿ ನಾನು ದೇವರನ್ನು ಇನ್ನೂ ಬಹುವಾಗಿ ಪ್ರೀತಿಸಬೇಕು.

೨೩-೧೨-೧೮೯೫: ಎಂಟು ದಿನದಿಂದಲೂ ಊಟಮಾಡಿಲ್ಲ. ಬರೀ ಹಾಲೇ ಆಹಾರವಾಗಿದೆ. ಆದರೂ ಈಗತಾನೆ ಮೂವತ್ತುಮೈಲಿ ನಡೆದು ಬಂದೆ. ನನಗೇನೂ ಆಯಾಸವಾಗಿಲ್ಲ.

೧-೬-೧೮೯೬: ನನ್ನ ಹೆಂಡತಿಯನ್ನು ಇಲ್ಲಿಗೆ ಕರೆತಂದುದಕ್ಕಾಗಿ ತಂದೆಯವರು ಬಹು ಕುಪಿತರಾಗಿದ್ದಾರೆ. ಒಂದೆರಡು ದಿನಗಳಲ್ಲಿ ಅವರು ಇಲ್ಲಿಗೆ ಬರಬಹುದು. ಆದರೆ ಯಾರಿಗೆ ಗೊತ್ತು ?

೫-೬-೧೮೯೬: ನಿಮ್ಮ ಪತ್ರಗಳು ಬಂದವು. ನಾನು ಸಂಪೂರ್ಣ ನಿಮ್ಮವನು. ಯಾವುದನ್ನೂ ನನ್ನದೆಂದು ತಿಳಿಯುವುದಿಲ್ಲ. ಈ ಪ್ರಪಂಚ

ದಲ್ಲಿ ಧನವನ್ನು ಕೂಡಿಸುವುದು ನನಗೆ ಆನಂದವಲ್ಲ. ನನ್ನ ಹೆಂಡತಿಗೆ ಆಭರಣಗಳನ್ನು ಕೊಡಿಸುವುದರಲ್ಲಿ ನನಗೆ ಸಂತೋಷವಿಲ್ಲ. ನನಗೆ ಆರಾಮ ವಿಹಾರದ ವಸ್ತುಗಳೂ ಬೇಕಿಲ್ಲ. ಮರದ ನೆರಳೇ ಮನೆಯಾಗಿ, ಬೂದಿಯೇ ವಸನವಾಗಿ, ನೆಲವೇ ಹಾಸಿಗೆಯಾಗಿ, ಕೆಲವು ಮನೆಗಳಿಂದ ತಿರಿದು ತಂದ ಅನ್ನವೇ ಆಹಾರವಾಗಿದ್ದರೆ ಸಾಕು, ಸುಖವಾಗಿರುವೆ.

ದುಡ್ಡಿನ ಸಲುವಾಗಿ ನಿಮಗೆ ನೋವುಂಟುಮಾಡುವುದೆ ? ಬೂದಿ ಬಡುಕ ಸಾಧುವಿನಂತಿರೆಂದು ಆಜ್ಞಾಪಿಸಿರಿ - ಈಗಲೇ ಸಿದ್ಧ. ಅದೇ ಸಮಯ ದಲ್ಲೇ ಕಾಲೇಜಿನಲ್ಲಿಯೂ ಸಹ ಕೆಲಸ ಮಾಡುತ್ತಿರುತ್ತೇನೆ. ಅಲ್ಲಿಂದ ಸಿಗುವು ದೆಲ್ಲಾ ನಿಮ್ಮದೇ. ಅದನ್ನು ನಿಮ್ಮ ಮನಬಂದಂತೆ ವೆಚ್ಚಮಾಡಿರಿ. ಅದರಿಂದ ನಿಮಗೆ ಇಷ್ಟಬಂದಷ್ಟನ್ನು ನನ್ನ ಹೆಂಡತಿಗೆ ಕೊಡಿರಿ. ನಾನೊಬ್ಬ ಬಡ ಗುಲಾಮ. ನನ್ನದು ದುಡಿಯುವುದು. ದುಡಿಯುತ್ತಲೇ ನನ್ನ ಹೃದಯ ದಲ್ಲಿನ ದೇವರಿಗಾಗಿ ಒಂದು ಪುಟ್ಟ ಪವಿತ್ರ ದೇವ ಮಂದಿರವನ್ನು ಕಟ್ಟುವುದು. ಈ ಅಂತಃಕರಣ ಶಾಂತಿಯಿಂದ ನನಗೆ ಉಂಟಾಗುವ ಆನಂದವು ಬಾಹ್ಯಜಗ ತ್ತಿನ ಯಾವ ವಸ್ತುವಿನಿಂದಲೂ ಸಿಕ್ಕುವುದಿಲ್ಲ. ಆ ನನ್ನ ದೇವರಿಗಾಗಿ ದುಡಿ ಯುವುದರಿಂದ ಸಿಕ್ಕುವ ಶಾಂತಿಯೇ ನನಗೆ ಸಾಕಾದಷ್ಟು ಸಂಬಳ. ಈ ಕಾಲೇಜಿನ ಸಂಬಳವನ್ನು ಹಾಗೇ ಬಿಟ್ಟುಬಿಡುತ್ತೇನೆ. ಅದನ್ನು ನಿಮಗೆ ಇಷ್ಟ ಬಂದಂತೆ ವೆಚ್ಚಮಾಡಿರಿ ಇಂತಹ ವಸ್ತುಗಳ ಕೂಡು-ಕಳೆಯುವಿಕೆಗಳಿಂದ ನಾನು ಉಬ್ಬಿ ತಗ್ಗುವುದಿಲ್ಲ. ನಾನು ಪೂರ್ಣಾನಂದ. ಇದೆಲ್ಲಾ ನಿಮ್ಮ ಕೃಪೆಯ ಫಲ. ನೆನ್ನೆಯಿಂದ ನಮ್ಮ ತಂದೆ ಇಲ್ಲಿ ಇರುವ ಕಾರಣ ನಾನು ನಿಮ್ಮಲ್ಲಿಗೆ ಬರಲಾರೆ.

ಕೃಷ್ಣ ಪ್ರೇಮ

ಈ ರೀತಿಯಲ್ಲಿ ಅವರ ಆತ್ಮವು ತ್ಯಾಗರೂಪಿಯಾಗುತ್ತಿರುವಂತೆಯೇ, ಕೃಷ್ಣಗೀತೆಯ ಅಧ್ಯಯನವು ಗೋಸ್ವಾಮಿಗಳ ಕನಸುಮನಸುಗಳನ್ನಾವರಿಸು ತ್ತಿರುವಂತೆಯೇ, ಅವರ ಹೃದಯವು ಕೃಷ್ಣಚಂದ್ರನ ಪ್ರೇಮಕ್ಕೆ ಸೋತು ವಿರಹಿಣಿಯಂತೆ ತಪಿಸತೊಡಗಿತು. ದಿನರಾತ್ರಿಗಳು ಆ ನೀಲ ಮೇಘಶ್ಯಾಮ

ಮೂರ್ತಿಯ ಸಾಕಾರ ಸ್ವರೂಪದ ನಿರೀಕ್ಷಣೆಯಲ್ಲಿ, ಬೇಡಿಕೆಯಲ್ಲಿ, ವಿರಹಾಲಾಪದಲ್ಲಿ, ಕಣ್ಣೀರು ಕೋಡಿಯಲ್ಲಿ, ಉನ್ಮತ್ತ ಚಿತ್ತಾವಸ್ಥೆಯಲ್ಲಿ ಕಳೆಯುತ್ತಿದ್ದುವು. ಎಲ್ಲಿಂದಲಾದರೂ ಕೃಷ್ಣನ ಹೆಸರನ್ನು ಕೇಳಿದ ಮಾತ್ರದಿಂದಲೇ ಅಲ್ಲೇ ಅವರು ಪ್ರೇಮಸಮಾಧಿಯಲ್ಲಿ ಮುಳುಗಿಬಿಡುತ್ತಿದ್ದರು. ಕೊಳಲಿನಂತೆ ಧ್ವನಿಯು ಎಲ್ಲಾದರೂ ಕೇಳಿಬಂದರೆ ಸಾಕು; ಅಲ್ಲೇ ಚಿತ್ತವು ಎಚ್ಚರವನ್ನು ತಪ್ಪುತ್ತಿದ್ದಿತು. ಈ ದಿನಗಳಲ್ಲಿ ಗೋಸ್ವಾಮಿಗಳು ಪ್ರತಿದಿನವೂ ಪ್ರಾತಃ ಕಾಲ ಹಲವಾರು ಘಂಟೆಗಳನ್ನು ರಾವೀನದಿಯ ದಡದಲ್ಲಿ ತಮ್ಮ ಮನಮೋಹನನ ಸ್ಮೃತಿಯಲ್ಲಿ ಲವಲೀನರಾಗಿದ್ದುಬಿಡುತ್ತಿದ್ದರು. ಹಿಂದಿರುಗಿ ಬಂದ ಮೇಲೆ, ಮಿತ್ರರೊಂದಿಗಾಗಲೀ, ಇತರರೊಂದಿಗಾಗಲೀ ವ್ಯರ್ಥ ಸಂಭಾಷಣೆ ಪರಿಹಾಸ್ಯಗಳನ್ನೆಂದೂ ಮಾಡುತ್ತಿರಲಿಲ್ಲ; ಸದಾ ಧರ್ಮಸಂಬಂಧವಾಗೇ ಭಾಷಿಸುತ್ತಿದ್ದರು. ಹೀಗೆ ಸಂಭಾಷಣೆಯು ನಡೆಯುತ್ತಿರುವಾಗ ಕೃಷ್ಣನ ಹೆಸರನ್ನು ಕೇಳಿದರಾಗಲೀ, ಆವನ ಸ್ಮರಣೆ ಬಂದರಾಗಲೀ ಅವರ ಕಣ್ಣುಗಳು ಮುಚ್ಚಿ, ಕಂಬನಿಯ ಹರಿಯುತ್ತಾ ಅವರ ಮೈಮರೆಸುತ್ತಿತ್ತು. ಆ ದಿನಗಳಲ್ಲಿ ನಡೆದ ಒಂದು ದಿನದ ಘಟನೆಯನ್ನು ಅವರ ಪರಿಚಿತನೊಬ್ಬನು "ಕುಲಭಾಸ್ಕರ" ಎಂಬ ಪತ್ರಿಕೆಯಲ್ಲಿ ಹೀಗೆಂದು ಮುದ್ರಿಸಿದ.

"ಒಂದು ದಿನ ಸಂಜೆ ರಾವೀ ನದಿಯದಡದ ವನದಲ್ಲಿ ಗೋಸ್ವಾಮಿಗಳು ಅಡ್ಡಾಡುತ್ತಿದ್ದರು. ಅಂತರಿಕ್ಷವನ್ನು ಘನಘೋರ ಮೇಘ ಮಂಡಳಗಳು ಕವಿದು ಬರುತ್ತಿದ್ದವು. ಕಪ್ಪು ಮೋಡಗಳನ್ನು ನೋಡುತ್ತಾ ನೋಡುತ್ತಾ ಸ್ವಲ್ಪ ಹೊತ್ತು ನಿಶ್ಚೇಷ್ಟಿತರಾಗಿ ನಿಂತುಬಿಟ್ಟರು. ಕ್ಷಣ ಕಾಲಾನಂತರ ಗಟ್ಟಿಯಾಗಿ ಅಳುತ್ತಾ "ಹೇ ಕೃಷ್ಣ! ಹೇ ಘನಶ್ಯಾಮ! ಈ ಮೇಘಗಳ ಶ್ಯಾಮಲ ವರ್ಣವು ನಿನ್ನ ಬಣ್ಣವೇ! ಇವು ನನ್ನನ್ನು ವ್ಯಾಕುಲ ಪಡಿಸುತ್ತಿವೆ. ಪ್ರಿಯನೆ! ನನ್ನನ್ನು ಇಷ್ಟೇಕೆ ಕುದಿಸುತ್ತೀ! ಹೇಳು, ಯಾವ ಕುಂಜದಲ್ಲಿ ನೀನು ಬಚ್ಚಿಟ್ಟುಕೊಂಡಿರುವೆ?........ಎಲೆ ಮೋಡವೇ! ನೀನು ಮೇಲಿಂದ ಸಮಸ್ತವನ್ನೂ ನೋಡಬಲ್ಲೆ. ನನ್ನ ಕೃಷ್ಣನೆಲ್ಲಿಹನು? ನೀನಾದರೂ ಹೇಳು........ ಒಳ್ಳೆಯದು, ನನಗೆ ತಿಳಿಯಿತು. ನೀನೂ ಸಹ ಆವನ ವಿರಹದಿಂದ ಕಪ್ಪಾಗಿ ಕುದಿಯುತ್ತಿರುವೆ. ನನಗೆ ನನ್ನ ಪ್ರಿಯ ಕೃಷ್ಣನ ದರ್ಶನವಾಗುವುದಿಲ್ಲವೇ! ನಾನು ಕೃಷ್ಣನನ್ನು ನೋಡದಿದ್ದರೆ ಜಗತ್ತು ನನ್ನನ್ನು ಕಚ್ಚಿಬಿಡುವುದು! ಈ

ವಿಯೋಗ ವ್ಯಥೆಯನ್ನು ಯಾರ ಮುಂದೆ ಗೋಳಾಡಲೀ? ಹೇ ಕೃಷ್ಣ! ನಿನಗೋಸ್ಕರ ಮಿತ್ರರು ಸಂಬಂಧಿಗಳಿಂದೆಲ್ಲಾ ವಿಮುಖನಾದೆ! ಪ್ರಪಂಚದ ಲಜ್ಜಾ–ನಾಚಿಕೆಗಳನ್ನು ಬಿಟ್ಟು ಬಿಟ್ಟೆ; ಆದರೆ ನಿನ್ನ ನಖಗಳ ಸುಳಿವೂ ಇಲ್ಲ! ನೀನು ಹೊರತು ನನಗಿನ್ನಾರು ದಿಕ್ಕು?

ಮತ್ತೆ ಮೋಡಗಳು ಚದುರುದ್ದಿರುವುದನ್ನು ಕಂಡು "ಎಲೈ ಮೋಡವೇ ಹೋಗುವಂತಿದ್ದರೆ ಹೋಗು; ಆದರೆ ನನ್ನ ಸಂದೇಶವನ್ನು ಕೃಷ್ಣನಿಗೆ ತೆಗೆದು ಕೊಂಡು ಹೋಗು. ನನ್ನ ಕಣ್ಣುಗಳಲ್ಲಿ ಹೇಗೆ ಮಳೆ ಸುರಿಯುತ್ತಿದೆ ಎಂಬು ದನ್ನು ಆ ನನ್ನ ಕೃಷ್ಣನಿಗೆ ಹೇಳು.

ಕೃಷ್ಣ! ಮಳೆಯಲ್ಲಿ ಮೀಯುವೆಂಬಾಸೆ ನಿನಗಿದ್ದರೆ
ಬಾ ನನ್ನ ಕಂಗಳಲಿ ನೀ ಕುಳಿತುಕೋ ॥
ಕಪ್ಪು ಬಿಳಿ ಕೆಂಪು ಮಳೆಗರೆವ ಮೋಡಗಳೆಲ್ಲ
ಹುಚ್ಚರಂತೆಲೆಯುತಿವೆ ನಿನ್ನನರಸಿ ॥

(ಮಜಾ ಬರಸಾತ್‌ಕಾ ಚಾಹೋ, ಮೋರಿ ಆಂಖೋಂಮೆ ಆಬೈಠೋ! ಸಿಯಾಹೀಹೈ, ಸುಫೇದೀಹೈ, ಶಫಕ್‌ಹೈ ಅಬ್ರೆಬಾರಾಂ ಹೈ,) ಪ್ರಾಣೇಶ್ವರ! ಎಷ್ಟುಕಾಲ ಕುದಿಯುತ್ತಿರಲಿ? ಇನ್ನು ಸಹಿಸಲಾರೆ. ನೀನು ಯಮರಾಜ ನನ್ನು ಕಳುಹಿಸಿ ನನ್ನನ್ನು ಮುಗಿಸಿಬಿಡು; ಇಲ್ಲವೇ ನಿನ್ನ ದರ್ಶನದಿಂದ ನನ್ನ ತೃಷೆಯನ್ನಾರಿಸು. ನನ್ನ ಹೃದಯವು ಹೀಗೆ ದಹಿಸಿ ಸುಡುತ್ತಿರುವಾಗ ನೀನು ದೂರದಿಂದ ತಮಾಷೆ ನೋಡುತ್ತಿರುವುದು ಸರಿಯೇ? ಬೇಡದೇನೇ ಸೂರ್ಯನಿಗೆ ತೇಜಸ್ಸು ಕೊಟ್ಟೆ; ಚಂದ್ರನಿಗೆ ಶೀತಲತಾ ಸೌಂದರ್ಯವನ್ನು ಕೊಟ್ಟೆ; ಕೈ ನೀಡದೇನೆ ಹೂಗಳಿಗೆ ವಿವಿಧ ಬಣ್ಣಗಳೊರೆದು ಸಿಂಗರಿಸಿದೆ. ನನ್ನೊಬ್ಬನಿಗೆ ಜ್ಞಾನದಾನ ಮಾಡುವುದರಿಂದ ನಿನ್ನ ಕೋಶವು ಶೂನ್ಯವಾಗಿ ಬಿಡುವುದೇ? ಹೇ ಕೃಷ್ಣ! ನೀನು ದರ್ಶನ ಕೊಡದೇ ಹೋದಲ್ಲಿ ಈ ಪ್ರಾಣ ಪಕ್ಷಿಯು ಶರೀರಪಂಜರದಿಂದ ಹಾರಿಹೋಗುವುದು; ನಿನ್ನ ನೆನಪಿನಲ್ಲಿ ಕಣ್ಣುಗಳು ತೆರೆದು ನಿಲ್ಲುವುವು.

(ಬಲಬಮ್ ರಸೀದ್ ಜಾನಮ್ ತೋ ಬಯಾ ಕಿ ಜಿಂದಾ ಮಾನಮ್)
—ನನ್ನ ಪ್ರಾಣವು ತುಟಿಗಳವರೆಗೆ ಬಂದಿವೆ; ನೀನು ಬಂದು ನನ್ನನ್ನು ಸಜೀವಗೊಳಿಸು..........

ಪ್ರಿಯ ಮೋಡವೇ ! ಈ ನನ್ನ ನುಡಿಗಳನ್ನು ಕೃಷ್ಣನಿಗೆ ಒಪ್ಪಿಸು ! ಹೇ ಕೃಷ್ಣ! ಹೇ ಕೃಷ್ಣ!!'' ಹೀಗೆಂದು ಮೂರ್ಛೆಹೋಗಿ ಬಿದ್ದುಬಿಟ್ಟರು.

''ಲಾಹೋರ್‌ನ ಭಾಈ ನಂದಗೋಪಾಲರ ಮನೆಯಲ್ಲಿ ಒಂದು ದಿನ ರಾಮಾಯಣ ಕಥೆಯ ವಾಚನವಾಗುತ್ತಿದ್ದಿತು. ಗೋಸ್ವಾಮಿಗಳೂ ಅಲ್ಲಿಗೆ ದಯಮಾಡಿಸಿದ್ದರು. ಕೆಲವು ನಿಮಿಷಗಳ ತರುವಾಯ ಕಥೆಯ ಮಧ್ಯದಲ್ಲಿ ಮಗುವಿನಂತೆ ತುಟಿಗಳನ್ನು ಮಾಡಿಕೊಂಡು ಅಳತೊಡಗಿದರು. ಕಥಾ ವಾಚಕ ಪಂಡಿತಜೀಯು ಬಹಳ ಸಮಾಧಾನ ಹೇಳಿ ಸಂತೈಸಿದರೂ ನಿಷ್ಫಲ ವಾಯಿತು. ಕಡೆಗೆ ಕಥಾವಾಚನವನ್ನು ನಿಲ್ಲಿಸಿಬಿಟ್ಟಿದ್ದಾಯಿತು. ವ್ಯಾಕು ಲತೆಯು ಹೆಚ್ಚಿದಂತೆಲ್ಲಾ ಅಳುತ್ತಾ ''ಹೇ ಕೃಷ್ಣ! ನನ್ನಮೇಲೆ ದಯೆ ತೋರು! ದರ್ಶನವನ್ನು ಕೊಡು ! ಆ ಕಿಷ್ಕಿಂಧೆಯ ವಾನರರಿಗಿಂತಲೂ ನಾನು ಕಡೆಯೇ? ಆ ಭಿಲ್ಲಿನೀ ಶಬರಿಗಿಂತಲೂ ನೀಚನೇ ನಾನು? ನೀನು ಸಿಗದಿದ್ದರೆ, ಈ ವಿದ್ಯೆಗೆ ಬೆಂಕಿಗೆ ಹಾಕಲಿ; ಈ ಪ್ರತಿಷ್ಠೆಯು ಮಣ್ಣುಗೂಡಲೀ! ಈ ಶರೀರವು ಹಾಳಾಗಲೀ!'' ಎಂದು ಪ್ರಲಾಪಿಸತೊಡಗಿ ಮೂರ್ಛಿತ ರಾದರು.*

ಒಮ್ಮೆ ಕಾಲೇಜಿನಲ್ಲಿ ಬೇಸಿಗೆಯ ರಜವು ಬಂದಂದು 'ಬಹಳ ಪಾಠ ಹೇಳಿದ್ದಾಯಿತು; ದಿನರಾತ್ರಿಗಳ ಪರಿಶ್ರಮ ಮಾಡಿದ್ದಾಯಿತು; ಇನ್ನು ಈ ರಜವನ್ನು ಈಶ್ವರ ಭಜನೆಯಲ್ಲೀ ಕಳೆಯಬೇಕು' ಎಂದು ಸಂಕಲ್ಪಿಸಿ ದರು. ಬೆಳಗ್ಗೆ ಎದ್ದರು; ರಾವೀ ನದಿಯನ್ನು ತಲುಪಿದರು; ತಮ್ಮ ಪ್ರಿಯನ ಧ್ಯಾನದಲ್ಲಿ ನಿಮಗ್ನರಾಗಿ ಬಿಟ್ಟರು. ಇಷ್ಟರಲ್ಲಿ ಕೋಕಿಲಾ ಧ್ವನಿ ಯನ್ನು ಕೇಳಿ ಪುಳಕಿತರಾದರು. 'ಎಲೈ ಕೋಕಿಲಾ! ನಿನ್ನ ಮಂಜುಳ ಸ್ವರದಲ್ಲಿ ಈ ಹೃದಯಭೇದಿಕತಾ ಎಲ್ಲಿಂದ ಬಂತು? ನೀನು ಆ ಬನ್ಸೀ ವಾಲನನ್ನು ನೋಡಿದೆಯಾ? ನೀನು ಅವನಿಂದಲೇ ಈ ಧ್ವನಿಯನ್ನು ಎರವಲು ತಂದಂತಿದೆ. ನೀನು ಆ ನನ್ನ ಪ್ರಿಯ ಕೃಷ್ಣನನ್ನು ನೋಡಿ ಬಿಟ್ಟಿ ರುವೆ. ನಿಜವನ್ನು ಹೇಳು ಕೋಕಿಲಾ! ಅವನು ನನಗೆ ಯಾವ ರೀತಿ ಯಿಂದ ದೊರಕುವನು?........ಎಲೈ ಕಣ್ಣುಗಳೇ! ನೀವು ಶ್ಯಾಮನನ್ನು ನೋಡದ ಪಕ್ಷದಲ್ಲಿ ಈಗಲೇ ಸಿಡಿಮುಹೋಗಿರಿ! ಎಲೈ ಕೈಗಳೇ! ನೀವು

* ಲಾಲಾ ಅಯೋಧ್ಯಾಪ್ರಸಾದ್ ವಕೀಲ್.

ನನ್ನ ಪ್ರಿಯಕೃಷ್ಣನ ಚರಣಸ್ಪರ್ಶ ಮಾಡದ ಪಕ್ಷಕ್ಕೆ ನೀವಿದ್ದೇನು ಉಪಯೋಗ-ಸೇದಿಹೋಗಿರಿ! ನಾಶವಾಗಿ!........

ನನ್ನ ಪ್ರಿಯಕೃಷ್ಣನಂ ಕಾಣದಿಹ ನೀವಿದ್ದು
ವ್ಯರ್ಥ! ಸಿಡಿಯಿರಿ! ನನ್ನ ಕಣ್ಣುಗಳಿರಾ!
ಪ್ರಿಯನ ಪಾವನಚರಣ ತೊಡೆಯದಿಹ ನೀವಿದ್ದು
ವ್ಯರ್ಥ! ಬತ್ತಿರಿ! ಸೇದಿ - ಕೈಯಿಗಳಿರಾ!
ದೇವ! ನಿನ್ನಯ ದಿವ್ಯದರ್ಶನಕೆ ಕಾಣಿಕೆಯ
ನೀಯಬೇಕೆಂದರಿದೋ ಸಿದ್ಧನಿರುವೇ!”

ಎಂದು ಪ್ರಲಾಪಿಸತೊಡಗಿದರು.

ಅದೇ ತಿಂಗಳು ಮತ್ತೊಂದು ದಿನ ಬಹು ವ್ಯಾಕುಲರಾಗಿ “ಹೇ ಭಗವನ್! ಮತ್ತೊಂದು ದಿನ ಕಳೆದುಹೋಯಿತು! ನಿನ್ನ ದರ್ಶನವು ಪ್ರಾಪ್ತವಾಗಲಿಲ್ಲ. ನನ್ನ ಜೀವನವು ಹೀಗೇ ನಷ್ಟವಾಗುವುದೇ? ಈ ಜನ್ಮದಲ್ಲೇನೋ ನಾನು ಯಾವ ಪಾಪವನ್ನೂ ಮಾಡಲಿಲ್ಲ; ಮತ್ತೆ ನಿನ್ನವಿಯೋಗವೇದನೆಯನ್ನೇಕೆ ಸಹಿಸುವಂತೆ ಮಾಡಿರುವೇ?” ಎಂದು ಗೋಳಿಟ್ಟರು.

“ಒಳ್ಳೆಯದು, ನಾನು ಪಾಪಿ, ದೋಷಿಯೇ ಸರಿ. ಈಗ ನಿನ್ನಲ್ಲಿ ಶರಣು ಬಂದಿರುವೆ. ಕ್ಷಮಿಸು. ಒಂದೇಬಾರಿ ದರ್ಶನಕೊಡು! ಹೇ ನಾಥ! ಪ್ರಾಣಾರ್ಪಣೆಯಿಂದ ನೀನು ಸಿಕ್ಕುವಂತಿದ್ದರೆ, ಇದೋ, ತೆಗೆದುಕೋ! ಈ ಪ್ರಾಣವನ್ನೂ ನಿನಗೆ ಕಾಣಿಕೆ ಕೊಡುತ್ತೇನೆ. ನನಗೆ ನಿನ್ನನ್ನು ನೋಡುವಾಸೆಯು....ಆಶೆಯು....” ಎಂದು ವಿಲಪಿಸುತ್ತಾ ಅತ್ತರು. ಕಣ್ಣೀರಿಂದ ಪರ್ಟಿಲ್ಲಾ ಒದ್ದೆಯಾಯಿತು; ಅಳುವು ನಿಲ್ಲಲಿಲ್ಲ; ಮೂರ್ಛಿತರಾದರು. ಕಣ್ಣುತೆರೆಯುವಲ್ಲಿ ಒಂದು ನಾಗರಹಾವು ಅವರೆದುರಿಗೆ ಬಂದು ನಿಂತಿತು. ಅದನ್ನು ಕಾಣುತ್ತಲೇ ಗೋಸ್ವಾಮಿಗಳು ಎದ್ದುಕುಳಿತು “ಕೃಷ್ಣಾ! ಕೃಷ್ಣಾ!” ಎನ್ನುತ್ತ ಜರುಗಿ “ಮಹಾರಾಜ್! ಈ ರೂಪದಲ್ಲಿ ದರ್ಶನಕೊಟ್ಟೆಯಾ?” ಎನ್ನುತ್ತಾ, ಮತ್ತೆ ಮೂರ್ಛಿರಾಗಿ ಬಿದ್ದುಬಿಟ್ಟರು .... ಎಚ್ಚರವಾಯಿತು; ಸರ್ಪವು ಹೊರಟು ಹೋಗಿದ್ದಿತು. ‘ನಾಥ್! ಸಿಕ್ಕಿದೆಯೇನೋ ಸರಿ; ಆದರೆ ಮನಸ್ಸಿನಲ್ಲೇ ಉಳಿದೆ. ನಾನು ನಿನ್ನ ಶ್ಯಾಮಸುಂದರಮೂರ್ತಿಯ ದರ್ಶನಮಾಡಲು ಬಯಸುತ್ತೇನೆ;

ಗೋಪಿಯರು ಮೈಮರೆಯುತ್ತಿದ್ದ ಆ ನಿನ್ನ ಸುಂದರ ರೂಪವನ್ನು ದರ್ಶನ ಮಾಡಲಿಚ್ಛಿಸುತ್ತೇನೆ. ಹೇ ಮನಮೋಹನ !!....” ಎಂದು ಮತ್ತೆ ಮೂರ್ಛೆ ಹೋದರು. ಈ ಸ್ಥಿತಿಯನ್ನು ಹೊರಗಿನಿಂದ ನೋಡುತ್ತಿದ್ದ ಮಿತ್ರನೊಬ್ಬನು ಒಳಕ್ಕೆ ಬಂದು ‘ಗೋಸ್ವಾಮಿಜೀ! ತಮ್ಮಂಥ ಪುತ್ರನನ್ನು ಪಡೆದ ಆ ಮಾತೆಯು ಧನ್ಯಳು!’ ಎನ್ನುವಷ್ಟರಲ್ಲಿಯೇ ಅವರಿಗೆ ಎಚ್ಚರವಾಯಿತು. ಉಚ್ಚಸ್ವರದಲ್ಲಿ ‘ಎಲಾ! ಆ ನನ್ನ ಮನಮೋಹನನು ಎಲ್ಲಿಗೆ ಹೋದ? ಈಗ ತಾನೇ ನನ್ನಮುಂದೆ ನಿಂತಿದ್ದ! ಈಗ ಜೀವನವು ವ್ಯರ್ಥ’ ಎನ್ನಲು, ಮಿತ್ರನು ‘ಗೋಸ್ವಾಮಿಜೀ! ನೀವು ಯಾರನ್ನು ಹುಡುಕುತ್ತಿರುವಿರೋ ಅವನು ನಿಮ್ಮ ಹೃದಯದೊಳಗಿದ್ದಾನೆ’ ಎಂದನು. ಇದನ್ನು ಕೇಳುತ್ತಲೇ ಆವರು ತಮ್ಮ ಷರ್ಟನ್ನು ಹರಿದು, ವಕ್ಷಸ್ಥಲವನ್ನು ಗಬಚುತ್ತಾ ರಕ್ತವು ಬರುತ್ತಿರಲು, “ಅರೆ! ಮನಮೋಹನ! ನೀನು ಹೃದಯದಲ್ಲೇ ಇದ್ದರೆ, ಉಳಿದೆಲ್ಲಿಗೆ ಹೋಗುವೆ ? ಈಗಲೇ ತೆರೆದುಬಿಡುತ್ತೇನೆ?, ಎಂದು ಎದೆಯನ್ನು ಬಗೆಯತೊಡಗಿದರು. ಗಾ ಬ ರಿ ಗೊ ಂ ಡ ಮಿತ್ರನು ಅವರ ಕೈಗಳನ್ನು ಹಿಡಿದು ‘ಮಹಾರಾಜ್! ಧೈರ್ಯ ತಾಳಿರಿ! ಭಗವಂತನುಗೆ ದೊರಕುವನು’ ಎಂದು ಸಮಾಧಾನಮಾಡಲು ಪ್ರಯತ್ನಿಸಿದ. ಗೋಸ್ವಾಮಿಗಳು ‘ಏಕೆ ನಾಥ! ಹೊರಗೆ ಬಂದು ಬಿಟ್ಟೆಯಾ! ಇನ್ನೂ ಸ್ವಲ್ಪಹೊತ್ತು ಬರದಿದ್ದರೆ ನಾನು ನಿನ್ನನ್ನು ಎಲ್ಲಿಂದ ಬಗೆದು ತರುತ್ತಿದ್ದೆನೆಂಬುದನ್ನು ನೋಡುತ್ತಿದ್ದೆ’ ಎಂದು ಹೇಳಿ ಮತ್ತೆ ಅಚೇತರಾದವರು ಸಂಜೆಗೇ ಎಚ್ಚರವಾರವಾದದ್ದು. ಆಗ ಚಿತ್ತವು ಪೂರ್ಣ ಶಾಂತವಾಗಿದ್ದಿತು ಈ ವೇಳೆಗೆ ರಜವೂ ಮುಗಿದ್ದಿತು.

ಮತ್ತೆ ೧೯೨೬ನೇ ಆಗಸ್ಟಲ್ಲಿ ರಜಾ ದಿನಗಳು ಬಂದುವು. ಮತ್ತೆ ಇದೇ ವಿರಹವೇದನೆಯಿಂದ ರಾಮರು ಮಥುರಾ ಬೃಂದಾವನವನ್ನು ದರ್ಶಿಸ ಬಯಸಿದರು. ಮಿತ್ರರಾಗಿದ್ದ ಪಂಡಿತ ದೀನದಯಾಳರು ಆಗಾಗ್ಯೆ ಮಥುರಾ ಬೃಂದಾವನಗಳಿಗೆ ಹೋಗಿಬರುತ್ತಿದ್ದರು; ಇದರಿಂದ ಗೋಸ್ವಾಮಿಗಳು ಅವರ ನ್ನೊಪ್ಪಿಸಿ ತಮ್ಮ ಖರ್ಚಿನಲ್ಲೇ ಕ್ಷೇತ್ರದರ್ಶನಾಕಾಂಕ್ಷಿಗಳಾಗಿ ಹೊರಟವರು ಮಥುರಾ ಕ್ಷೇತ್ರವನ್ನು ತಲುಪಿ ೧೯೨೬ನೇ ಆಗಸ್ಟ್ ೯ರಲ್ಲಿ ತಮ್ಮ ಗುರುವಿಗೆ ಹೀಗೆ ಬರೆದರು.

"ಈ ದಿನ ನಾವು ಬ್ರಜಮಂಡಲದ ಯಾತ್ರೆಗೆ ಹೊರಟಿದ್ದೇವೆ. ಮೂರು ನಾಲ್ಕು ದಿನಗಳಾಗುವುದು. ಗೋವರ್ಧನ, ಬರಸಾನಾ, ನಂದ ಗ್ರಾಮ, ಗೋಕುಲ, ಬಲದಾವೂ ಈ ಎಲ್ಲಾ ಸ್ಥಳಗಳನ್ನೂ ನೋಡುವೆವು. ಸೆಪ್ಟಂಬರ್ ತಿಂಗಳಿನಲ್ಲಿ ತಮ್ಮ ಚರಣಕಮಲಗಳಲ್ಲಿ ಉಪಸ್ಥಿತನಾಗುವೆನೆಂಬ ಆಶೆಯಿದೆ. ತಾವು ಪತ್ರಗಳನ್ನು ಹಿಂದಿನ ವಿಳಾಸಕ್ಕೇನೇ ಬರೆಯುವುದು." ಯಾತ್ರೆಯಲ್ಲಿ ಹೆಜ್ಜೆ ಹೆಜ್ಜೆಗೂ ತಮ್ಮ ಪ್ರಿಯನ ಸ್ಮರಣೆಮಾಡುತ್ತಾ ನಡೆಯುತ್ತಿದ್ದರು; ಕೃಷ್ಣನ ನಿವಾಸದ, ಓಡಾಟದ ಸ್ಥಾನಗಳ ಚಿನ್ಹೆಯನ್ನು ಕಾಣುತ್ತಲೇ ಅವರ ಹೃದಯವು ಉಕ್ಕೇರುವುದು. ಯಾರಾದರೂ 'ಕೃಷ್ಣ ಎಂದರೆ ಘಂಟೆಗಟ್ಟಲೆ ಎಚ್ಚರ ತಪ್ಪಿಬಿಡುತ್ತಿದ್ದಿತು. ಹೀಗೆ ಈ ಅಪಾರ ಕೃಷ್ಣ ಪ್ರೇಮದಲ್ಲಿ ಈಸುತ್ತಿರುವಾಗಲೇ ಮಥುರಾದಲ್ಲಿ ಗೋಸ್ವಾಮಿಗಳ ಒಂದು ಭಾಷಣವಾಯಿತು. ನಗರದ ಸಮಸ್ತಧನಿಕರೂ, ಶ್ರೀಮಂತರೂ ಎಲ್ಲರೂ ಕಿಕ್ಕರಿದು ನೆರೆದಿದ್ದರು. ಭಾಷಣವನ್ನು ಕೇಳಿ, ಎಲ್ಲರೂ 'ಬಲಿಹಾರೀ! ಬಲಿಹಾರೀ! ಕೃಷ್ಣಾ! ಕೃಷ್ಣಾ!' ಎನ್ನುತ್ತಿದ್ದರು.

ಮುಂದೆ ಅಜ್ಮೀರ್, ಸೈಲ್ ಕೋಟ್, ಸಿಮ್ಲಾ, ಅಮೃತಸರ್, ಪೆಶಾವರ್ ಮೊದಲಾದೆಡೆಗಳಲ್ಲೆಲ್ಲಾ ಗೋಸ್ವಾಮಿಗಳು 'ಈಶ್ವರಪ್ರೇಮ'ದ ವಿಚಾರವಾಗಿ ಕಿಕ್ಕಿರಿದ ಸಹಸ್ರಾರು ಜನರು ಮೈಮರೆತು ಭಕ್ತಿಪರವಶರಾಗುವಂತೆ ಭಾಷಣಮಾಡುತ್ತಿದ್ದರು. ಹೀಗೆ ಒಮ್ಮೆ ಲಾಹೋರ್‌ನ ಸನಾತನ ಧರ್ಮಸಭೆಯಲ್ಲಿ ಭಾಷಣವಾಗುತ್ತಿದ್ದಿತು. ಗೋಸ್ವಾಮಿಗಳ ಕಣ್ಣುಗಳಿಂದ ಪ್ರೇಮಬಾಷ್ಪಗಳು ಹರಿಯುತ್ತಿದ್ದವು. 'ಅಯ್ಯೋ! ನನ್ನ ಕೃಷ್ಣನನ್ನು ಕಪ್ಪೆಂದು ಹೇಳುತ್ತಾರೆ; ನನ್ನ ಹೃದಯವೂ ಕಪ್ಪಾಗಿದೆ. ಹಾಗಾದರೆ ನೀನೇಕೆ ನನಗೆ ಸಿಗಲೊಲ್ಲೆ?" ಎಂದು ಹೇಳುತ್ತಾ ಅಳತೊಡಗಿದರು. ಎಷ್ಟುಹೊತ್ತಾದರೂ ಅವರು ಕಂಠವು ವಿರಹವೇದನೆಯಿಂದ ಬಿಗಿದು ಬರುತ್ತಿದ್ದುದರಿಂದ ಭಾಷಣವನ್ನು ನಿಲ್ಲಿಸಿಬಿಡಬೇಕಾಗಿ ಬಂದಿತು.

ಒಮ್ಮೆ ಗೋಸ್ವಾಮಿಗಳು 'ಕೃಷ್ಣಲೀಲಾ ಮತ್ತು ಕೃಷ್ಣಗೀತೆ'ಯ ವಿಚಾರವಾಗಿ ಭಾಷಣಮಾಡುತ್ತಿದ್ದರು. ಅಂಥ ಸಭೆಯಲ್ಲಿ ಶ್ರೀನಾರಾಯಣ ದಾಸ್ ಎಂ.ಎ.ಯವರೂ ಬಂದಿದ್ದರು. ಇವರು ಪೂರ್ಣ ಆರ್ಯಸಮಾಜದ ತತ್ವಾನುಯಾಯಿಗಳಾಗಿದ್ದರು. ಎಂದರೆ ಕೃಷ್ಣನು ಒಬ್ಬ ಮಹಾಪುರುಷನೆಂದು

ಮಾತ್ರ ತಿಳಿಯುತ್ತಿದ್ದರೇ ಹೊರತು, ಈಶ್ವರನ ಅವತಾರವೆಂದಲ್ಲ; ಅಲ್ಲದೆ ಅವನ ಲೀಲೆಗಳೇ ಮೊದಲಾದ ಕಥಾಪ್ರಕರಣಗಳು ಜೀವನದ ಹೊಲಸುರೀತಿಯೆಂದೂ ತಿಳಿದಿದ್ದರು. ಈ ಕಾರಣದಿಂದ ಈ ಕೃಷ್ಣಲೀಲಾವಿಚಾರಗಳು ಅವರಿಗೆ ಅಸಹ್ಯ ಅನಿಷ್ಟಗಳಾಗಿದ್ದುವು. ಜೊತೆಗೆ ಭಗವದ್ಗೀತೆಯ ಬಗ್ಗೆಯೂ ಗೌರವಾದರಗಳಿರಲಿಲ್ಲ. ಆದರೆ ಗೋಸ್ವಾಮಿಗಳ ಭಕ್ತಿ ಮಾಧುರ್ಯ ಭರಿತ ಭಾಷಣಗಳನ್ನು ಕೇಳುತ್ತ, ಆ ಈಶ್ವರಪ್ರೇಮ ಪ್ರವಾಹದಲ್ಲಿ ತಮಗರಿವಿಲ್ಲದಂತೆ ತೇಲತೊಡಗಿದರು. ತತ್ಪರಿಣಾಮವಾಗಿ ಮುಂದೆ ತಾವೇ ಗೀತಾದಿ ಗ್ರಂಥಗಳನ್ನು ವ್ಯಾಖ್ಯಾನದೊಂದಿಗೆ ಅಧ್ಯಯನ ಮಾಡಲಾರಂಭಿಸಿದ್ದಲ್ಲದೆ, ರಾಮರ ಪ್ರೇಮಕ್ಕೆ ಸೋತುಹೋಗಿ, ಅವರ ಚರಣವನ್ನಾಶ್ರಯಿಸಿದರು.

ಲಾಹೋರ್‌ನಲ್ಲಿ (೪)

ಆಚಾರ್ಯ ದರ್ಶನಾನಂತರ

ಈ ದಿನಗಳಲ್ಲಿ ದ್ವಾರಕಾ ಮಠಾಧೀಶ ಶ್ರೀ ೧೧೦೮ ಜಗದ್ಗುರು ಶಂಕರಾಚಾರ್ಯರು ಲಾಹೋರಿಗೆ ದಯಮಾಡಿಸಿದರು. ಉಪನಿಷತ್ತುಗಳು ಮತ್ತು ವೇದಾಂತದರ್ಶನಗಳ ಪಾರದರ್ಶೀ ವಿದ್ವಾಂಸರಾಗಿದ್ದರಲ್ಲದೆ, ಆಚಾರ್ಯರು ಹಿಂದೂಶಾಸ್ತ್ರ ಮತ್ತು ಸಂಸ್ಕೃತಭಾಷೆಯ ಅದ್ವಿತೀಯ ಪಂಡಿತರಾಗಿದ್ದರು. ಅವರ ಜ್ಞಾನಪ್ರಸಾರದ ಪ್ರಕಾಶದ ಗುರುತಾಗಿಯೋ ಎಂಬಂತೆ ಅವರ ಪೀಠದ ಎರಡು ಪಕ್ಕಗಳಲ್ಲಿಯೂ ತುಪ್ಪದ ಪಂಜುಗಳು ಬೆಳಗುತ್ತಿದ್ದವು. ಸಂಸ್ಕೃತ ಭಾಷೆಯಲ್ಲಿ ಇವರು ಅತ್ಯಂತ ಪಾಂಡಿತ್ಯಪೂರ್ಣ ಪ್ರಭಾವಶಾಲೀ ಭಾಷಣಗಳನ್ನು ಮಾಡುತ್ತಿದ್ದರು. ಭಾರತದ ಸಮಸ್ತ ಭಾಗಗಳಲ್ಲೂ ಇವರ ಖ್ಯಾತಿಪತಾಕೆಯು ಮೆರೆಯುತ್ತಿದ್ದಿತು. ಇಂಥ ಆಚಾರ್ಯರು ಹಿಂದೂಸ್ತಾನದ ಪರ್ಯಟನ ಕಾರ್ಯವನ್ನು ಕೈಕೊಂಡು ಮುಂದೆ ಲಾಹೋರ್‌ನಲ್ಲೂ ಒಂದೆರಡು ದಿನಗಳು ನಿಲ್ಲುವರೆಂಬ ಸುದ್ದಿಯನ್ನು ಕೇಳಿ, ಅಲ್ಲಿನ ಸನಾತನಧರ್ಮ ಸಭೆಯ ಕಾರ್ಯದರ್ಶಿಗಳಾಗಿದ್ದ ಪ್ರೇಮಮೂರ್ತಿ ಗೋಸ್ವಾಮಿಗಳು ಆಚಾರ್ಯರ ದರ್ಶನಕ್ಕೆ ವ್ಯಾಕುಲಚಿತ್ತರಾದರು. ಅಂತೆಯೇ ಆಚಾರ್ಯರ ಸ್ವಾಗತ, ಸೇವಾಕಾರ್ಯಗಳನ್ನು ತಾವೇ ವಹಿಸಿಕೊಂಡರು.

ತತ್ಫಲವಾಗಿ ಜಗದ್ಗುರುಗಳ ಸೇವಾಶುಶ್ರೂಷಾ ಸತ್ಸಂಗಗಳು ರಾಮರಿಗೆ ಅನಾಯಾಸವಾಗಿ ದೊರೆತವು. ಅವರಿಂದ ದೊರೆಯುತ್ತಬಂದ ವೇದಾಂತೋಪದೇಶಗಳು ಗೋಸ್ವಾಮಿಗಳ ಪರಿಪಕ್ವ ಹೃದಯದಮೇಲೆ ಅಪೂರ್ವ ಪ್ರಭಾವವನ್ನು ಬೀರಿದುವು; ಅವರ ಹೃದಯಮಂದಿರದಲ್ಲಿ ತುಂಬಿ ತುಳುಕುತ್ತಿದ್ದ ಪ್ರೇಮರೂಪೀ ಸುವರ್ಣಕಾಂತಿಯೊಂದಿಗೆ, ಜ್ಞಾನರೂಪೀ ಅರುಣ ಕಿರಣಗಳು ಬೆರೆತು ದೇದೀಪ್ಯಮಾನ ಮೂಡಿದುವು. ಇದರ ಫಲವಾಗಿ ಬೇಸಿಗೆ ರಜವು ಪ್ರಾರಂಭವಾಗುತ್ತಲೇ ಬೃಂದಾವನ, ಮಥುರಾ ಕ್ಷೇತ್ರಗಳಿಗೆ ಯಾತ್ರೆ ಹೊರಡುವ ಬದಲು ಹರಿದ್ವಾರ, ಋಷೀಕೇಶಗಳಿಗೆ ಹೋಗಿ ಏಕಾಂತ ಸೇವೆಯಲ್ಲಿರುವ ಲಾಲಸೆಯು ಪ್ರಬಲವಾಗುತ್ತಾ ಬಂದುವು. ದಿನದಲ್ಲೀ ಸರಿ ಸ್ವಲ್ಪ ಬಿಡುವು ದೊರೆಯುತ್ತಲೇ ವೇದಾಂತ ವಿಚಾರ-ಆತ್ಮಧ್ಯಾನವಲ್ಲಿ ನಿರತರಾಗಿ ಬಿಡುತ್ತಿದ್ದರು. ೧೮೯೭ನೇ ಫೆಬ್ರವರಿ ೨೨ರಲ್ಲಿ ತಮ್ಮ ಗುರುವಿಗೆ ಹೀಗೆಂದು ಪತ್ರ ಬರೆದರು. “ಅವಕಾಶ ಸಿಕ್ಕಿದಾಗಲೆಲ್ಲಾ ಇಂಗ್ಲೀಷ್ ಭಾಷೆಯಲ್ಲಿರುವ ವೇದಾಂತ ಗ್ರಂಥಗಳನ್ನು ಓದುತ್ತೇನೆ. ಮತ್ತೂ ರಜದಲ್ಲಿ ಚಿತ್ತವನ್ನು ಏಕಾಗ್ರಮಾಡಲಿಕ್ಕೂ ಸಮಯ ಸಿಗುವುದು. ಆನಂದವು ಕೇವಲ ತನ್ನಸ್ವರೂಪದಲ್ಲಿ ಸ್ಥಿತವಾಗುವದರಲ್ಲಿದೆ; ಮತ್ತು ಸಮಸ್ತ ಜಗತ್ತಿನ ಮೇಲೂ ತನ್ನದೇ ಅಧಿಕಾರವಿದೆ. ಪ್ರಯೋಜನವಿಲ್ಲದೇನೇ ನಮ್ಮನ್ನು ನಾವೇ ಇತರರ ಅಧಿಕಾರದಲ್ಲಿ ಅರ್ಥಾತ್ ಬೇರೆಯವರ ಅಧೀನದಲ್ಲಿ ಕಲ್ಪಿಸಿಕೊಳ್ಳುತ್ತೇವೆ.”

ಧನ್ನಾರಾಮನು ಕೃಷ್ಣಭಕ್ತಿಯ ಲಾಲಸೆಗೆ ಪ್ರತಿಯಾಗಿ ವೇದಾಂತ ನಿಷ್ಟೆಯಲ್ಲಿಯೇ ಹೆಚ್ಚು ಶ್ರದ್ಧಾವಂತನಾಗಿದ್ದು, ಅಂತೆಯೇ ರಾಮರಿಗೂ ಉಪದೇಶಿಸುತ್ತಿದ್ದಂತೆ ಕಾಣುತ್ತದೆ. ಮುಂದೆ ಮತ್ತೊಮ್ಮೆ ಗೋಸ್ವಾಮಿಗಳು ‘ನಾನು ತಮ್ಮ ಕೃಪೆಯಿಂದ ನನ್ನ ಸಮಯವನ್ನು ವ್ಯರ್ಥವಾಗಿ ಕಳೆಯುತ್ತಿಲ್ಲ. ಹೆಚ್ಚಾಗಿ ವೇದಾಂತ ಚರ್ಚೆಯಾಗುತ್ತಿದೆ. ಭವಿಷ್ಯದಲ್ಲಿ ನಿಮ್ಮ ಆಜ್ಞಾನುಸಾರ ಇತರ ರೀತಿಯ ವಾರ್ತಾಲಾಪವನ್ನು ಸಂಪೂರ್ಣವಾಗಿ ತ್ಯಾಗಮಾಡುವ ಪ್ರಯತ್ನ ಮಾಡುತ್ತೇನೆ” ಎಂದು ಬರೆದರು.

ತಾವಿದುವರೆಗೂ ಇದ್ದ ಮನೆಯು ಏಕಾಂತ ಸೇವನೆಗೆ ಅನುಕೂಲವಾಗಿಲ್ಲವೆಂದು ಬೇರೆ ಉತ್ತಮ ಸ್ಥಾನವಾದ ಹರಿಚರಣಕೀ ಪೌಡಿಯಾದಲ್ಲಿ ಒಂದು ಮನೆಯನ್ನು ಬಾಡಿಗೆ ತೆಗೆದುಕೊಂಡು, ಅಲ್ಲಿಗೇನೆ ಬಂದು ವಾಸಿಸ

ತೊಡಗಿದರು. ೧೮೯೭ನೇ ಆಗಸ್ಟ್ ೧ರಲ್ಲಿ ತಮ್ಮ ಗುರುವಿಗೆ ಬರೆದರು "ನಾವು ಈ ಹೊಸಮನೆಗೆ ಬಂದಿದ್ದೇವೆ; ಈ ಮನೆಯು ಹರಿಚರಣಕೀ ಪೌಡಿಯಾದಲ್ಲಿದೆ. ಹರಿಚರಣಗಳಲ್ಲಿ (ತೀರ್ಥ್) ಶ್ರೀಗಂಗಾಜೀಯ ನಿವಾಸ ವಿದೆ; ಮತ್ತೂ ತೀರ್ಥ್ (ರಾಮ್)ಕ್ಕೂ (ನಿಗೂ) ಹರಿಚರಣಗಳಲ್ಲಿ ವಾಸಿಸು ವುದೇ ಉಚಿತವಾಗಿದೆ. ಇಲ್ಲಿಗೆ ಬಂದಂದಿನಿಂದ ಹರಿಚರಣಗಳಲ್ಲೇ ಧ್ಯಾನ ವಿದೆ. ಮತ್ತೂ ಆತ್ಮಸ್ವರೂಪದ ಶ್ರೀಗಂಗಾಜಲದಲ್ಲಿ ತಮ್ಮ ದಯೆಯಿಂದ ಸ್ನಾನಮಾಡುತ್ತಿದೇನೆ."

ಈ ಮನೆಗೆ ಬಂದಮೇಲೆ ಗೋಸ್ವಾಮಿಗಳು ಏಕಾಂತಸೇವನೆ, ಆತ್ಮ ವಿಚಾರಗಳಲ್ಲಿ ಯಥಾಶಕ್ತಿ ತಮ್ಮ ಸಮಯವನ್ನೆಲ್ಲಾ ವಿನಿಯೋಗಿಸತೊಡಗಿ ದರು. ತಮಗೆ ಈ ಬಗೆಯ ಚಿಂತನೆಯಿಂದ ಹೆಚ್ಚು ಹೆಚ್ಚು ಆನಂದ ದೊರೆ ತಂತೆಲ್ಲಾ, ಅದನ್ನು ತಿಳಿಸಿಬಿಟ್ಟ ಹೊರತೂ ಅವರ ಲೇಖಣಿಯು ನಿಲ್ಲುತ್ತಿರ ಲಿಲ್ಲ. ೧೮೯೭ನೇ ಆಗಸ್ಟ್ ೫ರಲ್ಲಿ ಭಗತ್‌ಜೀಗೆ ಹೀಗೆ ಬರೆದರು: "ಈಚೆಗೆ ವೇದಾಂತ ವಿಚಾರ, ಭಜನೆ, ಏಕಾಂತಸೇವನೆಗೇನೇ ಸಮಯವನ್ನೆಲ್ಲಾ ವಿನಿ ಯೋಗಿಸುತ್ತಿದೇನೆ. ಇದರಿಂದುಂಟಾಗುವ ಆನಂದದಲ್ಲಿ ಇದನ್ನು ಬಿಡಲೇ ಮನಸ್ಸಾಗುವುದಿಲ್ಲ,........ವ್ಯವಹಾರ ಕಾಲದಲ್ಲಿ ನಡೆಯುತ್ತಾ ತಿರುಗುತ್ತಾ, ಎಲ್ಲಾ ಕೆಲಸಗಳನ್ನುಮಾಡುತ್ತಲೇ ನಮ್ಮ ವೃತ್ತಿಯು ಬ್ರಹ್ಮಾಕಾರವಾಗಿದ್ದರೆ, ಮತ್ತೂ ಆ ಉತ್ತಮ ಲೋಕದಿಂದ ಎಂದೂ ಕೆಳಗಿಳಿಯದ ಪಕ್ಷಕ್ಕೆ ನಮ್ಮ ಜೀವನವು ಧನ್ಯವಾಯಿತು; ಇಲ್ಲದಿದ್ದರೆ ಮನುಷ್ಯದೇಹವು ನಿಷ್ಫಲವಾಗಿ ಹೋದಂತೆಯೇ."

ಈ ರೀತಿ ಪ್ರತಿನಿತ್ಯದ ಅಭ್ಯಾಸದಿಂದ ವೇದಾಂತದ ವ್ಯಾವಹಾರಿಕ ಫಲವು ಸಿಗಲಾರಂಭಿಸಿದಂದಿನಿಂದ ಅವರ ಲೇಖಣಿಯು ವೇದಾಂತ ಸತ್ಯತೆ ಯನ್ನು ವರ್ಣಿಸತೊಡಗಿತು. ೧೮೯೭ನೇ ಆಗಸ್ಟ್ ೬ರಲ್ಲಿ "ವಸ್ತುತಃ ಸ್ವಲ್ಪ ಅಭ್ಯಾಸದಿಂದಲೇನೇ ಶಾಸ್ತ್ರಗಳಿಗೆ ಸಂಪೂರ್ಣ ಅನುಸಾರವಾಗಿಯೇ ಪರಿಣಾ ಮವು ಪ್ರಕಟವಾಗುತ್ತದೆ. ಜಗತ್ತಿನಲ್ಲಿ ಯಾವುದಾದರೂ ವಸ್ತು ಸತ್ಯವಾಗಿ ದ್ದರೆ, ಅದು ವೇದಾಂತ ಶಾಸ್ತ್ರ"ವೆಂದು ಬರೆದರು.

ಈ ಮನೆಯಲ್ಲೇ ಗೋಸ್ವಾಮಿಗಳು ಹಗಲು ಇಮ್ಮಡಿ, ರಾತ್ರೆ ಮುಮ್ಮಡಿಯಷ್ಟು ವೇದಾಂತಾನುಭವ ಮಾಡತೊಡಗಿದರು. ಇದೇ ಮನೆ

ಯಲ್ಲೇ ವೇದಾಂತ ಪ್ರೇಮಿಗಳು ಗುಂಪು ಗುಂಪಾಗಿ ಬರತೊಡಗಿದರು. ಇದೇ ಮನೆಯಲ್ಲೇ ಮುಂದೆ ತಮ್ಮ ಗೆಳೆಯರೊಂದಿಗೆ ಸ್ವಾಮಿ ವಿವೇಕಾನಂದರನ್ನು ಸ್ವಾಗತಿಸಿ ಸಹಸೂಕ್ತಿಭೋಜನಾನಂದವನ್ನು ದೊರಕಿಸಿದರು. ಇದೇ ಮನೆಯಲ್ಲಿರುವಾಗಲೇ ವೇದಾಂತ ಧ್ವಜವನ್ನು ಹಿಡಿದು ಹೊರಟ ರಾಮರ "ಅಲೀಫ್"* ಎಂಬ ಉರ್ದು ಪತ್ರಿಕೆಯು ಪ್ರಾರಂಭಿಸಲ್ಪಟ್ಟಿತು. ಇದೇ ಪುಣ್ಯ ಗೃಹದಲ್ಲಿರುವಾಗಲೇ ಕೇವಲ ಯೌವನದಲ್ಲಿ ಗೋಸ್ವಾಮಿಗಳಿಗೆ ಏಕಾಂತವಾಸದ ಉನ್ಮತ್ತತೆಯು ಹೆಚ್ಚಿ ಪತ್ನೀಪುತ್ರರೊಂದಿಗೆ ವಾನಪ್ರಸ್ಥರಾಗುವಂಥ ಚಿತ್ತ ಪ್ರವೃತ್ತಿಯು ಉಕ್ಕಿಬಂದದು.

ಹೀಗಿರುವಲ್ಲಿ ೧೮೯೭ನೆಯ ಅಕ್ಟೋಬರ್ ೨೫ನೇ ತಾರೀಖು ಬಂದಿತು. ಅಂದು ದೀಪಾವಳಿಯ ದಿನ ರಾಮರ ಹುಟ್ಟಿದ ದಿನದ ಹಿಂದಿನ ದಿನ. ಅದೇ ಮನೆಯಲ್ಲೇ ವಾಸಿಸುತ್ತಿದ್ದಾರೆ. ನಿತ್ಯ ಪ್ರತಿಯ ವೇದಾಂತಾಭ್ಯಾಸದಲ್ಲಿ ಮತ್ತರಾಗುತ್ತಿದ್ದಂತೆ, ವ್ಯವಹಾರಿಕ ಜಗತ್ತಿನಿಂದ ವಿಮುಖರಾಗಿಬಿಟ್ಟಿದ್ದರು. ಅಂದು, ಆ ಸುದಿನ, ಆ ಮರೆಯಲಾಗದ ದೀಪಾವಳಿಯ ದಿನ ತಮ್ಮ ತನು ಮನಗಳನ್ನೆಲ್ಲಾ ಸಂಪೂರ್ಣವಾಗಿ ಈಶ್ವರಾರ್ಪಣಮಾಡಿ, ಸಂಪೂರ್ಣ ನಿಸ್ಸಂಬಂಧಿಯಾಗಿ ತಮ್ಮ ತಂದೆಗೆ ಈ ಕೆಳಗಿನ ಪತ್ರವನ್ನು ಬರೆದು ಕಳುಹಿಸಿದರು. "ನನ್ನ ಪರಮಪೂಜ್ಯ ಪ್ರಿಯಪಿತಾಜೀ! ಚರಣವಂದನಾ! ತಮ್ಮ ಕೃಪಾಪತ್ರವು ತಲುಪಿತು; ಅತ್ಯಂತ ಹರುಷವು ಪ್ರಾಪ್ತವಾಯಿತು. ನಿಮ್ಮ ಮಗ ತೀರ್ಥರಾಮನ ದೇಹವು ಇಂದು ಮಾರಿಗೆಯಾಗಿ ಹೋಯಿತು. ರಾಮನ ಮುಂದೆ ಮಾರಲ್ಪಟ್ಟಿತು. ಅವನಾಗಿ ಉಳಿದಿಲ್ಲ. ಈ ದಿನ ದೀಪಮಾಲಿಕೆಗೆ ತನ್ನ ಶರೀರವನ್ನು ಸೋತುಬಿಟ್ಟು, ಮಹಾರಾಜನನ್ನು ಗೆದ್ದು ಬಿಟ್ಟ. ತಮಗೆ ಧನ್ಯವಾದ. ಈಗ ಯಾವ ವಸ್ತುವಿನ ಆವಶ್ಯಕತೆಯೊದಗಿದರೂ, ನನ್ನ ಮಹಾರಾಜ-ಸ್ವಾಮಿಯನ್ನು ಬೇಡಿರಿ. ತತ್ಕಾಲದಲ್ಲೇ ಆತನು ತಾನೇ ಕೊಟ್ಟುಬಿಡುವನು; ಅಥವ ಅವನಿಂದ ಕಳುಹಿಸಿಬಿಡುವನು. ಆದರೆ ಒಮ್ಮೆ ನಿಶ್ಚಯರಾಗಿ ಅವನಿಂದ ಬೇಡಿರಿ; ಕೇಳಿರಿ ಹತ್ತೊಂಬತ್ತು-ಇಪ್ಪತ್ತು ದಿನಗಳಿಂದಲೂ ನನ್ನ ಸಮಸ್ತ ಕೆಲಸಗಳನ್ನೂ ಬಹು ನಿಪುಣತೆಯಿಂದ ಅವನೇ

---

*"ಅಲೀಫ್" ಎಂಬುದು ಅರಾಬಿಕ್ ವರ್ಣಮಾಲೆಯಲ್ಲಿ 'ಅ'ಕಾರದ ಧ್ವನಿಕೊಡುವ ಮೊದಲನೇ ವರ್ಣ.

ಮಾಡತೊಡಗಿದ್ದಾನೆ; ತಮ್ಮ ಕೆಲಸಗಳನ್ನೇಕೆ ಮಾಡುವುದಿಲ್ಲ? ಗಾಬರಿಯಾಗುವುದು ಸರಿಯಲ್ಲವಲ್ಲ. ಅವನ ಆಜ್ಞೆಯಿದ್ದಂತೆ ನಡತೆಯು ಬರುತ್ತ ಹೋಗುವುದು. ಆ ಮಹಾರಾಜನೇ - ಸ್ವಾಮಿಯೇ ಗೋಸ್ವಾಮಿಗಳಾದ ನಮ್ಮ ಧನ. ನಮ್ಮ ಸ್ವಂತವಾದ, ಸತ್ಯವಾದ, ಅಮೂಲ್ಯವಾದ ಧನವನ್ನು ಬಿಟ್ಟು, ಪ್ರಪಂಚದ ಸುಳ್ಳು ಕವಡೆಗಳ ಹಿಂದೆ ಆಶೆ ಬೀಳುವುದು ನಮಗೆ ಉಚಿತವಲ್ಲ. ಅಲ್ಲದೆ ಆ ಕವಡೆಗಳು ಸಿಕ್ಕದಿರಲು ಶೋಕಪಡುವುದಂತೂ ಬಹಳ ಕೆಟ್ಟದ್ದು. ನಿಮ್ಮ ವಾಸ್ತವಿಕ ಧನ ಮತ್ತು ಸಂಪತ್ತಿನ ಆನಂದವನ್ನು ಒಮ್ಮೆಯಾದರೂ ಸವಿದು ನೋಡಿರಿ."

ಹೀಗೆ ಆತ್ಮಾರ್ಪಣವಾದನಂತರ ರಾಮರ ಹೃದಯದ ಪರಿಸ್ಥಿತಿಯು ಸ್ವಲ್ಪ ವಿಚಿತ್ರವಾಯಿತು. ಈಗ ಹಗಲು ರಾತ್ರಿಗಳು ತಮ್ಮ ಸ್ವರೂಪದಲ್ಲಿ ಸ್ಥಿತರಾಗಿರುವುದು ಹೊರತು ಮತ್ತೇನೂ ತೋಚುತ್ತಿರಲಿಲ್ಲ. ಇತರರಿಗೆ ಪತ್ರ ಬರೆಯುವುದೂ ನಿಲ್ಲುತ್ತಾ ಬಂದಿತು; ತನ್ನ ಪೂಜ್ಯ ಭಗತ್ ಧನ್ನಾ ರಾಮನಿಗೆ ಕೂಡ ಪ್ರತಿದಿನವೂ ಬರೆಯುತ್ತಿದ್ದ ಪತ್ರಧಾರೆಯು ನಿಲ್ಲುತ್ತಾ ಬಂದಿತು. ತತ್ಫಲವಾಗಿ ಆತನಿಂದ ಬಂದ ಪತ್ರಗಳಿಗೆ ಉತ್ತರವಾಗಿ ಗೋಸ್ವಾಮಿಗಳು ೧೮೯೭ನೇ ನವೆಂಬರ್ ೯ರಲ್ಲಿ ಹೀಗೆ ಬರೆದರು—"ಮಹಾರಾಜ್‌ಜೀ! ....ನಾನು ಇಷ್ಟು ದಿನಗಳೂ ಪತ್ರ ಬರೆಯದೆ ಹೋದರೂ ಸಹ ತಮ್ಮ ಸ್ವರೂಪದಲ್ಲಿರುವುದು ಹೊರತೂ ಬೇರೆ ಯಾವ ಕೆಲಸವನ್ನೂ ಮಾಡಿಲ್ಲ. ತಾನು ತಾವೇ ಆದ ಮೇಲೆ ಮತ್ತೆ ಪತ್ರವನ್ನು ಬರೆಯುವುದಾದರೂ ಯಾರಿಗೇ ?"

ಹೀಗೆ ಗೋಸ್ವಾಮಿಗಳ ಹೃದಯವು ಸ್ವತಂತ್ರ ತ್ಯಾಗಪೂರ್ಣವಾಗುತ್ತಿರುವುದನ್ನು ಕಂಡ ಧನ್ನಾರಾಮನು ಇವರನ್ನು ಈ ಅಪಾರ ಆಂತರಿಕ ತ್ಯಾಗದಿಂದ ವಿಮುಖಮಾಡಿ ಪ್ರವೃತ್ತಿಮಾರ್ಗಕ್ಕೆ ತರಲು ಬಯಸಿ ಬರೆದರೇನೋ; ೧೮೯೭ನೇ ಡಿಸೆಂಬರ್ ೯ರಲ್ಲಿ ಇವರು "ತಮ್ಮ ಕೃಪಾಪತ್ರವು ತಲುಪಿತು; ಅತ್ಯಂತ ಆನಂದವಾಯಿತು. ತಮ್ಮ ಅತ್ಯಂತದಯಾ; ಬಹಳ ಆನಂದ. ನಾನೇ ಏನನ್ನೂ ಮಾಡುವುದಿಲ್ಲ; ಉಚಿತ ಸಮಯದಲ್ಲಿ ಎಲ್ಲ ಕೆಲಸಗಳೂ ತಮಗೆ ತಾವೇ ಆಗಿಹೋಗುತ್ತವೆ. ಒಂದು ದಿನ ಉನ್ಮತ್ತಾವಸ್ಥೆಯೂ, ಪ್ರಾಪಂಚಿಕ ವಿಚಾರಗಳಿಂದ ಪೂರ್ಣ ಅರಿವು ತಪ್ಪುವುದೂ

ತ್ತಾವಾಗಿಯೇ ಆವರಿಸಿ ಬಂದರೆ, ನನ್ನ ಅಪರಾಧವೇನಿದೆ! ಮಾಡದೇ ಕಾರ್ಯಗಳಾಗುತ್ತಿವೆ. ಸೂರ್ಯನೂ ಶೇಷ ನಾಗನೂ ನಮ್ಮ ದಾಸರಾಗಿದ್ದಾರೆ. ಶೇಷ ನಾಗನ ಶಯ್ಯೆಯ ಮೇಲೆ ಪವಡಿಸಿರುವುದೇ ನಮ್ಮ ಕೆಲಸ. ಸೂರ್ಯನನ್ನು ನಾವು ಪ್ರಕಾಶಮಾನ ಮಾಡುತ್ತೇವೆ; ಮತ್ತು ಆಜ್ಞಾಧೀನನಾದ ಇವನು ಸುತ್ತುಹೊಡೆಯುತ್ತಾನೆ. ಎಲ್ಲರ ಸ್ವರೂಪವೇನೋ ಒಂದೇ; ಸ್ವರೂಪದಲ್ಲಿ ಸ್ಥಿತಿಯ ಆವಶ್ಯಕತೆಯಿದೆ. ತುರ್ಯಾವಸ್ಥೆ ಮತ್ತು ಸಮಾಧಿ ಕಾಲದ ಮಹಿಮೆಯು ಎಲ್ಲಿಂದ ಬರಲಿಲ್ಲ?

"ಶ್ರೀರಾಮಚಂದ್ರಜೀ ಮತ್ತೂ ಶ್ರೀಕೃಷ್ಣಚಂದ್ರ ಪರಮಾತ್ಮನೂ ಸ್ವಯಂ ಇಂಥ ಮಹಾತ್ಮರ ಚರಣಗಳಲ್ಲಿ ತಲೆಬಾಗುವರು. ಯಾಜ್ಞವಲ್ಕ್ಯ ಮತ್ತು ಅಷ್ಟಾವಕ್ರಜೀಯವರ ಪದವಿಯು ಜನಕನಿಗಿಂತ ಹೆಚ್ಚು. ಜನಕರಾಜನೂ ಕೃಷ್ಣಪರಮಾತ್ಮನೂ ಬಿ.ಎ. ಶ್ರೇಣಿಯವರು; ಮತ್ತೂ ಯಾಜ್ಞವಲ್ಕ್ಯ ಮತ್ತು ಅಷ್ಟಾವಕ್ರ ಇತ್ಯಾದಿಗಳು ಎಂ. ಎ. ಶ್ರೇಣಿಯವರು. ಮಾನ (ಸತ್ಕಾರ) ವು ಬಿ.ಎ. ಮತ್ತು ಎಂ.ಎ. ಗಳೆರಡಕ್ಕೂ ಒಂದೇ ಸಮಾನವಾದರೂ, ಸತ್ಯವನ್ನು ಬಚ್ಚಿಡುವುದು ಸರಿಯಲ್ಲ. ದೊಡ್ಡವನನ್ನು ದೊಡ್ಡವದೆಂದು ಹೇಳುವುದೇ ಉಚಿತ.

"ದಾಸನ ವಿಷಯದಲ್ಲಿ ಇನ್ನೂ ಸ್ವಲ್ಪಕಾಲ ಯಾವ ಚಿಂತೆಯನ್ನೂ ಭಯವನ್ನೂ ಪಡಬೇಕಾಗಿಲ್ಲ. ಕಲ್ಲುಸಕ್ಕರೆ ಬೆರೆತ ಹಾಲುಕೆನೆಯೇನೋ ಒಂದು ಕಡೆಯಿಂದ ದೊರಕುತ್ತಿದೆ; ಜೋಳದ ರೊಟ್ಟಿಯು ಮತ್ತೊಂದು ಕಡೆಯಿಂದ ಸಿಗುತ್ತಿದೆ. ಜೋಳದ ರೊಟ್ಟಿಯು ಕೆಟ್ಟದ್ದೆಂದು ನಾನು ಹೇಳುವುದಿಲ್ಲ; (ಏಕೆಂದರೆ ಅದೂ ನಾನೇ) ಆದರೆ ಅದು ನನ್ನ ಉದರಕ್ಕೆ ಅನುಕೂಲವಾಗಿಲ್ಲ. ನನ್ನ ಉದರದಲ್ಲೇನೋ ಕಲ್ಲುಸಕ್ಕರೆ–ಹಾಲುಕೆನೆಗಳೇ ಪಚನವಾಗುತ್ತವೆ.

"ರಾಜಾಧಿರಾಜನ ಕೆಲಸ ಕಾರ್ಯಗಳು ಅವನು ಕೈಕಾಲಾಡಿಸದೇ ನಡೆಯುವಾಗ, ಅವನು ಕೂಲಿಯವರೊಂದಿಗೆ ಸೇರಿ ಮಂಕರಿಯನ್ನೇಕೆ ಹೊರುವನು?

"ಬಾಂಡಲೆಯಲ್ಲಿನ ಕುದಿಯುತ್ತಿರುವ ನೀರಿನ ಬೇಗೆಯನ್ನು ತಪ್ಪಿಸಿ

ಕೊಳ್ಳಲು ಹೊರಗೆ ಧುಮಿಕಿಬಿಡುವುದೇ ಮೇಲು ; ಬಾಂಡಲೆಯನ್ನು ಹತ್ತಿ ಕೂತಿರುವುದು ಉಚಿತವಲ್ಲ.

"ಶಂಕರಾಚಾರ್ಯಜೀಯವರು ಗೀತಾ ಭಾಷ್ಯದಲ್ಲಿ ಸ್ಪಷ್ಟವಾಗಿ ಸಿದ್ಧ ಮಾಡಿ ತೋರಿಸಿದ್ದಾರೆ ; ಕಡೆಯಲ್ಲಿ ಕರ್ಮದ ನಿತಾಂತ ತ್ಯಾಗವಾಗಬೇಕು ; ಆದರೂ ಅವರು ಆ ದಿನಗಳಲ್ಲಿ ಅಲ್ಪ ಸ್ವಲ್ಪ ಕರ್ಮ ಮಾಡುತ್ತಿದ್ದರು. ದಾಸ ನಿಗೂ ಅಂತಹ ದಿನಗಳು ಬರುವುದಕ್ಕೆ ಸಮಯವಿದೆ"

ಇದೇ ಧ್ವನಿಯಲ್ಲೇ-ಸರಣಿಯಲ್ಲೇ ಮುಂದೆ ೧೮೯೭ನೇ ಡಿಸೆಂಬರ್ ೧೩ ರಲ್ಲಿ ಹೀಗೆ ಬರೆದರು.

"ತಮ್ಮ ದಯೆಯಿಂದ ಆನಂದ ಸ್ವರೂಪನೊಂದಿಗೆ ಸಂಗವೂ ಗಾಢ ವಾಗುತ್ತಾ ಇದೆ ! ವಾಹ್ ! ಧನ್ಯ ಇತ್ಯಲಮ್, ವಿಶೇಷ ಆನಂದ !

"ಮೊದಲು ಕಾರ್ಡ್ ಬರೆಯುತ್ತಿದ್ದೆ ; ಅಷ್ಟರಲ್ಲೇ ತಮ್ಮ ಮೂರ' ಕಾರ್ಡುಗಳು ತಲುಪಿದವು. ಬಹಳ ಆನಂದವಾಯಿತು. ತಾವು 'ನಿತಾಂತ ವೆಂದು ಬರೆದಿರುವುದು ಬಹು ಉಚಿತ ಸರಿ. ತಮ್ಮ ಇಚ್ಛೆಯಿದ್ದಂತೆಯೇ ಆಗು ವುದು. ಮಾಡುವವರು ಮಾಡಿಸುವವರು ಎಲ್ಲಾ ತಾವೇ. ಇಲ್ಲಿ ಬರುವ ವೈರಾಗ್ಯದ ತರಂಗಗಳು ತಾವು ಕಳುಹಿಸಿದವೇ; ಹೀಗಿರುವಲ್ಲಿ ತಾವೇ ಅದನ್ನು ತಡೆಯುವುದೇ ? ಅದ್ಭುತ ಲೀಲೆಯೇ ಸರಿ ! ವಾಹ್ ! ಎಂತಹ ಆಟ ! ಬಲಿಹಾರ್ !

"ಎಲ್ಲರಿಗೂ ಸನ್ಯಾಸವು ಸರಿಯಲ್ಲ ; ಪ್ರಪಂಚದಲ್ಲಿ ಸನ್ಯಾಸಿಯಾಗದಿರು ವುದೂ ಉಚಿತವಲ್ಲ. ಜಗತ್ತಿನಲ್ಲಿ ಸಮಸ್ತ ವರ್ಣದ ಸಾಮಗ್ರಿಯೂ ಮಾಡಲ್ಪ ಟ್ಟಿದೆ. ಯಾರನ್ನೋ ನಗಿಸುವುದು ; ಯಾರನ್ನೋ ಅಳಿಸುವುದು ; ತಾವು ಬೇರೆ ನಿಂತು ತಮಾಷೆ ನೋಡುವುದು, ಇದು ನಮ್ಮ ಕೆಲಸ-ಕೆಲವು ಹಣ್ಣು ಗಳು ಪಕ್ವವಾಗಿಯೂ ವೃಕ್ಷಕ್ಕೆ ಅಂಟಿಕೊಂಡಿರುತ್ತವೆ ; ಆದರೆ ಕೆಲವು ಪಕ್ವ ವಾಗಿ ಕೆಳಗುದುರುತ್ತವೆ. ಇತಿ—ವಿಶೇಷಾನಂದ"

ಮುಂದೆ ಗೋಸ್ವಾಮಿಗಳ ಅಭೇದತೆಯು ಗುರುವಿನಲ್ಲಿ ಎಷ್ಟು ಅಧಿಕ ವಾಗುತ್ತಾ ಬಂದಿತೆಂದರೆ ಪತ್ರದಲ್ಲಿ ತಮ್ಮ ಹೆಸರನ್ನು ಬರೆಯುವುದನ್ನು ಕೂಡ ನಿಲ್ಲಿಸಿಬಿಟ್ಟರು. ಮುಂದೆ ೧೮೯೭ನೇ ಡಿಸೆಂಬರ್ ೭ರಲ್ಲಿ ಹೀಗೆ ಬರೆದರು.

"ರಾತ್ರಿ ಎಂಟು ಗಂಟೆ ಸಮಯ. ವ್ಯಾಯಾಮ ಮುಗಿಸಿದ್ದೇನೆ. ಒಳಗೆ ನಿತಾಂತ ಶುದ್ಧವಾಗಿದೆ ಮತ್ತು ಅತ್ಯಂತಾನಂದದ ಸ್ಥಿತಿ. ಈ ಸಮಯ ದಲ್ಲಿ ಅತ್ಯಂತ ಪ್ರೇಮಪೂರ್ಣವಾಗಿ ತಮ್ಮ ಸ್ಮರಣೆಯಾಯಿತು. ಯಾರ ಕೃಪೆಯಿಂದ ಇಂಥ ಆನಂದ ಸಾಗರದಲ್ಲಿ ಸ್ನಾನಮಾಡುತ್ತಿದ್ದೇನೋ ಅಂಥ ತಾವು ಧನ್ಯರು. ಸಂಪೂರ್ಣ ಅಭೇದತೆಯ, ಏಕತೆಯ ಈ ಸ್ಥಿತಿಯು ನಿಮಗೇ ಅರ್ಪಣೆ. ಈ ತಮ್ಮಲ್ಲಿ ಒಂದು ಕೂದಲಿನೆಳೆಯಷ್ಟೂ ಯಾವ ವಿಚಾರದಲ್ಲೂ ಕಿಂಚಿತ್ ಸಹಾ ಅಂತರವಿಲ್ಲ.

ಮ್ಯ ತೋ ಶುದಮ್, ತೋ ಮ್ಯ ಶುದೀ ।
ಮ್ಯ ತನ್ ಶುದಮ್, ತೋ ಜಾಂ ಶುದೀ ॥
ತಾಕಸ್ ನ ಗೋಯದ್ ಬಾದ್ ಅಜೀಂ ।
ಮ್ಯ ದೀಗರಮ್ ತೋ ದೀಗರೀ ॥

ನಾನು ನೀನಾದೆ ; ನೀನು ನಾನಾದೆ ; ನಾದೇಹ-ನೀ ಪ್ರಾಣ ;
ನಾನು ಬೇರೆ, ನೀನು ಬೇರೆ ಎಂದಾರೂ ಹೇಳಲಾರರು.

ಈ ಬಗೆಯಾದ ವೇದಾಂತ ವಿಚಾರವು ಗೋಸ್ವಾಮಿಗಳ ಚಿತ್ತವನ್ನು ಪ್ರಪುಲ್ಲಿತ ಮಾಡುತ್ತಿತ್ತು. ಈ ಆನಂದ ಪ್ರವಾಹದಲ್ಲಿ ಮುಳುಗಿ ಚೆನ್ನಾಗಿ ಈಜಾಡುತ್ತಾ ಇರುವಲ್ಲಿ ಈ ಆನಂದವನ್ನು ಇತರರಿಗೂ ಹಂಚುವ ಉದ್ದೇಶ ದಿಂದ ಒಂದು ಸಭೆಯನ್ನು ಸ್ಥಾಪಿಸಬೇಕೆಂಬ ಯೋಚನೆಯು ಮೂಡಿತು. ಮುಂದೆ ೧೮೯೮ನೇ ಫೆಬ್ರುವರಿ ೫ರಲ್ಲಿ ಗುರುವಿಗೆ ಹೀಗೆ ಬರೆದರು. "ಇಲ್ಲಿ ಅದ್ವೈತಾಮೃತವರ್ಷಿಣೀ ಸಭೆಯನ್ನು ಸ್ಥಾಪಿಸಿದ್ದಾಗಿದೆ. ಇದರಲ್ಲಿ ಹೆಚ್ಚಾಗಿ ಸಾಧುಗಳು, ಮಹಾತ್ಮರೇ ಸೇರಿದ್ದಾರೆ. ಅವರೆಲ್ಲರೂ ಸೇರುವುದು ನನ್ನ ಮನೆಯಲ್ಲೇ ; ಪ್ರತ್ಯೇಕ ಗುರುವಾರವೂ ಎಲ್ಲರೂ ಸೇರುತ್ತಾರೆ. ಆಗ ಉಪ ದೇಶ ಆದಿಗಳಾಗುತ್ತವೆ. ಆದರೆ ಎಲ್ಲ ವೇದಾಂತದ ವಿಚಾರವಾಗಿಯೇ".

ಜನರಲ್ಲಿ ಗದ್ದಲವೆಬ್ಬಿಸಿ, ಇತರರನ್ನು ತುಚ್ಛೀಕರಿಸಿ, ಅವರನ್ನು ತಿದ್ದಲು ಒದ್ದಾಡುವುದು ಈ ಸಭೆಯ ಉದ್ದೇಶವಾಗಿರಲಿಲ್ಲ. ತಮ್ಮ ಹೃದಯ ಮನಸ್ಸುಗಳನ್ನು ಸದಾ ವೇದಾಂತ ವಿಚಾರದಲ್ಲಿ ಮಗ್ನಮಾಡಿಟ್ಟು, ಶ್ರವಣ, ಮನನ, ನಿಧಿಧ್ಯಾಸನಗಳಿಂದ ನಿಜಾನಂದವನ್ನು ಪಡೆಯುವುದೇ ಗುರಿಯಾಗಿ ದ್ದಿತು. ಹೀಗೆ ಇದು ಕೇವಲ ಸಾಧಕರ ಮಂಡಲಿಯಾಗಿದ್ದುದರಿಂದ, ಇದರ

ಸದಸ್ಯರೆಲ್ಲರೂ ವಾರಕ್ಕೊಮ್ಮೆ ಸೇರಿ, ತಾವು ಸತ್ಸಂಗದಲ್ಲಿ ಕಲಿತು ಕಲಿತ ವಿಚಾರಗಳನ್ನು ಮಿಕ್ಕ ಆರು ದಿನಗಳೂ ಏಕಾಂತದಲ್ಲಿ ನಿಂತು ಸಾಧಿಸುತ್ತಾ ಮತ್ತೆ ಮುಂದಿನವಾರ ಎಲ್ಲರೂ ಸೇರಿದಂದು ತಮ್ಮ ತಮ್ಮ ಅನುಭವಗಳನ್ನು ವಿವರಿಸುವುದೂ ಹೀಗೆಂದು ನಿಯುಕ್ತವಾಗಿದ್ದಿತು.

ಮುಂದೆ ೧೮೯೮ರ ಫೆಬ್ರುವರಿ ೧೫ರಲ್ಲಿ ಗೋಸ್ವಾಮಿಗಳು ತಮ್ಮ ಗುರುವಿಗೆ ಹೀಗೆಂದು ಬರೆದರು. "ಏಕಾಂತ ಸೇವನೆಯಲ್ಲೂ, ಅಂತರ್ಮುಖಿಯಾಗಿರುವುದರಲ್ಲೂ ಇರುವ ಆನಂದವು ಮತ್ತೆಲ್ಲೂ ಇಲ್ಲ. ಕೋಟ್ಯಾಂತರ ಅಶ್ವಮೇಧ ಯಜ್ಞಗಳನ್ನು ಮಾಡಿದ್ದರೇ ಪ್ರತಿಕ್ಷಣವೂ ಸ್ವರೂಪದಲ್ಲಿ ನಿಷ್ಟನಾಗಿರಲಾಗುವುದು".

ಬರಬರುತ್ತ ಈ ಬಗೆಯ ವೇದಾಂತ ವಿಚಾರ ಮತ್ತು ಏಕಾಂತವಾಸದ ಪ್ರಭಾವವು ಗೋಸ್ವಾಮಿಗಳ ಚಿತ್ತವನ್ನು ಎಷ್ಟು ನಿಶ್ಚಲಮಾಡಿತ್ತೆಂದರೆ, ಹೊರಗಡೆಯ ಎಂಥ ಪ್ರತಿಪ್ರವಾಹಗಳಿಂದಲೂ ಸಹ ಅಲಗುತ್ತಿರಲಿಲ್ಲ. ೧೮೯೮ನೇ ಮಾರ್ಚಿ ೮ರಲ್ಲಿ ಹೀಗೆ ಬರೆದರು.

"ಮಿಡಲ್ ಸ್ಕೂಲ್ ಪರೀಕ್ಷೆಯ ಫಲಿತಾಂಶವು ನೆನ್ನೆ ಹೊರಬಿತ್ತು. ....ನಮ್ಮ ಮನೆಯ ಮುಂದೆ (ಕಾಮನ ಹಬ್ಬದ) ಹೋಳಿಯ ಕಾರಣ ವಿಪರೀತ ಗದ್ದಲವಾಗುತ್ತಿದೆ. ಆದರೆ ತಮ್ಮ ದಯೆಯಿಂದ ಚಿತ್ತರೂಪೀ ಗೃಹದ ಒಳಗಡೆ ಯಾವ ಶಬ್ದ ಸದ್ದುಗಳೂ ಇಲ್ಲ. ನಾಲ್ಕು ಕಡೆಗಳೂ ಭೂತ ಪ್ರೇತಗಳ ಸಂತೆಯೇ ನೆರೆದು ಅವಾಂತರ ಮಾಡುತ್ತಿದ್ದರೂ ಶಿವನು ಹೇಗೆ ಆನಂದಸಮಾಧಿಯಲ್ಲಿ ನಿರ್ವಿಘ್ನಮಗ್ನನಾಗಿರುತ್ತಾನೋ, ಹಾಗೆಯೇ ಜಗತ್ತಿನ ಜೀವರು ಅಜ್ಞಾನ ರೂಪೀ ಕಪ್ಪು ಕೆಂಪುಗಳನ್ನು ಮುಖಕ್ಕೆ ತಿಕ್ಕಿಕೊಂಡು, ತಮ್ಮ ನಿಜಸ್ವರೂಪವನ್ನು ಬಚ್ಚಿಟ್ಟುಕೊಂಡು ಸದಾ ಗದ್ದಲಮಾಡುತ್ತಿದ್ದರೂ ಶಿವಸ್ವರೂಪನಾದ ತನ್ನಲ್ಲಿ ತಾನಿರುವುದರಿಂದ ಕ್ಷೀರಸಾಗರ ನಿವಾಸದ ಸುಖವಿದೆ............"

೧೮೯೮ನೇ ಏಪ್ರಿಲ್‌ನಲ್ಲಿ ಗೋಸ್ವಾಮಿಗಳು ಕಟಾಸ್‌ರಾಜ್ ತೀರ್ಥಕ್ಕೆ ಯಾತ್ರೆ ಹೊರಟರು. ಅಲ್ಲಿ ಅಂದು ದೊಡ್ಡ ಮೇಳ ನಡೆಯುತ್ತಿತ್ತು. ಇದರಲ್ಲಿ ಬಹಳ ಮಹಾತ್ಮರೂ, ವಿದ್ವಾಂಸ ಪುರುಷರೂ ಸೇರಿದ್ದರು. ಅಲ್ಲದೆ ಕೇವಲ ಇಂಥವರ ದರ್ಶನಾರ್ಥವಾಗಿಯೇ, ಇವರ ಉಪದೇಶಗಳನ್ನು ಕೇಳುವ ಸಲು

ಪಾಗಿಯೇ ಬಹುಮಂದಿ ಜಿಜ್ಞಾಸುಗಳು ಇಲ್ಲಿ ಬಂದು ಕೂಡುತ್ತಿದ್ದರು. ಧನ್ನಾ ರಾಮ್‌ಜೀಯವರೂ ಸಹ ಗುಜರ್ರವಾಲಾದಿಂದ ಈ ಯಾತ್ರೆಗೆ ಬಂದಿದ್ದನು. ಇಲ್ಲಿನ ಉತ್ತಮ ಹವಾ, ಮಹಾತ್ಮರ ದರ್ಶನ, ತನ್ನ ಶಿಷ್ಯನ ಉನ್ನತಿಗಳನ್ನು ಕಂಡು ಆನಂದಿತನಾಗಿ ಆತನು ಸಮೀಪದಲ್ಲೇ ಇದ್ದ ಪಿಂಡ್‌ದಾದರ್ಖಾ ಎಂಬ ಗ್ರಾಮದಲ್ಲೇ ನಿಂತುಬಿಟ್ಟನು. ಅಲ್ಲಿಂದ ಹಿಂತಿರುಗಿದಮೇಲೆ ಗೋಸ್ವಾಮಿಗಳ ಆತ್ಮಾಭ್ಯಾಸವು ಇನ್ನೂ ಪ್ರಬಲವಾಯಿತು. ೧೮೯೮ನೇ ಮೇ ೨೫ರಲ್ಲಿ ಗುರುವಿಗೆ "ತಮ್ಮ ಕೃಪಾಪತ್ರವು ಸಿಕ್ಕಿತು. ತಮ್ಮ ದಯೆಯಿಂದ ಚಿತ್ತವೇನೋ ಪ್ರತಿದಿವಸವೂ ಅಚಲವಾಗುತ್ತಾ ಹೋಗುತ್ತಿದೆ. ಅದರಲ್ಲಿ ರವೆಯಷ್ಟೂ ಅಂತರವಿರುವುದಿಲ್ಲ. ನನ್ನ ಶರೀರದ ವ್ಯವಹಾರದಿಂದ ಚಿತ್ತ ವೃತ್ತಿಯ ಅಂದಾಜು ಹಾಕುವುದು ಸರಿಯಲ್ಲ. ಹಿಂದಿನ ದಿನಗಳಲ್ಲೇನೋ ಕೆಲಸವು ಹೆಚ್ಚಾಗಿದ್ದಿತು".

ಇದೇ ದಿನಗಳಲ್ಲೇ ರಾಮರು ವಿದ್ಯಾರ್ಥಿಗಳ ಉಪಯೋಗಕ್ಕಾಗಿ "ಗಣಿತ ಶಾಸ್ತ್ರದಲ್ಲಿ ಉನ್ನತಿ ಪಡೆಯುವುದು ಹೇಗೆ?" ಎಂಬ ಲೇಖನವನ್ನು ಇಂಗ್ಲಿಷ್‌ನಲ್ಲಿ ಬರೆದು ಅದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಇದೇ ಇಂಗ್ಲಿಷ್ ಭಾಷೆಯಲ್ಲಿ ಇವರ ಪ್ರಥಮ ಲೇಖನವೆಂದು ತಿಳಿದು ಬರುತ್ತದೆ. ಈ ಪುಟ್ಟ ಪುಸ್ತಕವು ಗೋಸ್ವಾಮಿಗಳ ಹೆಸರನ್ನು ಬಹಳ ಪ್ರಸಿದ್ಧಗೊಳಿಸಿತು. ಮುಂದೆ ಹೆಚ್ಚಾಗಿ ಉರ್ದು ಭಾಷೆಯಲ್ಲೇ ಬರೆಯುತ್ತಿದ್ದರು. ಇದರ ವಿಚಾರವಾಗಿ ೧೮೯೮ರ ಜೂನ್ ೧ರಲ್ಲಿ "...........ಪುಸ್ತಕ, ವಿಜ್ಞಾಪನ ಪತ್ರಿಕೆ ಸೇರಿ ನೂರೈವತ್ತು ರೂಪಾಯಿ ಖರ್ಚಾಯಿತು. ಇದರ ನೂರು ಪ್ರತಿಗಳನ್ನು ಮುಫತ್ ಹಂಚಿದೆ. ಭಾರತದೇಶದ ಇಂಗ್ಲಿಷ್ ಗಣಿತ ಶಾಸ್ತ್ರಜ್ಞರು ಇದರ ಉಪಮಾನ ವಾಗಿ ಉತ್ತಮ ಸಮ್ಮತಿಗಳನ್ನು ಕೊಟ್ಟಿದ್ದಾರೆ" ಎಂದು ಬರೆದರು.

ಹಿಂದೆ ಕೃಷ್ಣ ಭಕ್ತಿಯ ಕಾಲದಲ್ಲಿ ಅವಕಾಶ ಸಿಕ್ಕಿದಂತೆಲ್ಲಾ ಗೋಸ್ವಾಮಿ ಗಳು ಮಥುರಾ-ಬೃಂದಾವನಗಳಿಗೆ ಹೋಗಿ ತಮ್ಮ ರಜದ ದಿನಗಳನ್ನೆಲ್ಲಾ 'ರಾಸಲೀಲೆ' ಆದಿಗಳನ್ನು ನೋಡುವುದರಲ್ಲಿ ಮೊದಲಾಗಿ ಕಳೆಯು ತ್ತಿದ್ದವರು, ನಿಜಾನಂದದ ಉನ್ಮಾದವು ಪ್ರಾರಂಭವಾದನಂತರ ಬಿಡುವಾ ದಂತೆಲ್ಲಾ ಋಷಿಕೇಶ, ಹರಿದ್ವಾರಗಳಿಗೆ ಹೊರಟು ಹೋಗುವರು. ಮುಂದೆ ೧೮೯೮ನೇ ಆಗಸ್ಟ್ ೧೪ರಲ್ಲಿ ಹರಿದ್ವಾರದಿಂದ ತಮ್ಮ ಆತ್ಮಾಭ್ಯಾಸದ ಬಗ್ಗೆ

ಹೀಗೆ ಬರೆದರು. "ಇಂದು ಠಾಕುರ್ ದಾಸರನ್ನು ಲಾಹೋರ್‌ಗೆ ಕಳುಹಿಸಿದ್ದಾಯಿತು. ಇಷ್ಟು ದಿನಗಳೂ ಇಲ್ಲಿನ ದರ್ಶನೀಯ ಸ್ಥಾನಗಳನ್ನು ನೋಡಿದೆ; ಸಂತರ ದರ್ಶನಮಾಡಿದೆ. ಈಗ ತೃಪ್ತನಾಗಿ ತನ್ನ ಘಟದ್ವಾರವನ್ನು ಮುಚ್ಚಿ ತನ್ನ ಮನೆಯಲ್ಲಿ ನೆಲೆಯಾಗಲು ಇಚ್ಛೆಯಾಗಿದೆ. ಜಮ್ಮೂ ಮಹಾರಾಜರ ಹವೇಲಿಯಲ್ಲಿ ತಂಗಿದ್ದೇನೆ. ನಾನಿರುವ ಮನೆ ಹರಿದ್ವಾರದಲ್ಲೆಲ್ಲಾ ಉತ್ತಮವಾಗಿದೆ".

ಹರಿದ್ವಾರದಿಂದ ಮುಂದೆ ಹೊರಟು ಗೋಸ್ವಾಮಿಗಳು ಋಷೀಕೇಶವನ್ನು ತಲುಪಿದರು. ಹತ್ತಿರಿದ್ದ ಹಣವನ್ನೆಲ್ಲಾ ಅಲ್ಲಿನ ಮಹಾತ್ಮರ ಸೇವೆಯಲ್ಲಿ ವಿನಿಯೋಗಿಸಿಬಿಟ್ಟರು. ತಾವು ಏಕವಸ್ತ್ರಧಾರಿಗಳಾಗಿ ಬೆತ್ತಲೆ ಬೆನ್ನಿನಿಂದ ಕೂಡಿ, ಹುಚ್ಚರಂತೆ ಒಂಟಿಯಾಗಿ ಕೆಲವು ಉಪನಿಷತ್ತುಗಳನ್ನು ಕೈಲಿಹಿಡಿದು ವನಾಭಿಮುಖನಾಗಿ ಹೊರಟರು. ಋಷೀಕೇಶದಿಂದ ಸುಮಾರು ಎಂಟು ಮೈಲಿ ದೂರದಲ್ಲಿರುವ ವನದಲ್ಲಿ ಬ್ರಹ್ಮಪುರಿ ಮಂದಿರವೆಂಬುದೊಂದುಂಟು. ಈ ಮಂದಿರದ ಸಮೀಪದಲ್ಲಿ ಪ್ರವಹಿಸುತ್ತಿರುವ ಗಂಗಾ ತಡಿಯಲ್ಲಿ ಯೋಗಾಸನವನ್ನು ಹಾಕಿ ಕುಳಿತುಬಿಟ್ಟರು. ಅನ್ನಾಹಾರಗಳ ಚಿಂತೆಯು ಅಣುವಷ್ಟೂ ಉಳಿದಿರಲಿಲ್ಲ; ಆ ವಿವರಗಳನ್ನೆಲ್ಲಾ ಸಂಪೂರ್ಣ ಈಶ್ವರನಲ್ಲಿ ಬಿಟ್ಟು ಬಿಟ್ಟು ದೃಢಸಂಕಲ್ಪಮಾಡಿ ಕುಳಿತುಬಿಟ್ಟರು.

ಬೈಠೆ ಹೈಂ ತೇರೇ ದರ್ ಪೈ, ತೋ ಕುಛ್ ಕರ್‌ಕೇ ಉಠೇಂಗೇ ।
ಯಾ ವಸ್ಲ್‌ಹೀ ಹೋಜಾಯಗಾ, ಯಾ ಮರ್‌ಕೇ ಉಠೇಂಗೇ॥

ಸಾಕು! ರಾಜಸಿಂಹಾಸನ –ಇಲ್ಲ– ಚಿತಾ! ಮಾತಾಪಿತಾ! ನಿಮ್ಮ ಮಗನು ಇಂದು ಹಿಂದಿರುಗುವುದಿಲ್ಲ. ವಿದ್ಯಾರ್ಥಿಗಳೇ! ನಿಮ್ಮ ವಿದ್ಯಾಗುರುವು ಇಂದು ಹಿಂದಿರುಗಿ ಬರುವುದಿಲ್ಲ! ಗೃಹಸ್ಥರೇ! ನಿಮ್ಮ ಸಂಬಂಧವು ಇಷ್ಟು ದೂರ ಬರುವುದಿಲ್ಲ. ಸಕಲ ಸಂಬಂಧರಹಿತನಾಗಬೇಕು; ಇಲ್ಲವೇ ನಿಮ್ಮೆಲ್ಲರ ಆಶೆಗಳೂ ಮಣ್ಣುಗೂಡುವುವು. ಆನಂದಘನ ಗಂಗಾ ತರಂಗಗಳಲ್ಲಿ ತುರೀಯಾತೀತನಾಗಿ ನಿಮಗ್ನನಾಗಬೇಕು; ಇಲ್ಲವೇ ಈ ದೇಹವು ಗಂಗೆಯ ತರಂಗಗಳಲ್ಲಿ ಸಮರ್ಪಣೆಯಾಗಿ ಹೋಗಬೇಕು. ಸತ್ತಮೇಲೇನೋ ಎಲ್ಲರ ಮೂಳೆಗಳೂ ಗಂಗೆಯಲ್ಲಿ ಬಂದು ಬೀಳುತ್ತವೆ ಆದರೆ ಸಾಕ್ಷಾತ್ಕಾರವಾಗದೇ ಹೋದಲ್ಲಿ,

ಶರೀರ ಭಾವದ ಗಂಧವು ನಿಂತಿದ್ದಲ್ಲಿ, ಈ ರಾಮನ ದೇಹದ ಮೂಳೆ ಮಾಂಸಗಳು ಸಜೀವವಾಗಿಯೇ ಮೀನುಗಳಿಗೆ ಆಹಾರವಾಗಿ ಅರ್ಪಿಸಲ್ಪಡುವುವು.

ರಾಮನ ಚರಣದಲ್ಲಿ ಗಂಗೆಯು ಹರಿಯದಿದ್ದರೆ ರಾಮನ ಶರೀರವು ಗಂಗೆಯಲ್ಲಿ ಖಂಡಿತ ಹರಿಯುವುದು.

ಕರೆರಥಾಂಗ್, ಶಯನೆ ಭುಜಂಗ್, ಯಾನೆ ವಿಹಂಗಂ,
ಚರಣೇಂಬು ಗಾಂಗಮ್'

ಕಣ್ಣುಗಳಿಂದ ನೀರು ಹರಿಯುತ್ತಿದೆ, ಶೀತಲದೀರ್ಘ ನಿಶ್ವಾಸೋಚ್ಛ್ವಾಸಗಳು ತೀಕ್ಷ್ಣ ವಾಯುವಿನಂತೆ ಹರಿದಾಡುತ್ತಿವೆ. ಒಳಗೂ ಮಳೆಗರೆಯುತ್ತಿದೆ ಹೊರಗೂ ಮಳೆಯು ಜೋರಾಗಿ ಬೀಳುತ್ತಿದೆ. ರುದನ ಕರೆಗಳಿಂದ ಕೂಡಿದ ರಾಮನ ಅಂತಃ ಹೃದಯದಿಂದ ಹೀಗೆ ಧ್ವನಿಯು ಕೇಳಿ ಬರುತ್ತಿದೆ.

ಗಂಗಾ ತೇಥೋ ಸಬ್ ಬಲಹಾರೀ ಜಾವೂಂ;
ಹಾಡ್ ಚಾಮ್ ಸಬ್ ವಾರ್‌ಕೇ ಫೇಕೂಂ
ಯಹೀ ಫೂಲ್ ಬತಾಶೇ ಲಾವೂಂ ||ಗಂಗಾ||
ಮನ ತೇರೆ ಬದರನ್ ಕೋ ದೇದೂಂ
ಬುದ್ಧಿ ಧಾರಾ ಮೆಂ ಬಹಾವೂಂ ||ಗಂಗಾ||
ಚಿತ್ತ ತೇರೀ ಮುಖಲೀ ಚಬ್ ಜಾವೇಂ
ಆಹಂ ಗಿರಿಗುಹಾ ಮೆಂ ದಬಾವೂಂ ||ಗಂಗಾ||
ಪಾಪ್ ಪುಣ್ಯ ಸಭೀ ಸುಲಗಾಕರ್
ಯಹ್ ತೇರೀ ಜ್ಯೋತೀ ಜಗಾವೂಂ ||ಗಂಗಾ||
ತುಝ್ ಮೇಂ ಪಡೂ ತೊ ತೂರ್ಬ ಜಾವೂಂ
ಐಸೀ ಡುಬ್‌ಕೀ ಲಗಾವೂಂ ||ಗಂಗಾ||
ಪಂಡೆ ಜಲ್ ಥಲ ಪವನ ದಶೋದಿಕ್
ಅಪನೇ ರೂಪ್ ಬನಾವೂಂ ||ಗಂಗಾ||
ರಮಣ ಕರೂಂ ಸತ್ ಧಾರಾ ಮಾಹೀಂ
ನಹೀಂ ತೋ ನಾಮ್ ನ ರಾಮ್ ಧರಾವೂಂ ||ಗಂಗಾ||

ಗಂಗಾ ನಾನಿನ್ನಲ್ಲಿ ಸಕಲವನ್ನೂ ಸಮರ್ಪಿಸುವೆನು. ಮೂಳೆ ಚರ್ಮಗಳನ್ನೆಲ್ಲಾ ಅರ್ಪಿಸಿ ಎಸೆಯುವೆ: ಇವೇ ಪುಷ್ಪ ಬತಾಶೆಗಳನ್ನು ತರುವೆ;

ಮನನೇ ! ನಿನ್ನನ್ನು ಕೋತಿಗಳಿಗೆ ಕೊಟ್ಟು ಬಿಡುವೆ ; ಬುದ್ಧಿಯೇ ! ನಿನ್ನನ್ನು ಪ್ರವಾಹದಲ್ಲಿ ಕೊಚ್ಚಿಬಿಡುವೆ; ಚಿತ್ತವೇ ! ನಿನ್ನನ್ನು ಮೀನುಗಳು ಅಗಿದು ತಿನ್ನಲಿ ; 'ಅದಂ'ನ್ನು ಗಿರಿಗುಹೆಗಳಲ್ಲಿ ತುಳಿಯುವೆನು ; ಪಾಪಪುಣ್ಯಗಳನ್ನೆಲ್ಲಾ ಸುಟ್ಟುಹಾಕುವೆ. ಗಂಗಾ! ನಿನ್ನ ಜ್ಯೋತಿಯನ್ನು ಹಚ್ಚುವೆ. ನಿನ್ನಲ್ಲಿ ಧುಮುಕುತ್ತಲೇ ನೀನೇ ಆಗಿಬಿಡುವಂಥ ಮುಳುಗುಹಾಕುವೆ ಜಲ, ಥಲ, ಪವನವಾದಿಯಾಗಿ ಸಮಸ್ತ ದಿಕ್ಕುಗಳನ್ನೂ ನನ್ನ ರೂಪವಾಗೇ ಮಾಡುವೆ ; ಗಂಗಾ ! ಸದ್ಧಾರೆಯಲ್ಲೇ ರಮಿಸುವೆ ! ಇಲ್ಲದಿದ್ದಲ್ಲಿ ರಾಮನೆಂಬ ನಾಮವನ್ನು ಧರಿಸಿರುವುದಿಲ್ಲ.

ಹೀಗೆ ಅಪಾರ ಚಿತ್ತಸ್ಥೈರ್ಯದಿಂದ ದೃಢಸಂಕಲ್ಪಮಾಡಿ ಕುಳಿತು ಬಿಟ್ಟವರು, ಆತ್ಮಸಾಕ್ಷಾತ್ಕಾರವಾದ ನಂತರವೇ ಕಣ್ತೆರೆದು ನೋಡಿದುದು. ಅಂದು ಅವರಿಗೆ ದತ್ತವಾಗಿದ್ದ ದಿವ್ಯದೃಷ್ಟಿ ದಿವ್ಯಾನಂದದ ಅಪೂರ್ವ ಅನುಭವ ತರಂಗಗಳ ಚಿತ್ರವು ಪುಣ್ಯವಶಾತ್ ವಿಫಲವಾಗಿದೆ. ಅದರಿಂದ ಕೆಲವು ನುಡಿಗಳನ್ನು ಮಾತ್ರ ಇಲ್ಲಿ ಕೊಡಲಾಗಿದೆ. "ಅಜ್ಞಾನ ಸೇನೆಯು ಎಲ್ಲಿ ಅಂತರ್ಧಾನವಾಯಿತು ? ಅವಿದ್ಯಾಂಧಕಾರದ ಪತ್ತೆಯೇ ಇಲ್ಲ. ಹಸಿರು ಹಚ್ಚನೆಯ ಈ ಪರ್ವತಗಳು ಈ ರೀತಿ ಪರಿಪೂರ್ಣಾನಂದ ಪ್ರಕಾಶರಾಗಿರುವ ಸಂಕೇತವೇನು ? ಇವು ಯಾವ ಶುಭ ಸಂದೇಶವನ್ನು ತಂದಿವೆ ? 'ರಾಮ'ನ ಮನೋಕಾಮನಾ ಇಲ್ಲಿ ಪೂರ್ಣವಾಗುವುದು."

"ಸಂಧ್ಯಾ ಸನ್ನಿಹಿತವಾಗಿದೆ. ರಾಮನು ಪುಟ್ಟ ಪರ್ವತದಮೇಲೆ ಕುಳಿತಿದ್ದಾನೆ. ವಿಚಿತ್ರದೆಸೆ, ಉದಾಸೀನತೆಯಲ್ಲ, ಶೋಕವಲ್ಲ, ದುಃಖವಲ್ಲ. ಇದು ಸಾಂಸಾರಿಕ ಪುರುಷರ ಹರ್ಷವೂ ಅಲ್ಲ ; ನಿದ್ರಾವಸ್ಥೆಯಲ್ಲ ; ಜಾಗ್ರತಾವಸ್ಥೆಯಲ್ಲ ; ಉನ್ಮತ್ತಾವಸ್ಥೆಯಿರಬಹುದೇ ! ಇದು ಸಾಂಸಾರಿಕ ಉನ್ಮಾದವೂ ಅಲ್ಲ. ಎಂಥ ರಸಮಯ ಸ್ಥಿತಿ...........ದೂರದ ವೃಕ್ಷಗಳಿಂದ ಘಡಿಯಾರ ಶಂಖಗಳ ಧ್ವನಿಯು ಕೇಳಿಬರುತ್ತಿದೆ ; ಯಾವುದಾದರೂ ಮಂದಿರವಿದೆಯೋ ! ಆಹಾ ! ಆರತಿಯಾಗುತ್ತಿದೆ ! ಅದೋ ಅಲ್ಲಿ, ಎದುರಿಗಿರುವ ಪರ್ವತದ ಶಿಖರದಿಂದ ಎರಡು ಮೂರಡಿ ಮೇಲೆ ತ್ರಯೋದಶೀ ಚಂದ್ರನೂ ಸಹ ತನ್ನ ಶೀತಲ ಪ್ರಕಾಶಮಾನ ಮುಖವನ್ನು ತೋರುತ್ತಾ ಬರುತ್ತಿದಾನೆ. ಇವನೂ ಆರತಿಯಲ್ಲಿ ಸೇರಲು ಬರುತ್ತಿರುವನೇ? ಸೇರುವುದೇನು ; ಇವನು ತನ್ನ ಪ್ರಕಾಶ

ಮಾನ ವದನಜ್ಯೋತಿಯನ್ನೇ ಹಿಡಿದು ತಾನೇ ಸದಾಶಿವನಿಗೆ ಅರ್ಪಿಸುತ್ತಿದ್ದಾನೆ! ಸೃಷ್ಟಿಯೇ ಆರತಿಯಲ್ಲಿ ಸೇರುತ್ತಿದೆ! ಓಹೋ, ಸಮಸ್ತ ಸೃಷ್ಟಿಯೂ ಆರತಿಯಲ್ಲಿ ಸೇರಿಬಿಟ್ಟಿತು. ನಾಲ್ಕು ಕಡೆಗಳಿಂದಲೂ ಎಂಥ ಧ್ವನಿಯು ಕೇಳಿ ಬರುತ್ತಿದೆ !"

* * *

"ಎಲೈ ವಾಗಿಂದ್ರಿಯವೇ ! ಆ ಆನಂದವನ್ನು ವರ್ಣಿಸುವ ಶಕ್ತಿಯು ನಿನ್ನಲ್ಲಿದೆಯೇ?........ನಾನು ಧನ್ಯ ! ನಾನು ಕೃತಕೃತ್ಯ !"

"ಯಾವ ಪ್ರಿಯನ ಮುಸುಕಿನಿಂದ ಒಮ್ಮೆ ಹಸ್ತಗಳು, ಮತ್ತೊಮ್ಮೆ ಪಾದಗಳು, ಒಮ್ಮೆ ನೇತ್ರಗಳು, ಮತ್ತೊಮ್ಮೆ ಕಿವಿಗಳೂ ಮಸುಕಾಗಿ ಕಂಡು ಬರುತ್ತಿದ್ದು, ಇಂದು ಆ ಪ್ರಿಯನ ದಿವ್ಯ ಪ್ರೇಮಾಲಿಂಗನವು ದೊರೆಯಿತು. ಎಲೈ ಚರ್ಮಮೂಳೆಗಳ ಹೃದಯವೇ ! ಎದೆಯೇ ! ನೀನು ಮಧ್ಯದಿಂದ ತೊಲಗು ! ಭೇದಭಾವವೇ ! ದೂರವಾಗು ! ಓಡು ! ನಾನು-ಪ್ರಿಯ ; ಪ್ರಿಯ-ನಾನು ! ಈ ವಿವಾಹವು ಆನಂದ ನಿಮಗ್ನ ನೃತ್ಯ ! ಕಂಬನಿಗಳೇಕೆ ಛಮ್ ಛಮ್ ಹರಿಯುತ್ತಿವೆ !........

* * *

"ವಿವಾಹಕಾಲದ ಜಡಿಯೋ ! ಅಥವಾ ಮನೋನಾಶವಾದುದರ ಶೋಕವೋ?........ಸಂಸ್ಕಾರಗಳ ಅಂತಿಮ ಸಂಸ್ಕಾರವಾಗಿ ಹೋಯಿತು ! ಇಚ್ಛೆಗಳು ಸತ್ತುಬಿದ್ದುವು ! ಈ ಪ್ರಕಾಶದ ಉದಯವಾಗುತ್ತಲೇ ದುಃಖ ದಾರಿದ್ರ್ಯಗಳ ಅಂಧಕಾರವು ಹಾರಿಹೋಯಿತು ! ಸುಕರ್ಮ ಕುಕರ್ಮಗಳ ದೋಣಿಯು ಮುಳುಗಿಹೋಯಿತು."

* * *

"ಪಕ್ಷಿಯಂತೆ ತಿರೋಹಿತವಾಗಿದ್ದ ತುರಿಯಾ—ನಾನೇ !....ಯಾರನ್ನು ಅವ್ಯಕ್ತ, ಅನ್ಯಪುರುಷನೆಂದು ಸ್ಮರಣೆಮಾಡುತ್ತಿದ್ದೆನೋ ಅವನೂ ನಾನೇ ಆದೆ ! ಅನ್ಯಪುರುಷನೀಗ ಅಂತರ್ಧಾನನಾದ ! ಓಂ-ಅಹಂ ! ಓಂ-ನಾನು ! ನಾನಲ್ಲ-ನೀನಲ್ಲ ! ಓಂ ! ಓಂ ! ಓಂ !!!"

* * *

"ಕೋಡಿ ಹರಿಯುತ್ತಿರುವ ಈ ಕಣ್ಣೀರು ಅಭೇದಾನಂದವನ್ನು ಕೊಡುವ ವರ್ಷ ಋತುವೋ ?........ಎಲೈ ತಲೆಯೇ ! ನಿನ್ನ ಅಸ್ತಿತ್ವವು

ಇಂದು ಸಫಲವಾಯಿತು ! ಕಣ್ಣುಗಳೇ ! ನೀವೂ ಧನ್ಯರಾದಿರಿ ! ಕಿವಿಗಳೇ ! ನಿಮ್ಮ ಪುರುಷಾರ್ಥವೂ ಪೂರ್ಣವಾಯಿತು ! ಈ ಆನಂದಮಯ ಸಂಗವು ಅಪಾರವಾಗಲಿ ! ಅಕ್ಷಯವಾಗಲಿ! ಅನಂತವಾಗಲಿ !"

* * *

"ಅಹಂಕಾರದ ಬೊಂಬೆ, ಬುದ್ಧಿಯ ಗೊಂಬೆಗಳು ಭಸ್ಮವಾದುವು ! ಎಲೈ ಕಣ್ಣುಗಳೇ ! ನಿಮ್ಮ ಕಾರ್ಮೋಡಗಳ ಮಳೆಯು ಧನ್ಯವಾಗಲೀ ! ಆನಂದಾಮೃತಭರಿತ ನಯನಗಳ ಶ್ರಾವಣವು ಧನ್ಯವಾಗಲೀ !

* * *

"ಓಡಿಹೋಗು ಗೆಳೆಯಾ ! ಓಡು ! ಎಲ್ಲಿಗೆ ಓಡುವೆ ? ಆಕಾಶದಲ್ಲಿ ಬಚ್ಚಿಟ್ಟುಕೊಳ್ಳುವೆಯಾ ? ನಾನು ಅಲ್ಲಿ ಹಾಜರಿದ್ದೇನೆ. ಕೈಲಾಸದಲ್ಲಿ ನಚಿಸಹೋಗು; ಅಲ್ಲೂ ನಾನೇ ಇದ್ದೇನೆ ! ಸಮುದ್ರದಲ್ಲಿ ಮಲಗಲು ಹೋಗು; ನಿನಗಿಂತಲೂ ಮುಂಚೆ ನಾನೇ ಅಲ್ಲಿರುವೆ. ಅಗ್ನಿಯಲ್ಲಿ ತೂರಿ ಹೋಗು; ಅದು ನನ್ನ ಮುಖವೇ ! ಸಮುಸ್ತ ಶರೀರಗಳಲ್ಲೂ ನಾನು; ಸಮಸ್ತ ನಾಮರೂಪಗಳಲ್ಲೂ ನಾನು; ಶರೀರ ನಾಮರೂಪ ಸಮಸ್ತವೂ ನಾನೇ ! ಯಾರು ನುಡಿದರು ? ಯಾರು ಹೇಳಿದರು ? ಮೂಗನು ಸವಿದ ಸಕ್ಕರೆ ! ಆಹಾಹಾಹಾ ! ನಾನು ಎಷ್ಟು ಸುಂದರ ! ನನ್ನ ಸುಂದರ ಮುಖ, ನನ್ನ ಮೋಹಿನೀ ರೂಪ, ನನ್ನ ಕಾಂತಿ, ನನ್ನ ಸೌಂದರ್ಯ, ನನ್ನ ಲಾವಣ್ಯ ! ಇದನ್ನು ನೋಡುವ ಶಕ್ತಿ ನನ್ನ ಕಣ್ಣುಗಳಿಗೆ ಮಾತ್ರವಿದೆ !

"ನಾನೇ ಪ್ರೇಮಿ ! ನಾನೇ ಪ್ರೇಮಿಕಾ ! ನಾನು ಪ್ರೇಮಿಯೋ ? ಇಲ್ಲ ಪ್ರೇಮಿಕೆಯೋ ? ನಾನು ಪ್ರೇಮ-ಪ್ರೇಮ !"

* * *

ದೃಷ್ಟಿಯು ಹೊರಹೊರಳಿದಾಗ, ಪ್ರತಿಯೊಂದು ಎಲೆಯೂ 'ನೀನೇ' 'ನೀನೇ' ಸ್ವರದಿಂದ ಸ್ವಾಗತಿಸುತ್ತದೆ. ಒಳಗಿನ ಆನಂದ ಘಟನಾವಳಿಗಳ ಗರ್ಜನೆಯಲ್ಲಿ ಎಲ್ಲವೂ ನಿಮಗ್ನವಾಗಿಹೋಗಿದೆ ! ನಿಧಾನವಾಗಿ ಅಂಗಗಳು ಗತಿಹೀನವಾಗುತ್ತಿವೆ ! ದೇಶಕಾಲಗಳು ಎಲ್ಲಿಗೆ ಹೊರಟುಹೋದುವು. ದೂರ-ಹತ್ತಿರ—ಒಳಗು ಹೊರಗುಗಳೆಲ್ಲಿ ? ಮುಂದೆ ವರ್ಣಿಸಲು ಹೇಗೆ ಸಾಧ್ಯ ?

ಈ ವನ, ವೃಕ್ಷ, ಪರ್ವತ, ದಿನರಾತ್ರಿ, ರೂಪವೈಚಿತ್ರ, ಪವನ, ತಾರೆ, ಗಂಗಾಜಲ, ಮೇಘ, ಗಗನ, ಚಂದ್ರಮಾ, ಪ್ರಿಯ, ಪ್ರೇಯಸೀ, ಪರಮಾತ್ಮಾ, ಮಿಲನ, ವಿಚ್ಛೇದನ, ಕಾಗದ, ಲೇಖಣಿ, ನೇತ್ರ, ವಿಷಯ, ನೀನೂ-ಎಲ್ಲ 'ರಾಮ'ನೇ; ಇತರ ಒಂದೂ ಇಲ್ಲ. ಎಲ್ಲಾ ಅದೇ ! ಎಲ್ಲಾ ಅದೇ !!

* * *

ಗೋಸ್ವಾಮಿಗಳು ಅಂದಿನ ಅನುಭವವನ್ನೇ ಸೂಚಿಸುವ ಅವರ ಕಾವ್ಯ ಪ್ರವಾಹದಿಂದ ಎತ್ತಿ ಕನ್ನಡಿಸಿದ ಈ ಕೆಳಗಿನ ರಗಳೆಗಳು ಅವರ ವಿಶ್ವಲೀನ ತಾದಾತ್ಮ್ಯನ ಅಪೂರ್ವಾನಂದದ ನುಡಿಗಳಾಗಿವೆ.

ಗಗನದಿ ಚಂದಿರ ಬೆಳಗುತಲಿಹನು
ಕಾಂತಿಯ ಜಲಧಿ
ಶಾಂತಿಯ ಮನದಿ
ಚೆಲ್ಲುತ ನಲ್ಲನ ತೋರುತಿಹ ‖ ೧ ‖
ಬಿಟ್ಟ ಕಂಗಳಲಿ ನೆಟ್ಟ ನೋಟದಲಿ
ನಿನ್ನನು ನೋಡಿ
ನಲ್ಲನ ಕೂಡಿ
ಒಲಿಸುತಲಿರುವೆ ನಲಿಯುತಲಿರುವೆ ‖ ೨ ‖
ಜನಗಳೆ ವನಗಳೆ ಊರು ಕೇರಿಗಳೆ
ವಂದನೆ ನಿಮಗೆ
ಚಂದಿರನೆಡೆಗೆ
ಹಾರುತಲಿರುವೆ ಏರುತಲಿರುವೆ ‖ ೩ ‖
ಕಾಮಪ್ರೇಮಗಳೆ–ತಪ್ಪು ನೆಪ್ಪುಗಳೆ
ಯುದ್ಧಶಸ್ತ್ರ ಸದ್ದುಗಳೆ–ಮಿತ್ರ ಶತ್ರುಗಳೆ
ಹಗಲು ರಾತ್ರಿಗಳೆ–ಜಗವೆ ಮುಗಿಲುಗಳೆ
ನಮಿಸುವೆ ನಿಮಗೆ ‖ ೪ ‖
ಗಮಿಸುವೆ ಭುವಿಗೆ
ಅನಂತಯೋಜನದಂತರದೆಡೆಗೆ
ಸುಮಗಳ ಗಾನದಿ, ಬೆಳಕಿನ ನಾಟ್ಯದಿ

ಸೇರುತ ಹಾಡಿ
ನೀರನ ಕೂಡಿ
ಶಾಂತಿ ಸಮುದ್ರದಿ ತೇಲುತಲಿರುವೆ ॥ ೫ ॥

೨

ಕನಸಿನಲಿ ಹರಿಯುತಿಹುದೊಂದು ತಿಳಿಹೊಳೆ
ಹಬ್ಬಿ ತುಂಬಿ ದಡನ ಮುರಿದು
ಎಚ್ಚರದಲಿ ನುಗ್ಗಿ ಕೊರೆದು
ದೇಹಮೋಹವನ್ನೆ ಕೊಚ್ಚಿ
ನಗುತ ನುಗ್ಗಿ ಜಗವ ಮುಚ್ಚಿ
ಹುಚ್ಚನಂತೆ ಕುಣಿಯುತಿಹುದು
ಇದಕೆ ಸೂರ್ಯ ಹುಟ್ಟುತಿಹನು
ಇದಕೆ ಜಗವು ಉರುಳುತಿಹುದು
ಹುಟ್ಟುಸಾವು, ಕಟ್ಟುನೋವು
ಇದರೊಳಳಿದು ತೇಲುತಿವೆ ಆ-ನಂ-ದ !
ನಗುವು ಹೊರಳಿ ಬರುತಲಿದೆ ನಿ-ಶ್ಯ-ಬ್ದ !

೩

ಜೀವನದದ್ಭುತಹಿರಿಹೊಳೆಯಲ್ಲು
ಕರ್ತವ್ಯದ ಬಿರುಗಾಳಿಗಳಲ್ಲು
ಹಾರುವೆ ನಾನು ತೂರುವೆ ನಾನು
ನೋವಿನ ಸಾವು ಕಟ್ಟಿನಹುಟ್ಟು
ಕೊನೆ ಮೊದಲಿಲ್ಲದೆ ಬೆಳಕನೆ ತೊಟ್ಟು
ಹೊರಳುವ ಸಾಗರದೊಳಗೀಜಾಡಿ
ಹಾಡುತಲಿರುವೆ ಮೂಡುತಲಿರುವೆ
ಅನಂತಕಾಲದ ಮಗ್ಗದ ಮೇಲೆ
ಸೃಷ್ಟಿಯನೇಯುವೆ ಇದೆಲೀಲೆ

೪

ನನ್ನಾನಂದದ ಬಟ್ಟಲು ತುಂಬಿತು

ನನ್ನಾಶೆಗಳವು ಮಾಗಿದವು
ಮುಂಬೆಳಗಿನ ತಾರಾಕನ್ನಿಕೆಯರು
ಅರಳುವ ನನ್ನನು ಮುದ್ದಿಸುತೊಲಿವರು
ಕಾಮನಬಿಲ್ಲಿನ ಬಣ್ಣಗಳೊರೆದು
ಸಿಂಗರಿಸುತ ನಲಿದಾಡುವರು
ನನ್ನಪ್ಪಣೆಯೇ ಮಿಂಚಿನಬಳ್ಳಿ
ಸುಮದೆಳೆ ನಗೆಯೂ ಮುತ್ತಿನ ಹನಿಯೂ
ಹೊಸಹೊಂಬಣ್ಣದ ಚಿನ್ನದ ಎಳೆಯೂ
ದಿನಪನ ಕಾಂತಿಯು ಚಂದ್ರನ ಶಾಂತಿಯು
ಸಾಗರದಲೆಯೂ ಮರಗಿಡದುಲಿಯೂ
ಹಬ್ಬುವ ಬಳ್ಳಿಯು ಹಾಡುವ ದುಂಬಿಯು
ನನ್ನಯ ನುಡಿಯೇ - ನನ್ನಯ ನಡೆಯೇ
ನನ್ನುಸಿರಲಿ ಜೀವವು ಸಾವಿಹವು
ನನ್ನಿಂದಲೆ ಲೋಕಗಳೈತಹವು
ಅನಂತ ಕಾಲವು ನಾನಾಗಿರುವೆ
ಆಶೆ ನಿರಾಶೆಯ ತುಳಿಯುತ ಬರುವೆ
ಸೃಷ್ಟಿಶಕ್ತಿಯೇ ನನ್ನಯ ಕತ್ತಿ
ಬರುವೆ ದುಃಖವನು ಮಾನವ ಕೊತ್ತಿ
ದೂರವದಿಲ್ಲ - ಕಾಲವದಿಲ್ಲ
ಚಿಂತೆಯದಿಲ್ಲ - ಭ್ರಾಂತಿಯದಿಲ್ಲ
ಆಶೆಯು ನಾನೆ - ವಿಕಾಸವು ನಾನೇ
ಕಟ್ಟಿನಗಿಲ್ಲ – ಹುಟ್ಟುಗೆಳಿಲ್ಲ
ನನ್ನಪ್ಪಣೆಯನು ನಡೆಸುವರೆಲ್ಲ
ನಾನೇ ಬ್ರಹ್ಮನು ನಾನೇ ಶಿವನು
ನನ್ನಿಷ್ಟಕೆ ಸಕಲವು ತಗ್ಗುವುವು.

ಶಾಂತಿ ಹೊಳೆಯಾಗೆನ್ನ ಬಳಿಗೆ ತಾ ಹರಿಯುತಿದೆ

ಶಾಂತಿ ಸಾಗರವಾಗಿ ನನ್ನೊಳಗೆ ಹೊರಳುತಿದೆ
ಶಾಂತಿ ಗಂಗೆಯು ತೆರದಿ ಹೊಳೆಯುತ್ತ ಬಳುಕುತಿದೆ
ಅದು ನನ್ನ ರೋಮ ರೋಮದಲೆಲ್ಲ ಸುಳಿಯುತಿದೆ
ಬೇಗತನ್ನಿ ಮದುವೆಯುಡಿಗೆ
ಬಳುಕುತಿರುವ ಬೆಳ್ಳಿಯುಡಿಗೆ
ಹುಣಿಮೆ ಎಳೆಯ ಚಿನ್ನದುಡಿಗೆ
ಜಾರಿ ತೊಲಗು ಮುಖದ ಮುಸುಗೆ
ಬಳುಕು ಹೊರಳಿ ಹಾರಗಳೇ
ನಗುತ ನುಗ್ಗಿ ಹರಿಯಿರೀ
ಆನಂದದ ಕಂಬನಿಗಳ ಸರಗಳೇ
ಹರಿಯುತ ಹಾಡಿರಿ–ಹಾಡುತ ಜಾರಿರಿ
ಎಂತಹ ಸುಂದರ ಮಣಿಮಾಲೆಗಳು
ಜೀವಾಮೃತವೇ ಮಾಯದಸುರಿಯೀ !
ನನ್ನ ದೇಹಮನಗಳ ತುಂಬಿಳಿಯಿರಿ
ಮೀನೆ ಬಾರ ನಾಯೆ ಬಾರ
ನಲಿಯುತೆಲ್ಲ ಒಲಿದು ಬನ್ನಿ
ಸೃಷ್ಟಿಶಕ್ತಿ ಪ್ರಾಣಿಪಕ್ಷಿ
ನನ್ನ ರಕ್ತವನ್ನೆ ಹೀರಿ
ನನ್ನ ದೇಹವನ್ನೆ ತಿನ್ನಿ
ಬನ್ನಿ ನನ್ನ ಮದುವೆಯೂಟ
ಸವಿದು ಕುಣಿದು ನೋಡನೋಟ
ಕುಣಿಯುತಲಿರುವೆ ನಲಿಯುತಲಿರುವೆ
ಸೂರ್ಯ ಚಂದ್ರ ತಾರಾಗಳಲಿ
ಮಿಂಚು ಮೋಡ ಸಿಡಿಲಬ್ಬರಗಳಲಿ
ಬಿರುಗಾಳಿಯಲಿ ಸಾಗರದಲೆಯಲಿ
ಕುಣಿಯುತಲಿರುವೆ – ದಣಿಯದಲಿರುವೆ
ಮನವು-ಮೋಹ-ಪ್ರೇಮ–ಪ್ರತಿಭೆ

ಎಲ್ಲರಲ್ಲೂ ಕುಣಿಯುತಿರುವೆ
ಹಾಡುತಿರುವೆ–ಕೂಡುತಿರುವೆ
ನೋಡುವೆ ನಾನು–ನೋಟವು ನಾನು
ಅಲೆಗಳಂತೆ ನನ್ನಲೆದ್ದು ಉಕ್ಕುತ್ತಿರುವುವು
ಜನಗಳೆದ್ದು ಗುಳ್ಳೆಯಂತೆ ತೇಲುತಿರುವುವು.

೩

ಹರಿಯುವ ಗಂಗೆಯ ಮೇಲ್ದನಿಯು
ತರಗುಟ್ಟುವ ಹಸುರೆಲೆಯುಲಿಯು
ಜಲಧಿಯ ನರ್ತನದಬ್ಬರವು
ಕರುತುರುಗಳ ಕೂಗಾಟಗಳು
ಮಂಜಿನ ಮುತ್ತಿನ ಸಾಲಿನ ಬೀಡು
ಹಬ್ಬಿದ ಕರಿಮೋಡಗಳಾ ಗೂಡು
ಗೆಜ್ಜೆಯ ಹೆಜ್ಜೆಯ ಕಿಣಿಕಿಣಿ ದನಿಯು
ಗಜಬಜಗುಟ್ಟುವ ಗುಂಪಿನ ನಗೆಯು
ದಿನಪನ ಹೊಂಬಣ್ಣದ ಕಿರಣಗಳು
ಮಿನುಗುವ ತಾರೆಯ ನಗೆಬಳ್ಳಿಗಳು
ಹುಣ್ಣಿಮೆ ಚಂದಿರ ಸೂಸುವ ಶಾಂತಿ
ನವರತ್ನಗಳಾ ಜ್ವಲಿಸುವ ಕಾಂತಿ
ಉರಿಯದ ಬೆಳಕೂ, ಕೇಳದ ದನಿಯೂ
ಕತ್ತಲೆಯಿಲ್ಲದ ಕಗ್ಗತ್ತಲೆಯೂ
ರೆಕ್ಕೆಗಳಿಲ್ಲದ ಹಾರಾಟಗಳೂ
ಮನಸಿಲ್ಲದ ದೂರದ ಯೋಚನೆಯೂ
ಕಣ್ಣಿಲ್ಲದ ಬಲು ಬಣ್ಣದ ನೋಟ
ಬಾಯಿಲ್ಲದ ಉಕ್ಕಿನ ಬಿಗಿಹಿಡಿತವು
ಎಲ್ಲಾ ನಾನೇ–ನಾನೇ ಎಲ್ಲಾ

೪

ಇದುವೇ ಜೀವ - ಇದು ಅಮರತ್ವ

ಇದುವೆ ಕಿರಿನೋಟದಿ ಬಂಡೆಗಳನು
ಒಡೆಯುವ ಅದ್ಭುತ ಶಕ್ತಿ
ನನಗೆಡೆಮಾಡಲು ಧರೆಯು ಜರಗುವುದು
ಕಪ್ಪನೆ ನೆರಳುಗಳಳಿದೊರಗುವುವು
ಬರುತಿಹೆ ಚಂಡಜ್ಯೋತಿಯ ಮೂರ್ತಿ
ಬೆಟ್ಟಗುಡ್ಡಗಳೇ ! ಎಚ್ಚರಹೊಂದಿ
ನನ್ನ ಹಾದಿಯಿಂದೋಡುತ ತೊಲಗಿ
ನಿಮ್ಮೆಲುಬುಗಳೊಡೆಯದೆ ನಿಂತಿರಲಿ

* * *

ಭೂಪತಿಗಳೇ ಸೇನಾನಾಯಕರೇ
ನನ್ನಯ ಆಟದ ಸಾಮಾನುಗಳೇ
ಬರುತಿಹೆಸುತ್ತ–ಉರಿಗೆದರುತ್ತ
ಹಾದಿ ಬಿಟ್ಟು ಸರಿಯುತ್ತಲೆ ನಿಲ್ಲಿ
ಅಬ್ಬರಿಸುತ ಹೊರಳುವ ಸಾಗರವೇ
ಬತ್ತುತಲಿಂಗು ನಾಬರುತಿರುವೆ
ಬಿರುಗಾಳಿಗಳೇ ಅರಿಚಿರಿ ಕಿರಿಚಿರಿ
ಸಿಡಿಯುತಲೊಡೆಯಿರಿ ತುತ್ತೂರಿ ಊದಿರಿ
ಗಾಳಿಯನೇರಿ ಸಾವನುಹೀರಿ
ಮಿಂಚನು ಕೆದರುತ ಹಾರುತಿಹೆ
ರಥಕೆ ದೇವಗಣವನೆ ಹೂಡಿರುವೆ
ಸಿಡಿಲಿನ ಅಬ್ಬರದಲಿ ಘೋಷಿಸುವೆ
ಸೀಳು ಮಾಯೆಯನು ಕಿತ್ತೊಗೆದೇಳು
ಏಳು-ಎದ್ದೇಳು-ಸ್ವತಂತ್ರನಾಗು
ಸ್ವಾತಂತ್ರ್ಯ—ಸ್ವಾತಂತ್ರ್ಯ

ಹೀಗೆ ಗೋಸ್ವಾಮಿಗಳು ಬ್ರಹ್ಮಾನಂದದಲ್ಲಿರುವಂದು, 'ಮನೆಗೆ ಹಿಂದಿರುಗಿ ಬರುವ'ಂತೆ ಹೇಳಿ ಬರೆದಿದ್ದ ತಂದೆಯ ಮತ್ತು ಧನ್ನಾರಾಮನ ಪತ್ರ

ಗಳು ಋಷಿಕೇಶಕ್ಕೆ ಬಂದು ರಾಮರ ಕೈಗೆ ತಲುಪಿದುವು. ಅದಕ್ಕೆ ಉತ್ತರ ವಾಗಿ ಈ ಪತ್ರವು ಕಳುಹಿಸಲ್ಪಟ್ಟಿತು.

೨೩-೮-೧೯೦೬ : ನಿಮ್ಮ ಪತ್ರದಲ್ಲಿ ಮನೆಗೆ ಹಿಂತಿರುಗುವಂತೆ ಒತ್ತಾಯ ಪಡಿಸಿರುವಿರಿ. ನಿಮ್ಮ ಪತ್ರವು ಗಂಗಾನದಿಯಲ್ಲಿ ಬಿಸಾಡಲ್ಪಟ್ಟು ಕೊಚ್ಚಿ ಹೋಯಿತು. ನಾನು ಕರ್ತವ್ಯವನ್ನು ನಡೆಯಿಸದ ಕಾರಣ ನನಗೆ ನೋವಾ ಗಿದೆಯೇ ಎಂದು ನೀವು ಕೇಳಿದರೆ ಬಹು ವಿಚಿತ್ರವಾಗಿರುವುದು.

ಯಾವುದರ ನೋವು ?
ಈ ವಸ್ತುಗಳ ಆದಿಯರಿತವರಿಲ್ಲ
ಈ ವಸ್ತುಗಳ ಅಂತ್ಯವರಿತವರಿಲ್ಲ
ಅರಿತದ್ದು ವರ್ತಮಾನದಿ ಕಾಣಬರುವ
ವಸ್ತುಗಳ ನಡುವಿನಲ್ಪಭಾಗ
ಸಕಲವೂ ಈ ರೀತಿ ಅರಿವಿಲ್ಲದಿರೆ ಶಿವನೆ
ನೋವದೆಲ್ಲಿಹುದಯ್ಯಾ ?
ಜನರೇನೆನ್ನುವರೆಂಬುದಕ್ಕೆ ಇದು ಉತ್ತರ
ನನ್ನ ಮುಸುಕನೆ ತಲೆಗೆ ಸುತ್ತಿ ಧರಿಸಿ
ನನ್ನ ಪ್ರಿಯನಿಹ ಬೀದಿಗೈತಂದಿಹೆ
ಅವರ ಮನಬಂದತೆ ಕುಹಕ ಮಾಡಲಿ ಅವರು
ಅಂತಹ ಸಹಸ್ರರಾದರೂ ನನಗೆ ಲಕ್ಷ್ಯವಿಲ್ಲ.

ನಿಮ್ಮ ವಾಕ್ಯ ಪರಿಪಾಲನೆ? ನಾನು ನಿಮ್ಮಾಜ್ಞೆಯಂತೆಯೇ ನಡೆಯುತ್ತಿದ್ದೇನೆ. ನನ್ನ ದೇಹದ ಪಂಚನದ ಪ್ರಾಂತದಿಂದ(ಪಂಜಾಬ್) ವೇಗವಾಗಿ ಈಶ್ವರ ಸನ್ನಿಧಿಗೆ ಹೋಗುತ್ತಿದ್ದೇನೆ. ಸತ್ಯದಲ್ಲಿ ಐಕ್ಯವಾಗುತ್ತಿದ್ದೇನೆ.

ನಡುರಾತ್ರಿಯಾಗುತ್ತಿದೆ. ಹತ್ತಿರ ಮನುಜನಾಗಲಿ ಅವನ ಭೂತ ವಾಗಲೀ ಇಲ್ಲ. ಹೃದಯಾಂತರಾಳದಲ್ಲಿ ಆತ್ಮಾನಂದದ ಅಲೆಗಳ ಪ್ರವಾಹ ಹೊರಗೆ ಪ್ರವಹಿಸುತ್ತಿರುವ ಪವಿತ್ರ ಗಂಗೆಯ ಕಲಕಲ ಧ್ವನಿ, ಆತ್ಮದಲ್ಲಿ ಶಾಂತಿ, ಶಾಂತಿ, ಆನಂದ. ಇದು ನನ್ನ ಸಂಗಮ ದಿನ.

ಕಗ್ಗತ್ತಲು ರಾತ್ರಿಯಲ್ಲಿ, ಸಂಗಮದ ರಾತ್ರಿಯಾದ್ದರಿಂದ ಕತ್ತಲೆಯು ಗೋಪ್ಯಕ್ಕಾಗಿ ಜಗತ್ತಿನ ಮುಖದಮೇಲೆ ಮುಸುಗನ್ನು ಹಾಕಿದೆ. ನನ್ನವಂ

ಗೆಲ್ಲಾ ಎಲ್ಲರೂ ಸಂಧಿಸುವ ಕೇಂದ್ರದಲ್ಲಿ ಸಂಧಿಸುವಂತೆ ಹೇಳಿರಿ; ಯಾರು ಸಂಧಿಸದ ಸಂಧಿಯಲ್ಲಲ್ಲ. ನಮ್ಮ ಸಂಗಮದ ರಾತ್ರಿಯು ಬಾಹ್ಯಾಂತರ ಗಳಿಂದ ಪ್ರಪಂಚವನ್ನೇ ಆಳಿಸಿಬಿಟ್ಟಿದೆ. ಕಣ್ಣುಗಳೇ ಅಮೃತ ಪ್ರವಾಹಗಳು ಇಂತಹ ಪರಮಾನಂದದ ಸಮಯದಲ್ಲಿ ಜಗತ್ತಿನ ನೆನಪನ್ನಾದರೂ ನನಗೆ ಮಾಡುವುದೇ ! ಅಯ್ಯೋ !

ಸ್ಫುರತ್ ಸ್ಫಾರಜ್ಯೋತ್ಸ್ನಾ ಧವಲಿತತಲೆ ಕ್ವಾಪಿಪುಲಿನೆ
ಸುಖಾಸೀನಃ ಶಾಂತಃ ಧ್ವನಿಷು ರಜನಿಷುದ್ಯುಸರಿತಃ ||

ಇಂಥ ಉಜ್ವಲ ವಿಸ್ತರಿತ ಚಂದ್ರಿಕಾ ಸದೃಶ ಜಲಪ್ರವಾಹ-ಗಂಗಾತಡಿಯಲ್ಲಿ ಸುಖಪೂರ್ವಕ ಕುಳಿತ್ತಿದ್ದೇನೆ. ಸಕಲ ಧ್ವನಿಗಳೂ ಅಡಗಿಹೋಗಿರುವ ಇಂದು ರಾತ್ರಿ ಪ್ರಣವರೂಪ ಶಿವ ಶಿವ ಶಿವ ಎಂಬ ಹೃದಯ ಭೇದಕ ಧ್ವನಿಯ ಮೂಲಕ ಸಾಂಸಾರಿಕ ದುಃಖಶೋಕಗಳಿಂದ ಮುಕ್ತನಾಗಿ ಆನಂದಾಶ್ರು ಪೂರ್ಣಲೋಚನನಾಗಿ ಕೃತಕೃತ್ಯನಾಗಿ ಕುಳಿತ್ತಿದ್ದೇನೆ. ಇಂಥ ದಿನಗಳು ಮತ್ತೆ ಯಾವಾಗ ಬರುವುವು ?

ಈ ಆನಂದ ಸಾಕ್ಷಾತ್ಕಾರಕ್ಕಾಗಿಯೇ ರಾಜರುಗಳು ಸಿಂಹಾಸನಗಳನ್ನು ತ್ಯಜಿಸುವರು. ಗಂಗೆಯ ಪಾವನ ತಡಿಗಾಗಿ ದೇವತೆಗಳೂ ಸಹ ಹಾತೊರೆಯುವರು. ಇಲ್ಲಿ ತಲುಪಿದ ನಂತರವೂ ಸಹ ನನ್ನ ಕರ್ತವ್ಯಗಳು—ಸುಳ್ಳು ವಿಚಾರಗಳನ್ನು ಯೋಚಿಸಬೇಕಾದಂತಹ ಚೂರು ಚೂರಾದ ಅದೃಷ್ಟ ನೌಕೆಯೇ ನನ್ನದು !

ಜನರು ತೀರ್ಥಗಳಿಗೆ ಬರುತ್ತಾರೆಯೇ ಹೊರತು, ತೀರ್ಥಗಳು ಜನರಲ್ಲಿಗೆ ಹೋಗುವುದಿಲ್ಲ. ತೀರ್ಥಗಳಲ್ಲಿ ವಾಸವಾಡುವ ತೀರ್ಥರಾಮನ ಚರಣಗಳನ್ನರಸುವಂತೆ ನನ್ನ ಕುಟುಂಬದವರಿಗೆಲ್ಲಾ ತಿಳಿಸಿರಿ. ಅಂದೇ ಅವರು ಸ್ವಾಮಿ ತೀರ್ಥಾರಾಮನನ್ನು ನೋಡಲಾಗುವುದು ! ಇಲ್ಲದಿದ್ದರೆ ನನ್ನ ಗೃಹದಲ್ಲಿ ಸತ್ಯಗಂಗೆಯು ಹರಿಯುವವರೆಗೂ ನಾನಲ್ಲಿರಲಾರೆ ; ನನ್ನ ಹೃದಯವು ಅಲ್ಲಿ ಬಡಿಯಲಾರದು. ನಾನಲ್ಲಿರಲಾರೆ; ಸತ್ತವರಿಗೆ ಯಾರೂ ಸುದ್ದಿಯನ್ನು ಕಳುಹಿಸುವುದಿಲ್ಲ. ಅವರನ್ನು ನೋಡಬಯಸುವರು ತಾವೂ ಸಾಯುವರು. ನಾನು ಸತ್ತಿರುವೆ ; ದೇಹದೊಡನಿರುವಾಗಲೇ ಸತ್ತಿರುವೆ. ನನ್ನ ಜನರ

ನನ್ನನ್ನು ಕರೆಯದಿರಲಿ. ಆದರೆ ಅವರು ನನ್ನಂತಾದರೆ ಆಗ ಸಂಧಿಸುವುದು ಬಹು ಸುಲಭ.

ಮುರಲೀವಾಲವು (ಅವರ ಗ್ರಾಮ) ಮುರಾರಿವಾಲಾವಾದರೆ ತೀರ್ಥಗಳನ್ನು ಪಾವನಗೊಳಿಸುವ ತೀರ್ಥರಾಮನು ಅಲ್ಲಿಗೆ ಬರಲು ಸಾಧ್ಯ. ತತ್ವಗುಣ ಗಂಗೆಯು ಪ್ರವಹಿಸದಿದ್ದಲ್ಲಿ, ನಾನು ಬರುವುದು ಕಷ್ಟ. ತ್ಯಾಗರೂಪಿ ಗಂಗೆಯು ಪ್ರವಹಿಸದಿದ್ದಲ್ಲಿ ನಾನಿರುವುದು ಕಷ್ಟ. ಜ್ಞಾನಕುಂಡದಲ್ಲಿ ಈ ನನ್ನ ಮಾಂಸರೂಪಿ ಅಜ್ಯವನ್ನು ಸುರಿದು ಅದನ್ನು ಪವಿತ್ರ ಜೀವನದ ವಾಯುವಿನಲ್ಲಿ ಉರಿಸಬಾರದೇಕೆ ? ಹೀಗಾದರೂ ನರಮೇದ (ಯಜ್ಞ) ದ ಫಲವನ್ನು ಪಡೆಯಬಾರದೇಕೆ ? ಎಲ್ಲ ಕಡೆಗಳಲ್ಲೂ ಸತ್ಯ ಪ್ರಕಾಶವು ದೊರೆತಿರುವ ಇಲ್ಲಿ ನಾನು ಸುಖವಾಗಿದ್ದೇನೆ. ನಾನು ಇನ್ನೆಲ್ಲಿಗೂ ಹೋಗಲಾರೆ. ಕಡೆಯಲ್ಲಾದರೂ ನಿರ್ಜೀವ ಮೂಳೆಗಳು ಬಂದು ಗಂಗೆಯಲ್ಲೇ ಮಲಗಬೇಕು. ಬದುಕಿರುವಾಗಲೇ ಸಂತೋಷದಿಂದ ಅವನ್ನೇಕೆ ಇಲ್ಲಿಗೆ ತರಬಾರದು ?"

ಲಾಹೋರಿನಲ್ಲಿ (೫)

(ನಿತ್ಯಾನಂದಮಯ ಗೋಸ್ವಾಮಿ)

ಉತ್ತರಾಖಂಡದ ಬ್ರಹ್ಮಪುರಿಯ ತಪೋವನದಿಂದ ಹಿಂದಿರುಗಿ ಬಂದ ನಂತರ ಗೋಸ್ವಾಮಿಗಳ ಜೀವನ ಪ್ರವಾಹವು ಸಂಪೂರ್ಣವಾಗಿ ಬದಲಾವಣೆಯಾಗಿಬಿಟ್ಟಿತು. ದಿನರಾತ್ರಿಗಳೂ ನಿಜಾನಂದದ ಪ್ರವಾಹವು ಹೆಚ್ಚಿದಂತೆಲ್ಲಾ ಸಾಂಸಾರಿಕ ಕಾರ್ಯ ಕಲಾಪಗಳಿಂದ ವಿಮುಖರಾಗ ತೊಡಗಿದರು. ಚಿತ್ತದಲ್ಲಿ ಸನ್ಯಾಸದ ಕರೆಯು ಹೆಚ್ಚು ಹೆಚ್ಚು ಧ್ವನಿಯಾಗತೊಡಗಿತು. ಬಾಲ್ಯದಿಂದಲೂ ಏಕಾಂತವಾಸ ಪ್ರಿಯರಾಗಿದ್ದರು ; ಆದರೆ ಆತ್ಮ ಸಾಕ್ಷಾತ್ಕಾರದ ನಂತರ ಅವರು ಇನ್ನೂ ಹೆಚ್ಚಾಗಿ ಏಕಾಂತವನ್ನು ಬಯಸತೊಡಗಿದರು. ಬರಬರುತ್ತ ವೇದಾಂತ ಚರ್ಚೆ, ಆತ್ಮ ಚಿಂತನ ಹೊರತು ಮತ್ತೊಂದು ರುಚಿಸದೆ ಹೋಯಿತು. ಈ ಕಾರಣದಿಂದ ಮಿರ್ಷ ಕಾಲೇಜಿನ ಆರು ಘಂಟೆಯ ಕೆಲಸವು ಬಹು ಹೆಚ್ಚಾಗಿ ಕಂಡು ಬಂದಿತು. ಆದುದರಿಂದ ವಿವಶರಾಗಿ ಈ ಕೆಲಸವನ್ನು ಬಿಟ್ಟುಬಿಟ್ಟರು. ಆ ಸಮಯದಲ್ಲಿ ಸಂಯೋಗ ವಶದಿಂದ ಅಲ್ಲಿನ

ಓರಿಯಂಟಲ್ ಕಾಲೇಜಿನಲ್ಲಿ 'ರೀಡರ್' ಕೆಲಸವು ಖಾಲಿಯಾಗಿದ್ದಿತು. ಅದು ನಿತ್ಯವೂ ಕೇವಲ ಎರಡು ಘಂಟೆಯ ಕೆಲಸ. ಗೋಸ್ವಾಮಿಗಳ ಅಭಿರುಚಿಗೆ ತಕ್ಕದಾಗಿದ್ದಿತು. ಈ ಕೆಲಸವು ಅವರಿಗೆ ಸುಲಭವಾಗಿಯೂ ಸಿಕ್ಕಿಬಿಟ್ಟಿತು. ಅಲ್ಲಿ ಎರಡು ಘಂಟೆಗಳ ಕೆಲಸವನ್ನು ಮಾಡಿಬಿಟ್ಟ ನಂತರ ಮಿಕ್ಕ ಸಮಯ ವನ್ನೆಲ್ಲಾ ಆತ್ಮ ವಿಚಾರದಲ್ಲೇ ಕಳೆಯುತ್ತಿದ್ದರು. ಸ್ವಲ್ಪ ಸಮಯಾನಂತರ ಅದೇ ಕಾಲೇಜಿನಲ್ಲೇ ವೇದಾಂತ ಮತ್ತು ಗಣಿತ ಶಾಸ್ತ್ರವನ್ನು ಕಲಿಸುವ ಕೆಲಸ ಇವರಿಗೆ ದೊರಕಿತು, ಇದರಿಂದ ಗೋಸ್ವಾಮಿಗಳ ಆನಂದವು ಇನ್ನೂ ಹೆಚ್ಚಿತು.

ಇದೇ ಸಮಯದಲ್ಲೇ ತಮ್ಮ ಗ್ರಾಮವಾದ ಮುರಲೀವಾಲಾದಲ್ಲಿ ಎರ ಡನೇ ಪುತ್ರ ಜನನವಾದ ಸುದ್ದಿಯನ್ನು ಅಲ್ಲೇ ಇದ್ದ ಧನ್ನಾರಾಮನು ರಾಮ ರಿಗೆ ಪತ್ರ ಮುಖೇನ ತಿಳಿಸಿದನು ; ಆದರೆ ಅವರ ಚಿತ್ತವು ನಿಶ್ಚಲವಾಗಿದ್ದಿತು.*

ಈ ವರುಷದ ಬೇಸಿಗೆಯ ರಜದಲ್ಲಿ ರಾಮರು ಕಾಶ್ಮೀರಕ್ಕೆ ಪ್ರಯಾಣ ಮಾಡಿ ಶ್ರೀನಗರವನ್ನು ತಲುಪಿ, ಅಮರನಾಥಕ್ಕೆ ಯಾತ್ರೆಹೋದರು. ಈ ಪ್ರಯಾಣದಲ್ಲೆಲ್ಲಾ ಎಂದಿನಂತೆ ಏಕವಸ್ತ್ರಧಾರಿಗಳಾಗಿರುತ್ತಿದ್ದರು. ಅರ್ಧ ಧೋತ್ರ ಸೊಂಟಕ್ಕೆ ಸುತ್ತಿ, ಮಿಕ್ಕರ್ಧವನ್ನು ಭುಜದಮೇಲೆ ಹಾಕಿರುತ್ತಿದ್ದರು. ಈ ಪ್ರವಾಸದಿಂದ ಹಿಂದಿರುಗಿದ ಮೇಲೆ ಅವರ ಚಿತ್ತಶಾಂತಿ, ಪವಿತ್ರತೆ, ಆನಂದಗಳು ಲಾಹೋರ್‌ನಲ್ಲೇ ಅಲ್ಲದೆ ದೂರದೂರಕ್ಕೆಲ್ಲಾ ಪ್ರಸಿದ್ಧ ವಾಗುತ್ತಾ ಬಂದುವು. ತತ್ಫಲವಾಗಿ ಜಿಜ್ಞಾಸುಗಳು ಗುಂಪುಗುಂಪಾಗಿ ಅವರಲ್ಲಿಗೆ ಬರತೊಡಗಿದರು. ಹೀಗೆ ಗೋಸ್ವಾಮಿಗಳ ಕೀರ್ತಿಯನ್ನು ಕೇಳಿ ಬಂದವರಲ್ಲಿ ನಾರಾಯಣದಾಸರೂ* ಒಬ್ಬರು. ಈ ಬಾರಿ ರಾಮರ ಶಾಂತಿ ದಾಯಕ ಉತ್ತರಗಳಿಂದ ಅಪೂರ್ವ ಪ್ರಭಾವವು ಅವರ ಹೃದಯದ ಮೇಲುಂ ಟಾಗಲು ತಮ್ಮ ಸರ್ವಸ್ವವನ್ನೂ ಗೋಸ್ವಾಮಿಗಳ ಚರಣಗಳಲ್ಲಿ ಸಮರ್ಪಿಸಿ ಬಿಟ್ಟರು. *

---

* ತೀರ್ಥರಾಮರ ಎರಡನೇ ಪುತ್ರ ಗೋಸ್ವಾಮಿ ಬ್ರಹ್ಮಾನಂದಜೀ. ಇವರು ಮುಂದೆ ಬಿ. ಎ. ಎಲ್. ಎಲ್. ಬಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ಈಗ ಉಜ್ವ್ಯಸಿಯಲ್ಲಿದ್ದಾರೆ.

* ಇವರೇ ಮುಂದೆ ನಾರಾಯಣಸ್ವಾಮಿ ಎಂಬ ಹೆಸರಿನಿಂದ ಸನ್ಯಾಸಿಗಳಾಗಿ, ರಾಮ ತೀರ್ಥರ ಪಟ್ಟಶಿಷ್ಯರಾಗಿರುವರು.

ಇದಾದನಂತರ ಹಗಲು ರಾತ್ರಿ ನಾರಾಯಣದಾಸರು ರಾಮರ ಸೇವೆ ಶಿಶ್ರೂಷೆಯಲ್ಲಿ ನಿಂತರು. ಮುಂದೆ ೧೯೦೧ರಲ್ಲಿ ಸ್ವಾಮಿಗಳ ಶರೀರವು ಜ್ವರಗ್ರಸ್ತವಾಗಿ, ಉದರ ಶೂಲೆಯಿಂದ ಬಹಳ ಸಂಕಟಕ್ಕೊಳಗಾಯಿತು. ಉಸಿರಾಡಿಸುವುದೂ ಕಷ್ಟವಾಗಿ ಬಿಟ್ಟಿತು. ಪ್ರಜ್ಞೆ ಇಲ್ಲದೆ ಬಿದ್ದಿದ್ದರು; ಅಂದು ಉಳಿಯುವುದಿಲ್ಲವೆಂದು ಕಂಡುಬಂದಿತು.

ಈ ಸಂಗತಿಯನ್ನು ಲಾಹೋರಿನ ಡಾಕ್ಟರ್ ಮಹಮದ್ ಇಕ್ಬಾಲರು ಹೀಗೆ ಹೇಳಿದ್ದಾರೆ. "ಒಮ್ಮೆ ಅವರಿಗೆ ಮಹಾ ಯಾತನೆಯನ್ನು ಕೊಡುವ ಹೊಟ್ಟೆಶೂಲೆಯು ಬಂದಿದ್ದಾಗ ಅವರನ್ನು ನೋಡಲು ಮನೆಗೆ ಹೋದೆ. ಕಚ್ಚಿನ ಮೇಲೆ ಕಚ್ಚು ನುಗ್ಗುತ್ತಾ ಅವರ ತೆಳುದೇಹವನ್ನು ನುಲಿಸುತ್ತಿದ್ದಿತು. ಅಪಾರ ಯಾತನೆಯಾಗುತ್ತಿದ್ದರೂ ಸಹಾ, ಅವರು ಎಂದಿನಂತೆ ಆನಂದದಿಂದ ನುಗ್ಗುತ್ತಿದ್ದರು. ಅವರ ಕೋಣೆಯೆಲ್ಲಾ ಆನಂದದಿಂದ ತುಂಬಿದ್ದಿತು. 'ಇಕ್ಬಾಲ್ ! ರಾಮನ ಕೋಟ್ಯಾನುಕೋಟಿ ದೇಹಗಳಲ್ಲಿ ಒಂದು ಅಸ್ವಸ್ಥ ವಾಗಿದ್ದ ಮಾತ್ರಕ್ಕೆ ಅವನಿಗೇನು ಕೊರತೆ ? ನಾನು ಆನಂದದಲ್ಲಿ ನಗುತ್ತಲೇ ಇದ್ದೇನೆ. ಈ ದೇಹದ ಪಾಲಿಗೆ ಜಾಡ್ಯ— ನನ್ನ ಆತ್ಮದ ಪಾಲಿಗೆ ಆನಂದ' ಎಂದರು. ನಾನು ಯೋಚಿಸಿದ್ದಂತೆಯೇ ಅವರ ಮನಸ್ಸು ಸಂಸ್ಕಾರವಾಗು ತ್ತಿದ್ದಿತು'.

ಆದರೆ ಪ್ರಕೃತಿಯು ರಾಮರ ವಿಷಯದಲ್ಲಿ ಬೇರೆಯಾಗಿದ್ದಿತು. ಮರು ದಿನವೇ ಆ ಯಾತನೆಯು ಹೊರಟು ಹೋಯಿತು. ಆಗ ತಮ್ಮ ಭಾವನಾ ತರಂಗಗಳನ್ನೆಲ್ಲಾ ಜನರಿಗೊದಗಿಸಿಕೊಡಲು ರಾಮರು ಸಂಕಲ್ಪಿಸಿದರು. ಇದಕ್ಕಾಗಿ ಒಂದು ಪತ್ರಿಕೆಯನ್ನು ನಡೆಸಬೇಕೆಂದು ಬಯಸಿದರು. ಬಾಬೂ ಹರಲಾಲ್‌ಜೀ ಎಂಬುವರು ಆವಶ್ಯಕವಾದಷ್ಟು ಧನಸಹಾಯ ಮಾಡಲು ಮುಂದೆ ಬಂದರು. ನಾರಾಯಣದಾಸರೇ ಪತ್ರಿಕೆ ಮತ್ತು ಪ್ರೆಸ್ಸಿನ ವ್ಯವ ಸ್ಥಾಪಕರಾದರು. ಪ್ರೆಸ್‌ಗೆ 'ಆನಂದ ಪ್ರೆಸ್' ಎಂದು ನಾಮಕರಣವಾಯಿತು. ಪತ್ರಿಕೆಗೆ 'ಅಲೀಫ್' ಎಂದು ಹೆಸರಿಟ್ಟರು.

ಪತ್ರಿಕೆಯ ಮೊದಲನೆಯ ಅಂಕವು ಪ್ರಕಾಶಿತವಾಯಿತು. ಇಷ್ಟರಲ್ಲೇ ಸಮುದ್ರವನ್ನು ನೋಡಬೇಕೆಂಬ ವಿಚಾರ ರಾಮರಿಗೆ ಮೂಡಿತು. ಅವರಿಗೆ ಮನಸ್ಸಾಗುತ್ತಲೇ ಎಂದಿನಂತೆ, ಹತ್ತಿರ ಬಿಡಿಗಾಸೂ ಇಲ್ಲದೆ ಹೊರಟೇ

ಬಿಟ್ಟರು. ಹತ್ತಿರ ಬೇರೆ ಸಾಮಾನಿಲ್ಲ; ದುಡ್ಡಿಲ್ಲ; ಕಾಸಿಲ್ಲ; ಸ್ಟೇಷನ್ನಿಗೆ ಹೋಗಿ ಟಿಕೆಟ್ ತೆಗೆದುಕೊಂಡು ಕೂತದ್ದೇ. ಕರಾಚಿಯನ್ನು ತಲುಪುತ್ತಲೇ ಇವರ ತೇಜಃಪುಂಜನಾದ ಮುಖ, ದಿವ್ಯಾವೇಶವನ್ನು ಕಂಡವರು ಅಪೂರ್ವ ಭಕ್ತಿಯಿಂದ ಇವರನ್ನು ಸ್ವಾಗತಿಸಿ ದರ್ಶನೀಯಸ್ಥಾನಗಳಿಗೆಲ್ಲಾ ಕರೆದೊಯ್ದು ತೋರಿಸಿದರು. ಸಮುದ್ರವನ್ನು ನೋಡಿದ್ದರಿಂದ ಅವರಿಗಾದ ಉನ್ಮತ್ತಾನಂದವು ಮುಂದೆ ಅಲೀಫ್‌ನಲ್ಲಿ ಮುದ್ರಿತವಾಯಿತು.

ಮುಂದೆ ಇವರ ಲೇಖಣಿಯಿಂದಲೇ ಹಲವು ಭಾಷೆಗಳಲ್ಲಿ ಬರವಣಿಗೆಗಳು ಬರಲಾರಂಭಿಸಿದುವು. ಅವರು ಅಪಾರ ಶ್ರದ್ಧೆಯಿಂದ ಕೇವಲ ಅಲ್ಪಾವಧಿಯಲ್ಲೇ ಉಪನಿಷತ್ತುಗಳು, ಪಾತಂಜಲಿ, ಜೈಮಿನಿ, ಕಾನಡ, ಕಪಿಲ, ಗೌತಮ, ವ್ಯಾಸ, ಕೃಷ್ಣ, ಶಂಕರರೇ ಮೊದಲಾದವರ ಭಾಷ್ಯ ಸೂತ್ರಗಳನ್ನು ಹಾಫಿಜ್, ಅತ್ತಾರ್, ಶಾಮ್ಸ್‌ಟೇಬ್ರಿಜ್, ಮೌಲಾನಾರೂಮಿ ಮೊದಲಾದ ಸೂಫೀತತ್ವವೇತ್ತರ ಅನುಭವ ಸಿದ್ಧಾಂತಗಳನ್ನೂ, ಕ್ಯಾಂಟ್, ಹೆಗಲ್, ಷೋಪನ್ ಹಾರ್, ಫಿಟೆ, ಗಯಟೆ, ಕಾರ್ಲೈಲ್ ಮುಂತಾದ ಪಾಶ್ಚಾತ್ಯರ ವಿಚಾರವಾಹಿನಿಗಳನ್ನೂ, ತುಲಸೀ, ಸೂರ್, ಕಬೀರ್, ತುಕಾರಾಂ ಮೊದಲಾದ ಸಾಧುಸಂತರ ಜೀವನ ವಾಣಿಗಳನ್ನೂ ಮನನ ಮಾಡಿಕೊಂಡಿದ್ದರು. ಅಲ್ಲದೆ ಪರ್ಶಿಯನ್, ಇಂಗ್ಲಿಷ್, ಹಿಂದಿ, ಉರ್ದು, ಸಂಸ್ಕೃತಗಳಲ್ಲಿ ಪೂರ್ಣ ಪಾಂಡಿತ್ಯವನ್ನು ಪಡೆದಿದ್ದರು. ಅವರ ಅಧ್ಯಯನವೆಂದರೆ ಅಪೂರ್ವ ಏಕಾಗ್ರತೆಯಿಂದ ಕೂಡಿದ ಶ್ರದ್ಧಾಮಯ ಧ್ಯಾನ. ಹೀಗೆ ತತ್ವ ವಿಚಾರದಲ್ಲಿದ್ದಂತೆಯೇ ಗಣಿತ ಮತ್ತು ವಿಜ್ಞಾನ ಶಾಸ್ತ್ರಗಳಲ್ಲೂ ಅವರಿಗೆ ಅಭೂತಪೂರ್ವಪ್ರೇಮ; ಅಂತೆಯೇ ಸ್ಪಿನೋಜಾ, ಸ್ಪೆನ್ಸರ್, ಡಾರ್ವಿನ್, ಹೆಕೆಲ್, ಟಿಂಡಾಲ್, ಹಕ್ಸ್ಲೇ, ಜೇವನ್ಸ್ ಮುಂತಾದ ವೈಜ್ಞಾನಿಕರ ಜೀವನಗಳೂ ಸಿದ್ಧಾಂತಗಳೂ ಅವರಿಗೆ ಎಷ್ಟು ಮೆಚ್ಚಿಗೆಯಾಗಿದ್ದುವೋ, ಅಷ್ಟು ಪೂರ್ಣಗತವಾಗಿದ್ದುವು. ಇಷ್ಟೆಲ್ಲಾ ಸಾಧನೆ ಕೇವಲ ಇಪ್ಪತ್ತಾರು ಇಪ್ಪತ್ತೇಳು ವಯಸ್ಸಿನೊಳಗೆ. ಮುಂದೆ ತಮ್ಮ ಜೀವಮಾನದಲ್ಲಿ ಕೇವಲ ಆರೇಳು ವರ್ಷಗಳು ಉಳಿದಿರುವುದನ್ನೂ ತಿಳಿದು ಬಿಟ್ಟಿದ್ದರೋ ಎಂಬಂತೆ ಹಿಂದಿನಿಂದಲೂ ತಮ್ಮ ಜೀವಮಾನದ ಪ್ರತಿಕ್ಷಣವನ್ನೂ ಪ್ರತಿಘಳಿಗೆಯನ್ನೂ ಜ್ಞಾನಾರ್ಜನೆಯಲ್ಲೇ ವಿನಿಯೋಗಿಸುತ್ತಾ ದಿವ್ಯಜ್ಞಾನದ ಮೂರ್ತಿಯಾಗಿಬಿಟ್ಟರು.

ಇದೇ ಸಮಯದಲ್ಲಿ ಲಾಹೋರಿನಲ್ಲಿ ಒಂದು ಅದ್ಭುತ ಮಹೋತ್ಸವವು ನಡೆಯಿತು. ಅದೇನೆಂದರೆ ಸ್ವಾಮಿ ವಿವೇಕಾನಂದರ ಆಗಮನ ಅವರ ದಿವ್ಯವಾದ ನಿರರ್ಗಳವಾಣಿ, ಅದ್ಭುತ ತ್ಯಾಗ, ಅವರ ದೈಹಿಕ ಮಾನಸಿಕ, ಆತ್ಮಬಲ, ಅವರ ಆ ನಿರ್ಭಯ ಭವ್ಯಮೂರ್ತಿ ಅವರಾ ಅತ್ಯುಚ್ಛವಾದ ಬುದ್ಧಿಶಕ್ತಿ; ಇವೆಲ್ಲವೂ ಪಂಜಾಬಿನ ಜನರಲ್ಲಿ ಅಸದಳವಾದ ಆನಂದೋತ್ಸಾಹಗಳನ್ನು ಹುಟ್ಟಿಸಿದುವು. ಸ್ವಾಮಿ ವಿವೇಕಾನಂದರು ಗುರುಗೋವಿಂದ ಸಿಂಹನ ಅಮೃತೋತ್ಸವವನ್ನು ಈಕ್ಷಿಸಿ "ಸಿಂಹ ಹೃದಯದ ಗುರುಗೋವಿಂದನ ಪಂಜಾಬು" ಎಂಬ ವಿಚಾರದಲ್ಲಿ ಮಾಡಿದರು. ಅಂದಿನ ದಿವ್ಯ ದೃಶ್ಯವನ್ನು ಕಣ್ಣಾರೆ ಕಂಡ ಪೂರ್ಣಸಿಂಹರು ಹೀಗೆ ವರ್ಣಿಸಿದ್ದಾರೆ. "ನಾನು ಕಾಲೇಜಿನಲ್ಲಿ ಇಂಟರ್ ಮೀಡಿಯಟ್ ಪರೀಕ್ಷೆಗೆ ಓದುತ್ತಿದ್ದೆ. ಅಂದಿನ ದೃಶ್ಯವು ನನ್ನ ಮೇಲೆ ಅಚ್ಚಳಿಯದ ಪರಿಣಾಮವನ್ನುಂಟುಮಾಡಿದೆ. ಹಾಲಿನ ತುಂಬ ಜನರು ಕಿಕ್ಕಿರಿದು ಹೊರಗಡೆ ಬಯಲಿನಲ್ಲೆಲ್ಲಾ ತುಂಬಿದ್ದಾರೆ. ಸ್ವಾಮಿಯನ್ನು ನೋಡುವ ಆತುರದಿಂದ ಒಬ್ಬರಿಗೊಬ್ಬರು ತಿಕ್ಕಾಡುತ್ತಾ ನುಗ್ಗುತ್ತಿದ್ದಾರೆ. ಇಂಥ ಪರಿಸ್ಥಿತಿಯನ್ನು ಕಾಣುತ್ತಲೇ ವಿವೇಕಾನಂದರು ತಾವು ಬಯಲಿನಲ್ಲೇ ಭಾಷಣ ಮಾಡುವುದಾಗಿ ಹೇಳಿದರು. ಹೊರಗಡೆ ಪ್ರದೇಶವು ವಿಶಾಲವಾಗಿತ್ತು. ಮಧ್ಯೆ ಒಂದು ಜಗಲಿಯಿತ್ತು. ಸ್ವಾಮಿಗಳು ಇದರ ಮೇಲೆ ಹತ್ತಿನಿಂತರು. ಆ ಎತ್ತರವಾದ ಸುಂದರವಾದ ಭವ್ಯಮೂರ್ತಿ ಕಾವಿಯನ್ನುಟ್ಟು ಅಲ್ಲಿ ನಿಂತು, ತನ್ನ ವಿಶಾಲ ನಯನಗಳ ತುಂಬುನೋಟದಿಂದ ಆತನ ವಾತಾವರಣವನ್ನೇ ಮೂರ್ಛೆಗೊಳಿಸಿರುವಂತಿದ್ದಾಗ, ಪವಿತ್ರ ಋಷಿಯಂತೆ ತೇಜಃಪುಂಜವಾಗಿ ನಿಂತಿದ್ದಿತು. ತಲೆಗೊಂದು ಕಾವಿಯ ಪಗಡಿಯನ್ನು ಸುತ್ತಿ, ಮತ್ತೊಂದು ಕಾವಿಯ ದುಪಟಿಯನ್ನು ಹೊದೆದಿದ್ದರು. ಆ ವೇದಾಂತಕೇಸರಿಯು ಗರ್ಜನೆಯಿಂದ ಮುಗ್ಧರಾಗಿ ನಿಶ್ಚೇಷ್ಟಿತರಾಗಿ ಕುಳಿತಿದ್ದ ಸಹಸ್ರಾರು ಪಂಜಾಬಿಗಳು ಹಲವು ಗಂಟೆಗಳ ಕಾಲ ಸ್ವಾಮಿಗಳೊಂದಿಗೆ ಅವರ ದಿವ್ಯವಾಣಿಯ ಗಂಭೀರ ಪ್ರವಾಹದಲ್ಲಿ ತೇಲುತ್ತಾ, ಅವರ ಉನ್ನತ ಬುದ್ಧಿಶಕ್ತಿಯೊಂದಿಗೆ ವಿಹರಿಸುತ್ತಿದ್ದರು. ದಿವ್ಯಾವೇಶದ ಜ್ಯೋತಿಮೂರ್ತಿಯಾಗಿ ನಿಂತು ಜೀವಜ್ಯೋತಿಯ ಕಿಡಿಗಳನ್ನು ಮೂಡಿಸುತ್ತಿದ್ದರು. ಮುಂದೆ ಪ್ರೊಫೆಸರ್ಸ್‌ರವರು ಸರ್ಕಸ್ಸಿನ ಗುಡಾರದಲ್ಲಿ "ಭಕ್ತಿಯಮೇಲೆ ವಿವೇಕಾ

ನಂತರ ಭಾಷಣವಾಯಿತು. ಈ ಭಾಷಣಗಳನ್ನೆಲ್ಲಾ ಏರ್ಪಡಿಸಿದವರು ಸ್ವಾಮಿರಾಮ. ಮುಂದೆ "ವೇದಾಂತ"ದ ಮೇಲೆ ಮತ್ತೊಂದು ಭಾಷಣವನ್ನೇರ್ಪಡಿಸಿದರು. ವಿವೇಕಾನಂದರ ವಾಣಿಯು-ಘೋಷವು ಪಂಜಾಬಿನ ಜನರೆದೆಯಲ್ಲಿ ಮೊಳಗಿ, ಪಂಚನದಗಳಲ್ಲಿ ನವಜೀವನದ ತರಂಗಗಳನ್ನೆಬ್ಬಿಸಿ, ಸುತ್ತಣ ಪರ್ವತ ಪ್ರದೇಶಗಳಲ್ಲಿ ಪ್ರತಿಧ್ವನಿತವಾದಂತೆಯೇ, ಭಕ್ತಿಯ ಭರದಲ್ಲಿ ಈಶ್ವರ ಸಾಕ್ಷಾತ್ಕಾರದಲ್ಲಿಯೇ ಹಾತೊರೆಯುತ್ತಿದ್ದ ಸ್ವಾಮಿರಾಮರ ಹೃದಯದ ಮೂಕ ಹೆಬ್ಬಯಕೆಗೆ ಹಾರಾಡಲು ವಿಶಾಲ ಗಗನವನ್ನೇ ತೋರಿಸಿದಂತಾಯಿತು ; ಸುಗಂಧದಿಂದ ತುಂಬಿ, ಬಿರಿದು ಪರಿಮಳವನ್ನೆರಚಲು ಮೆರೆಯುತ್ತಿರುವ ಮೊಗ್ಗಿನಮೇಲೆ ಮಂದಮಾರುತನು ಬೀಸಿ ತನ್ನ ಚುಂಬನದಿಂದ ರೇಖುಗಳನ್ನು ಬಿಡಿಸಿದಂತಾಯಿತು. ಸ್ವಾಮಿರಾಮರು ತಮ್ಮ ಜೀವನದ ಸಾರ್ಥಕತೆಯನ್ನು ಕಂಡಂತಾಯಿತು. ಮುಂದೆ ಎರಡು ವರ್ಷಗಳೊಳಗೇ ಸ್ವಾಮಿರಾಮರೂ ಸಹಾ ಕಾವಿ ಧರಿಸಿ ಸನ್ಯಾಸಿಗಳಾದರು. ಗೃಹಸ್ಥರಾಗಿದ್ದವರು, ಭಕ್ತಿ ಪ್ರೇಮಗಳಲ್ಲಿ ಮೈಮರೆಯುತ್ತಿದ್ದ ಕೋಮಲ ಹೃದಯದವರು, ಭಾವೋತ್ಕರ್ಷದಿಂದ ಕರಗಿ ನೀರಾಗುತ್ತಿದ್ದ ಮನಸ್ಸಿನ ಸ್ವಾಮಿರಾಮರು ಸನ್ಯಾಸಿಗಳಾದರು.

ಮುಂದೆ ವಿವೇಕಾನಂದರಂತೆಯೇ ರಾಮರೂ ಭೂಪ್ರದಕ್ಷಿಣೆ ಮಾಡಿ, ಸಮಸ್ತ ದೇಶಗಳಲ್ಲೂ ವೇದಾಂತದ ಬೆಳಕನ್ನು ಹರಡಿದರು. ಹಲವೆಡೆ ಇಬ್ಬರ ಭಾಷಣಗಳ ವಿಚಾರ, ವಿಸ್ತಾರ, ವಿನ್ಯಾಸಗಳು ಒಂದೇ ಬಗೆಯಾಗಿ ಕಂಡುಬರುತ್ತವೆ. ವಿವೇಕಾನಂದರ ವಾಗ್ಧೋರಣೆ, ಇಂಗ್ಲಿಷ್ ಭಾಷಾ ಪ್ರಾವೀಣ್ಯತೆ, ಮುಕ್ತಾಹಾರವಂತೆ ಅಚ್ಚುಕಟ್ಟಾಗಿ ಹೊರಸೂಸುತ್ತಿದ್ದ ಮಾತುಗಳ ಮಳೆ, ಆವರ ತಿಳಿಹಾಸ್ಯ, ಆ ದಿವ್ಯಮೂರ್ತಿಯ ತೇಜಃಪುಂಜವಾದ ಮುಖದಿಂದ ಮೊಳಗುತ್ತಿದ್ದ ವೇದಾಂತ ಡಿಂಡಿಮದಿಂದ ಪ್ರಪಂಚವೇ ನವಚೇತನ, ನವ ಯೌವನೋತ್ಸಾಹದಿಂದ ನಲಿಯಿತು. ಮುಂದೆ ಸ್ವಾಮಿರಾಮರ ಚಿರ ಮಂದಹಾಸ, ಪ್ರೇಮಭರಿತವಾದ ವಾಣಿಯಿಂದ ಬಂದ ವೇದಾಂತ ಗೀತಕ್ಕೆ ಮನಸೋತು ಅದೇ ಜಗತ್ತೇ ಒಲಿಯಿತು.

ಹೀಗೆ ಪಂಜಾಬಿನ ಒಂದು ಬಡಬ್ರಾಹ್ಮಣ ಕುಟುಂಬದಲ್ಲಿ ಹುಟ್ಟಿ,ತಮ್ಮ ಕೇವಲ ಮೂವತ್ತು ಮೂರು ವರ್ಷಗಳ ಜೀವನದ ಪ್ರತಿಕ್ಷಣವನ್ನೂ ಜ್ಞಾನಾರ್ಜನೆಗಾಗಿ ವಿನಿಯೋಗಿಸುತ್ತಾ, ಹಗಲು ರಾತ್ರಿಗಳು ತಮ್ಮ ಜೀವನವನ್ನು ಜ್ಞಾನದ ಹವನ ಕುಂಡದಲ್ಲಿ ಪುಟವಿಡುತ್ತಾ, ಅದನ್ನು ತಿದ್ದುತ್ತಿದ್ದರು. ಅವರಿಂದ ಮುಂದೆ ಜಗತ್ತಿಗೆ ದೊರೆತ ಜ್ಞಾನ ಭಂಡಾರವನ್ನು ದೃಷ್ಟಿಸಿ, ಅವರ ಜೀವನ ಚಿತ್ರವನ್ನು ನೆನೆಸಿಕೊಂಡರೆ ಕಣ್ಣು ಕಂಬನಿ ತುಂಬುವುದು. ಏಕೆಂದರೆ ಅವರ ಆ ಜ್ಞಾನಾರ್ಜನಾ ಮಾರ್ಗವು ಎಷ್ಟು ಕಡಿದಾಗಿ, ಕಂಟಕ ಮಯವಾಗಿತ್ತೆಂಬುದನ್ನು ನಾವು ಮರೆಯುವಂತಿಲ್ಲ. ಆದರೂ ಅವರು ಧೈರ್ಯಗೆಡದೆ ಪತಿವ್ರತೆಯ ನಿಶ್ಚಲ ನಡಗೆಯಂತೆ ಮುಂದುವರಿಯುತ್ತಾ, ಈ ಪುಟ್ಟ ಜೀವಮಾನದಲ್ಲಿ ಜಗತ್ತನ್ನೇ ಬೆಳಗಿದ ದಿವ್ಯಮೂರ್ತಿಗಳಾದರು.

ಲಾಹೋರ್ ಗವರ್ನ್ಮೆಂಟ್ ಕಾಲೇಜಿನ ಪ್ರಿನ್ಸಿಪಾಲರು ಇವರ ಹೆಸರನ್ನು ಪ್ರಾಂತೀಯ ಅಧಿಕಾರಕ್ಕೆ ಶಿಫಾರಿಷ್ ಮಾಡುವೆನೆಂದಾಗ, ಸ್ವಾಮಿ ರಾಮರು ಕತ್ತು ತಗ್ಗಿಸಿ ಕಂಬನಿ ತುಂಬಿ "ನಾನು ಇಷ್ಟು ಶ್ರಮದಿಂದ ಜ್ಞಾನಾರ್ಜನೆಮಾಡುತ್ತಿರುವುದು ಅದನ್ನು ಮಾರುವುದಕ್ಕಲ್ಲ" ಎಂದುಬಿಟ್ಟರು. ಹೀಗೆ ದೊಡ್ಡ ಅಧಿಕಾರ ಪದವಿಗೆ ಬದಲಾಗಿ ಕೇವಲ ಉಪಾಧ್ಯಾಯರಾಗಿರುವುದೇ ಅವರಿಗೆ ಪ್ರಿಯವಾಗಿದ್ದಿತು.

ಒಮ್ಮೆ ಮಿಷನ್ ಕಾಲೇಜಿನ ಪ್ರಿನ್ಸಿಪಾಲರಾದ ಡಾಕ್ಟರ್ ಈವಿಂಗ್‌ರವರ ಮುಂದೆ ಹೋಗಿ ನಿಂತು "ನೀವು-ನೀವು ಕ್ರಿಸ್ತನನ್ನು ಆರಾಧಿಸುವಿರಾ ! ಅವನನ್ನು ನೀವು ನಿಮ್ಮ ಕಣ್ಣಿಂದ ನೋಡಿರುವಿರಾ ! ಇಲ್ಲ. ನೀವು ಅವನನ್ನು ನೋಡಿಲ್ಲ. ನೋಡಿ ! ನೋಡಿ ! ಈವಿಂಗ್ ! ಕ್ರಿಸ್ತನು ನಿಮ್ಮ ಮುಂದೆಯೇ ನಿಂತಿರುವನು." ಎಂದರು. ಹೀಗೆ ಅವೇಶೋನ್ಮಾದಗಳು ಪೂರ್ಣವಾದುವು.

ಆ ದಿನಗಳಲ್ಲಿ ಅವರನ್ನು ಲಾಹೋರಿನ ಬೀದಿಗಳಲ್ಲಿ ಕಂಡವರ ಹೃದಯದಲ್ಲೆಲ್ಲಾ ಅವರ ಬಗ್ಗೆ ಏನೋ ಒಂದು ಬಗೆಯ ಅಂತಃಕರಣವು ಮಿಡಿಯುತ್ತಿದ್ದಿತು. ಮೈಮರೆತು ಉನ್ಮತ್ತರಾಗಿ "ಓಂ, ಓಂ" ಎಂದು ಓಂಕಾರ ಧ್ವನಿಯಲ್ಲಿ ತಲ್ಲೀನರಾಗಿ ಅವರು ರಸ್ತೆಯಲ್ಲಿ ನಡೆದು ಹೋಗುತ್ತಿದ್ದರೆ, ಹಾದಿಯೇ ರೋಮಾಂಚವೆದ್ದಂತೆ ತೋರುತ್ತಿದ್ದಿತು. "ನೀನು ದೇವರೆಂದು ಹೇಳು. ನಡುರಾತ್ರಿಯಲ್ಲಿ ಮನೆಯ ನೆತ್ತಿಯಲ್ಲಿ ಹತ್ತಿ ಕೂಗಿ ಹೇಳು--ಉದ್ಘೋಷಿಸು.

'ನಾನು ದೇವರು' ಎಂದು ; ಎಲ್ಲೈ ಮಾನವನೇ ! ಏಳು ಎದ್ದೇಳು. ನಾನು ದೇವರು ಎಂದು ಹೇಳು' ಹೀಗೆಂದು ಕಂಡವರಿಗೆಲ್ಲಾ ಬೋಧಿಸುತ್ತಿದ್ದರು. ತೀವ್ರ ಧ್ವನಿಯಲ್ಲಿ ಗಟ್ಟಿಯಾಗಿ ಪ್ರತಿಧ್ವನಿತವಾಗುವಂತೆ "ನಾನು ದೇವರೆಂದು" ಸಾರೆಂದು ತನ್ನ ಮೆಚ್ಚಿನವರಿಗೆ ಹೇಳುತ್ತಿದ್ದರು. ಯಾವ ಒಳ್ಳೆಯ ವಸ್ತುವಿನ ಸಾರ ಕೇಳಿದರಾಗಲೀ, ಸುಂದರ ಪದಾರ್ಥವನ್ನು ಕಂಡರಾಗಲೀ, ಸಾಹಸ ಕಾರ್ಯದ ವರ್ಣನೆಯು ಕಿವಿಗೆ ಬಿದ್ದರಾಗಲೀ ತಟ್ಟನೆ ಅವರು "ಹಾ ! ಇದು ವೇದಾಂತ" ವೆನ್ನುತ್ತಿದ್ದರು. ಮಾನವ ಜೀವನದಲ್ಲಿ ಭವ್ಯವಾದ, ದಿವ್ಯವಾದ, ಸುಂದರವಾದ, ಪವಿತ್ರವಾದ, ಉಜ್ವಲವಾದ ಯಾವುದೊಂದಿದ್ದರೂ ಅದೆಲ್ಲಾ ಅವರ "ವೇದಾಂತ"ದಲ್ಲಿ ಸಮಾವೇಶವಾಗಿದ್ದಿತು. ವೇದಾಂತವು ಅವರಿಗೆ ಮೀಮಾಂಸವಾಗಿರಲಿಲ್ಲ, ಕಾವ್ಯೋನ್ಮಾದವಾಗಿತ್ತು.

ಕಡೆಗೆ ತೀರ್ಥರಾಮರು ಒಂದು ದಿನ ತಮ್ಮ ಕಾಲೇಜು ಪ್ರಿನ್ಸಿಪಾಲರಿಗೆ "ಬಾದ್‌ಷಾಹ ರಾಮನು ದೇವರ ಹೊರತು ಮತ್ತಾರ ಗುಲಾಮನೂ ಆಗಿರಲಾರನು" ಎಂದು ಹೇಳಿ ತಮ್ಮ ರಾಜೀನಾಮೆಯನ್ನು ಬರೆದು ಕಳುಹಿಸಿಬಿಟ್ಟರು. ಸೆನೇಟಿನಲ್ಲಿ ಇದರ ವಿಚಾರ ಚರ್ಚೆಗೆ ಬಂದಾಗ ಸೆನೇಟರುಗಳು "ತೀರ್ಥರಾಮನ ಬುದ್ಧಿ ಕೆಟ್ಟು ಹುಚ್ಚಾಗಿದೆ" ಎಂದರಂತೆ. ಆಗ ಅಲ್ಲಿದ್ದ ಪ್ರೊಫೆಸರ್ ಇಕ್ಬಾಲರು ಕೃದ್ಧರಾಗಿ ಎದ್ದು "ತೀರ್ಥರಾಮರ ಬುದ್ಧಿಯೇ ಕೆಟ್ಟಿದ್ದರೆ ಇನ್ನು ಬುದ್ಧಿ ಎಂಬುದು ಎಲ್ಲಿಯೂ ಇಲ್ಲವೆಂದೇ ಹೇಳಬೇಕು" ಎಂದು ಪ್ರತಿಭಟಿಸಿ ಮಾತಾಡಿದರು. ಅಂತೂ ಸ್ವಾಮಿರಾಮರು ೧೯೦೦ನೇ ಇಸವಿಯ ಜುಲೈನಲ್ಲಿ ಲಾಹೋರನ್ನು ಬಿಟ್ಟು ಹಿಮಾಲಯದ ಅರಣ್ಯಕ್ಕೆ ತೆರಳಿಬಿಟ್ಟರು. ಅವರು ಹೊರಟಂದು ರೈಲ್ವೆ ಸ್ಟೇಷನಿನಲ್ಲಿ ಗುಂಪುಗುಂಪಾಗಿ ಸೇರಿದ್ದ ಅವರ ಮಿತ್ರರು, ಮೆಚ್ಚಿನವರು, ಸ್ವಾಮಿ ರಾಮರೇ ರಚಿಸಿದ್ದ ಒಂದು ಉರ್ದು ಗಜಲ್‌ನ್ನು ಹಾಡಿ ಕಂಬನಿ ತುಂಬಿ ಬೀಳ್ಕೊಟ್ಟರಂತೆ.

"ನನ್ನ ಗಣಿತ ಶಾಸ್ತ್ರವೇ—ಬೀಳ್ಕೊಡಿಗೆ ನಿನಗೆ
ನನ್ನ ರಾವಿಯೇ—ಹೋಗಿಬರುವೆ
ಓ ನನ್ನ ಮಿತ್ರರೇ ; ನನ್ನ ಶತ್ರುಗಳೇ !
ಬರುವೇ ! ಬರುವೇ ! ನನ್ನ ಬೀಳ್ಕೊಡಿರಿ ನೀವು
ನನ್ನ ಹೃದಯವೇ ! ನೀ ಎನ್ನ ದೇವತೆಯೇ !

ದೇವ ! ನೀನೂ ನನ್ನ ಬೀಳ್ಕೊಡಿಂದು
ಇನ್ನುಂದೆ ವಾಸವಾ ವನಪರ್ವತಗಳಲ್ಲಿ
ಎಲ್ಲರಿಂದಲೂ ದೂರ ಆವನ ಪ್ರೇಮದಲಿ.

ಹಿಮಾಲಯದಲ್ಲಿ

ಹೀಗೆ ೧೯೦೦ರ ಜುಲೈ ತಿಂಗಳಲ್ಲಿ ತಮ್ಮ ಕೆಲಸಕ್ಕೆ ರಾಜೀನಾಮೆಯನ್ನು ಕೊಟ್ಟು, ತಮ್ಮ ಪತ್ನೀ ಪುತ್ರ ಮತ್ತೆ ಕೆಲವು ಸಂಗಡಿಗರೊಂದಿಗೆ ಅರಣ್ಯ ವಾಸಕ್ಕೆ ತೆರಳಿಬಿಟ್ಟರು. ಹರಿದ್ವಾರಕ್ಕೆ ತಲುಪಿದ ಮೇಲೆ ಅಲ್ಲಿಂದ ಮುಂದೆ ದೇವಪ್ರಯಾಗದ ಮಾರ್ಗವಾಗಿ ಟಿಹರಿಗೆ ತಲುಪಿದರು. ಅಲ್ಲಿ ಗಂಗಾನದಿ ದಡದಲ್ಲಿದ್ದ ಸುಂದರ ಪ್ರಶಾಂತ ಸ್ಥಾನದಲ್ಲಿ ಗುಡಿಸಲನ್ನು ಕಟ್ಟಿಕೊಂಡು ನಿಂತರು. ಇಲ್ಲಿ ರಾಮರು ತಮ್ಮೊಂದಿಗಿದ್ದವರೆಲ್ಲರಿಗೂ ತಮ್ಮಲ್ಲೇನಾದರೂ ಹಣವಿದ್ದರೆ ಅದನ್ನು ಗಂಗೆಯಲ್ಲಿ ಎಸೆದುಬಿಟ್ಟು, ಸರ್ವರ ಸಂರಕ್ಷಕನಾದ ಈಶ್ವರನಲ್ಲಿ ಭಕ್ತಿ ಶ್ರದ್ಧೆಯಿಂದ ಧ್ಯಾನಾಸಕ್ತರಾಗಬೇಕೆಂದು ಅಪ್ಪಣೆ ಮಾಡಿದರು. ಅಲ್ಲದೆ ಯಾರಿಗಾದರೂ ಏನಾದರೂ ಬೇಕುಗಳ ಚಿಂತೆಯಾದರೆ ಅದು ಅವರಿಗೆ ಈಶ್ವರನಲ್ಲಿ ಅನನ್ಯ ವಿಶ್ವಾಸವಿಲ್ಲದಿರುವ ದೋಷದಿಂದಲೇ ಎಂದೂ, ಅಂಥವನು ಸೃಷ್ಟಿಕರ್ತನಾದ ಸತ್ಯಾತ್ಮದಲ್ಲಿ ನಂಬಿಕೆಯಿಲ್ಲದೆ ಶುಷ್ಕ ಜೀವನವನ್ನು ಬಾಳುವ ಬದಲು ಸಾಯುವುದೇ ಮೇಲೆಂದೂ ಬೋಧೆ ಮಾಡಿದರು.

ಹೀಗಿರುವಲ್ಲಿ ದೈವವಶಾತ್ ಋಷಿಕೇಶ ಕ್ಷೇತ್ರದ ಕಲ್ಕತ್ತೆಯ ಮ್ಯಾನೇಜರಾದ ಬಾಬಾ ರಾಮನಾಥರು ಕ್ಷೇತ್ರಗಳ ವ್ಯವಸ್ಥೆಯ ಸಂಬಂಧದಲ್ಲಿ ಆ ಗಂಗೋತ್ರೀ ಮಾರ್ಗವಾಗಿಯೇ ಬಂದರು. ಅಲ್ಲಿ ರಾಮರ ವಿಚಾರವನ್ನು ಕೇಳಿ ಅವರ ಕುಟೀರಕ್ಕೆ ಬಂದು ಭೇಟಿಯಾದರು. ಅವರು ಆತ್ಮಾನಂದದಲ್ಲಿ ಮೈ ಮರೆತಿದ್ದುದನ್ನು ಕಂಡು ಅಚ್ಚರಿ ಸಂತೋಷಗಳಿಂದ ಹಿಂದಿರುಗಿ, ತಮ್ಮೊಂದಿಗೆ ಬಂದಿದ್ದ ಅಂಗಡಿಯವನಿಗೆ "ಆತ್ಮ ಸಾಕ್ಷಾತ್ಕಾರದಲ್ಲಿ ತೊಡಗಿರುವ ಈ ಜನ್ಮಕ್ಕೆ ತಿಂಗಳಿಗೆ ಹತ್ತು ರೂಪಾಯಿಗಳ ದವಸವನ್ನು ಒದಗಿಸು" ಎಂದು ಅಪ್ಪಣೆ ಮಾಡಿದರು.

ಈ ಅನಿರೀಕ್ಷಿತ ಸಹಾಯದಿಂದ ಚಕಿತರಾದ ಅವರೆಲ್ಲರೂ ಅಪಾರ ದೈವ ಭಕ್ತಿ ಶ್ರದ್ಧೆಯಿಂದ ಕೂಡಿ ಧ್ಯಾನಸಾಧನೆಯಲ್ಲಿ ತೊಡಗಿದರು. ರಾಮರು ಹೆಚ್ಚು ಉತ್ಸಾಹದಿಂದ "ಪ್ರಬೀಧ್" ಪತ್ರಿಕೆಗೆ ತಮ್ಮ ಅನುಭವಸಾರವಾದ ಕವನಕೃತಿಗಳಾದಿಯಾದುವನ್ನು ಕಳುಹಿಸತೊಡಗಿದರು.

ಇಲ್ಲಿ ಒಂದು ನಡುರಾತ್ರಿ ಇದ್ದಕ್ಕಿದ್ದಂತೆಯೇ, ರಾಮರು ಎಲ್ಲರೂ ನಿದ್ರಿಸುತ್ತಿರುವಾಗ ಕುಟೀರದಿಂದ ಹೊರಹೊರಟು ಉತ್ತರ ಕಾಶಿಯಕಡೆಗೆ ನಡೆದು ಬಿಟ್ಟರು. ಕಗ್ಗತ್ತಲೆಯಲ್ಲಿ ತಡವರಿಸುತ್ತಾ ಹೆಜ್ಜೆಯಿಡುತ್ತಾ ಆ ಹಿಮವತ್ಪರ್ವತದ ಕಾಡುಮೇಡುಗಳಲ್ಲಿ ನಡೆಯುತ್ತಿರುವಾಗಲ ಆ ನೀರವ ರಾತ್ರಿಯಲ್ಲಿ ಇದ್ದಕ್ಕಿದ್ದಂತೆಯೇ ಕಾರ್ಮೋಡಗಳು ಮುತ್ತಿ ಸಿಡಿಲಬ್ಬರಿಸಿ ಮಿಂಚಿಸುಳಿದು ಬಿರುಮಳೆಯು ಭೋರ್ಗರಿಯುತ್ತಾ, ಬರಿಯ ತಲೆ, ಕಾಲುಗಳಿಂದ ನಡೆಯುತ್ತಾ ಕೇವಲ ಧೋತಿಯಲ್ಲಿದ್ದ ರಾಮರ ಮೇಲೆ ವರ್ಷಿಸತೊಡಗಿತು. ಶಿಖರಗಳ ಕಡೆಯಿಂದ ಹರಿದು ಬರುತ್ತಿರುವ ಅಪಾರ ಜಲಪ್ರವಾಹದಿಂದ ತಮ್ಮ ಹಾದಿಯೇ ಕಳಚಿ ಹೋಗುವಂತೆ ಕಂಡುಬಂದರೂ ರಾಮರು ಭಯದ ಸುಳಿವೇ ಇಲ್ಲದೆ ಮುಂದೆ ಹೋಗುತ್ತಿದ್ದರು: ಬಂಡೆಯ ಪಕ್ಕಗಳಲ್ಲಿ ಬೆಳದ ಹುಲ್ಲನ್ನೂ, ಕಲ್ಲುಗಳನ್ನೂ ಹಿಡಿದು ಕಾಡುಮೇಕೆಗಳೂ ಹತ್ತಲಾಗದ ಪರ್ವತ ಪ್ರದೇಶವನ್ನು ದಾಟಿದರು. ಕ್ಷಣಕಾಲದಲ್ಲೇ ಆ ಬೆಟ್ಟವನ್ನೇರಿ ತಾವೇ "ಓಂ ! ಓಂ ! ಓಂ !" ಎಂದು ಕೂಗುತ್ತಿದ್ದರು.

ಹೀಗೆ ರಾಮರು ಇದ್ದಕ್ಕಿದ್ದಂತೆಯೇ ಅದೃಶ್ಯರಾದುದನ್ನು ತಿಳಿದ ಅವರ ಪತ್ನಿಯು ಸಿಡಿದು ಬಡಿದಂತಾಗಲು ಹಾಸಿಗೆ ಹಿಡಿದು ಮಲಗಿಬಿಟ್ಟರು. ಕೆಲವು ದಿನಗಳ ನಂತರ ಅವರು ಹಿಂತಿರುಗಿ ಬಂದ ಮೇಲೂ ಆಕೆಗೆ ಅಲ್ಲಿ ಗುಣಮುಖವಾಗಲಿಲ್ಲ. ಮಗ ಬ್ರಹ್ಮಾನಂದನೊಂದಿಗೆ ತನ್ನ ತೌರುಮನೆಗೆ ಹಿಂತಿರುಗಲಪೇಕ್ಷಿಸಿದರು. ಅಂತೆಯೇ ಮರುದಿನ ಸ್ವಾಮಿ ನಾರಾಯಣರೊಂದಿಗೆ ತಪ್ಪಲಿಳಿದು ಅಲ್ಲಿಂದ ಮುಂದೆ ಊರಿಗೆ ಪ್ರಯಾಣ ಬೆಳಸಿದರು.

ಅರಣ್ಯ ಪ್ರದೇಶದಲ್ಲಿ ಆರು ತಿಂಗಳು ಏಕಾಂತವಾಸವಾದ ನಂತರ ೧೯೦೧ರ ವೇಳೆಗೆ ಶ್ರೀ ಸ್ವಾಮಿ ವಿವೇಕಾನಂದರು ನಿತ್ಯಾನಂದಮಯರಾಗುವುದಕ್ಕೆ ಕೆಲವೇ ದಿನಗಳ ಮುಂಚೆ ಶ್ರೀರಾಮರು ಸನ್ಯಾಸ ಸ್ವೀಕಾರಮಾಡಲು ಬಯಸಿದರು. ಅವರಿಗೆ ಹಾಗೆ ತೋರಿದಂದು ಆ ಆಶ್ರಮ ಸ್ವೀಕಾರಮಾಡಲು

ದ್ವಾರಕೆಯ ಶಾರದಾ ಪೀಠದ ಶ್ರೀ ಶಂಕರಾಚಾರ್ಯರು ಹಿಂದೆಯೇ ಅನುಮತಿ ಇತ್ತಿದ್ದರು. ಪರಮ ಪವಿತ್ರವಾದಂದು ಗಂಗೆಯಲ್ಲಿ ಮಿಂದು, ನಿಂದು, ತಮ್ಮ ಯಜ್ಞೋಪವೀತವನ್ನು ಗಂಗಾ ಪ್ರವಾಹದಲ್ಲಿ ಸಮರ್ಪಿಸಿ ಕಾವಿ ಧರಿಸಿ, ಮೈ ಮರೆತು ಓಂಕಾರ ಪಠನ ಮಾಡುತ್ತಿದ್ದರು. ಮುಂದೆ ಅದೇ ಗಂಗಾನದಿಯ ತಡಿಯಲ್ಲಿ ಘಂಟೆಗಟ್ಟಲೆ ಆನಂದದಲ್ಲಿ ಸಮಾಧಿಸ್ಥರಾಗುತ್ತಿದ್ದರು.

ಇನ್ನು ಮುಂದೆ ಗೋಸ್ವಾಮಿ ತೀರ್ಥರಾಮರು ದ್ವಾರಕೆಯ ಶಾರದಾ ಪೀಠದ ತೀರ್ಥ ಪರಂಪರೆಯ ಸನ್ಯಾಸಿಗಳಾಗಿ ಸ್ವಾಮಿ ರಾಮತೀರ್ಥರೆಂದು ಅಂಕಿತರಾದರು. ಮುಂದೆ ಅರಣ್ಯದಲ್ಲೇ ಏಕಾಂಗಿಯಾಗಿ ಧ್ಯಾನಾಸಕ್ತರಾಗಿರುತ್ತಾ, ಆಗಾಗ್ಗೆ ಮಾತ್ರ ಇತರರಿಗೆ ಕಾಣಿಸುತ್ತಿದ್ದರು. ಆರು ತಿಂಗಳೊಳಗೇ ಈ ಸ್ಥಳಕ್ಕೂ ದರ್ಶನಕ್ಕಾಗಿ ಜನರು ಹೋಗಿ ಬರುವುದು ಹೆಚ್ಚಿದ್ದರಿಂದ ೧೯೦೧ನೇ ಇಸ್ವಿ ಜೂನ್ ೧೪ನೇ ತಾರೀಖು ನಾಲ್ಕೈದು ಮೈಲಿ ಮೇಲಿದ್ದ ಗುಹೆಯೊಂದಕ್ಕೆ ಹೋಗಿ ನಿಂತರು. ಅಲ್ಲಿಂದ ಮುಂದೆ ೧೯೦೧ನೇ ಆಗಸ್ಟ್ ೧೬ರಲ್ಲಿ ಅಲ್ಲಿಂದ ತುಲಾರಾಮ್, ಸತ್ಯನಾರಾಯಣರೊಂದಿಗೆ ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದರೀ ನಾರಾಯಣ, ತ್ರಿಯುಗ್ ನಾರಾಯಣಗಳನ್ನು ಸಂದರ್ಶಿಸುತ್ತಾ, ಹಿಮಾಲಯದ ಮಡುಲಿನಲ್ಲೇ ಮೈಮರೆತು ಸಂಚರಿಸುತ್ತಿದ್ದರು. ಯಮುನೋತ್ರಿಯ ಹತ್ತಿರ ಬಿಸಿನೀರಿನ ಬುಗ್ಗೆಯ ಬಳಿಯ ಗುಹೆಯಲ್ಲಿ ಒಂದು ತಿಂಗಳಿದ್ದು, ಮುಂದೆ ಯಮುನೆಯ ಜನ್ಮಸ್ಥಾನವಾದ ಸುಮೇರುವನ್ನು ಹತ್ತಿ ನಡೆದರು.

ಅಲ್ಲಿಂದ ಮುಂದೆ ಮಂಜು ಮುಚ್ಚಿದ್ದ ಬೆಟ್ಟಗಳನ್ನೇ, ಅಪಾಯಕರವಾಗಿದ್ದರೂ ದಾಟುತ್ತಾ ನೇರವಾಗಿ ನಡೆದು ಎಂದಿನ ದಾರಿಯಲ್ಲಿ ಹನ್ನೆರಡು ದಿನಗಳಾಗುವ ಪ್ರಯಾಣವನ್ನು ಮೂರೇ ದಿನಗಳಲ್ಲಿ ಮುಗಿಸಿ ಗಂಗೋತ್ರಿಯನ್ನು ಸೇರಿ ಅಲ್ಲಿ ಒಂದು ತಿಂಗಳಿದ್ದು ಮುಂದೆ ಕೇದಾರನಾಥವನ್ನು ತಲುಪಿ, ಮುಂದೆ ತ್ರಿಯುಗ್ ನಾರಾಯಣದ ಮಾರ್ಗವಾಗಿ ನಡೆದು ದೀಪಾವಳಿಗೆ ಒಂದು ವಾರ ಮುಂಚೆ ಬದರೀನಾರಾಯಣವನ್ನು ತಲುಪಿದರು.

ಮತ್ತೆ ೧೯೦೧ರ ಡಿಸೆಂಬರ್‌ನಲ್ಲಿ ಅಲ್ಲಿಂದ ಹಿಂತಿರುಗಿ ಅಲ್ಮೋರಾ ಮಾರ್ಗವಾಗಿ ಮಥುರಾ ಕ್ಷೇತ್ರಕ್ಕೆ ಬಂದರು. ಮಥುರಾ ಕ್ಷೇತ್ರಕ್ಕೆ ಬಂದು ಸ್ವಾಮಿ ಶಿವಗುಣ ಆಚಾರ್ಯರಿಂದ ಏರ್ಪಡಿಸಲ್ಪಟ್ಟ ಸರ್ವಮತ ಸಮ್ಮೇಳನದ

ಎರಡು ಉತ್ಸವಗಳಲ್ಲಿ ಅಧ್ಯಕ್ಷತೆಯನ್ನು ವಹಿಸಿ ಹಿಂದಿರುಗಿದರು. ಇಲ್ಲಿ ಅವರ ಭಾಷಣಗಳನ್ನು ಕೇಳಲು ಸಹಸ್ರಾರು ಜನರು ಬಂದು ಸೇರುತ್ತಿದ್ದರು. ಈ ದಿವ್ಯಮೂರ್ತಿಯ ದರ್ಶನದಿಂದಲೂ, ಅವರ ದಿವ್ಯವಾಣಿಯ ಅಮೃತ ಧಾರೆಯಿಂದಲೂ ಆಕರ್ಷಿಸಲ್ಪಟ್ಟ ಜನರು ಕಲ್ಲುಮುಳ್ಳೆನ್ನದೆ ಅವರನ್ನು ಹಿಂಬಾಲಿಸುತ್ತಾ, ಅತ್ಯಂತ ಛಳಿ ದಿನಗಳಾದರೂ ರಾತ್ರಿ ಬಹುಹೊತ್ತು ; ಯಮುನೆಯ ದಡದಲ್ಲಿ ಕೂತು ಮೈಮರೆತು ಅವರ ವಾಚನಾಮೃತವನ್ನು ಪಾನಮಾಡುತ್ತಿದ್ದರು. ಅಲ್ಲಿಂದ ರಾಯ್ ಬಹದ್ದೂರ್ ಬೈಜ್‌ನಾಥರು ಸ್ವಾಮಿಗಳನ್ನು ಅಗ್ರಾಕ್ಕೂ, ಮುಂದೆ ಬಾಬೂ ಗಂಗಾ ಪ್ರಸಾದರು ಲಕ್ನೋವಿಗೂ ಕರೆದುಕೊಂಡು ಹೋಗಿ ಭಾಷಣಗಳನ್ನೇರ್ಪಡಿಸಿದರು. ಮುಂದೆ ಲಾಲಾ ಸರ್ಜೂಲಾಲ್ ಪಾಂಡೇರವರು ಫೈಜಾಬಾದ್‌ನಲ್ಲಿ ೧೯೦೨ರ ಫೆಬ್ರುವರಿಯಲ್ಲಾದ ಸಾಧಾರಣ ಧರ್ಮಸಭೆಯಲ್ಲಿ ಭಾಷಣಮಾಡಲು ಫೈಜಾಬಾದಿಗೆ ಕರೆದುಕೊಂಡು ಹೋದರು. ಆದಾದನಂತರ ೧೯೦೩ರ -ವೇಳೆಗೆ ಸ್ವಾಮಿಗಳು ಮತ್ತೆ ಘನಾರಣ್ಯವನ್ನು ಹೊಕ್ಕು ಧ್ಯಾನಾಸಕ್ತರಾಗಿ ಹಿಮಾಲಯದ ಟೆಹರಿ ಪ್ರಾಂತ್ಯದಲ್ಲಿ ನಿಂತರು. ಹಗಲು ರಾತ್ರಿಗಳನ್ನು ಅನಂತ ಚಿಂತನೆಯಲ್ಲೇ ಕಳೆಯುತ್ತಿದ್ದರು. ಬಂಧನರಹಿತವಾದ ಅಪಾರ ವೇದಾಂತ ಜ್ಞಾನದಲ್ಲಿ ವಾಸಿಸುತ್ತಿದ್ದರು.

ಅವರು ಮಿತಭಾಷಿಗಳಾಗಿದ್ದರು. ಆ ದಿನಗಳಲ್ಲಿ ಅವರನ್ನು ಸಂದರ್ಶಿಸಿದವರೆಲ್ಲರೂ ಅವರ ಬಳಿ ಭಗವತ್ ಕಾಂತಿಯನ್ನು ಅರಿಯುತ್ತಿದ್ದರು. ಅವರ ಕಣ್ಣುಗಳು ಜ್ಞಾನಪ್ರಕಾಶದಿಂದ ತೊಳಗುತ್ತಿದ್ದುವು; ಅವರ ಮುಖವೇ ದಿವ್ಯ ತೇಜಸ್ಸಿನಿಂದ ಪ್ರಶಾಂತವಾಗಿ ಬೆಳಗುತ್ತಿದ್ದಿತು. ಪಾದಗಳ ಕೆಳಗಿನ ಹುಲ್ಲನ್ನು ಕೂಡ ಮುದ್ದಿನಿಂದ ಮೆಚ್ಚುತ್ತಿದ್ದರು. ಗಂಗಾನದಿಯನ್ನು "ನನ್ನ ತಂಗೀ !" ಎಂದು ಕರೆಯುತ್ತಿದ್ದರು ತಮ್ಮ ಕಾಗದ ಪತ್ರ, ಲೇಖಣಿಗಳಿಗೆಲ್ಲಾ ಬೇರೆ ಬೇರೆ ಅಡ್ಡಹೆಸರಿಟ್ಟು ತನ್ನದೇ ಒಂದು ಸಂಘದಲ್ಲಿ ವಾಸಿಸುತ್ತಿದ್ದರು.

ಅವರ ಮಧುರ ಜೀವನದ ಸವಿಗಂಡ ಜನರು ಗುಂಪುಗುಂಪಾಗಿ ಅವರಲ್ಲಿಗೆ ಬರುತ್ತಿದ್ದರು. ಏಕಾಂತವು ಬೇಕಾದೊಡನೆಯೇ ಕೆಲಸವನ್ನು ಕಟ್ಟಿಟ್ಟು ಜಿಂಕೆಯಂತೆ ನೆಗೆಯುತ್ತಾ, ಕಡಿದಾದ ಮಂಜುಮುಚ್ಚಿದ ಪರ್ವತದ ಬೆಟ್ಟಗಳನ್ನು ಹತ್ತುತ್ತಾ, ಮರಣವನ್ನೇ ನ್ಯಾಯಾಮುದಂತೆ ಅಳುಕದೆ ಎದುರಿ

ಸುತ್ತಾ, ಹಿಮಪರ್ವತದ ಕಣಿವೆಗಳಲ್ಲಿ, ನದಿಗಳಲ್ಲಿ ಈಜುತ್ತಾ, ಕಗ್ಗತ್ತಲು ರಾತ್ರಿಗಳಲ್ಲಿ ಸಹ ನಿರ್ಭಯರಾಗಿ ಸಂಚರಿಸುತ್ತಾ ಇದ್ದರು. ಅವರ ಆನಂದವು ಸ್ವರ್ಗೀಯವಾದದ್ದಾಗಿದ್ದಿತು. ಅನೇಕವೇಳೆ ಅವರು ಈ ಆತ್ಮಾನಂದದಲ್ಲಿ ಮೈಮರೆತು ಹಲವು ದಿನರಾತ್ರಿ, ಅನ್ನಾಹಾರಗಳಿಲ್ಲದೆ, ಯಾವುದೋ ಹಾದಿ ಕಾಣದ ಗುಹೆಯಲ್ಲಿ ಬಿದ್ದಿದ್ದುದನ್ನು ಕಂಡು ಅಲ್ಲಿನವರು ಉಪಚರಿಸಿದ್ದಾರೆ.

ಗಂಗಾತಡಿಯಲ್ಲಿ ಕುಳಿತು, ಕಣ್ಣುಗಳಿಂದ ಆನಂದಬಾಷ್ಪವು ಧಾರೆಯಾಗಿ ಸುರಿಯುತ್ತಿರಲು, ಟಿಹರಿಯು ತ್ರಿವೇಣಿ ಸಂಗಮವೆಂದೂ, ತಮ್ಮ ಕಂಬನಿಯು ಎರಡೂ ಪ್ರವಾಹಗಳು ಗಂಗೆಯಲ್ಲಿ ಸೇರುವ ಸ್ಥಳವೆಂದೂ ಪ್ರೇಮ ಪರವಶದಿಂದ ನುಡಿಯುವರು.

ಜನರು ಅವರಲ್ಲಿಗೆ ಹೋಗಬೇಕಾಗಿದ್ದಿತೇ ಹೊರತು ಅವರು ಜನರಲ್ಲಿ ಹೋಗುತ್ತಿರಲಿಲ್ಲ. ಆಗಿನ ಟಿಹರಿ ಮಹಾರಾಜರು ಅವರ ಅವಿಚ್ಛಿನ್ನ ಭಕ್ತರಾಗಿದ್ದರು. ಅವರು ತಮ್ಮ ಚಿರಮಂದಹಾಸದ ಬೆಳದಿಂಗಳಿಂದ ರಾಜರೊಡನೆ ಭೇಟಿಯಾಗುತ್ತಿದ್ದರು. ಲಾಹೋರನ್ನು ಬಿಟ್ಟಂದಿನಿಂದ ಎರಡುಮೂರು ವರ್ಷಗಳನ್ನು ಅವರು ದಿವ್ಯ ಸೃಷ್ಟಿಯ ತುಂಬುಮಡಿಲಲ್ಲಿ ಕಳೆದರು. ಆ ಸೃಷ್ಟಿಮಾತೆಯ ಪರಿಚಯ ಪ್ರೇಮದ ಪ್ರಭಾವವು ಎಷ್ಟಿತ್ತೆಂದರೆ, ಅವರು ತಪ್ಪಲಿನಿಂದ ನಡು ಬಯಲಿಗಿಳಿದರೂ ಅದ್ವಿತೀಯ ಅಜ್ಞೇಯವಾದ ಉನ್ಮತ್ತಾನಂದದಲ್ಲೇ ಇರುತ್ತಿದ್ದರು. ಸೃಷ್ಟಿಯಲ್ಲಿ ಅವರ ಆತ್ಮದ ಐಕ್ಯತೆಯು ಪರಮಾವಧಿಯಲ್ಲಿತ್ತು; "ನದಿಗಳೆಲ್ಲಾ ನನ್ನ ನಾಡಿಗಳು. ಪರ್ವತಗಳು ನನ್ನ ಮೂಳೆಗಳು; ಇದೆಲ್ಲಾ ನನ್ನ ದೇಹ. ನನ್ನ ಈ ಶರೀರದ ಮೇಲೆಲ್ಲಾದರೂ ನವೆಯಾದರೆ ನನ್ನ ಕೈ ತನ್ನಷ್ಟಕ್ಕೆ ತಾನೇ ಆ ಸ್ಥಳಕ್ಕೆ ಹೇಗೆ ಹೋಗುವುದೋ ಹಾಗೆ ನನ್ನ ಆತ್ಮದ ಬೇಕುಗಳನ್ನು ಪೂರ್ಣಗೊಳಿಸಲು ಸೃಷ್ಟಿಯು ಓಡಿ ಬರುತ್ತದೆ. ಹಿಮಾಲಯದ ಮೇಲೆ ಬೀಸಿ ಬರುವ ಪ್ರಚಂಡ ಮಂಜುಗೂಡಿದ ಬಿರುಗಾಳಿಯು ಇತರರಿಗೆ ಕಾಲಸ್ವರೂಪವಾದರೂ ನನಗೆ ಹೆಜ್ಜೆಯನ್ನಿಡಲು ಸರಾಗಮಾಡಲು ಬಿಳಿಯ ಮಖಮಲ್‌ನ್ನು ಹಾಸಿ ಹೋಗುವುದು. ಇಂಥ ಸ್ಥಳದಲ್ಲಿ ಮೋಜು, ಕಾಲುಚೀಲಗಳನ್ನು ಧರಿಸಿ ನಡೆಯುವುದು ಅಪವಿತ್ರ. ನಗ್ನಭೂಮಿಯ ಸ್ಪರ್ಶದಿಂದ ನನ್ನ ಪಾದಗಳಿಗೆ ಆವೇಶ ಬರುವುದು. ನನ್ನ ಮಾಂಸವು ಬೆಟ್ಟಗಳ ಮಾಂಸಗಳಿಗೆ ಸೋಕಿದರೇನೇ ನಮ್ಮಿಬ್ಬರಲ್ಲಿ ಮೈತ್ರಿ

ಯುಂಟಾಗುವುದು. ನಾವು ಪರಸ್ಪರ ಮಾತನಾಡಿಕೊಂಡು ಒಬ್ಬರ ಮುಖವನ್ನು ಒಬ್ಬರು ಚೆನ್ನಾಗಿ ಅರಿತರೇನೇ ನಲ್ಮೆ–ಪ್ರೇಮವು ನೇರವಾಗಿ ಹೃದಯದಿಂದ ಹೃದಯಕ್ಕೆ ಮುಟ್ಟುವುದು. ಮಾನವನು ತನ್ನಲ್ಲಿ "ನಾನು" (ಅಹಂ) ವನ್ನು ಹರಿಯು ಗಂಗೆಯಲ್ಲಿ ತೊಳೆದಂದೇ ಅವನು ದೇವನಾಗುವನು. ಮಾನವ ಹೃದಯದಿಂದ ಹೊರಟ ಉನ್ಮಾದಾನಂದವು ಸ್ವರ್ಗಕ್ಕೆ ಹರಿದು ಆಶೀರ್ವಾದ ಹೊಂದಿ ಹಿಂತಿರುಗಿದಂದು ಅವನು ದೇವ. ನಾನೇ ದೇವ ; ಮಲೆಯಾಳ ಮತ್ತು ಚೋಳ ಮಂಡಲಗಳು ನನ್ನ ಕಾಲುಗಳು. ರಾಜಪುತ್ರಸ್ಥಾನದ ಮರಳು ಮೈದಾನ ನನ್ನ ವಕ್ಷಸ್ಥಲ. ವಿಂಧ್ಯಪರ್ವತವು ನನ್ನ ಕಟಿ ನನ್ನ ಕೈ ತೋಳುಗಳನ್ನು ಪೂರ್ವ ಪಶ್ಚಿಮಕ್ಕೆ ಚಾಚಿದ್ದೇನೆ. ಹಿಮಾಲಯವು ನನ್ನ ಸಿಂಗರಿಸಿದ ಮುಡಿ. ಅಲ್ಲಿನ ನನ್ನ ಗುಂಗುರುಳುಗಳಿಂದ ಪವಿತ್ರ ಧವಳ ಗಂಗೆಯು ಬುಳುಕಿ ಹರಿಯುತ್ತಾಳೆ. ನಾನು ಇಂಡಿಯಾ, ನಾನು ಮನುಷ್ಯ, ನಾನು ಹಕ್ಕಿ, ನಾನು ಮೃಗ, ನಾನು ದೇವ."

ಹೀಗೆ ಉನ್ಮತ್ತರಾಗಿ ನುಡಿಯುತ್ತಿದ್ದರು. ಅವರ ನುಡಿಗಳು ಕಂಬನಿಯ ಕೋಡಿಗಳಲ್ಲಿ ತೊಯ್ದು, ಅವರ ಎಳೆನಗೆಯ ಬೆಳಕಿನಲ್ಲಿ ಆರಿ, ಪ್ರಶಾಂತ ತಪಸ್ಸಿನ ಮುಕ್ತಾಫಲಗಳಂತೆ ಬೀಳುತ್ತಿದ್ದುವು ; —ಶಿಶಿರ ಋತುವಿನ ಮಾರುತನ ಎಳೆಯಾಟದಂತೆ.

ಅವರು ಜಗತ್ತಿಗೆ ಹೇಳಬೇಕಾದ ಸಂದೇಶವೊಂದಿತ್ತು. ಜಗತ್ತಿನವರೊಂದಿಗೆ ಹಂಚಬೇಕಾಗಿದ್ದ ಆನಂದವೊಂದಿತ್ತು. ಅವರ ಸತ್ಯ ಪ್ರಿಯತೆಗಳು ಅವರ ನರನಾಡಿಗಳಲ್ಲಿ ಅಪರಿಮಿತ ಓಜಸ್ಸಿನಿಂದ ಬಡಿಯುತ್ತಿತ್ತು; ನುಡಿಯುತ್ತಿತ್ತು.

ಅವರಿಗೆ ತಮ್ಮ ವೇದಾಂತದ ಬಗ್ಗೆ ಉತ್ಕಟ ಪ್ರೇಮವಿದ್ದಿತು. ಮುಸ್ಲಿಮನ ಪ್ರಾರ್ಥನೆಯಂತೆ, ಭಾಗವತನ ಭಕ್ತಿಯಂತೆ, ಹುತಾತ್ಮನ ಅನನ್ಯ ಶ್ರದ್ಧೆಯಂತೆ, ದೇಶಾಭಿಮಾನಿಯ ಹೃದಯದ ಮಿಡುಕಿನಂತೆ, ಶೆಲ್ಲಿಯ ಕವಿತೆಯಂತೆ, ಸ್ಪಿನೋಜಾ ಅಥವಾ ಶಾಪನ್ ಹಾವರನ ತತ್ವವಿಚಾರದಂತೆ, ಅಬಲೆಯ ನಿಷ್ಕಳಂಕ ಪ್ರೇಮದಂತೆ ಇದ್ದಿತು—ಅವರ ವೇದಾಂತ.

ಇಲ್ಲಿರುವಾಗ ಟೆಹರಿ ಸಂಸ್ಥಾನದ ಮಹಾರಾಜಾ ಸಾಹೇಬರು ಡೆಹರಾಡೂನಿಗೆ ಹೋಗುತ್ತಾ ಮಾರ್ಗದಲ್ಲಿ ಸ್ವಾಮಿಗಳಿದ್ದ ಕಾಡಿನ ಪಕ್ಕದಲ್ಲಿ

ಪ್ರಯಾಣ ಬೆಳೆಸುತ್ತಿದ್ದವರು, ಅವರ ಖ್ಯಾತಿಯನ್ನು ಕೇಳಿ ಅವರ ದರ್ಶನ ಮಾಡಲು ಕಾತುರರಾದರು. ಇವರು ಹರ್ಬರ್ಟ್ ಸ್ಪೆನ್ಸರ್ ಮುಂತಾದ ಪಾಶ್ಚಾತ್ಯರ ತತ್ವವಿಚಾರದ ಪರಿಣಾಮವಾಗಿ ಈಶ್ವರನ ಇರುವಿಕೆಯಲ್ಲಿ ನಂಬಿಕೆ ಯಿಲ್ಲದಿದ್ದರು. ಆದರೆ ಸ್ವಾಮಿ ರಾಮರನ್ನು ಸಂದರ್ಶಿಸುತ್ತಲೇ ಚಕಿತರಾಗಿ, ಅವರೊಂದಿಗೆ ದೀರ್ಘಕಾಲ ಚರ್ಚೆಮಾಡಿದನಂತರ ತಮ್ಮ ಅನುಮಾನ ಶಂಕಾದಿಗಳಿಂದ ವಿಮುಕ್ತರಾಗಿ ಪರ್ವತ ಪ್ರದೇಶದಲ್ಲಿ ತಮ್ಮ ವಸಂತ ನಿವಾಸ ವಾದ ಪ್ರತಾಪ್‌ನಗರದಲ್ಲಿ ಇದ್ದು ದಯಮಾಡಿಸಬೇಕೆಂದು ಬೇಡಿಕೊಂಡರು. ಸ್ವಾಮಿಗಳೂ ಒಪ್ಪಿಕೊಂಡರು.

೧೯೦೨ರ ವೇಳೆಗೆ ಟಿಹರಿಯ ರಾಜನು ಸ್ವಾಮಿಗಳಲ್ಲಿ ಬಂದು "೧೮೯೩ರಲ್ಲಿ ಚಿಕಾಗೋಪಟ್ಟಣದಲ್ಲಿ ನಡೆದಂತೆ ಈಗ ಟೋಕಿಯೋನಲ್ಲಿ ಒಂದು ಸರ್ವಧರ್ಮ ಸಮ್ಮೇಳನವು ನಡೆಯುವುದು. ತಾವು ಈಗಲೇ ಹೊರಡಲು ಸಿದ್ಧರಾಗಬೇಕು. ಕಲ್ಕತ್ತೆಯಿಂದ ಹೊರಡುವ ಮೊದಲನೇ ಹಡಗನ್ನು ಹತ್ತಿದರೆ ಸಕಾಲಕ್ಕೆ ಟೋಕಿಯೋವನ್ನು ತಲಪಬಹುದು" ಎಂದು ಹೇಳಿದರು. ಸ್ವಾಮಿಯವರು ಎದ್ದು ಹೊರಟು ಒಂದು ವಾರದಲ್ಲಾಗಲೇ ಜಪಾನಿಗೆ ಹೋಗುತ್ತಿದ್ದ ಹಡಗಿನಲ್ಲಿದ್ದರು.

ಹಿಮವತ್ಪರ್ವತದಲ್ಲಿದ್ದಂದು ಬರೆದ ಪತ್ರವೊಂದರಿಂದ ಅವರ ಅಲ್ಲಿನ ಜೀವನದ ಚಿತ್ರವು ಸ್ವಲ್ಪ ಸ್ಪಷ್ಟವಾಗುವುದು.

ಗಂಗೋತ್ರಿ. ಸೆಪ್ಟೆಂಬರ್ ೧೯೦೧.

ಪವಿತ್ರಗಂಗೆಯು ರಾಮನ ವಿರಹವನ್ನು ಸಹಿಸಲಾರದವಳಾಗಿದ್ದಳು. ಒಂದು ತಿಂಗಳ ನಂತರ ಮತ್ತೆ ಕಾಣುತ್ತಲೇ ಆನಂದ ಭಾಷ್ಪಗಳನ್ನು ಸುರಿಸ ತೊಡಗಿದಳು. ಗಂಗೋತ್ರಿಯಲ್ಲಿ ಗಂಗೆಯು ಶುದ್ಧ ಸೌಂದರ್ಯವನ್ನು ಗೆಳತಿ ಯರಾದ ಧವಳಗಿರಿಗಳ ಮತ್ತು ದೇವದಾರು ವೃಕ್ಷಗಳೊಂದಿಗೆ ಅವಳ ಹುಡುಗಾಟಗಳನ್ನು ಯಾರು ವರ್ಣಿಸಬಲ್ಲರು ?

ಸಾಮಾನ್ಯವಾಗಿ ಯಾತ್ರಿಕರಿಗೆ ಜಮ್ನೋತ್ರಿಯಿಂದ ಗಂಗೋತ್ರಿಗೆ ತಲುಪಲು ಹತ್ತು ದಿನಗಳ ಪ್ರಯಾಣ; ಆದರೆ ರಾಮನು ಮೂರು ದಿನಗಳಲ್ಲೇ ಗಂಗೋತ್ರಿಯನ್ನು ತಲುಪಿದನು. ಇದುವರೆಗೂ ಯಾರಿಂದಲೂ ಮೆಟ್ಟದ ಮಾರ್ಗದಲ್ಲಿ ನಡೆದುಬಂದನು. ಹಾದಿಯಲ್ಲಿ ರಾತ್ರಿಗಳು ಗುಹೆಗಳಲ್ಲಿ ಕಳೆಯು

ಲ್ಪಟ್ಟವು. ಮಾರ್ಗದುದ್ದಕ್ಕೂ ಮಾನವನ ಸುಳಿವಿರಲಿಲ್ಲ. ಹಾದಿಯುದ್ದಕ್ಕೂ ಬಿರಿದರಳಿದ ಅಸಂಖ್ಯಾತ ಪುಷ್ಪಗಳು. ಸ್ಥಳದ ಮೇಲೆಲ್ಲಾ ಜರತಾರಿಯ ಕೂದಲುಗಳನ್ನು ಹಾಸಿದಂತೆ ಕಂಗೊಳಿಸುತ್ತಿದ್ದುವು. ಕೆಂಪು, ಹಳದಿ, ನೀಲ ಪುಷ್ಪಗಳು ಅಪಾರವಾಗಿ ನಗುತ್ತಾ, ನಲಿಯುತ್ತಾ ಇದ್ದುವು. ನುಂದರ ವರ್ಣದ ಗುಗ್ಗುಳ, ಧೂಪ, ಕೇಸರಿ, ಇತ್ಯಾಸು ಮೊದಲಾದ ಸುಗಂಧಭರಿತ ಪರಿಮಳ ಪ್ರಸಾರಿಗಳು, ಮುತ್ತಿನ ಮಣಿಗಳಂತೆ ಸುಂದರ ಮಂಜು ಹನಿಗಳು ಕುಳಿತಿರುವ ರಾಜಬ್ರಹ್ಮ ಕಮಲಗಳು - ಇವೆಲ್ಲವೂ ಪರ್ವತ ಪ್ರದೇಶವನ್ನು ಸ್ವರ್ಗ, ಮರ್ತ್ಯದ ವಿಹಾರೋದ್ಯಾನವಾಗಿ ಮಾಡಿರುವುವು. ತಿಳಿಯಾಗಿ ಬೀಸುವ ಎಳೆಗಾಳಿಯು ಎಷ್ಟು ಮಧುರವೋ ಅಷ್ಟು ಕೋಮಲ. ಭೇಟಿಯಾದ ಪ್ರಣಯಿಗಳ ಮುಗುಳ್ನಗೆಯಷ್ಟು ಮಧುರ; ಅಗಲುವ ಪ್ರಣಯಿಗಳ ಕಂಬನಿ ಯಷ್ಟು ಕೋಮಲ. ಈ ಅಗಾಧ ಪರ್ವತಗಳಮೇಲೆ ಹರಡಿರುವ ವಿಶಾಲವಾದ ಸುಂದರ ಮೈದಾನಗಳು, ಸಿಂಗರವಾದ ರತ್ನಗಂಬಳಿಗಳನ್ನು ಹಾಸಿದಂತೆ ಮನೋಹರವಾಗಿದೆ. ಇವು ದೇವತೆಗಳ ನೃತ್ಯಮಂಚಗಳೋ ? ಗಲಗಲನೆ ಹರಿಯುವ ನದಿಹೊಳೆಗಳು ಅಲ್ಲಲ್ಲಿ ಶಿಖರಗಳ ಮಧ್ಯೆ ಭೋರ್ಗರೆಯುತ್ತಿವೆ. ಹಲವು ಶಿಖರಗಳು ಗಗನವನ್ನು ಚುಂಬಿಸುವಾಸೆಯಿಂದ ಮಿತಿಯನ್ನರಿಯದೆ ಬೆಳೆದು ಆಕಾಶದಲ್ಲಿ ಐಕ್ಯವಾಗಿ ಬಿಟ್ಟಿರುವಂತಿವೆ.

* * *

ರಾಮನ ವಸತಿಯು ಈಗಿನದು ಚಿಕ್ಕಗುಡಿಸಿಲು ಸುತ್ತಲೂ ಮರ, ಗಿಡ, ವನ, ಪರ್ವತಗಳ ಸಾಲುಗಳು. ಇಲ್ಲಿಂದ ಗಂಗೆಯು ಸುಂದರವಾಗಿ ಕಾಣುತ್ತಾಳೆ. ದಿನವೆಲ್ಲಾ ಗಂಗೆಯ ಕಲಕಲರವ, ಹಕ್ಕಿಗಳ 'ಚಿಲಿ ಪಿಲಿ'ಯ ನಾದದೊಂದಿಗೆ ಎಡಬಿಡದ ದಿವ್ಯಗಾನವಾಗಿ ಕೇಳಿಬರುತ್ತದೆ. ಇಲ್ಲಿ ಗಂಗೆಯ ಕಣಿವೆಯು ಬಹು ವಿಶಾಲ; ದೊಡ್ಡ ಮೈದಾನದಲ್ಲಿ ಹರಿದಂತೆಯೇ ಇದೆ. ಇಲ್ಲಿ ಅವಳ ಓಟವಂತೂ ಬಲುವೇಗ. ಆದರೂ ರಾಮನು ಹಲವಾರು ಬಾರಿ ದಾಟಿದ್ದಾನೆ.

* * *

ಜಮ್ನೋತ್ರಿಯ ಗುಹೆಯಲ್ಲಿದ್ದಾಗ್ಗೆ ರಾಮನ ಆಹಾರವು ಇಪ್ಪತ್ತು ನಾಲ್ಕು ಘಂಟೆಗಳಿಗೊಂದಾವರ್ತಿ, ಕೆಲವು ಆಲೂಗೆಡ್ಡೆ ಮತ್ತು ಮೆಣಸು;

ಇದರ ಫಲವಾಗಿ ಅಜೀರ್ಣ. ನಾಲ್ಕನೆಯ ದಿನದ ಅವಸ್ಥೆಯಲ್ಲಿ ಅಲ್ಲಿನ ಬಿಸಿ ನೀರಿನ ಬುಗ್ಗೆಯಲ್ಲಿ ಮಿಂದು ಕೇವಲ ಕೌಪೀನವನ್ನು ಮಾತ್ರ ಧರಿಸಿ ರಾಮನು ಸುಮೇರುವಿಗಾಗಿ ನಡೆದು ಹೊರಟ. ಛತ್ರಿಯಿಲ್ಲ ಪಗಡಿಯಿಲ್ಲ, ಪಾದರಕ್ಷೆ ಮೊದಲೇ ಇಲ್ಲ. ಜೊತೆಗೆ ಕಂಬಳಿಗಳನ್ನು ಹೊದೆದ ಐವರು ಪರ್ವತ ಪ್ರಾಂತ್ಯದವರು ಒಂದಿಗೆ ಹೊರಟರು. ನಾರಾಯಣ ಮತ್ತು *ತುಲಾರಾಮ್‌ರನ್ನು ಘರಾಸಾಲಿಗೆ ಹಿಂತಿರುಗಿ ಕಳುಹಿಸಿದ್ದಾಯಿತು.

ಇಲ್ಲಿ ಕಿರಿಯಳಾದ ಜಮುನೆಯನ್ನು ನಾಲ್ಕಾರು ಬಾರಿ ದಾಟಿ ಮುಂದೆ ಹೋಗುತ್ತಲೇ ಅಗಾಧ ಬೆಟ್ಟಗಳು ಗೋಡೆಹಾಕಿದಂತೆ ನಿಂತುಬಿಟ್ಟವೆ. ರಾಮಬಾದ್‌ಷಹನನ್ನು ತಡೆಯಲು ಏನಾದರೂ ಒಳಸಂಚು ನಡೆಸಿರುವರೋ ? ಇರಲಿ. ವಜ್ರದಂತಹ ಸಂಕಲ್ಪದ ಮುಂದೆ ಸಮಸ್ತ ಅಡ್ಡಿ ಆತಂಕಗಳೂ ಅದೃಶ್ಯವಾಗಲೇಬೇಕು.

* * *

ಮೇಲೆ ಹತ್ತುತ್ತಾ ಜಮುನೆಯ ಗರ್ಗಳ ಧ್ವನಿಯು ಎಲ್ಲೋ ದೂರದಲ್ಲಿ ಕೇಳಿಬರುತ್ತಿತ್ತು. ಈ ವೇಳೆಗೆ ಅಪಾಯಕರವಾದ ಮಾರ್ಗವನ್ನು ದಾಟುತ್ತಿದ್ದೆವು. ಸ್ವಲ್ಪ ಕಾಲು ಜಾರಿದರೆ ಸಾಕು – ಬಾಯ್ತೆರೆದು ಇರುವ ಪಾತಾಳವೇ ಎರಡೂ ಕಡೆಯೂ. ಮುಕ್ಕಾಲು ಘಂಟೆಗಳ ಕಾಲ ಈ ರೀತಿ ಯಮನ ದವಡೆಯಲ್ಲೇ ನಡೆದಂತಿತ್ತು.

* * *

ಮುಂದೆ ಹಾದಿಯಿಲ್ಲ. ನಡೆದು ಬೆಟ್ಟಗಳನ್ನು ಕಳೆದು ಬಂದುದಾಯಿತು. ಗೊಂಡಾರಣ್ಯ. ಮೈಯೆಲ್ಲಾ ತರೆಯಿತು. ಒಂದು ಘಂಟೆಯನಂತರ ಅರಣ್ಯವನ್ನು ದಾಟಿದೆವು. ಮುಂದೆ ಸುಗಂಧದಿಂದ ಕೂಡಿದ ಪ್ರದೇಶ. ಅವರೈವರೂ ಉಸಿರಿಲ್ಲದಷ್ಟು ದಣಿದಿದ್ದರು. ರಾಮನಿಗೆ ಒಳ್ಳೆಯ ವ್ಯಾಯಾಮ, ಸುತ್ತಲಿನ ಗಂಭೀರವಾದ ಲತಾಗೃಹಗಳು : ಮನಮೋಹಕ ಪುಷ್ಪತರುಗಳು, ಹಸಿರು ತುಂಬಿದ ವೃಕ್ಷಗಳು, ಹಾದಿಯ ದಣಿವನ್ನು ಮರೆಸಿದುವು.

* * *

ರಾಮನ ಅಸ್ವಸ್ಥತೆ ಎಲ್ಲಿಹೋಯಿತು ?........ಮುಂದೆಹತ್ತುತ್ತಾ ಅವರೆ

*ಇವರು ಸ್ವಾಮಿ ರಾಮತೀರ್ಥರ ಶಿಷ್ಯರು.

ಲ್ಲರಿಗೂ ಹಸಿವೇರಿತು. ಮರಗಿಡಗಳಿಲ್ಲದ ಮಂಜುಮುಚ್ಚಿದ ಬಯಲುಗಳು. ಒಂದು ಕಲ್ಲಿನಮೇಲೆ ಕೆಂಪು ಕಂಬಳಿ ಹಾಸಲ್ಪಟ್ಟಿದ್ದಿತು—ರಾಮುವಿಗಾಗಿ. ರಾಮುನು ಎಂದಿನಂತೆ ಹಿಂದಿನ ರಾತ್ರಿ ಬೇಯಿಸಿದ ನಾಲ್ಕು ಆಲೂಗಡ್ಡೆಗಳನ್ನು ತಿಂದ. ಅವರು ತಮ್ಮ ನಿತ್ಯದ ಆಹಾರವನ್ನು ಎಂದಿನಂತೆ ಆನಂದದಿಂದ ತಿಂದರು.

* * *

ಮುಂದೆ ಹೋಗುತ್ತಾ ಹೋಗುತ್ತಾ ಒಬ್ಬಾತನು ಸೋತು ನಿಂತು ಬಿಟ್ಟನು. ಮುಂದೆ ಮತ್ತೊಬ್ಬಾತ ತಿರುಗಿ ನಿಂತುಬಿಟ್ಟ. ಇನ್ನೂ ಮುಂದೆ ಇನ್ನೊಬ್ಬಾತನ ಮೂಗಿನಿಂದ ರಕ್ತವು ಸುರಿದ ಕಾರಣ ಆತನೂ ನಿಂತುಬಿಟ್ಟ. ಈಗ ರಾಮು—ಮತ್ತೊಬ್ಬ.

* * *

ಆಹಾ! ಈ ಕಾಡು ಜಿಂಕೆಗಳು ಎಷ್ಟು ವೇಗವಾಗಿ ನೆಗೆಯುತ್ತಾ ಓಡುತ್ತಿವೆ. ನಾಲ್ಕನೆಯವನೂ ಸೋತು ನಿಂತುಬಿಟ್ಟ. ಸುತ್ತಲೆಲ್ಲೂ ನೀರಿನ ಸುಳಿವೇ ಇಲ್ಲ. ಕೇವಲ ಗೆಡ್ಡೆಕಟ್ಟಿದ ಮಂಜು. ಕೇವಲ ಒಬ್ಬ ಬ್ರಾಹ್ಮಣನು ರಾಮುನೊಂದಿಗಿದ್ದಾನೆ—ಆ ಕೆಂಪು ಕಂಬಳಿ, ಟೆಲಿಸ್ಕೋಪ್, ಒಂದು ಜೊತೆ ಹಸರು ಕನ್ನಡಕ ಮತ್ತು ಒಂದು ಪಿಕಾಸಿಯನ್ನು ಹಿಡಿದು.

ಕುಡಿಯಲು ಗಾಳಿಯೇ ಸಿಗುವಂತಿಲ್ಲ. ನೀಲಿ ಬಣ್ಣಕ್ಕೆ ತಿರುಗಿದ ಹಳೆಯ ಮಂಜು ಮುಚ್ಚಿದ ಗುಡ್ಡವನ್ನು ದಾಟಬೇಕಾಗಿದೆ. ಹೆಜ್ಜೆಯಿಡಲು ಸ್ಥಳವಿರುವಂತೆ ಪಿಕಾಸಿಯಿಂದ ಮಾಡಲು ಪ್ರಯತ್ನ. ಆದರೆ ಕಠಿಣವಾದ ಮಂಜಿನ ಗೆಡ್ಡೆ; ಪಿಕಾಸಿಯೇ ಮುರಿದು ಹೋಯಿತು. ಇದ್ದಕ್ಕಿದ್ದಂತೆಯೇ ಅಲ್ಲೇ ಮಂಜಿನ ಬಿರುಗಾಳಿಯು ನುಗ್ಗಿ ಬಂದಿತು. "ದೇವರು ಮಂಜಿನ ಬಿರುಗಾಳಿಯನ್ನು ಒಳ್ಳೆಯವನ್ನು ಮಾಡುವ ಉದ್ದೇಶದಿಂದಲೇ ಕಳುಹಿಸಿದ್ದಾನೆಂ"ದು ರಾಮುನು ಜೊತೆಗಾರನಿಗೆ ಹುರಿದುಂಬಿಸಿದ. ಕಡೆಗೆ ಅದು ಹಾಗೆಯೇ ಸಿದ್ಧವಾಯಿತು. ಚೂಪು ಕೋಲುಗಳನ್ನೂರಿ ನಾವು ಆ ಗುಡ್ಡವನ್ನು ಹತ್ತಿ ಮುಂದೆ ಬರುತ್ತೇವೆ. ಅದೋ! ಮೈಲಿ ಮೈಲಿಗಳ ವಿಸ್ತೀರ್ಣವಾದ ಮಂಜು ತುಂಬಿದ ಮೈದಾನವು ನಮ್ಮ ಕಣ್ಣುಮುಂದೆ ಜಾಜ್ವಲ್ಯಮಾನವಾಗಿ ತೊಳಗುತ್ತಿದೆ. ಆನಂದ! ಆನಂದ! ಸೊಗಸಾದ, ದಿವ್ಯವಾದ, ಆಶ್ಚರ್ಯಕರವಾದ

ಬೆಳಗುವ ಕ್ಷೀರಸಾಗರವು ಇದೇ ಅಲ್ಲವೇ ! ರಾಮನ ಆನಂದಕ್ಕೆ ಮೇರೆಯಿಲ್ಲ. ಕೆಂಪು ಕಂಬಳಿ ಹೊದೆದು, ಬಟ್ಟೆಯ ಜೋಡನ್ನು ಪಾದಗಳಿಗೆ ಬಿಗಿದು ರಾಮನು ಮೈದಾನದಲ್ಲೆಲ್ಲಾ ವೇಗವಾಗಿ ಓಡಾಡುತ್ತಿದ್ದನು.

* * *

ಈಗ ಆವನೊಂದಿಗೆ ಯಾರೂ ಇಲ್ಲ. "ಆತ್ಮವೆಂಬ ಹಂಸವು ಕಡೆಗೆ ಏಕಾಂಗಿಯಾಗಿ ಹಾರುತ್ತಿದೆ."

* * *

ಮುಂದೆ ರಾಮನು ಮೂರು ಮೈಲಿ ನಡೆದ. ಹಲವು ಬಾರಿ ಮಂಜಿನಲ್ಲಿ ಮಂಡಿಯುವರೆಗೂ ಜೂತುಹೋದ ಕಾಲುಗಳನ್ನು ಹೊರಕ್ಕೆ ಇರಿದು ಮುಂದು ವರಿಯಬೇಕು. ಕಡೆಗೆ ಒಂದು ಮಂಜು ತುಂಬಿದ ಜಗಲಿ ; ರಾಮನು ಕೆಂಪು ಕಂಬಳಿ ಹಾಸಿ ಅಲ್ಲಿ ಒಂಟಿಯಾಗಿ ಕುಳಿತ್ತಿದ್ದಾನೆ ಜಗತ್ತಿನ ಜಂಜಟಗಳಿಂದ, ಗದ್ದಲ ಸದ್ದುಗಳಿಂದ, ಜನರ ಕೋಪಾತಾಪಗಳಿಂದ, ಸಂಕಟ ಸಂಕೋಲೆ ಗಳಿಂದ, ಆಶಾಪಾಶಗಳಿಂದ ಬಹುಮೇಲೆ ಏಕಾಂಗಿಯಾಗಿ ಕುಳಿತಿದ್ದಾನೆ. ಸುತ್ತಲೂ ನೀರವ. ಆಹಾ ! ಎಂತಹ ಶಕ್ತಿಯ ಆವರಣ ! ಯಾವ ಬಗೆಯ ಸದ್ದೂ ಇಲ್ಲ. ಕೇವಲ ಆನಂದ ಘನಘೋರ ! ಪರಮ ದಿವ್ಯ ಏಕಾಂತ !

* * *

ಕಪ್ಪು ಮೋಡಗಳ ಮುಸುಕು ಹರಿಯುತ್ತಿದೆ. ಸೂರ್ಯನ ಕಿರಣಗಳು ತೂರಿ ಈ ದಿವ್ಯ ದೃಶ್ಯದ ಮೇಲೆ ಬೀಳುತ್ತಿವೆ. ಆಹಾ ! ಪ್ರದೇಶವೆಲ್ಲವೂ ಪ್ರಜ್ವಲಿತವಾಗಿ ಸುವರ್ಣಮಯವಾಯಿತು. ಸುಮೇರು ! ಸುಮೇರು ಒಪ್ಪುವ ಹೆಸರು.

* * *

ಟಿಹರಿ ಬೆಟ್ಟದಮೇಲೆ ಉತ್ತರಖಂಡ ಪರ್ವತಗಳ ಮೇಲೆ ಆರುನೂರು ಮೈಲಿಗಳ ಕಾಲು ನಡುಗೆಯ ಪುಟ್ಟಪ್ರವಾಸವಾಯಿತು.

ಈಗತಾನೆ ಮಧ್ಯಾಹ್ನ ಭೀಮಸರೋವರವು ಸೂರ್ಯನ ಸುವರ್ಣ ಕಿರಣದಿಂದ ಉರಿಯುತ್ತಿರುವಂತಿದೆ. ಹಸರು ಶಾಲುಗಳನ್ನು ಮುಸುಗಿಟ್ಟ ತರುಣ ಗುಡ್ಡಗಳು ಅಚ್ಚರಿಯಿಂದ ಕೂಡಿ ಸುತ್ತಲೂ, ನಿಂತಿವೆ.

ರಾಮನು ಕುಳಿತಿರುವ ಬಿಳಿಯ ಬಣ್ಣದ ದೋಣಿಯು ಈ ವಿಶಾಲವಾದ ಅಲೆಇಲ್ಲದ ಸರೋವರದ ಮೇಲೆ, ಮಹದೇವನ ಹಣೆಯ ಮೇಲಿನ ಬಾಲ ಚಂದ್ರನಂತೆ ತೇಲುತ್ತಿದೆ.

* * *

ಈ ಸಮಯದಲ್ಲಿನ ಮತ್ತೊಂದು ಪತ್ರದಿಂದ ಅವರ ಸಂಕಲ್ಪವು ಸ್ಪಷ್ಟವಾಗುತ್ತದೆ.

ನಾರಾಯಣಾ ! ೧೯೦೨—ಟೆಹರಿ.

ನಾನಿಲ್ಲಿ ಶಾಸ್ತ್ರಗಳ ಆಮೂಲಾಗ್ರ ಅಧ್ಯಯನವನ್ನೂ, ಪಾಶ್ಚಿಮಾತ್ಯ ವಿಚಾರವಾಹಿನಿಯ ವಿಮರ್ಶೆಯನ್ನೂ ಮಾಡುತ್ತಾ, ಒಂದಿಗೇ ನನ್ನ ಸ್ವತಂತ್ರ ಅನ್ವೇಷಣಗಳನ್ನು ನಡೆಸುತ್ತಿದ್ದೇನೆ. ನನ್ನ ಜೀವನವನ್ನೆಲ್ಲಾ ಇದಕ್ಕಾಗಿ ಕಳೆಯಬೇಕಾಗಿಲ್ಲ. ನಾನಿಲ್ಲಿ ಅವಿಶ್ರಾಂತ ಶ್ರಮದಿಂದ ಸಂಪಾದಿಸುತ್ತಿರುವ ಜ್ಞಾನವನ್ನು ಜನತೆಯ ಹೃದಯದ ಮಧ್ಯೆ ಬಂದು ಹರಡುತ್ತೇನೆ.......... ಆದರೆ ನನಗೊಂದು ಆತ್ಮಸಾಕ್ಷಿ ಇದೆ—ನನ್ನ ಕೀರ್ತಿಗಾಗಿಯಾಗಲೀ, ನನ್ನ ಲಾಭಕ್ಕಾಗಿಯಾಗಲೀ, ಇತರರ ಹೆದರಿಕೆ ಬೆದರಿಕೆಗಳಿಗಾಗಲೀ, ಅಪಾಯದ ದಿಗಿಲಿಗಾಗಲೀ, ಮರಣದ ಭಯಕ್ಕಾಗಿಯಾದರೂ ಸರಿಯೇ 'ಸತ್ಯ'ವೆಂದು ನಾನು ಇಲ್ಲಿ ಸಾಕ್ಷಾತ್ಕಾರಮಾಡಿ ಕೊಂಡದ್ದನ್ನು ಹೊರತು ಅನ್ಯವನ್ನೆಂದಿಗೂ ಬೋಧಿಸುವುದಿಲ್ಲ.

ಸತ್ಯದಲ್ಲಿ ಏನಾದರೂ ಶಕ್ತಿಯಿದ್ದರೆ,—ಅದರಲ್ಲಿ ಅಪಾರ ಅನಂತಶಕ್ತಿ ಅಡಗಿದೆ—ರಾಜರು, ಸಾಧುಗಳು, ಧನಿಕರು, ಜನಸಾಮಾನ್ಯರೂ ಕಡೆಗೆ ಈ ಸತ್ಯಧರ್ಮದ ಧ್ವಜದ ಮುಂದೆ ಶಿರಬಾಗಿ ನಮಿಸಲೇಬೇಕು.

ನಾನು ಬೋಧಿಸಬೇಕು. ಇಲ್ಲದಿದ್ದರೆ ಈ ಆಶೆಯನ್ನು ಶೈಶವ್ಯದಿಂದೇಕೆ ಸಾಕಿಕೊಂಡಿರುವೆ. ನಾನಿಲ್ಲಿ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಿರುವ ಸತ್ಯವನ್ನು ದೈವೀತೇಜಸ್ಸಿನಿಂದ, ಧೈರ್ಯದಿಂದ, ನಿರ್ಭಯವಾಗಿ, ಸಮಸ್ತ ಪ್ರತಿ ಹಿಂಸೆಗಳಿಗೂ ಜಗ್ಗದೆ ಬೋಧಿಸಬೇಕು.

* * *

ಜಪಾನಿನಲ್ಲಿ

ಜಪಾನ್ ಒಕಾಕುರವರ ಹಲವು ಬಂಗಾಳೀ ಮಿತ್ರರು ೧೮೯೩ರಲ್ಲಿ ಚಿಕಾಗೋ ನಗರದಲ್ಲಿ ನಡೆಸಿದ ಸರ್ವಮತದ ಸಮ್ಮೇಳನದ ಎರಡನೇ ಸಭೆಯು ಟೋಕಿಯೋವಿನಲ್ಲಿ ಕೂಡುವುದಾಗಿ ಪ್ರಕಟಿಸಿದರು. ಒಕಾಕುರವರು ಯಾವುದೋ ಕಾರ್ಯಾರ್ಥವಾಗಿ ಹಿಂದೂಸ್ಥಾನಕ್ಕೆ ಬಂದಿದ್ದರು. ಅವರು ಶ್ರೀ ಸೋದರಿ ನಿವೇದಿತ (Margaret Noble ಶ್ರೀ ವಿವೇಕಾನಂದರ ಶಿಷ್ಯೆ) ರೊಂದಿಗೆ ಈ ವಿಚಾರವಾಗಿ ಪ್ರಸ್ತಾಪಿಸಿರಬಹುದು. ಮತ್ತೂ ತಾವೂ ತಮ್ಮ ದೇಶಕ್ಕೆ ಹಿಂದಿರುಗಿದ ಮೇಲೆ ತತ್ಸಂಬಂಧವಾದ ಉತ್ಸವಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಬೇಕೆಂದಿದ್ದಿರಬಹುದು. ಆದರೆ ಒಕಾಕುರವರು ಇನ್ನೂ ಕಲ್ಕತ್ತಾದಲ್ಲಿದ್ದಾಗಲೇ ಈ ಸುದ್ದಿ ಟೋಕಿಯೋವಿಗೆ ಮುಟ್ಟಿತು. ಒಕಾಕುರವರು ಸ್ವದೇಶಕ್ಕೆ ಹಿಂತಿರುಗಿರಲಿಲ್ಲವಾದ್ದರಿಂದ ಅಲ್ಲಿನ ಪತ್ರಿಕೆಗಳು ಈ ಸೂಚನೆಯನ್ನು ಪ್ರತಿಭಟಿಸಿದುವು.

ಹೇಗೋ ಟಿಕೆಟಿನವರು ಥಾಮಸ್‌ಕುಕ್ ಕಂಪೆನಿಯವರ ಹಡಗಿನಲ್ಲಿ ಸ್ವಾಮಿಗಳ ಪ್ರಯಾಣಕ್ಕೆ ಏರ್ಪಡಿಸಿ, ಈ ಸುದ್ದಿಯನ್ನು ತಿಳಿಸಿ ಅಗತ್ಯವಾಗಿ ಹೊರಡಬೇಕೆಂದು ಹೇಳುತ್ತಲೇ ಸಾನಂದದಿಂದ ತಮ್ಮ ಶಿಷ್ಯ ನಾರಾಯಣರೊಂದಿಗೆ ೧೯೦೨ನೇ ಆಗಸ್ಟ್ ೨೦ರಲ್ಲಿ ಕಲ್ಕತ್ತಾದಿಂದ ಹೊರಟರು. ಪ್ರಯಾಣದ ಹಾದಿಯಲ್ಲಿ ಪಿನಾಂಗ್, ಹಾಂಕಾಂಕ್, ಷಾಂಘೈ, ನಾಗಸಾಕಿರೇವು ಪಟ್ಟಣಗಳಲ್ಲಿ ಸ್ಥಳೀಯ ಹಿಂದೂ ಸಾಹುಕಾರರು ಬಂದು ಸ್ವಾಮಿಗಳ ಆಶೀರ್ವಾದ ಪಡೆಯುತ್ತಿದ್ದರು. ಅಲ್ಲದೆ ಹಾಂಕಾಂಗ್‌ನಲ್ಲಿ ಹಡಗನ್ನು ಬದಲಾಯಿಸುವ ಸಲುವಾಗಿ ಒಂದು ವಾರ ಇದ್ದರು. ಅಲ್ಲಿ ಉತ್ಸುಕತೆಯಿಂದ ಕೂಡಿದ ಜನರಲ್ಲಿ ಭಾಷಣಮಾಡಿದರು. ಯೋಕೊಹಾಮದಲ್ಲಿ ವಸಿಯಾಮುಲ್ ಆಸ್ನೋಮುಲ್‌ರ ಅತಿಥಿಗಳಾಗಿ ಒಂದು ದಿನ ನಿಂತರು. ಮರುದಿನ ಟೋಕಿಯೋಕ್ಕೆ ತಲುಪಿದರು. ಅಲ್ಲಿನ ಇಂಡೋ ಜಪಾನೀ ಸಂಘಕ್ಕೆ ಬಂದಿಳಿದರು. ಅಲ್ಲಿಗೆ ಲಾಲಾ ಪೂರ್ಣಸಿಂಹರು ಕಾರ್ಯದರ್ಶಿಗಳಾಗಿದ್ದರು. ಇವರು ಇನ್ನೂ ಇತರ ಭಾರತೀಯ ವಿದ್ಯಾರ್ಥಿಗಳೊಂದಿಗೆ ಸಂಘದಲ್ಲೇ ವಾಸಿಸುತ್ತಿದ್ದರು.

ಯೋಕೊಹಾಮದಿಂದ ಕರೆತಂದಾತನು ಈ ಇಬ್ಬರು ಸ್ವಾಮಿಗಳನ್ನು ಸಂಘದೊಳಕ್ಕೆ ಕರೆತರುತ್ತಲೇ, ಸ್ವಾಮಿರಾಮರ "ಓಂಕಾರ"ದಿಂದ ಅಲ್ಲಿನ ವಾತಾವರಣವೇ ಆನಂದಪೂರಿತವಾಯಿತು. ಪೂರ್ಣಸಿಂಹರೇ ಹೀಗೆಂದು ಬರೆದಿರುವರು. "ಅಪರಿಚಯಸ್ಥರಾದರೂ ಅವರನ್ನು ನೋಡಿ ಹುಚ್ಚಾದೆ. ಅವರ ಭಾಷೆಯೇ ವಿಚಿತ್ರವಾಗಿದ್ದಿತು. ಅವರ ಆ ದೈವೀ ತೇಜಸ್ಸನ್ನು ಕಾಣುತ್ತಲೇ ಎಲ್ಲಿಯವರು ಅಲ್ಲೇ ಅವರಿಗೆ ವಂದಿಸುವಂತಾಗುತ್ತಿದ್ದಿತು. ಕಿರಿಯ ಸ್ವಾಮಿಯು 'ನಿಮ್ಮ ದೇಶವಾವುದು ?' ಎಂದರು. ನಾನು ಕಂಬನಿ ತುಂಬಿ 'ಪ್ರಪಂಚವೇ ನನ್ನ ದೇಶ' ಎಂದೆ. ಹಿರಿಯ ಸ್ವಾಮಿಗಳು ನನ್ನನ್ನು ದೃಷ್ಟಿಸಿ 'ಪರೋಪಕಾರವೇ ರಾಮನ ಧರ್ಮ'* ಎಂದರು. ಹೀಗೆ ನಾವು ಕೇವಲ ಎರಡು ಮಾತುಗಳಲ್ಲಿ ಪರಿಚಿತವಾದೆವು. "ಅಂದು ಬೌದ್ಧ ವಿಶ್ವವಿದ್ಯಾನಿಲಯದಲ್ಲಿ ಭಾಷಣ ಮಾಡಲು ನಾನು ಹೋಗಬೇಕಾಗಿದ್ದಿತು. ನಾನು ಸ್ವಾಮಿ ರಾಮರನ್ನು ಅಂದೇ ಭಾಷಣಮಾಡಲು ಕರೆದೆ. ಅವರು ಅಲ್ಲಿಗೆ ಅಂದು ತಾನೇ ಬಂದಿದ್ದುದು ; ಆದರೂ ಒಪ್ಪಿದರು. ಟ್ರಾಂನಲ್ಲಿ ಕೂತು ಹೊರಟೆವು. ನಾನು ಕಿಟಕಿಯನ್ನೊರಗಿ ಕುಳಿತು ಎಲ್ಲಿರುವೆನೆಂಬುದನ್ನೇ ಮರೆತು ಕಣ್ಮುಚ್ಚಿ "ಓಂ, ಓಂ" ಎನ್ನುತ್ತಿದ್ದೆ. ಅಂದಿನ ನನ್ನ ಭಾಷಣದಿಂದ ಜನರು ಪುಳಕಿತರಾದರು. ಸಭೆಗೆ ಸ್ವಾಮಿ ರಾಮರನ್ನು ಪರಿಚಯ ಮಾಡಿಕೊಟ್ಟೆ. ಅವರು ಉಜ್ವಲ ಭಾಷಣ ಮಾಡಿದರು. ಆ ಸಭೆಯಲ್ಲಿ ಬೌದ್ಧರು, ಆಸ್ಟ್ರೇಲಿಯಾದಿಂದ ಬಂದಿದ್ದ ಥಿಯಸಾಫಿಸ್ಟರೂ ಇದ್ದರು. ಜಪಾನಿನ ಕಾರ್ಲೈಲ್ ಎಂದು ಪ್ರಖ್ಯಾತನಾದ ಶಿರ್ಕಾಜೋ ಉಚಿಮುರಾನೂ ಭಾಷಣ ಮಾಡಿದ. ಸ್ವಾಮಿಗಳ ಭಾಷಣವನ್ನು ಎಲ್ಲರೂ ಮೈಮರೆತು ಕೇಳಿದರು.

---

*ಹಿಮಾಲಯದಿಂದಿಳಿಯುವ ವೇಳೆಗೆ ಸ್ವಾಮಿಗಳು ತಮ್ಮ ವಿಚಾರ ಮಾತನಾಡುವಾಗ ಉತ್ತಮಪುರುಷದ 'ನಾನು' ವನ್ನು ಸಂಪೂರ್ಣವಾಗಿ ತ್ಯಜಿಸೇಬಿಟ್ಟಿದ್ದರು. "ರಾಮನು 'ರಾಮನಿಗೆ' ಎಂದು ಪ್ರಥಮಪುರುಷದಲ್ಲೇ ನುಡಿಯುವರು. ಹೊಸಬರಿಗೆ ಸ್ವಲ್ಪಹೊತ್ತು ಇವರು ಯಾರೋ ಮೂರನೆಯವರ ವಿಚಾರವಾಗಿ ಹೇಳುತ್ತಿರುವರೆನ್ನಿಸುತ್ತಿತ್ತು. ಈ ಪ್ರಥಮಪುರುಷದ ಸರ್ವನಾಮದ ಪ್ರಯೋಗವು ಅವರಿಂದ ಸ್ವಾಭಾವಿಕವಾಗಿಯೇ ಬರುತ್ತಿದ್ದಿತು.

"ನಾವು ಹಿಂದಿರುಗುವಾಗ ಸಂಜೆಯಾಗಿದ್ದಿತು. ಆಗ 'ಟೋಕಿಯೋವಿನ ಗಾಜಾ ಬಜಾರನಂತಹ ಜನನಿಬಿಡವಾದ ಗದ್ದಲದ ಬೀದಿಗಳಲ್ಲಿ ಬಿರುಸಾಗಿ ಹೋಗುತ್ತಿರುವಾಗಲೂ ಮನಸ್ಸನ್ನು ಶಾಂತಿಯುಲ್ಲಿಟ್ಟು ತನ್ನ ಭಾಷಣವನ್ನು ಸಿದ್ಧಮಾಡಿಕೊಂಡ ಸಿದ್ಧ್ರಾಂಥವರು ಬೇಕು. ಹೌದು, ಈ ಮನಸ್ಸಿನ ಈ ವಿಶ್ರಾಂತಿ ಸ್ಥಿತಿಯೇ ಜೀವನದಲ್ಲಿ ಗೆಲುವಿನ ಗುಟ್ಟು. ಇದೇ ಏಕಾಗ್ರಚಿತ್ತತೆ. ಇದೇ ಗಾನಮಯ ಮೌನ. ಇಂತಹ ಸ್ಥಿತಿಯಿಂದಲೇ ಸಮಸ್ತ ಗಹನ ವಿಚಾರಗಳೂ ಹೊರಡುವುವು. ಮಾನವ ಪ್ರಗತಿಗೆ ಕಾರಣವಾದ ಎಲ್ಲಾ ಕನಸುಗಳೂ ಇಲ್ಲೇ ಕಾಣುವುದು. ಈ ಉನ್ಮತ್ತ ಸ್ಥಿತಿಯಲ್ಲೇ ಆವೇಶ ತರಂಗಗಳು ಮಾನವನ ಮನಸ್ಸಿನ ಮುಂದೆ ತೇಲುವುವು. ಇದೇ ಸ್ವಾಭಾವಿಕವಾದ ದೈಹಿಕ ವಿಶ್ರಾಂತಿ; ಮಾನಸಿಕ ಶಾಂತಿ. ಇದೇ ವೇದಾಂತಿಯ ಯೋಗ' ಎಂದು ಉತ್ಸಾಹದಿಂದ ಹೇಳಿದರು. ಅವರ ಮಾತುಗಳೊಂದೂ ಕೇಳಿಬರುತ್ತಿರಲಿಲ್ಲ; ಏಕೆಂದರೆ ತನ್ನ ಕನಸಿನ ಇನಿಯನನ್ನು ಮೊಟ್ಟಮೊದಲು ಪ್ರತ್ಯಕ್ಷ ಕಂಡು ಆನಂದಭರದಲ್ಲಿ ಮೈಮರೆತ ನವತರುಣಿಯಂತೆ ನಾನು ಸಂತೋಷಸಾಗರದಲ್ಲಿ ತೇಲುತ್ತಿದ್ದೆ. ಅವರ ನುಡಿಗಳನ್ನು ಕೇಳುವಷ್ಟು ಸಮಾಧಾನವೂ ಇರಲಿಲ್ಲ. ಅಲ್ಲಿಂದಿಲ್ಲಿಗೆ ಓಡಾಡುತ್ತಿದ್ದೆ. ಅವರ ಕೋಣೆಯಿಂದ ಸುಮ್ಮನೆ ಹೊರಗೆ ಬರುವುದು. ಅವರೊಂದಿಗೆ ಬಹಳ ಹೊತ್ತು ಇರಲು ಆಗುತ್ತಿರಲಿಲ್ಲ; ಅವರಿಂದ ದೂರವಾಗಲೂ ಸಾಧ್ಯವಾಗುತ್ತಿರಲಿಲ್ಲ. ನಾನು ಅವರನ್ನು ಪ್ರೀತಿಸಿದ್ದೆ; ಪ್ರೇಮಿಸಿದೆ. ನಾನು ತರುಣಿಯಾಗಿದ್ದರೆ ನನ್ನ ಸರ್ವಸ್ವವನ್ನೂ ಅವರ ಚರಣದಲ್ಲಿ ಅರ್ಪಿಸಿಬಿಡುತ್ತಿದ್ದೆ. ಆದರೆ ಒಂದು ಸಂಗತಿಯಂತೂ ನಿಶ್ಚಯ. ನನಗೆ ಅವರ ನುಡಿಯಂತೂ ಕೇಳಿಬರುತ್ತಿರಲಿಲ್ಲ, ಆದರೆ ಅವರು ಹೇಳಿದ ಒಂದೊಂದು ಮಾತನ್ನೂ ನನ್ನ ಹೃದಯ ಕರಂಡದಲ್ಲಿ ಜೋಪಾನವಾಗಿ ಶೇಖರಿಸುತ್ತಿದ್ದೆ. ನಾನೀಗ ಹೇಳುತ್ತಿರುವ ಒಂದೊಂದು ನುಡಿಯೂ ಸತ್ಯ.

* * *

ಮರುದಿನ ನಾನು ೧೮೯೩ರಲ್ಲಿ ನಡೆದ ಸರ್ವಧರ್ಮ ಸಮ್ಮೇಳನದ ಕಾರ್ಯಕಲಾಪಗಳನ್ನು ವಿವರಿಸುವ ಎರಡು ದೊಡ್ಡ ಹೊತ್ತಿಗೆಗಳನ್ನು ಹಳೆಯ ಪುಸ್ತಕದಂಗಡಿಯಿಂದ ಕೊಂಡುತಂದು, ಅವರ ಮೇಜಿನ ಮೇಲಿಟ್ಟೆ.

'ಆಹಾ ! ಸರಿ ! ರಾಮನಿಗೆ ಬೇಕಾಗಿದ್ದುದು ಈ ಪುಸ್ತಕವೇ ! ಇದು ನಿಮಗೆ ಹೇಗೆ ಸಿಕ್ಕಿತು ? ಪ್ರಕೃತಿಯು ರಾಮನಿಗೆ ಮಾರ್ಗದಲ್ಲಿ ಆಗತ್ಯವಾದ ಸಮಸ್ತವನ್ನೂ ಅವನ ಕೈಗೆ ಕೊಡುತ್ತಾಳೆ' ಎಂದರು.

ಟೋಕಿಯೋವಿನ ಸರ್ವಧರ್ಮ ಸಮ್ಮೇಳನದ ವಿಚಾರವಾಗಿ ದೀರ್ಘಕಾಲ ಮಾತುಕತೆಯಾಡಿದೆವು. ಅಂತಹ ಸಮ್ಮೇಳನವು ಯಾವುದೂ ಇಲ್ಲವೆಂದು ತಿಳಿದಮೇಲೆ ಸ್ವಾಮಿಗಳು ಗಹಗಹಿಸಿ ನಕ್ಕು 'ಪ್ರಕೃತಿಯು ಎಂತಹ ಉಪಾಯ ಮಾಡಿ ರಾಮನನ್ನು ಹಿಮಾಲಯದ ವಸತಿಯಿಂದ ಜಗತ್ತಿಗೆ ಕರೆತಂದು ಬಿಟ್ಟಳು. ಒಂದು ಸುಳ್ಳು ಸುದ್ದಿಯೇ ಇಷ್ಟು ಫಲದಾಯಕವಾಗುತ್ತದೆ. ರಾಮನೇ ಒಂದು ಸರ್ವಧರ್ಮ ಸಮ್ಮೇಳನ. ಟೋಕಿಯೋವು ಏರ್ಪಡಿಸದಿದ್ದರೆ ರಾಮನೇ ಒಂದು ಸಮ್ಮೇಳನ ಹೂಡುವನು' ಎಂದರು.

ಮಾರನೆಯ ದಿನ ಪುಣೆಯ ಪ್ರೊಫೆಸರ್ ಛತ್ರೆಯವರ ಸರ್ಕಸ್ ಮಂಡಲಿಯ ಮೊದಲನೆಯ ಪ್ರದರ್ಶನ ಟೋಕಿಯೋವಿನಲ್ಲಿ. ಎಲ್ಲ ಭಾರತೀಯ ವಿದ್ಯಾರ್ಥಿಗಳೂ ಅಲ್ಲಿಗೆ ನಡೆದರು; ಒಂದಿಗೆ ಸ್ವಾಮಿ ರಾಮರೂ. ಟೋಕಿಯೊ ವಿಶ್ವವಿದ್ಯಾನಿಲಯದ ಸಂಸ್ಕೃತ ಪ್ರೊಫೆಸರ್ ಮತ್ತು ವಿಖ್ಯಾತ ಪೌರ್ವಾತ್ಯ ಪಂಡಿತ ತಾಕಾಕುಸು ರವರು ಇಲ್ಲೀ ಸ್ವಾಮಿಗಳನ್ನು ಸಂಧಿಸಿದರು. ಮನೆಗೆ ಹಿಂದಿರುಗುವಂದು ತಾಕಾಕುಸ್ಸುರವರು ನನ್ನೊಂದಿಗೆ 'ಇಂಗ್ಲೆಂಡಿನಲ್ಲಿ ಪ್ರೊಫೆಸರ್ ಮ್ಯಾಕ್ಸ್ ಮುಲ್ಲರ್‌ರವರ ಗೃಹದಲ್ಲೂ ಇತರ ಕಡೆಗಳಲ್ಲೂ ಹಲವಾರು ಪಂಡಿತರನ್ನೂ ತಾತ್ವಿಕರನ್ನೂ ಸಂಧಿಸಿದ್ದೇನೆ. ಆದರೆ ಸ್ವಾಮಿ ರಾಮರಂಥವರನ್ನು ಕಂಡಿಲ್ಲ. ಸಮಸ್ತ ತತ್ವದ ಸಜೀವ ಮೂರ್ತಿಯಂತೆ ಇದಾರೆ. ವೇದಾಂತವೂ ಬೌದ್ಧ ಧರ್ಮವೂ ಇವರಲ್ಲಿ ಸಮ್ಮೇಲನವಾಗಿವೆ. ಇವರೇ ನಿಜವಾದ ತತ್ವ. ಇವರೇ ನಿಜವಾದ ಕವಿ—ತಾತ್ವಿಕರು" ಎಂದರು.

ಸರ್ಕಸ್‌ನಿಂದ ಹೊರಕ್ಕೆ ಬಂದಾಗ ರಾತ್ರಿ ಬಹು ಹೊತ್ತಾಗಿದ್ದಿತು. ಟ್ರಾಂ ಆಗಲೀ ರಿಕ್ಷಾ ಆಗಲೀ ಸಿಗುವಂತಿರಲಿಲ್ಲ. ಸ್ವಾಮಿಗಳು ನಡವೇ ಹೊರಟರು ; ನಾವು ಹಿಂಬಾಲಿಸಿದೆವು. ಅವರೊಂದಿಗೆ ನಾವು ಹೆಜ್ಜೆಹಾಕಿ ನಡೆಯುವುದೇ ಕಷ್ಟವಾಯಿತು. ಅಷ್ಟು ವೇಗ ಅವರ ನಡಿಗೆ. ಪ್ರತಿಸಂಜೆಯೂ ಭಾರತೀಯರೂ, ಜಪಾನಿಯರೂ ಅವರ ಸುತ್ತ ಸೇರುತ್ತಿದ್ದರು. ಅವರ ವಾಣಿಯನ್ನು ಮೈಮರೆತು ಕೇಳುತ್ತಿದ್ದರು. ನಾನು ಅಪ್ರತಿಮ ಶ್ರದ್ಧಾಭಕ್ತಿ

ಗಳಿಂದ ಕಣ್ಮುಚ್ಚಿ ಕುಳಿತು, ತುಟಿಗಳು 'ಓಂ'ಕಾರವನ್ನು ನುಡಿಯುತ್ತಿರಲು ಅವರ ಮಾತೊಂದನ್ನೂ ಕೇಳದೆಯೂ ಕೇಳುತ್ತಲೂ ಕುಳಿತಿರುತ್ತಿದ್ದೆ.

ಟೋಕಿಯೋವಿನ ಕಾಮರ್ಸ್ ಕಾಲೇಜಿನಲ್ಲಿ "ಜಯದ ಗುಟ್ಟು" ಎಂಬ ವಿಚಾರವಾಗಿ ಭಾಷಣ ಮಾಡಿದರು. ಅದರ ವಿಚಿತ್ರ ಪ್ರಜ್ವಲತೆಯು ಜನರನ್ನು ಬೆರಗುಮಾಡಿತು. ಪತ್ರಿಕೆಗಳಲ್ಲಿ ಪ್ರಕಟವಾದ ಇದನ್ನು ಕಂಡು ರಷ್ಯಾದ ರಾಯಭಾರಿಯು ಸ್ವಾಮಿಗಳನ್ನು ಭೇಟಿಯಾಗಲು ಅಪ್ಪಣೆಯನ್ನು ಕೋರಿದನು. ಆದರೆ ಆ ವೇಳೆಗೆ ಸ್ವಾಮಿಯವರು ಸ್ಯಾನ್‌ಫ್ರಾನ್ಸಿಸ್ಕೋಗೆ ತೆರಳಿಬಿಟ್ಟಿದ್ದರು.

''ಪೂರ್ಣಮದ ಪೂರ್ಣಮಿದಂ" ಎಂದು ಹಾಡುತ್ತಾ ಜಪಾನಿನಲ್ಲಿಳಿದೆ; 'ಪೂರ್ಣಮದ ಪೂರ್ಣಮಿದಂ' ಎಂದು ಹಾಡುತ್ತಾ ಹೋಗುತ್ತೇನೆ, ನಾನು ಸರ್ವಧರ್ಮ ಸಮ್ಮೇಳನಕ್ಕಾಗಿ ಬರಲಿಲ್ಲ. ಪೂರ್ಣನನ್ನು ನೋಡಲು ಬಂದೆ' ಎಂದರು. ನಾನು ಕೂಡಲೆ ಗಡ್ಡ, ಮೀಸೆ, ತಲೆಕೂದಲನ್ನು ಬೋಳಿಸಿಕೊಂಡು ಸನ್ಯಾಸಿಯಾಗಿಬಿಟ್ಟೆ; ಅವರ ಮೇಲಿನ ಪ್ರೇಮದ ಸಲುವಾಗಿ.*

"ಒಮ್ಮೆ ಜಪಾನೀ ಪೇಟೆಯಾದ ಕಂಕೋಬಾ ಪಾರ್ಕನಲ್ಲಿ ನಾವು ವ್ಯಾಪಾರಮಾಡುತ್ತಿದ್ದ ಅಂಗಡಿಗಳಲ್ಲಿ ನೆರೆದಿದ್ದ ತರುಣಿಯರೆಲ್ಲರೂ ಓಡಿಬಂದು ಸ್ವಾಮಿಗಳನ್ನು ಮುತ್ತಿಕೊಂಡರು. ಪ್ರತಿಯೊಬ್ಬರೂ ತಮ್ಮ ತಮ್ಮ ಅಗಂಡಿಗಳನ್ನು ಬಿಟ್ಟು ಅವರನ್ನು ಹಿಂಬಾಲಿಸಿದರು. ಅವರು ಸ್ವಾಮಿಗಳು ವಸ್ತ್ರವನ್ನು ಮುಟ್ಟಿ ಅವರನ್ನೇ ಕಾತುರರಾಗಿ ನೋಡುತ್ತಾ 'ಇವರು ನಮ್ಮೆಲ್ಲರಿಗಿಂತಲೂ ಸುಂದರರಾಗಿದ್ದಾರೆ' ಎಂದರು. ನನ್ನೊಂದಿಗೆ ಜಪಾನೀ ಭಾಷೆಯಲ್ಲಿ, 'ಈ ಸುಂದರ ಮನುಷ್ಯನನ್ನು ಮದುವೆಯಾಗಲು ನಮ್ಮೊಬ್ಬರಿಗೂ

---

*ಸ್ವಾಮಿಗಳ ಮೇಲಿನ ಅಪಾರ ಪ್ರೇಮದಿಂದ ಪೂರ್ಣಸಿಂಹರು ಸನ್ಯಾಸಿಗಳಾಗಿ, ಬೌದ್ಧ ಭಿಕ್ಷುಗಳಂತೆ ಉಡುಪು ಧರಿಸಿ, ಸುಮಾರು ಒಂದು ವರುಷಕಾಲ ಜಪಾನ್ ದೇಶವನ್ನೆಲ್ಲಾ ಸಂಚರಿಸುತ್ತಾ ಪ್ರಚಾರ ಕಾರ್ಯ ಮಾಡಿದರು. ಅಲ್ಲದೆ ಅಲ್ಲೇ "Thundering Dawn" (ಗರ್ಜನೀಯ ಪ್ರಭಾತ) ವೆಂಬ ವೇದಾಂತಪರವಾದ ಪತ್ರಿಕೆಯನ್ನೂ ಪ್ರಕಟಿಸುತ್ತಿದ್ದರು. ನಂತರ ಭಾರತಕ್ಕೆ ಹಿಂದಿರುಗಿದಾಗ ಇವರ ವೇಷವನ್ನು ಕಂಡ ತಾಯಿತಂದೆಗಳು ಕಣ್ಣೀರಿಡಲು, ಸನ್ಯಾಸಾಶ್ರಮವನ್ನು ತ್ಯಜಿಸಿ, ವಿವಾಹಿತರಾಗಿ, ಸಂಸಾರಿಗಳಾಗಿ, ಸರ್ಕಾರಿಹುದ್ದೆಯಲ್ಲಿದ್ದು ಮುಂದೆ ೧೯೩೦ರಲ್ಲಿ ಸ್ವರ್ಗಸ್ಥರಾದರು.

ಬಯಕೆಯಾಗುತ್ತದೆ; ಎಂಥ ವಿಚಿತ್ರ!' ಎಂದರು; ನಗುತ್ತಾ ಅವರೊಂದಿಗೆ ವಿನೋದ ಮಾಡಿದರು. ಭಾಷೆಯನ್ನರಿಯದ ಸ್ವಾಮಿಗಳು ಆ ತರುಣಿಯರು ಏನೆಂದರೆಂದು ಕೇಳಿದರು. 'ನಿಮ್ಮಿಂದ ವೇದಾಂತ ವಿಚಾರ ಭಾಷಣ ಕೇಳಲು ಬಯಸುತ್ತಾರೆ' ಎಂದು ಬೇಕೆಂತ ತಿರುಗಿಸಿ ಹೇಳಿದೆ. ಅವರು ನಮಸ್ಕರಿಸಿ ಅವರಿಗೆ ಸದಾ ಸುಸ್ವಾಗತವು ರಾಮನು ಇತರರವನಾಗಿರುವಂತೆಯೇ ಅವರವನೂ ಆಗಿದ್ದಾನೆ' ಎಂದು ಹೇಳು ಎಂದರು.

"ಒಮ್ಮೆ ಟೋಕಿಯೋದಲ್ಲಿ ಲಾರ್ಡ್ ನಯೀಬೋಕಂಡೋರವರ ಮನೆಗೆ ಸ್ವಾಮಿಯನ್ನು ಕರೆದುಕೊಂಡು ಹೋದೆ. ಅವರು ಸ್ವಾಮಿಗಳೊಂದಿಗೆ ಸಂಭಾಷಣೆ ನಡೆಸುತ್ತಿರುವ ಮಧ್ಯದಲ್ಲೇ, ಎದ್ದು ಒಳಗೆ ಹೋಗಿ ತನ್ನ ಹೆಂಡತಿ, ಮಕ್ಕಳನ್ನು ಕರೆತಂದು, ಸ್ವಾಮಿಗಳಲ್ಲಿ ಕ್ಷಮೆಬೇಡಿ 'ಕ್ಷಮಿಸಬೇಕು. ಈ ಅಪೂರ್ವಾನಂದವನ್ನು ನನ್ನ ಹೆಂಡತಿ ಮಕ್ಕಳೊಂದಿಗಲ್ಲದೆ ಅನುಭವಿಸಲಾರದೆ ಹೋದೆ' ಎಂದರು. ಮುಂದೆ ನೀವೇಕೆ ನಿಮ್ಮ ಕುಟುಂಬವನ್ನು ತ್ಯಾಗಮಾಡಿದಿರಿ ? ಎಂದು ಪ್ರಶ್ನಿಸಿದುದಕ್ಕೆ ಸ್ವಾಮಿಗಳು 'ವಿಶ್ವಕುಟುಂಬಿಯಾಗಿ ಜಗತ್ತಿನೊಂದಿಗೇನೇ ಆನಂದವನ್ನು ಅನುಭವಿಸುವುದಕ್ಕೆ' ಎಂದರು.

ಸ್ವಾಮಿಗಳು ಜಪಾನನ್ನು ಬಿಟ್ಟು ಹೊರಟುಹೋದ ಮೇಲೂ ಕೂಡ ಒಮ್ಮೆ ಕಿಜೋ ಹಿರಾಯಿ ಅವರು "ಸ್ವಾಮಿಯ ಮಂದಸ್ಮಿತವು ಪ್ಲಮ್ ಪುಷ್ಪಗಳಂತೆ ಗಾಳಿಯಲ್ಲಿ ತೇಲುತ್ತಿವೆ-ನೋಡು" ಎಂದರು. ಹಿರಾಯಿರವರು ೧೮೯೩ರಲ್ಲಿ ಚಿಕಾಗೋನಲ್ಲಿ ನಡೆದ ಸರ್ವಮತ ಸಮ್ಮೇಳನಕ್ಕೆ ಬೌದ್ಧಮತದ ಪ್ರತಿನಿಧಿಗಳಾಗಿ ಹೋದರು. "ಸ್ವಾಮಿ ರಾಮರು ನನಗೆ ಭಗವಾನ್ ಬುದ್ಧನನ್ನು ನೆನಪಿಗೆ ತರುತ್ತಾರೆ. ಅವರು ಸತ್ಯವಾಗಿಯೂ ದೈವೋನ್ಮತ್ತರು." ಎನ್ನುತ್ತಿದ್ದರು.

• ಅಂತೂ ಅವರು ಸುಮಾರು ಹದಿನೈದು ದಿನಗಳು ಟೋಕಿಯೋವಿನಲ್ಲಿದ್ದಂತಾಯಿತು. ಮುಂದೆ ಪ್ರೊಫೆಸರ್ ಛತ್ರೆಯವರು ತಮ್ಮ ಸರ್ಕಸ್ ಮಂಡಲಿಗಾಗಿ ಗೊತ್ತು ಮಾಡಿದ್ದ ಹಡಗಿನಲ್ಲಿ ಕುಳಿತು ಅಮೆರಿಕಾಕ್ಕೆ ಹೊರಟುಬಿಟ್ಟರು.*

---

*ಇಲ್ಲಿಂದ ಸ್ವಾಮಿರಾಮರು ಒಬ್ಬರೇ ಅಮೇರಿಕಾಕ್ಕೆ ಹೊರಟರು. ಅವರ ಅಪ್ಪಣೆಯಂತೆ ಅವರ ಶಿಷ್ಯರಾದ ಸ್ವಾಮಿನಾರಾಯಣರು ಹಿಂದಿರುಗಿ ಹಾಂಕಾಂಗ್, ಸಿಂಗ್‌ಪುರ

ಅಮೆರಿಕಾದಲ್ಲಿ

ಅಮೆರಿಕಾಕ್ಕೆ ಹೋಗುತ್ತಿದ್ದ ಹಡಗಿನಲ್ಲಿ ಸ್ವಾಮಿಗಳು ಆಗಿಂದಾಗ್ಗೆ ಡೆಕ್ ಮೇಲೆ ಹೋಗಿ ನಿಲ್ಲುತ್ತಿದ್ದರು. ಇವರ ತೇಜಃಪುಂಜವಾದ ಮುಖವನ್ನು ಕಂಡು ಬೆರಗಾದ ಅಮೇರಿಕನೊಬ್ಬನು, ಇವರನ್ನು ಸಮೀಪಿಸಿ "ಹಡಗಿನಿಂದಿಳಿಯಲು ಆತುರರಾಗದಿರಲು ಕಾರಣವೇನು? ನಿಮ್ಮ ಸಾಮಾನುಗಳೆಲ್ಲಾ ಎಲ್ಲಿವೆ?" ಎಂದು ಪ್ರಶ್ನಿಸಲು "ನನ್ನ ಮೈಮೇಲಿರುವಷ್ಟು ಹೊರತು ಬೇರೆ ಪೆಟ್ಟಿಗೆ ಮೂಟೆಗಳೇನೂ ಇಲ್ಲ" ವೆಂದು ಸ್ವಾಮಿಗಳು ಉತ್ತರವಿತ್ತರು.

"ನಿಮ್ಮ ಹಣವನ್ನು ಎಲ್ಲಿಡುತ್ತೀರಿ?"

"ನಾನು ಹಣವನ್ನೇ ಇಡುವುದಿಲ್ಲ."

"ಹಾಗಾದರೆ ನೀವು ಜೀವಿಸುವಿರಿ ಹೇಗೆ?"

"ಎಲ್ಲರನ್ನೂ ಪ್ರೀತಿಸುತ್ತಾ ಜೀವಿಸಿರುವೆ; ನನಗೆ ಬಾಯಾರಿದಾಗ ಸಹ ಯಾರಾದರೂ ಒಂದು ಬಟ್ಟಲು ನೀರು ತಂದು ಕೊಡುವರು, ಹಸಿವಾದಾಗ ಸಹ ಯಾರಾದರೂ ಒಂದು ರೊಟ್ಟಿ ಕೊಡುವರು."

"ಆದರೆ ಈಗ ನಿಮಗೆ ಇಲ್ಲಿ ಅಮೆರಿಕಾದಲ್ಲಿ ಮಿತ್ರರು ಯಾರಾದರೂ ಇರುವರೋ?"

"ಹೌದು ನನಗೊಬ್ಬ ಅಮೆರಿಕನ್ನರು ಗುರುತು"

"ಯಾರು?"

"ನೀವು," ಎಂದು ಹೇಳಿ ಸ್ವಾಮಿಗಳು ಅವನ ಭುಜವನ್ನು ಮುಟ್ಟಿದರಂತೆ. ಒಡನೆಯೇ ಆತನಿಗೆ ಯಾವುದೋ ಮರೆತ ಪರಿಚಯದ ನೆನಪಾದಂತಾಗಿ ಸ್ವಾಮಿಗಳ ಮೆಚ್ಚಿನವನಾದ. ಆತನು ಮುಂದೆ "ಹಿಮಾಲಯದಿಂದ

ಪೆನಾಂಗ್, ಬ್ರಹ್ಮದೇಶ, ಸಿಂಹಳದ ಮಾರ್ಗವಾಗಿ ಆಫ್ರಿಕಾವನ್ನು ತಲುಪಿ, ಪೋರ್ಟ್‌ಸೈಡ್ ಕೈರೋ, ಆಲೆಕ್ಸಾಂಡ್ರಿಯಾ, ಗೋಜೋ, ಮಾಲ್ಟಾ, ಟ್ಯೂನಿಸ್, ಅಲ್ಜಿಯರ್ಸ್, ಮೊರಾಕೋಗಳನ್ನು ಭೇಟಿಮಾಡಿ, ಜಿಬ್ರಾಲ್ಟರ್ ಮಾರ್ಗವಾಗಿ ೧೯೦೩ನೆಯ ಸೆಪ್ಟೆಂಬರ್ ತಿಂಗಳಲ್ಲಿ ಲಂಡನ್ ಪಟ್ಟಣವನ್ನು ತಲುಪಿದರು. ಅಲ್ಲಿ ಐದುತಿಂಗಳ ಪ್ರವಾಸದಲ್ಲಿ ಕೊರೆತದ ಕಾರಣ ದೇಹಾಲಸ್ಯವಾಗಲು, ವೈದ್ಯರ ಸಲಹೆಯಂತೆ, ರಾಮರ ಅಪ್ಪಣೆಯಂತೆ 1904ರ ಜನವರಿ ಹಿಂದಿರುಗಿ ಜುಲೈ ವೇಳೆಗೆ ಹಿಂದೂಸ್ಥಾನವನ್ನು ತಲುಪಿ ೧೯೦೫ರ ಪ್ರಾರಂಭದಲ್ಲಿ ಶ್ರೀ ಸ್ವಾಮಿಗಳನ್ನು ಮತ್ತೆ ಪುಷ್ಕರದಲ್ಲಿ ದರ್ಶಿಸಿದರು.

ದಯಮಾಡಿರುವ ಜ್ಞಾನಜ್ಯೋತಿ ಇವರು. ಬೆಂಕಿಯೂ ಅವರನ್ನು ಸೋಕ ಲಾರದು--ಉಕ್ಕು ಅವರನ್ನು ತಾಕಲಾರದು. ದೈವೋನ್ಮತ್ತ ಬಾಷ್ಪಗಳು ಕಣ್ಣುಗಳಿಂದ ಜಾರುತ್ತವೆ. ಅವರ ದರ್ಶನ ಮಾತ್ರದಿಂದ ಹೊಸ ಜೀವ ಕಳೆ ಬರುತ್ತದೆ" ಎಂದು ಬರೆದ.

ಹೀಗೆ ಸ್ವಾಮಿಗಳು ೧೯೦೨ನೇ ನವಂಬರ್ ೧೬ನೇ ತಾರೀಖು ಅಮೆರಿಕಾ ವನ್ನು ತಲುಪಿದರು.

ಶಾಸ್ತಾ ಸ್ಪ್ರಿಂಗ್ಸ್ ಎಂಬಲ್ಲಿ ಸ್ವಾಮಿಗಳು ಡಾಕ್ಟರ್ ಹಿಲ್ಲರ್ ಎನ್ನುವರ ಅತಿಥಿಗಳಾಗಿದ್ದರೂ, ಕೊಡಲಿ ಹಿಡಿದು ಕಾಡಿಗೆ ಹೋಗಿ ಕಟ್ಟಿಗೆಯನ್ನು ಹೊತ್ತು ತಂದು ತಮ್ಮ ಅಭ್ಯಾಗತರ ಮನೆಗೆ ಒದಗಿಸುತ್ತಿದ್ದರು.

ಸ್ವಾಮಿಗಳು ಶಾಸ್ತಾದಲ್ಲಿದ್ದಾಗ ಕಷ್ಟಪಟ್ಟು ಕೆಲಸಮಾಡುತ್ತಿದ್ದರು; ಏಕೆಂದರೆ ಅಮೇರಿಕದಂತಹ ದೇಶದಲ್ಲಿ ದೈಹಿಕ ಶ್ರಮವಿಲ್ಲದೆ ಜೀವಿಸುವುದು ಇಷ್ಟವಾಗಿರಲಿಲ್ಲ. ಏಕಾಂತ ವಾಸದಲ್ಲಿ ಪ್ರೇಮ. ಅಲ್ಲಿನ ಶಾಸ್ತಾ ಪರ್ವತ ಗಳನ್ನು ಹತ್ತುವ ಸ್ಪರ್ಧೆಯಲ್ಲಿ ಅನೇಕ ಅಮೆರಿಕರೊಂದಿಗೆ ಸೇರಿ ಮೊದಲ ನೆಯವರಾಗಿ ಬಂದರು. ಆಬಳಿ ಬಹುಮಾನವನ್ನು ಕೊಡಲು ಬಂದಾಗ ನಿರಾಕರಿಸಿದರು. ಈ ಸಂಗತಿಯನ್ನು ಪ್ರಕಟಿಸಿದ ಪತ್ರಿಕೆಗಳು ಎಂದೂ ಇಲ್ಲ ದಷ್ಟು ಮಾರಾಟವಾದವು. ಮತ್ತೆ ಅನೇಕ ಅಮೆರಿಕರೊಂದಿಗೆ ಮೂವತ್ತು ಮೈಲಿ ಓಟದ ಸ್ಪರ್ಧೆಗೆ ಸೇರಿ ಅದರಲ್ಲೂ ಮೊದಲನೆಯವರಾಗಿ ಬಂದರು.

ಶಾಸ್ತಾನದಿಯಮೇಲೆ ತೂಗು ಮಂಚವನ್ನು ದಡಗಳ ಹಿರಿಮರಗಳಿಗೆ ಕಟ್ಟಿಕೊಂಡು ಅಲ್ಲಿನ ಹಕ್ಕಿ ಪಕ್ಷಿಗಳೊಂದಿಗೆ ಒಲಿದು ಇರುತ್ತಿದ್ದರು. ಆಗಾಗ "ವೇದಾಂತ"ದ ವಿಚಾರ ಭಾಷಣಮಾಡುವ ಸಲುವಾಗಿ ಅಲ್ಲಿಂದ ತಮ್ಮ ಪರ್ವತ ಪ್ರದೇಶದ ಏಕಾಂತ ವಾಸದಿಂದ ಹೊರಗೆ ಬರುತ್ತಿದ್ದರು. "ಆ ವೃದ್ಧ ದಂಪ ತಿಗಳು (ಹಿಲ್ಲರ್ ಮತ್ತು ಪತ್ನಿ) ಬಹು ದಯಾಳುಗಳಾದ ಅಭ್ಯಾಗತರಾಗಿ ದ್ದರು. ರಾಮನನ್ನು ಪ್ರೀತಿಸುತ್ತಿದ್ದರು; ಅಲ್ಲದೆ ಅವರೊಂದಿಗೆ ಇದ್ದುಬಿಡು ವಂತೆ ಹೇಳುತ್ತಿದ್ದರು" ಎಂದು ಮುಂದೆ ಸ್ವಾಮಿಗಳು ಹೇಳಿದ್ದಾರೆ.

ಅವರು ಭಾಷಣಮಾಡುತ್ತಾ ಹೋದೆಡೆಯಲ್ಲೆಲ್ಲಾ ಭಾರತೀಯ ವಿದ್ಯಾ ನಿಲಯದಲ್ಲಿ 'ಭಾರತಕ್ಕೆ ಜಗತ್ತಿನ ಋಣ' ಎಂಬ ವಿಚಾರವಾಗಿ ಭಾಷಣ ಮಾಡಿದರು. ವಿಶ್ವವಿದ್ಯಾನಿಲಯದ ಅಧ್ಯಕ್ಷನು ಬಹು ಆನಂದಹೊಂದಿ

ಶ್ರೀರಾಮರಿಗೆ ಅರ್ಪಿಸಲು ಕೆಲವು ಪುಸ್ತಕಗಳನ್ನು ತರಿಸಿದನು. ಅವುಗಳ ಪೈಕಿ ಒಂದು ಸ್ವಲ್ಪ ಮಾಸಿದ್ದಿತು. ಆಗ ಆತನು ಅವನ್ನು ತಂದಿದ್ದ ಗುಮಾಸ್ತೆಯನ್ನು ಕುರಿತು "ನೀನು ಈಗತಾನೇ ಸ್ವಾಮಿಗಳ ಭಾಷಣವನ್ನು ಕೇಳಲಿಲ್ಲವೆ? ಈ ಪುಸ್ತಕಗಳು ಯಾರಿಗೆ ಅರ್ಪಿಸುವುದೆಂದು ನೀನು ತಿಳಿಯೆಯಾ? ರಾಮನಿಗೆ ವಿಶ್ವವಿದ್ಯಾನಿಲಯದ ಕಾಣಿಕೆ. ದಯಮಾಡಿ ಬೇರೇ ಪ್ರತಿಯನ್ನು ತಾ" ಎಂದನಂತೆ.

ಸ್ವಾಮಿ ರಾಮರು ಇತರ ವಿಶ್ವವಿದ್ಯಾನಿಲಯಗಳಿಗೂ ಭೇಟಿ ಇತ್ತರು,* ಶಾಸ್ತ್ರ ಸಂಭಾಷಣೆ ಮಾಡಲು ಬಂದ ಸುಪ್ರಸಿದ್ಧ ಗಣಿತ ಶಾಸ್ತ್ರ ವಿಶಾರದರಾಗಲ್ಲ; ವೇದಾಂತ ಜ್ಯೋತಿಯನ್ನು ಹಿಡಿದು ಪೂರ್ವದಿಂದ ಬಂದ ತಾತ್ವಿಕರಾಗಿ. ಅವರು ತಮ್ಮ ಗಣಿತವನ್ನೇನೋ ಬಹು ಪ್ರೀತಿಸುತ್ತಿದ್ದರು. ಸ್ವಾಮಿಗಳು ಎಲ್ಲಿ ಹೋಗಲಿ ಎಲ್ಲರ ಪ್ರೀತ್ಯಾದರಗಳೂ ಸ್ವಾಭಾವಿಕವಾಗಿ ಹೊರಹೊಮ್ಮುತ್ತಿದ್ದುವು. ಅವರು ಆದೇಶದಲ್ಲಿ ಮಾಡಿದ ಭಾಷಣಗಳ ಪರಿಣಾಮವಾಗಿ ವೇದಾಂತ ಜ್ಞಾನವೂ, ಭಾರತದ ಬಗ್ಗೆ ಸಹಾನುಭೂತಿಯೂ ವಿಶ್ವಾಸಗಳೂ ಬೆಳೆದುವು. ಅವರನ್ನು ಕಂಡು ಅವರ ದಿವ್ಯವಾಣಿಯನ್ನು ಕೇಳಿದವರ ಹೃದಯದನೇಲಂತೂ ಅಚ್ಚಳಿಯದ ಪರಿಣಾಮವಾಯಿತು. ಅಲ್ಲಿನ ಶ್ರೀಮತಿ ಪಿ. ವ್ಹಿಟ್‌ಮನ್ ಎಂಬಾಕೆಯು ಕೇವಲ ಅಭಿಮಾನದಿಂದ ಮುಗ್ಧರಾಗಿ, ಈ ಕಾಲದಲ್ಲಿ ಅವರು ಮಾಡಿದ ಭಾಷಣಗಳನ್ನೆಲ್ಲಾ† ಶೀಘ್ರಲಿಪಿಯಲ್ಲಿ ಬರೆದುಕೊಂಡಿದ್ದರು.

ಮುಂದೆ ಸ್ವಾಮಿಗಳು ಪೋರ್ಟ್‌ಲ್ಯಾಂಡ್, ಆರೆಗಾನ್, ಡೆನ್ವೇರ್, ಮಿನ್ನಿಯಾಪೊಲೀಸ್, ಫಿಲಡೆಲ್ಫಿಯಾ, ವಾಷಿಂಗ್‌ಟನ್, ಸೇಂಟ್‌ಲೂಈ ಬಫೆಲೋ, ಲಿಲಿಡೇಲ್, ಶಿಕಾಗೋ, ಬಾಸ್ಟನ್, ಗ್ರೀನೇಕರ್, ಮೇನ್, ನ್ಯೂಯಾರ್ಕ್, ಫ್ಲಾರಿಡಾ ಮುಂತಾದ ಹಲವು ಪಟ್ಟಣಗಳಲ್ಲಿ ಎಡಬಿಡದೆ

---

*[ಇಲ್ಲಿ ಒಂದು ವಿಶ್ವವಿದ್ಯಾನಿಲಯದವರು ಸ್ವಾಮಿಗಳಿಗೆ LL.D. ಪದವಿಯನ್ನು ಕೊಡಲು ಬಂದಾಗ ವಿನಯದಿಂದ ಅದನ್ನು ನಿರಾಕರಿಸಿಬಿಟ್ಟರು.]

† ಶ್ರೀಸ್ವಾಮಿಗಳ ಅನಿರೀಕ್ಷಿತ ದೇಹಾಂತವಾದ ಕಾರಣ, ಅವನ್ನು ಹಾಗೆ ಮುದ್ರಿಸಿ ಪ್ರಕಟಿಸಿದ್ದಾರೆ. ಅವು ಸುಮಾರು ಎರಡು ಸಾವಿರ ಪುಟಗಳಷ್ಟಾಗಿವೆ.

ಭಾಷಣಗಳನ್ನು ಮಾಡುತ್ತಾ ಸಂಚರಿಸಿ ೧೯೦೪ನೇ ಇಸವಿಯಲ್ಲಿ ಅಮೆರಿಕ ವನ್ನು ಬಿಟ್ಟು ಹೊರಟರು.

ಅಮೇರಿಕಾದಲ್ಲಿದ್ದಾಗ ಒಮ್ಮೆ ಸುಪ್ರಸಿದ್ಧ ನಟಿಯೊಬ್ಬಳು ಸ್ವಾಮಿಗಳ ಏಕಾಂತ ದರ್ಶನವನ್ನು ಬೇಡಿದಳು. ಅವರು ಒಪ್ಪಿದರು. ಆಕೆಯು ಮುತ್ತು ವಜ್ರಗಳನ್ನು ಹೇರಿಕೊಂಡಿದ್ದಳು; ಮೈಗೆ ಹಚ್ಚಿದ ಸುಗಂಧವು ಅವಳೇ ಪರಿಮಳದ ಪುತ್ಥಳಿಯೋ ಎಂಬಂತೆ ಕಾಣುತ್ತಿತ್ತು. ಚೆಂದುಟಿಗಳಮೇಲೆ ಮುಗುಳ್ನಗೆಯು ನವೀನವಾಗಿತ್ತು.

ಆದರೆ ಸ್ವಾಮಿಗಳನ್ನು ಕಾಣುತ್ತಲೇ ಅವಳು ನೆಲದ ಮೇಲೆ ಬಿದ್ದು ಗೋಳಿಡುತ್ತಾ "ಸ್ವಾಮಿ! ನಾನು ಬಹು ದುಃಖಿಯಾಗಿದ್ದೇನೆ. ನನಗೆ ಸುಖ ವೆಲ್ಲಿರುವುದೆಂದು ಹೇಳಿ. ನನ್ನ ವಜ್ರ ವೈಢೂರ್ಯಗಳನ್ನೂ, ನಗೆಯನ್ನೂ ನೋಡ ಬೇಡಿ. ಅವೆಲ್ಲಾ ನನ್ನ ಬಾಹ್ಯಾಡಂಬರದ ಅಭ್ಯಾಸಗಳು. ಅವೂ ನನಗೆ ಬೇಸರವಾಗಿ ಹೋಗಿವೆ. ಸ್ವಾಮಿ—," ಎಂದು ಬೇಡುತ್ತಾ ಅತ್ತಳು. ಸ್ವಾಮಿಗಳು ಆಕೆಗೆ ಸಮಾಧಾನ ಹೇಳಿಕಳುಹಿಸಿದರು.

ಮತ್ತೊಮ್ಮೆ ಇನ್ನೊಬ್ಬ ಮಹಿಳೆಯು ಬಂದಳು; ಆಕೆಯು ಬಹು ಸಂಕಟದಲ್ಲಿದ್ದಳು. ತನ್ನ ಮಗುವನ್ನು ಕಳೆದುಕೊಂಡಾಕೆಯು ಸ್ವಾಮಿಗಳಲ್ಲಿ ಬಂದು "ನನಗೆ ಸುಖ 'ನೆಮ್ಮದಿ' ಸಿಗುವುದು ಎಲ್ಲಿ? ಹೇಗೆ?" ಎಂದು ಕೇಳಿದಳು. ಅದಕ್ಕೆ ಸ್ವಾಮಿಗಳು "ರಾಮನು ನೆಮ್ಮದಿಯನ್ನು ಮಾರುತ್ತಾನೆ; ಅದಕ್ಕೆ ತಕ್ಕ ಬೆಲೆ ಕೊಟ್ಟರೆ ಸುಖ ಸಿಗುವುದು" ಎಂದರು.

"ಎಂಥ ಬೆಲೆಯಾಗಲೀ, ಎಷ್ಟು ಬೆಲೆಯಾಗಲೀ ಕೊಡುವೆ" ಎಂದಳು. "ಆನಂದ ಸಾಮ್ರಾಜ್ಯದಲ್ಲಿ ನಾಣ್ಯವೇ ಬೇರೆ. ನೀನು ರಾಮನ ದೇಶದ ನಾಣ್ಯದಲ್ಲಿ ಬೆಲೆ ಕೊಡಬೇಕು" ಎಂದರು.

"ಆಗಲಿ ಸ್ವಾಮಿ; ನೀವು ಹೇಳಿದಂತೆ" ಎಂದಳು.

"ಸರಿ ಹಾಗಾದರೆ. ಈ ನೀಗ್ರೋ ಬಾಲಕನನ್ನು ಕರೆದುಕೋ; ನಿನ್ನ ಮಗನಂತೆ ಪ್ರೀತಿಯಿಂದ ಸಾಕಿಕೋ. ಇದೇ ನೀನು ಕೊಡಬೇಕಾದ ಬೆಲೆ" ಎಂದರು.

"ಆಹಾ! ಇದು ಬಹಳ ಕಠಿಣ" ಎಂದಳಾಕೆ.

"ಹಾಗಾದರೆ ಸೌಖ್ಯವನ್ನು ಹೊಂದುವುದೂ ಕಠಿಣವೇ" ಎಂದರು. ಆದರೆ ಮುಂದೆ ಆಕೆಯು ಸ್ವಾಮಿಗಳ ಉಪದೇಶದಿಂದ ಶಾಂತಿಯನ್ನು ಹೊಂದಿದಳು.

*ಇನ್ನೊಮ್ಮೆ ಒಬ್ಬಳು ಅಮೆರಿಕ ವೃದ್ಧೆಯು ಸ್ವಾಮಿ ರಾಮರಲ್ಲಿಗೆ ಬಂದು ತನ್ನ ಗೃಹಕೃತ್ಯದ ತೊಂದರೆಗಳನ್ನೆಲ್ಲಾ ಹೇಳಿಕೊಂಡು ಘಂಟೆಗಟ್ಟಳೆ ಅಳುತ್ತಿದ್ದಳು; ಸ್ವಾಮಿಗಳು ಪದ್ಮಾಸನಹಾಕಿ ಕಣ್ಮುಚ್ಚಿ ಕುಳಿತಿದ್ದರು. ಆಕೆಯು ಅಷ್ಟು ಸಂಕಟಪಟ್ಟು ಅಳುತ್ತಿದ್ದರೂ ಅವರು ಕಣ್ಣುಬಿಟ್ಟು ಸಹಾ ನೋಡದೆ, ಒಂದು ಸಮಾಧಾನ ವಚನವನ್ನೂ ಆಡದೆ, ಕಲ್ಲಿನಂತೆ ಕುಳಿತಿದ್ದುದನ್ನು ನೋಡಿ "ಈ ಭಾರತೀಯರು ಗರ್ವಿಗಳು, ದುರಹಂಕಾರಿಗಳು" ಎಂದುಕೊಂಡಳಂತೆ. ಆಕೆಯು ಕಥೆಯೆಲ್ಲವನ್ನೂ ಹೇಳಿ ಮುಗಿಸಿದಮೇಲೆ ಸ್ವಾಮಿಗಳು ಕಣ್ತೆರೆದರು. ತಮ್ಮ ಪ್ರಜ್ವಲಿಸುತ್ತಿರುವ ಕೆಂಪಾದ ಕಣ್ಣುಗಳಿಂದ ಆಕೆಯನ್ನು ನೋಡಿ "ತಾಯೀ !" ಎಂದು ಕರೆದು ತಮ್ಮ ಪ್ರಾಣಪ್ರಿಯವಾದ ಮಂತ್ರ "ಓಂಕಾರ"ವನ್ನು ಪಠಿಸಿದರಂತೆ. ಆಗ ಅವರ ಕಣ್ಣುಗಳಿಂದ ಹೊರಟ ಹೊಸ ಪ್ರಜ್ಞಾ ಪ್ರವಾಹದಲ್ಲಿ ಈಕೆಗೆ ಕಣ್ತೆರದಂತಾಯಿತು. "ನನ್ನ ಉದ್ಧಾರವಾದಂತಾಯಿತು. ನಾನು ಬೆಳಕಿನ ಬೊಂಬೆಯಾಗಿ ಅಂತರಿಕ್ಷದಲ್ಲಿ ಹಾರಾಡುತ್ತಿರುವಂತೆ ಅನುಭವವಾಯಿತು. ಎಲ್ಲಾ ದೇಶಗಳೂ ನನ್ನವೇ, ಜಗತ್ತೆಲ್ಲಾ ನನ್ನ ಮಕ್ಕಳು, ಎಂಬ ಅನುಭವವಾಯಿತು. ನನಗೆ ಅಂದಾದ ಆನಂದಾನುಭವದಿಂದ, ಭಾರತದೇಶವನ್ನು ನೋಡಬೇಕೆಂದು ಸಂಕಲ್ಪಿಸಿದೆ. ಅಂಥ ಸ್ವಾಮಿಯ ಜನ್ಮಸ್ಥಳವನ್ನು ದರ್ಶಿಸಬೇಕೆಂದು ಹೊರಟುಬಿಟ್ಟೆ. ಈಗ ಬಂದಿದ್ದೇನೆ. ಅಂದಿನ ಆನಂದವು ನನ್ನಲ್ಲಿ ತಗ್ಗಿಲ್ಲ. ಆ "ಓಂಕಾರವು" ನನ್ನ ಮೂಳೆಮೂಳೆಗಳಲ್ಲಿ ಪ್ರತಿಧ್ವನಿತವಾಗುತ್ತಿದೆ. ಅವರು 'ತಾಯೀ' ಎಂದ ಒಂದು ನುಡಿಯಿಂದ ನನ್ನಲ್ಲಿ ದೈವೀಶಕ್ತಿ ಉದ್ಭವಿಸಿತು. ಅವರ ಪಾದಗಳನ್ನು ಕಣ್ಣಿಗೊತ್ತಿಕೊಳ್ಳಲು ಬಯಸುತ್ತೇನೆ" ಎಂದಿದ್ದಾಳೆ.

ಒಮ್ಮೆ ಸ್ಯಾನ್‌ಫ್ರಾನ್ಸಿಸ್ಕೋವಿನಲ್ಲಿ ಅವರ ಸೆಕ್ರೆಟರಿಯು ಸ್ವಾಮಿಯವರಿಗೆ ನ್ಯೂಯಾರ್ಕಿಗೆ ರಿಯಾಯತಿ ದರದಲ್ಲಿ ಪ್ರಯಾಣದ ಟಿಕೆಟ್ ಕೊಡಿಸುವ ಸಲು

*ಆಕೆಯೇ ಮುಂದೆ ಭಾರತಕ್ಕೆ ಬಂದಾಗ ಲಾಲಾಪೂರ್ಣಸಿಂಹರೊಂದಿಗೆ ಹೇಳಿದ ಸಂಗತಿ ಇದು.

ವಾಗಿ ಗ್ರೇಟ್ ಪೆಸಫಿಕ್ ರೈಲ್ವೆ ರೋಡ್ ಕಂಪೆನಿಯ ಮ್ಯಾನೇಜರನ ಬಳಿಗೆ ಕರೆದುಕೊಂಡು ಹೋಗಲು, ಆತನು "ಇವರಿಗೇ ? ಇವರಿಗೆ ನನ್ನ ಪುಲ್‌ಮನ್ ಕಾರನ್ನೇ ಕೊಡುತ್ತೇನೆ–ಸುಮ್ಮನೇ ! ಇವರ ಮುಗುಳುನಗೆಯು ಅಷ್ಟು ಮನೋಹರವಾಗಿದೆ" ಎಂದನು.

ಶಾಸ್ತಾದಲ್ಲಿ ಸ್ವಾಮಿಗಳಿದ್ದಾಗ, ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕಾದ ಪ್ರೆಸಿಡೆಂಟನು ಉತ್ತರಕ್ಕೆ ಕಾರ್ಯಾರ್ಥವಾಗಿ ಹೋಗುತ್ತಾ ಅಲ್ಲಿ ತಂಗಿದನು. ಅಲ್ಲಿಯ ಕಂಪೆನಿಯ ಪ್ರತಿನಿಧಿಯು ಆತನಿಗೆ ಒಂದು ಬುಟ್ಟಿ ಸೊಗಸಾದ ಹೂಗಳನ್ನು ಕಾಣಿಕೆಕೊಟ್ಟಳು. ಸ್ವಾಮಿಗಳನ್ನು ನೋಡಲು ಬಂದ ಆತನಿಗೆ ಇವರು "ಭಾರತದ ಪರವಾಗಿ ಕೋರಿಕೆ" ಎಂಬ ತಮ್ಮ ಪುಸ್ತಕವನ್ನು ಕೊಟ್ಟರು. ಆತನು ವಿನಯ, ವಿಶ್ವಾಸ, ಆದರಗಳಿಂದ ಅದನ್ನು ಸ್ವೀಕರಿಸಿದನು. "ಆ ಪುಸ್ತಕವನ್ನು ಬಲಗೈಲಿ ಹಿಡಿದು ಜನರ ಗುಂಪಿನ ಮಧ್ಯೆ ಹೋಗುತ್ತಾ ಎಲ್ಲರಿಗೂ ನಮಸ್ಕರಿಸುವಾಗ ಕನಿಷ್ಟಪಕ್ಷ ನೂರುಬಾರಿಯಾದರೂ ಅದು ತಾನಾಗಿ ಆತನ ಹಣೆಯನ್ನು ಮುಟ್ಟುತ್ತಿತ್ತು. ರೈಲುಗಾಡಿಯಲ್ಲಿ ಕೂತು ಮನಸ್ಸಿಟ್ಟು ಅದನ್ನು ಓದುತ್ತಿದ್ದುದು ಕಂಡುಬಂದಿತು. ಗಾಡಿ ಹೊರಡುವಾಗ ರಾಮನಿಗೆ ಮತ್ತೊಮ್ಮೆ ವಂದಿಸಿದನು.*

ರಾಮರ ಪ್ರತ್ಯಾಗಮನ

ಸುಮಾರು ಎರಡೂವರೆ ವರುಷಗಳು ವಿದೇಶಗಳಲ್ಲಿ ವೇದಾಂತ ಪ್ರಚಾರವನ್ನು ಮಾಡಿ, ಸ್ವಾಮಿ ರಾಮತೀರ್ಥರು ೧೯೦೪ನೇ ಡಿಸೆಂಬರ್ ೮ನೇ ದಿನ

[ಅಮೆರಿಕಾದೇಶವನ್ನು ಬಿಟ್ಟು ಹೊರಡುವಾಗ ಅವರಿಗೆ ಅರ್ಪಿಸಲ್ಪಟ್ಟಿದ್ದ ನೂರಾರು ಮಾನಪತ್ರ, ಸ್ತುತಿಪ್ರಶಂಸೆಗಳ ಕಾಗದಗಳನ್ನೆಲ್ಲಾ ಸಮುದ್ರಕ್ಕೆ ಅರ್ಪಣೆಮಾಡಿ, ಹೇಗೆ ಬರಿಗೈಯಲ್ಲಿ ಹೋಗಿ ಆ ದೇಶವನ್ನು ತಲುಪಿದ್ದರೋ, ಹಾಗೆಯೇ ಬರಿಗೈಯಲ್ಲಿ ಅಲ್ಲಿಂದ ಹೊರಟರು. ಮುಂದೆ ಜಿಬ್ರಾಲ್ಟರ್ ಮಾರ್ಗವಾಗಿ ಬರುತ್ತಿರುವಾಗ ಈಜಿಪ್ಟಿಗೆ ಆಹ್ವಾನಿಸಲ್ಪಟ್ಟರು. ಅಲ್ಲಿ ಸ್ವಾಮಿಗಳ ಪರಿಶುದ್ಧವಾದ, ಕಾವ್ಯಮಯವಾದ ಪರ್ಷಿಯನ್ ಭಾಷೆಯಲ್ಲಿ ಮಾಡಿದ ಭಾಷಣಗಳಿಂದ ಮುಗ್ಧರಾದ ಜನರು ಇವರನ್ನು ಬಹು ಆದರಿಸಿ ಸತ್ಕರಿಸಿದರು. ಇವರ ಭಾಷಣಗಳು ದೊಡ್ಡ ದೊಡ್ಡ ಮಸೀತಿಗಳಲ್ಲಾದುವು]

*ಸ್ವಾಮಿಗಳ ಪತ್ರದಿಂದ:

ಬೊಂಬಾಯಿನಲ್ಲಿ ಹಡಗಿನಿಂದಿಳಿದು ಭಾರತವನ್ನು ಮುಟ್ಟಿದರು. ಈ ವೇಳೆಗೆ ಭಾರತವಾಸಿಗಳು ಅವರ ದಿಗಂತ ವಿಶ್ರಾಂತ ಕೀರ್ತಿಯನ್ನು ಕೇಳಿ ಕೇಳಿ ಅವರ ಶುಭಾಗಮನದ ನಿರೀಕ್ಷಣೆಯಲ್ಲಿದ್ದರು. ಸಮಸ್ತ ಸಂಪ್ರದಾಯದ ಜನರೂ ಅವರನ್ನು ಸ್ವಾಗತಿಸಲು ನೆರೆದಿದ್ದರು. ದೇಶಾದ್ಯಂತದ ಪತ್ರಿಕೆಗಳಲ್ಲೆಲ್ಲಾ ಸ್ವಾಮಿಗಳ ಪ್ರಶಂಸೆ ಸುಸ್ವಾಗತಗಳ ಸುರಿಮಳೆಗಳೇ !

ಸ್ವಾಮಿಗಳ ಪ್ರಾರಂಭ ಭಾಷಣವು ಬೊಂಬಾಯಿನಲ್ಲಾಯಿತು. ಬೊಂಬಾಯಿಂದ ಹೊರಟವರು ಆಗ್ರಾ, ಮಥುರಾ, ಲಖನವೂಗಳಲ್ಲಿ ತಮ್ಮ ಅಮೃತ ವಾಣಿಯಿಂದ ಸರ್ವಸಾಧಾರಣರ ತೃಷೆಯನ್ನೂ ಆರಿಸುತ್ತಾ ಪುಷ್ಕರರಾಜ್‌ಗೆ ಬಂದರು. ಇಲ್ಲಂತೂ ಆರ್ಯ ಸಮಾಜಿಗಳು, ಸನಾತನ ಧರ್ಮಿಗಳು, ಬ್ರಹ್ಮಸಮಾಜದವರು, ಸಿಖ್‌ರು, ಈಸಾಯಿಗಳು, ಮುಸಲ್ಮಾನರಾದಿಯಾಗಿ ಸಮಸ್ತರೂ ಸೇರಿ ಸ್ವಾಮಿಗಳನ್ನು ಸ್ವಾಗತಿಸಿದರು. ಮಥುರೆಯಲ್ಲಿ ಹಲವು ರಾಮರ ಭಕ್ತರು ಸೇರಿ, ತಮ್ಮದೇ ಒಂದು ಸಂಘವನ್ನು ಸ್ಥಾಪನೆಮಾಡುವಂತೆ ಕೇಳಿಕೊಂಡರು. ಆಗ ಸ್ವಾಮಿಗಳು ದೃಷ್ಟಿಸಿ "ಭಾರತವರ್ಷದಲ್ಲಿರುವ ಸಮಸ್ತ ಸಭೆಗಳೂ, ಸಮಾಜಗಳು, ಸಂಪ್ರದಾಯಗಳೂ ನನ್ನವೇ ! ರಾಮನು ಅವುಗಳಲ್ಲೆಲ್ಲಾ ಕೆಲಸ ಮಾಡುತ್ತಾನೆ." ಎನ್ನುತ್ತಾ ಕಣ್ಮುಚ್ಚಿ ಕೈಗಳನ್ನು ಮೇಲೆ ಚಾಚಿ ಪ್ರೇಮಾಶ್ರುಗಳನ್ನು ಸುರಿಸುತ್ತಾ "ಈಸಾಯೀ, ಆರ್ಯ, ಸಿಖ್, ಹಿಂದೂ, ಪಾರಸೀ, ಮುಸಲ್ಮಾನ ಮತ್ತೆಲ್ಲರೂ, ಯಾರ ಮೂಳೆಗಳು, ರಕ್ತ, ಮಸ್ತಿಷ್ಕಗಳು ನನ್ನ ಇಷ್ಟದೇವ ಭಾರತಭೂಮಿಯ ಅನ್ನ—ಉಪ್ಪುಗಳಿಂದಾಗಿವೆಯೋ, ಅವರೆಲ್ಲರೂ ನನ್ನ ಸೋದರರು. ಹಾಂ, ಅವರೆಲ್ಲರೂ ನಾನೇ· ರಾಮನು ಅವರವನೆಂದು ಅವರೆಲ್ಲರಿಗೂ ಹೋಗಿ ಹೇಳಿರಿ. ನಾನು ಅವರೆಲ್ಲರನ್ನೂ ಆಲಂಗಿಸುತ್ತೇನೆ; ಯಾರನ್ನೂ ನನ್ನ ಪ್ರೇಮಾಲಿಂಗನದಿಂದ ಬಾಹಿರರೆಂದು ತಿಳಿಯುವುದಿಲ್ಲ; ನಾನು ಜಗತ್ತಿನ ಮೇಲೆ ಪ್ರೇಮವರ್ಷವನ್ನು ಸುರಿಸುವೆ; ಪ್ರಪಂಚವನ್ನು ಆನಂದದಲ್ಲಿ ಮೀಯಿಸುವೆ; ನನ್ನನ್ನು ವಿರೋಧಿಸುವವನು ಬಂದರೆ ಅವನನ್ನು ಸ್ವಾಗತಿಸುವೆ. ಎಲ್ಲಾ ಸಂಸ್ಥೆಗಳೂ ನನ್ನವೇ ! ಎಲ್ಲಾ ಶಕ್ತಿಗಳೂ ನನ್ನ ಶಕ್ತಿಯೇ ! ಅದು ಕಿರಿದಾಗಿರಲೀ ; ಹಿರಿದಾಗಿರಲೀ ! ನಾನು ಪ್ರೇಮಾಮೃತವನ್ನು ವರ್ಷಿಸುವೆ !" ಎಂದು ನುಡಿದರು.

ಮುಂದೆ ಮತ್ತೊಂದು ಸ್ಥಳದಲ್ಲಿ ಹೀಗೆಂದರು :—

“ನಾನು ಬಾದ್‌ಶಾಃ ರಾಮ. ನನ್ನ ಸಿಂಹಾಸನವು ನಿಮ್ಮ ಹೃದಯ. ನಾನು ವೇದಗಳಲ್ಲಿ ಉಪದೇಶಿಸಿದಂದು, ಕುರುಕ್ಷೇತ್ರದಲ್ಲಿ ಗೀತಾಬೋಧೆಯನ್ನು ಮಾಡಿದಂದು, ಮೆಕ್ಕಾ—ಜೆರೂಸಲೆಂಗಳಲ್ಲಿ ಸಂದೇಶವನ್ನು ಸಾರಿದಂದು ಜನರು ನನ್ನನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಈಗ ನನ್ನ ಧ್ವನಿಯನ್ನೆತ್ತಿ ಮತ್ತೆ ನುಡಿಯುತ್ತಿದೇನೆ. ನನ್ನ ಧ್ವನಿಯಲ್ಲಿ ನಿಮ್ಮ ಧ್ವನಿಯಿದೆ. ತತ್ ತ್ವಮಸಿ ! ತತ್ ತ್ವಂ ಅಸಿ !! ನೀನೇ ಅದು ! ನೀನೇ ಅದು ! ಯಾವ ಶಕ್ತಿಯೂ ಇದನ್ನು ತಡೆಯಲಾರದು. ಈಶ್ವರ ವಾಕ್ಯವನ್ನು (ಕಲಾಮೆ ಹಕ್) ತಡೆಯ ಬಲ್ಲವರಾರು! ನಿರಾಶರಾಗಬೇಡಿ; ರಾಮನ ಸಿರಸ್ಸು ನಿಮ್ಮ ಸಿರಸ್ಸು. ನಿಮ್ಮ ಇಷ್ಟಬಂದರೆ ಈ ಸಿರಸ್ಸನ್ನು ಕತ್ತರಿಸಿಬಿಡಿ ; ಆದರೆ ಅದರ ಸ್ಥಳದಲ್ಲಿ ಅಂಥ ಸಹಸ್ರ ಸಿರಸ್ಸುಗಳು ಹುಟ್ಟಿಕೊಳ್ಳುವುವು.”

ಹೀಗೆ ಅವರ ದಿವ್ಯಾತ್ಮವು ಅನಂತ ದೇಶ ಕಾಲಗಳನ್ನೆಲ್ಲಾ ವ್ಯಾಪಿಸಿ ಬ್ರಹ್ಮಾಂಡದಷ್ಟೇ ಹಿರಿದಾಗಿದ್ದಿತು. ಈ ವಿಶ್ವಾತ್ಮನಲ್ಲಿ ಭಾರತದ ಸ್ಥಿತಿಯೂ, ಪ್ರೇಮವೂ ಆಗಾಗ್ಗೆ ಉಕ್ಕಿ ಅವರಿಂದ ದಿವ್ಯವಾಣಿಯು ಹೊರಸೂಸುವಂತೆ ಮಾಡುತ್ತಿದ್ದುವು. ಒಮ್ಮೆ “ಸೂರ್ಯನು ಮುಳುಗುತ್ತಿದ್ದಾನೆ; ನಿಶ್ವಾಶೋಚ್ಛ್ವಾಸಗಳು ತನುಗೂಡಿವೆ; ಕಣ್ಣುಗಳಿಂದ ಕಂಬನಿಯು ಕೋಡಿ ಹರಿಯುತ್ತಿದೆ.* ಎಲೈ ಅಸ್ತಾಚಲಗಾಮಿ ಸೂರ್ಯನೇ ! ನೀನು ಭಾರತದಲ್ಲಿ ಉದಯವಾಗಲು ಹೋಗುತ್ತಿದ್ದೀ ! ರಾಮನ ಈ ಸಂದೇಶವನ್ನು ತೇಜೋಮಯಿಯಾದ ಆ ನನ್ನ ತಾಯಿಯ ಸೇವೆಯಲ್ಲಿ ಅರ್ಪಿಸುವೆಯಾ ? ಈ ನನ್ನ ಪ್ರೇಮಾಶ್ರುಗಳು ಭಾರತ ವರ್ಷದ ಹಚ್ಚನೆಯ ಹೊಲಗದ್ದೆಗಳಲ್ಲಿನ ಮಂಜಿನ ಹನಿಗಳಾದರೆ ಎಷ್ಟು ಚೆನ್ನೋ !” ಎಂದಿರುವರು.

ಮತ್ತೊಂದು ಕಡೆ—“ಎಲೈ ! ಭಾರತೀಯರೇ ! ನೀವೂ ದೇಶಭಕ್ತರಾಗಲು ಬಯಸುವಿರಾದರೆ, ನೀವು ದೇಶಪ್ರೇಮದಲ್ಲಿ, ದೇಶನಿವಾಸಿಗಳಲ್ಲಿ ಸಮರ್ಪಿತರಾಗಿರಿ. ಏಕತಾಭಾವವನ್ನು ಉತ್ಪನ್ನಮಾಡಿರಿ. ನಿಜವಾದ ಆತ್ಮಿಕ ಸಿಪಾಹಿಗಳಾಗಿ-ಸಮರ ವೀರರಾಗಿ, ನಿಮ್ಮ ತನುಮನಧನಗಳನ್ನು ದೇಶದ ಹಿತಕ್ಕಾಗಿ ಬಲಿದಾನಕೊಟ್ಟುಬಿಡಿರಿ. ದೇಶದ ಕಷ್ಟಗಳ ಅನುಭವಮಾಡಿರಿ;

*ಜಪಾನಿನಲ್ಲಿದ್ದಂದು ಇದನ್ನು ನುಡಿದಿರಬಹುದು.

ಅಂದು ದೇಶವು ನಿಮ್ಮ ಕಷ್ಟಗಳ ಅನುಭವಮಾಡುವುದು" ಎಂದು ನುಡಿಯುತ್ತಾ ಕಣ್ಮುಚ್ಚಿ "ನಾನೇ ಸಶರೀರ ಭಾರತವರ್ಷ. ಭಾರತ ವರ್ಷವೆಲ್ಲಾ ನನ್ನ ದೇಶ! ಕನ್ಯಾಕುಮಾರಿಯು ನನ್ನ ಪಾದ! ಹಿಮಾಲಯವು ನನ್ನ ಜಟೆ. ಅಲ್ಲಿಂದಲೇ ಬ್ರಹ್ಮಪುತ್ರ, ಸಿಂಧೂ, ಗಂಗಾನದಿಗಳು ಪ್ರವಹಿಸುವುದು. ಮಲೆಯಾಳ ಕುರುಮಂಡಲಗಳು ನನ್ನ ಎಡಬಲ ಕಾಲುಗಳು. ನಾನೇ ಪೂರ್ಣ ಭಾರತ ! ಪೂರ್ವ ಪಶ್ಚಿಮ ಎರಡು ಕಡೆಗಳೂ ಬಾಹುಗಳನ್ನು ಚಾಚಿ ನನ್ನ ಸ್ವದೇಶಬಾಂಧವರನ್ನು ಆಲಿಂಗಿಸಿಕೊಳ್ಳಲು ಬಯಸುತ್ತೇನೆ! ನಾನೇ ಮೂರ್ತಿವರ್ಾ ಭಾರತ ! ಈ ಶರೀರವು ಒಂದು ಗೂಡು; ಆದರೆ ನನ್ನಾತ್ಮವು ಭಾರತದ ಆತ್ಮ. ನಾನು ನಡೆದಂದು ಭಾರತ ವರ್ಷವೇ ನಡೆದಂತೆ ಅನುಭವವಾಗುತ್ತದೆ. ನಾನು ನುಡಿದಂದು ಭಾರತವರ್ಷವೇ ನುಡಿಯುತ್ತದೆ'' ಎಂದರು.

ಮುಂದಿನ್ನೊಂದು ಎಡೆಯಲ್ಲಿ ಹೀಗೆ ಹಾಡಿದರು:—

ಹಮ್ ನಂಗೇ ಉಮರ್ ಬಿತಾಯೇಂಗೆ। ಭಾರತ್‌ಪರ್ ವಾರೇಜಾಯೇಂಗೇ॥
ಹಮ್ ಸೂಖೆ ಚನೇ ಚಬಾಏಂಗೇ। ಭಾಇಯೊಂಕೋ ಪಾರ್‌ಕರಾಏಂಗೇ॥
ಹಮ್ ಸೂಖೀ ರೋಟೀ ಖಾಯೇಂಗೇ। ಮಸ್ತ್ ಪಡೆ ರಹ್ ಜಾಯಂಗೇ॥
ಹಮ್ ಗಾಲೀ ತಾನಾ ಖಾಏಂಗೇ। ಆನಂದಕೀ ಝುಲಕ್ ದಿಖಾಏಂಗೇ॥
ಸೂಲೋಂಪರ್ ನಂಗೇ ಜಾಯಂಗೇ। ಪರ್ ಏಕೋ ಬ್ರಹ್ಮ ಲಖಾಏಂಗೇ॥

ಆಯುಷ್ಯವನ್ನೆಲ್ಲಾ ಬೆತ್ತಲೆಯಾಗಿ ಕಳೆಯೋಣ. ಆದರೆ ಭಾರತಕ್ಕೋಸ್ಕರ ಅರ್ಪಣೆಯಾಗೋಣ. ಒಣ ಕಡಲೆಯನ್ನು ತಿಂದಿರೋಣ; ಆದರೆ ಸೋದರರನ್ನು ಉದ್ಧರಿಸೋಣ; ಒಣರೊಟ್ಟಿಯನ್ನು ತಿಂದಿರೋಣ; ಆದರೆ ಆನಂದದಿಂದಿದ್ದುಬಿಡೋಣ! ಬೈಗುಳು ಕುಹಕಗಳನ್ನು ಸ್ವೀಕರಿಸೋಣ; ಆನಂದದ ಕಾಂತಿಯನ್ನು ತೋರಿಸೋಣ; ಬೆತ್ತಲಾಗಿ ಶೂಲವನ್ನಾದರೂ ಹತ್ತೋಣ; ಆದರೆ 'ಏಕೋಬ್ರಹ್ಮ'ನೆಂಬುದನ್ನು ತೋರಿಸೋಣ;—ಹೀಗೆ ಸ್ವಾಮಿಗಳು ಅಪೂರ್ವ ದೇಶಪ್ರೇಮವನ್ನು ಪ್ರಕಟಪಡಿಸಿದ್ದಾರೆ.

ಮಥುರಾ ಮತ್ತು ಪುಷ್ಕರದಲ್ಲಿ*

ಅಮೆರಿಕಾದಿಂದ ಹಿಂತಿರುಗಿ ಬಂದಮೇಲೆ ಸ್ವಾಮಿಗಳು ಮಥುರಾದಲ್ಲಿ

* ಲಾಲಾ ಪೂರ್ಣಸಿಂಹರ ಲೇಖನದಿಂದ.

ಜಮುನಾ ನದಿಯ ಎದುರು ದಡದಲ್ಲಿದ್ದ 'ಶಾಂತಿ ಆಶ್ರಮ' ವೆಂಬುದರಲ್ಲಿದ್ದರು. ನಾನು ಲಾಹೋರಿನಿಂದ ಮಿತ್ರನೊಬ್ಬನೊಂದಿಗೆ ಹೊರಟು ಅಲ್ಲಿಗೆ ತಲುಪಿದೆ. ಆಗ ಬೆಳಿಗ್ಗೆ ಎಂಟು ಘಂಟೆಯ ಸಮಯ. ತಮ್ಮ ಕೋಣೆಯಲ್ಲಿ ಬಾಗಿಲು ಅಗುಳಿ ಹಾಕಿಕೊಂಡು ಕುಳಿತ್ತಿದ್ದರು. ತೊಂದರೆಯಾದರೂ ಚಿಂತೆಯಿಲ್ಲವೆಂದು ಬಾಗಿಲು ಬಡಿದೆ. "ಯಾರು ?" ಎಂದರು. "ನಾನು ನಿಮ್ಮ ಪೂರ್ಣ" ಎಂದೆ. ಎದ್ದು ಬಂದು ಬಾಗಿಲು ತೆರೆದರು. ಮೂರು ವರ್ಷಗಳ ನಂತರ ನಾನು ಅವರನ್ನು ಸಂಧಿಸಿದುದು. ಛಳಿಗಾಲ; ಕಾವಿಬಣ್ಣದ ಶಾಲು ಹೊದೆದಿದ್ದರು. ಬಂದು ಪಕ್ಕದಲ್ಲಿ ಕುಳಿತುಕೊಳ್ಳುವಂತೆ ಹೇಳಿದರು. ಅವರ ಕಣ್ಣುಗಳು ಮಿಂಚಿದುವು.

"ಬಲಿದಾನದಿಂದ ಈ ದೇಶ ಬಿಡುಗಡೆಯಾಗುವುದು. ಅದಕ್ಕೆ ಮುಂಚೆ ರಾಮನ ತಲೆ ಹೋಗಬೇಕು; ನಂತರ ಪೂರ್ಣನದು. ಆಮೇಲೆ ನೂರಾರು ಇತರರದು. ಭಾರತ, ಈ ಭಾರತಮಾತೆ ಸ್ವತಂತ್ರಳಾಗಬೇಕು" ಎಂದರು. ಇದು ಸ್ವತಂತ್ರ ರಾಷ್ಟ್ರಗಳ ಭ್ರಮಣದ ಪರಿಣಾಮವೆಂದುಕೊಂಡೆ.

ನಾವು ಕೋಣೆಯಿಂದ ಹೊರಹೊರಟಾಗ ಕರಿ ಟೋಪಿಗಳನ್ನಿಟ್ಟು, ಪಟ್ಟೆ ಧರಿಸಿದ್ದ ಇಬ್ಬರು ಸ್ವಾಮಿಗಳನ್ನು ನೋಡಲು ನಿಂತಿದ್ದರು. ಸ್ವಾಮಿಗಳು ಅವರ ನಮಸ್ಕಾರಗಳಿಗೆ ಪ್ರತಿ ನಮಸ್ಕಾರ ಮಾಡಿ—ಗಹಗಹಿಸಿ ನಗತೊಡಗಿದರು. ಹೊಟ್ಟೆ ತುಂಬ ನಕ್ಕಮೇಲೆ ಅವರನ್ನು ಕುರಿತು "ನನ್ನ ದೇಶಬಾಂಧವರೇ ! ನೀವು ರಾಮನನ್ನು ಪತ್ತೆ ಹಚ್ಚಲು ಬಂದಿದ್ದೀರಿ. ರಾಮನು ತನ್ನ ಹೃದಯವನ್ನೇ ನಿಮಗೆ ತೆರೆದಿದ್ದಾನೆ. ನೀವು ಜಗತ್ತಿನಲ್ಲಿ ಮಾಡಬಹುದಾದ ಉತ್ತಮ ಕಾರ್ಯವೆಂದರೆ ರಾಮನನ್ನು ಕಂಡುಹಿಡಿಯುವುದು. ಅವನನ್ನು ಹುಡುಕಿರಿ ; ಕಂಡು ಹಿಡಿಯಿರಿ ; ಜಗತ್ತೇ ನಿಮ್ಮ ಪದತಲದಲ್ಲಿರುವುದು" ಎಂದರು.

ನಾನೂ ನನ್ನ ಮಿತ್ರನೂ ಆ ಸಮಯದಲ್ಲಿ ಅವರಿಬ್ಬರಿಗೆ ಹೀಗೆ ಅಸಾಧಾರಣವಾಗಿ ಭೇಟಿಯಿತ್ತದ್ದನ್ನು ಕಂಡು ಸ್ವಲ್ಪ ಚಕಿತರಾದೆವು. ಅವರು ಕೂಡಲೇ ಸ್ವಾಮಿಗಳ ಪಾದಕ್ಕೆ ಬಿದ್ದು "ಸ್ವಾಮಿಗಳೇ ! ಕ್ಷಮಿಸಿರಿ, ನಾವು ಕರ್ತವ್ಯಬದ್ಧರಾಗಿ ಬಂದೆವು. ತಮ್ಮ ಮುಖವನ್ನು ನೋಡಿ ಸೋತೆವು. ತಮ್ಮ ಪ್ರೇಮಕ್ಕೆ ನಾವು ಶರಣುಹೋದೆವು. ನಾವು ಪಾಪಿಗಳು" ಎಂದು ಬೇಡಿ

ಕೊಂಡರು. ಮುಂದೆ ಅವರು ತಾವು ಸರ್ಕಾರದ ಗುಪ್ತ ಪಡೆಯುವರೂ ಎಂದೂ, (ಕ್ರಿಮಿನಲ್ ಇನ್‌ವೆಸ್ಟಿಗೇಷನ್ ಡಿಪಾರ್‍ಟ್‌ಮೆಂಟ್) ಕರ್ತವ್ಯಬದ್ಧರಾಗಿ ಬಂದಿದ್ದರೆಂದೂ ಹೇಳಿಕೊಂಡರು.

ಮಥುರೆಯಲ್ಲಿ ಜಮುನೆಯ ದಡದ ಧವಳ ಸೈಕತದಮೇಲೆ ಕುಳಿತು, ಬಿಸಿಲು ಕಾಯಿಸಿಕೊಳ್ಳುವುದೆಂದರೆ ಅವರಿಗೆ ಬಹುಪ್ರೇಮ. ಒಂದು ದಿನ ಹೀಗೆ ಕುಳಿತಿರುವಾಗ ಕೆಲವು ದೋಣಿಗಳು ನದಿಯಲ್ಲಿ ತೇಲಿಹೋಗುತ್ತಿರುವುದನ್ನು ಕಂಡರು. ಅವುಗಳಲ್ಲಿ ಕೆಲವು ಭಾರತೀಯ ಕ್ರೈಸ್ತರು ಕುಳಿತು ವಿಹಾರಾರ್ಥವಾಗಿ ಹೋಗುತ್ತಿದ್ದರು. ಸ್ವಾಮಿ ರಾಮರು ಅವರನ್ನು ಕಾಣುತ್ತಲೇ "ಪೂರ್ಣಜೀ ! ಅವರು ರಾಮನ ಜನ. ರಾಮನು ಅವರವನು. ಅವರೊಂದಿಗೆ ಮಾತನಾಡಲು ಏರ್ಪಡಿಸುವಿರಾ? ರಾಮನು ಅವರೊಂದಿಗೆ ಸಂಭಾಷಿಸಲು ಇಚ್ಛಿಸುತ್ತಾನೆ" ಎಂದರು. ಅವರು ಕೇವಲ ಒಂದು ಕಾವಿಯ ಧೋತ್ರವನ್ನು ಮಾತ್ರ ಸುತ್ತಿಕೊಂಡಿದ್ದರು. ನಾನು ಅವರ ಬಳಿಗೆ ಹೋಗಿ ಕರೆದೆ; ಆ ಜನರು ಬಂದುನಿಂತರು; ಸ್ವಾಮಿಗಳ ನುಡಿಗಳನ್ನು ಪ್ರೇಮದಿಂದ ಕೇಳಿದರು. ಸ್ವಾಮಿಗಳು ಆನಂದದಿಂದ ಮಾತನಾಡುತ್ತಾ "ನಿಮ್ಮನ್ನು ಉದ್ಧರಿಸಿದುದಕ್ಕಾಗಿ ಕ್ರೈಸ್ತಧರ್ಮಕ್ಕೆ ರಾಮನು ಕೃತಜ್ಞನಾಗಿದ್ದಾನೆ. ಹಿಂದೂಗಳು ನಿಮಗೆ ಮಾಡಲಾರದೆಹೋದದನ್ನು, ಕ್ರೈಸ್ತರು ನಿಮಗೆ ಮಾಡಿದ್ದಾರೆ. ಸಾಮಾಜಿಕ ಅಂತಸ್ತಿನಲ್ಲಿ ನಿಮ್ಮನ್ನು ಎತ್ತಿದ್ದಾರೆ. ನಿಮ್ಮ ಸುಖಮಯವಾದ ನೋಟಗಳು ರಾಮನನ್ನು ಆನಂದಗೊಳಿಸುತ್ತವೆ. ರಾಮನು ನಿಮ್ಮವನು, ನೀವು ರಾಮನವರು" ಎಂದು ಹೇಳಿದರು.

ಮುಂದೆ ಪುಷ್ಕರದಲ್ಲಿ........ಸ್ವಾಮಿ ನಾರಾಯಣರೂ ಮತ್ತು ನಾನು ಲಾಹೋರ್‌ನಿಂದ ಕೆಲವು ಮಿತ್ರರ ಸಂಗಡ ಹೊರಟು ಅಲ್ಲಿ ಹೋಗಿ ಸೇರಿದೆವು. ಅಲ್ಲಿ ಸ್ವಾಮಿಗಳು ಪುಷ್ಕರ ಸರೋವರದ ದಡದಲ್ಲಿನ ಕಿಷನ್‌ಗಢ್ ಸ್ಟೇಟ್ ಹೌಸ್‌ನಲ್ಲಿ ವಾಸಿಸುತ್ತಿದ್ದರು. ಆ ಸರೋವರದ ತುಂಬ ಮೊಸಳೆಗಳು. ಅವರ ಕೈಲಿ ಒಂದು ಟೊಳ್ಳು ಗಳುವಿನ ತುಂಡಿದ್ದಿತು. ನನ್ನನ್ನು ಕಾಣುತ್ತಲೇ "ಪೂರಣ್‌ಜೀ ! ನೀವು ಈ ಗಳುವಿನ ತುಂಡನ್ನು ನೋಡಿಲ್ಲ; ಇದು ಆಶ್ಚರ್ಯಪಾದುದು; ಮೊಸಳೆಗಳನ್ನೋಡಿಸಲು ಇರುವ ರಾಮನ ಯಕ್ಷಿಣಿ ದಂಡ; ಜೊತೆಗೆ ರಾಮನ ಪೆನ್ಸಿಲ್, ಕಾಗದಗಳನ್ನಿಡುವ ಕರಂಡ. (ಆಗ ಇಂಥ

ಅನೇಕ ವಸ್ತುಗಳನ್ನು, ಅದರಲ್ಲಿ ಸುರಕ್ಷಿತವಾಗಿಟ್ಟಿದ್ದುದನ್ನು ತೋರಿಸಿದರು.) ಇದೇ ರಾಮುನ ಸರ್ವಸ್ವ. ರಾಮುನು ತನ್ನ ಭೌತಿಕ ಅಗತ್ಯಗಳನ್ನೆಲ್ಲಾ ಇಷ್ಟಕ್ಕೆ ಇಳಿಸಿಬಿಟ್ಟಿದ್ದಾನೆ' ಎಂದು ಗಹಗಹಿಸಿ ನಕ್ಕರು. "ಎಂದು ಸಕಲ ಪ್ರಯಾಣ ಸೌಕರ್ಯ ವಸ್ತುಗಳೂ ಇಷ್ಟಾಗಿ, ಅವನ ಬೇಕುಗಳೆಲ್ಲಾ ಈ ಕೊಳವೆಯಲ್ಲಿಡ ಲಾಗುವುವೋ, ಅಂದು ಅವನೇ ರಾಜ'' ಎಂದರು. ಸ್ವಾಮಿಗಳು ಬಿಸಿಲು ಮಚ್ಚೆಯಮೇಲೆ ಬಿಸಿಲಲ್ಲಿ ಕುಳಿತು "ರಾಮುನಿಗೆ ಕೋಣೆಗಳು ಬೇಸರ; ಅವು ಗೋರಿಗಳಂತಿವೆ" ಎನ್ನುವರು.

ಸಂಜೆಯಾಗುತ್ತಲೇ ನಮ್ಮೆಲ್ಲರನ್ನೂ ಪುಷ್ಕರದ ಬೆಟ್ಟಕ್ಕೆ ಕರೆದೊಯ್ಯು ವರು; ಅಲ್ಲಿ ಸುಮ್ಮನೆ ಅಲೆದೂ, ಅಲೆದೂ ಅಲೆಯುವುದು. ಹಾದಿಯಲ್ಲಿ ನಮ್ಮನ್ನು ತೆಪ್ಪಗಿರಿಸುತ್ತಿರಲಿಲ್ಲ. ಎಲ್ಲರೂ ಓಂಕಾರವನ್ನು ಜಪಿಸುತ್ತಿರಬೇಕು. ಇದರಲ್ಲಿ ಯಾರೂ ಸೋಮಾರಿತನಮಾಡುವಂತಿರಲಿಲ್ಲ. ಒಮ್ಮೆ ಬೆಟ್ಟದ ನೆತ್ತಿಯಲ್ಲಿನ ಒಂದು ಕಲ್ಲುಹಲಿಗೆಯಮೇಲೆ ಕುಳಿತರು. "ಈ ಜನರಿಗೆ ದೇವ ನೇಕೆ ಕಾಣಿಸುವುದಿಲ್ಲ? ಅವರನ್ನು ಕರೆ; ನನ್ನಲ್ಲಿಗೆ ಬರಲಿ. ದೇವರನ್ನು ಕಾಣುವರು" ಎಂದರು. ಅಂತೆಯೇ ಕಣ್ಣುಗಳು ಮುಚ್ಚಿಕೊಂಡುವು. ಕಂಬ ನಿಯು ಕೆನ್ನೆಯಮೇಲೆ ಕೋಡಿ ಹರಿಯುತ್ತಿತ್ತು. ಮುಖವು ಮಿಂಚುತ್ತಿತ್ತು. ಬ್ರಹ್ಮಾಂಡವನ್ನೇ ಆಲಂಗಿಸುವರಂತೆ ಎರಡು ತೋಳುಗಳನ್ನೂ ಮೇಲಕ್ಕೆತ್ತಿ "ದೇವಾ! ದೇವರು! ಇಲ್ಲಿಹನು ದೇವ! ದೇವರನ್ನು ನೋಡಬಯಸುವರು ಬನ್ನಿ!" ಎಂದು ಆವೇಶದಿಂದ ನುಡಿದರು. ಕ್ಷಣ ಕಾಲಾನಂತರ ನೀರವವಾಗಿ ಮೇಲ್ತುಟಿಯಿಂದ ಕೆಳತುಟಿಗಳನ್ನು ಒತ್ತಿಕೊಂಡು ತಾಯನ್ನು ಕಂಡ ಮಗುವಿ ನಂತೆ ಅರಳಿದ ಮುಖದಿಂದ ಮೈಮರೆತರು.

ಒಂದು ದಿನ ಪುಷ್ಕರ ಸರೋವರದಲ್ಲಿ ಮೀಯಲು ನನ್ನನ್ನು ಕರೆದು ಕೊಂಡು ಹೋದರು; "ರಾಮುನು ಮುಂದೆ ಹೋಗುವನು; ನೀನು ಅವನ ಹಿಂದೆ ನಿಂತು ಸ್ನಾನಮಾಡು; ಆದರೆ ನಾವು ಈ ಮೊಸಳೆಗಳೊಂದಿಗೆ ಮೀಯ ಬೇಕು" ಎಂದರು. ನಾವು ನೀರಿಗಿಳಿಯುತ್ತಲೇ ಅವರು ಮುಂದೆ ಮುಂದೆ ಎದೆಯಮಟ್ಟ ನೀರು ಬರುವವರೆಗೂ ನಡೆದರು. ನಾನು ಅವರಿಗಾಗಿ ಅರ್ಘ, ಮತ್ತೆ ನನಗಾಗಿ ಬಹಳ ಹೆದರಿದೆ; ಏಕೆಂದರೆ ನನಗೆ ಈಜುಬಾರದು. ನಾವಿ ಬ್ಬರೂ ಸೇರಿ ಮೊಸಳೆಗಳಿಗೆ ಒಳ್ಳೆಯ ಆಹಾರವೆಂದುಕೊಂಡು ಮೆಲ್ಲಗೆ ಹಿಂಬಾ

ಲಿಸಿದೆ. ಆದರೆ ಸ್ವಾಮಿಗಳಿಗೆ ಆ ಜಲಚರಗಳ ನಡತೆಗಳಲ್ಲಿ ಪೂರ್ಣಪರಿಚಯ ವಿದ್ದಿತು. ಅವರು ತಮ್ಮ ಗಳುವಿನ ತುಂಡನ್ನು ತಮ್ಮ ಮುಂದೆ ತೇಲಿಬಿಟ್ಟು ನೀರಿನಲ್ಲಿ ಮುಳುಗಿ ಸ್ನಾನಮಾಡಿದರು. ಅದು ನಿಜವಾಗಿಯೂ ಮಂತ್ರ ದಂಡವೋ ಎನ್ನುವಂತೆ ಮೊಸಳೆಗಳು ಆದರಿಂದಾಚೆಯೇ ಇದ್ದುವು. ಬೆರಳು ಗಳಲ್ಲಿ ಮೂಗನ್ನು ಅದುಮಿ ಸ್ವಾಮಿಗಳು ಮುಳುಗು ಹಾಕಿ "ಪೂರರ್ಣ್‌ಜೀ ! ನೋಡಿ ಮೊಸಳೆಗಳಿಗೆ ಇನ್ನು ನಾವಿಲ್ಲಿರುವ ಇಷ್ಟವಿಲ್ಲ ನಡೆಯಿರಿ" ಎಂದು ಹೇಳಿದರು. ಅಲ್ಲಿಂದ ಹಿಂತಿರುಗಿದೆವು. ಸ್ವಾಮಿಗಳು ತಮ್ಮ ಗಳುವಿನ ತುಂಡನ್ನು ಚಪ್ಪರಿಸಿ ''ಇವನು ಬಹು ಒಳ್ಳೆಯವ. ರಾಮನನ್ನು ಬಹು ಶ್ರದ್ಧೆ ಯಿಂದ ಸೇವಿಸುತ್ತಾನೆ'' ಎಂದರು.

ರಾತ್ರಿಯವೇಳೆ ಮಣ್ಣುಹಣತೆಯ ಬೆಳಕಿನಲ್ಲಿ ನಾಜಿರ್‌ನ ಕವನಗಳನ್ನು ಓದಿ ಆನಂದದಿಂದ ನಗುವರು. ಬರವಣಿಗೆಯಲ್ಲಿ ಅವನ ಸ್ವಾತಂತ್ರ್ಯವನ್ನು ಕಂಡರೆ ಅವರಿಗೆ ಬಹುಮೆಚ್ಚಿಕೆ. 'ಇವನು ರಾಮನ ಸ್ವತಂತ್ರ ಬಾಲಕ. ಇವನ ವಕ್ರಗಳು ರಾಮನಿಗೆ ಪರವಾಇಲ್ಲ; ಆವಿರಲಿ. ಆದರೆ ದೇವರ ಧ್ವನಿ ಯಿಂದ ಪ್ರತಿಧ್ವನಿತವಾಗುವ ವಸ್ತು ಅವನದು'' ಎನ್ನುವರು.

ಪಂಜಾಬಿನ ಜನಪದ ಸಾಹಿತ್ಯದಲ್ಲೆಲ್ಲಾ ಗೋಪಾಲಸಿಂಹನ ಕಾಫಿಗ ಳೆಂದರೆ ಅವರಿಗೆ ಬಹುಪ್ರೇಮ. ಕಣ್ಮುಚ್ಚಿ ಕವಿಯ ಅಂದಿನ ವೇದನೆಯನ್ನು ಕಣ್ಮುಂದೆ ತರುವಂತೆ ತಾವೇ ಅದನ್ನು ಹಾಡುವರು. "ರಾಮನು ಗೋಪಾಲ ಸಿಂಹನನ್ನು ತನ್ನ ಸೈಲ್‌ಕೋಟೆಯ ದಿನಗಳಿಂದಲೂ ಬಲ್ಲ. ಈ ಪುಣ್ಯ ಪುರುಷನು, ಅಷ್ಟು ದೂರ ನಡದೇ ಬೃಂದಾವನಕ್ಕೆ ಹೋದನು. ತನ್ನ ಜೀವ ಮಾನದಲ್ಲೆಲ್ಲಾ ಆತ್ಮಾನಂದದಲ್ಲೇ ಮೈಮರೆತು ನರ್ತಿಸಿ ನಲಿಯುತ್ತಿದ್ದ'' ಎನ್ನುವರು.

ಇತರರ ಬಗ್ಗೆ ಯಾರು ಯಾವ ಮಾತಾಡಲೂ ಆವರದನ್ನು ನಿಷೇಧಿಸು ತ್ತಿದ್ದರು. "ಇತರರ ಬಗ್ಗೆ ಸಣ್ಣ, ಹೀನ ವಿಮರ್ಶೆಗಳನ್ನು ಮಾಡುತ್ತಾ ಮಾತ ನಾಡುತ್ತಿರುವುದು ಒಳ್ಳೆಯದಲ್ಲ. ನಾವು ಪ್ರತಿಯೊಂದು ವಸ್ತುವಿನ ಪ್ರತಿ ಯೊಬ್ಬ ಮಾನವನ ಸದ್ಗುಣಗಳನ್ನೇ ಕಾಣಬೇಕು; ಅಲ್ಲದೆ ಅವನ್ನು, ಅವ ರನ್ನು ನಮ್ಮಂತೆಯೇ ಸಮರ್ಥಿಸಬೇಕು" ಎನ್ನುವರು.

ಹಲವು ವೇಳೆ ಸಂಭಾಷಣೆಯು ಹಿಂದೂಸ್ಥಾನದ ವಿಚಾರ, ಅದರ ನಾಯಕರ ವಿಚಾರಕ್ಕೆ ತಿರುಗಿ ಯಾರಾದರೂ ಮರೆತು ವ್ಯಕ್ತಿವಿಮರ್ಶೆಗೆ ಜಾರುತ್ತಲೇ ಸ್ವಾಮಿಗಳು "ಮಂದಿರದ ಘಂಟೆ ಬಾರಿಸಿತು. ಹುಷ್ ! ವ್ಯಕ್ತಿ ವಿಮರ್ಶೆ ಬಾರದು" ಎಂದು ನಾವೆಲ್ಲರೂ ಓಂಕಾರ ಜಪಿಸುವಂತೆ ಮಾಡುವರು. "ನೀವು ಸೋಮಾರಿತನ ಮಾಡುತ್ತೀರಿ. ಓಂಕಾರದ ಜಪವು ಧಾರಾಕಾರವಾಗಿ ನಡೆಯುತ್ತಿರಬೇಕು" ಎಂದು ಬಾರಿಬಾರಿಗೂ ಹೇಳುವರು. ಈ ಸಂದರ್ಭದಲ್ಲಿ ಒಂದು ಸ್ವಾರಸ್ಯ ಸಂಗತಿ ನಡೆಯಿತು. ಲಾಹೋರ್ ಟೆಕ್ನಿಕಲ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದ ನಾಯಿಡು ಎಂಬ ಮದ್ರಾಸೀ ತರುಣನು ನನ್ನೊಂದಿಗೆ ಅಲ್ಲಿಗೆ ಬಂದಿದ್ದ. (ಮುಂದೆ ಆತನು ವಿದ್ಯಾರ್ಜನೆಗಾಗಿ ಅಮೆರಿಕಾಕ್ಕೆ ಹೋದನೆಂದು ಕಾಣುತ್ತೆ.) ಸ್ವಾಮಿಗಳು ಊಟಮಾಡುತ್ತಾ, "ನಾಯಿಡು! ತೊವ್ವೆಯನ್ನು ತಾ !'' ಎಂದರೆ, ಆತನು ಉತ್ತರವಾಗಿ ಕೇವಲ "ಓಂ" ಎಂದು ಹೋಗಿಬಿಡುವನು. ಹಿಂದಿರುಗಿ ಬಂದು "ಸ್ವಾಮಿಜೀ! ತೊವ್ವೆ ತಂದಿದ್ದೇನೆ" ಎನ್ನುತ್ತಿರಲಿಲ್ಲ. ಕೇವಲ "ಓಂ" ಎನ್ನುವನು. ಹೀಗೆ ಪ್ರತಿಸಂದರ್ಭದಲ್ಲಿಯೂ ಇದ್ದಕಿದ್ದಂತೆಯೇ ಆತನ 'ಓಂ'ನ್ನು ಕೇಳಿ ಘಂಟೆಗಟ್ಟಲೆ ನಗುತ್ತಿದ್ದೆವು.

ಒಮ್ಮೆ ಪುಷ್ಕರದ ಯಜ್ಞಭೂಮಿಗೆ ನನ್ನನ್ನು ಕರದೊಯ್ದು, ಪುಷ್ಕರ ಸರೋವರವು ಏಕೆ ಪವಿತ್ರವಾಯಿತೆಂಬುದನ್ನು ತಿಳಿಯಹೇಳಿದರು. "ಬ್ರಹ್ಮನು ಬಹು ವೈಭವ ವಿಜೃಂಭಣೆಗಳಿಂದ ಬ್ರಹ್ಮಯಜ್ಞವನ್ನು ಮಾಡಿದನು. ಸಮಸ್ತ ದೇವತೆಗಳೂ ಮಾನವರೂ ಬಂದು ನೆರೆದರು. ಆದರೆ ಶಂಖವು ಧ್ವನಿಯಾಗಲಿಲ್ಲ. ಶಂಖಧ್ವನಿ ಕೇಳಿಬಂದ ಹೊರತೂ ಯಜ್ಞವು ಯಶಸ್ವಿಯಾಗುವುದಕ್ಕೆ ದೇವರ ಆಶೀರ್ವಾದ ದೊರಕಿದಂತಾಗಲಿಲ್ಲವೆಂದು ಇತ್ತು. ಇಲ್ಲಿ ಹೀಗೆ ಯಜ್ಞಸಿದ್ಧತೆಗಳು ನಡೆದಿರಲು ಅತ್ತ ಒಬ್ಬ ಏಕಾಂಗಿಯಾದ ಹುಲ್ಲುಕೊಯ್ಯುವವನ ಹೃದಯದಲ್ಲಿ ಬ್ರಹ್ಮಯಜ್ಞವಾಗುತ್ತಿದ್ದಿತು. ಆವನು ಈಶ್ವರನಲ್ಲಿ ತಲ್ಲೀನನಾಗಿ ಹುಲ್ಲು ಕೊಯ್ಯುತ್ತಿರುವಾಗ ಆಕಸ್ಮಾತ್ತಾಗಿ ಕುಡುಗೋಲು ಅವನ ಕಾಲನ್ನು ಹರಿದು ಗಾಯಗೊಳಿಸಿತು. ಆ ಗಾಯದಿಂದ ಕೆಂಪಾದ ಮಾನವ ರುಧಿರವು ಸುರಿಯಲಿಲ್ಲ ; ಶುಭ್ರವಾದ ಹುಲ್ಲಿನ ರಕ್ತವು ಸುರಿಯಿತು. ಈ ಗಾಯದೊಂದಿಗೆ ಅವನು ದೇವೋನ್ಮತನಾಗಿ ಎದ್ದು ನರ್ತಿಸತೊಡಗಿದನು. ಅವ

ನೊಂದಿಗೆ ಮರಗಿಡಗಳೂ, ವನ ಪರ್ವತಗಳೂ ನರ್ತಿಸತೊಡಗಿದವು. ಮುಂದೆ ಆ ಯಜ್ಞ ದೀಕ್ಷಿತನೇ ಬಂದು ಹುಲ್ಲು ಕೊಯ್ಯುವವದ ಪಾವನ ಪಾದಗಳಿಗೆರಗಿ ಕೃಪೆಯಿಟ್ಟು ಯಜ್ಞ ಮಂಟಪಕ್ಕೆ ದಯಮಾಡಿ ತಮ್ಮನ್ನು ಪುನೀತರನ್ನಾಗಿ ಮಾಡಬೇಕೆಂದು ಕೇಳಿಕೊಂಡನು. ಈ ಪುಣ್ಯಾತ್ಮನು ಅಲ್ಲಿ ಬಂದು ಸೇರುತ್ತಲೇ ಶಂಖವು ಧ್ವನಿಗೈದಿತು. ದೇವತೆಗಳು ಅಚ್ಚರಿಗೊಂಡರು—ಇದು ವೇದಾಂತ" ಎಂದು ನುಡಿದು ಸುಮ್ಮನಾದರು. ಯಾವುದಾದರೂ ಆತ್ಮ ಸಾಕ್ಷಾತ್ಕಾರದ ಸುಂದರ ಕತೆಯನ್ನು ಹೇಳಿ ಮುಗಿಸುತ್ತಲೇ "ಇದು ವೇದಾಂತ" ಎನ್ನುವರು.

ಮಥುರಾದಲ್ಲಿರುವಾಗ ಅವರ ಮೆಚ್ಚಿನವರನ್ನು ಗುಂಪು ಗುಂಪಾಗಿ ನದಿಯ ಮರಳು ದಂಡೆಗೆ ಕರೆದುಕೊಂಡು ಹೋಗಿ, ನರೆಗೂದಲಿನ ದೊಡ್ಡವರನ್ನೂ ಬಿಡದೆ, ಕೋಟು ಬಟ್ಟೆಗಳನ್ನು ತೆಗೆಸಿ, ವ್ಯಾಯಾಮ ಮಾಡಿಸುತ್ತಿದ್ದರು. ಯಾರನ್ನೂ ಬಿಡುತ್ತಿರಲಿಲ್ಲ. ಎಲ್ಲರೂ ವ್ಯಾಯಾಮ ಮಾಡಲೇಬೇಕು. ಸೂರ್ಯನು ಅಸ್ತಮಿಸುತ್ತಿರುವಾಗಲೇ ಎಲ್ಲವನ್ನೂ ನಿಲ್ಲಿಸಿ, ಉನ್ಮತ್ತರಾಗಿ ನೈಮರೆತು ನರ್ತಿಸುತ್ತಿದ್ದರು. ಪ್ರೇಕ್ಷಕರು ಆಶ್ಚರ್ಯದಿಂದ ಮೂಕರಾಗಿ ಬೊಂಬೆಗಳಂತೆ ನಿಂತು ಈ ದಿವ್ಯ ದೃಶ್ಯವನ್ನು ಎವೆಯಿಕ್ಕದೆ ನೋಡುತ್ತಿದ್ದರು.

ಈ ಕಾಲದಲ್ಲಿನ ಅವರ ಭಾಷಣಗಳಲ್ಲಿ ವಿಶ್ವಪ್ರೇಮ, ಯಜ್ಞ, ರಾಷ್ಟ್ರೀಯ ಧರ್ಮ, ಬ್ರಹ್ಮಚರ್ಯ, ದೇಶಾಭಿಮಾನ ಮೊದಲಾದುವುಗಳ ವಿಚಾರವೇ ಪ್ರಧಾನವಾಗಿದ್ದಿತು.

ಪ್ರವಾಸದಲ್ಲಿ

ಮುಂದೆ ಸ್ವಾಮಿಗಳು ಬಂಗಾಳ, ಬಿಹಾರ, ಸಂಯುಕ್ತ ಪ್ರಾಂತಗಳ ಪ್ರವಾಸಕ್ಕೆ ಹೊರಟವರು, ಕೆಲವು ತಿಂಗಳುಗಳ ನಂತರ ಹಿಂದಿರುಗಿ ಡಾರ್ಜೀಲಿಂಗ್‌ಗೆ ಉತ್ತರದಲ್ಲಿ ಹಿಮವತ್ಪರ್ವತ ಪ್ರಾಂತದಲ್ಲಿ ಇದ್ದುಬಿಟ್ಟರು. ಇಲ್ಲಿಂದ ಅವರು ಬರೆದ ಈ ಎರಡು ಪತ್ರಗಳಿಂದ ಅವರ ಆಂತರಿಕ ಸ್ಥಿತಿಯ ಪರಿಚಯವಾಗುವುದು.

೧೦-೮-೧೯೦೫ : ಶಾಂತಿ! ಆಶೀರ್ವಾದ ! ಪ್ರೇಮ! ಆನಂದ! ಆನಂದ!

ರಾಮನು ಈಗ ಮಸ್ಸೂರಿಯಿಂದ ಸಾವಿರ ಮೈಲಿ ದೂರದ ಬೆಟ್ಟದಲ್ಲಿರುವನೆಂಬುದು ನಿಮಗೆ ಗೊತ್ತಿರಬಹುದು. ಇಲ್ಲಿ ಬಂಗಾಳದ ಅರಣ್ಯ ಶಾಖೆಗೆ ಸೇರಿದ ಒಂದು ಹಳೆಯ ಮನೆಯಲ್ಲಿ ಒಬ್ಬನೇ ವಾಸವಾಗಿದ್ದಾನೆ. ರೇಲ್ವೆ, ಪೋಸ್ಟ್, ಜನಸಂಚಾರಗಳಿಂದ ಬಹುದೂರ. ಜಗತ್ತಿನಲ್ಲೇ ಅಪೂರ್ವವಾದ ಸೌಂದರ್ಯ ಸಂಪತ್ತಿನಿಂದ ಪರಿವೃತವಾದ ಪ್ರಕೃತಿಯ ನಡುವೆ; ಸುಂದರ ಝರಿಗಳ ಅಲ್ಲಲ್ಲಿ ಸುಳಿದಾಡುವ ಬುಗ್ಗೆಗಳಿಂದ ಪರಿವೇಷ್ಟಿತ ರಮ್ಯ ಪ್ರದೇಶ. ನಿರ್ಮಲ ಶೀತಲ ಸಮೀಪರನ ಆಲಿಂಗನದಿಂದ ಶುಭ್ರವಾದ ಅತ್ಯುನ್ನತ ಗಿರಿಶೃಂಗ---ಗೌರೀಶಂಕರವು ಇಲ್ಲಿಗೆ ಮನೋಹರವಾಗಿ ಕಾಣುತ್ತದೆ. ಇಲ್ಲೂ ಸಹ ಅರಣ್ಯವಾಸಿಗಳು ಆಗಾಗ ಹಸನಾದ ಹಾಲನ್ನು ತಂದು ರಾಮನಿಗೆ ಕೊಡುತ್ತಾರೆ. ಅರಣ್ಯದಲ್ಲಿನ ಅಲೆದಾಟದಲ್ಲೇ ರಾಮನ ದಿನ ರಾತ್ರಿಗಳು ತುಂಬಿ ಉರುಳುತ್ತವೆ.

ಅರಣ್ಯದಲ್ಲಿ ಮಾನವನು ದೇವನನ್ನೇ ಸಂದರ್ಶಿಸುವಲ್ಲಿ ಹೆಸರು ಕೀರ್ತಿ ಆಶೆ, ಸಂಪತ್ತು, ಸಂಪಾದನೆಗಳೆಲ್ಲ ಏನಿವು ? ಇವುಗಳಿಗಾಗಿ ಅಲೆದಾಟದ ಜ್ವರದಲ್ಲಿ ಸಿಕ್ಕಿ ನರಳಬೇಕೇ ? ಈಶ್ವರನಲ್ಲಿರೋಣ ಸಾಕು. ಮುಂಜಾನೆಯ ತಂಗಾಳಿಯು ಬೀಸುತ್ತದೆ; ಬೀಸುವುದಕ್ಕೆ ಮುಂಚೆ 'ಎಂಥ ಹೂಗಳನ್ನರಳಿಸಲಿ ?' ಎಂದು ಚಿಂತಿಸುವುದಿಲ್ಲ. ತಾನು ಸುಮ್ಮನೆ ಸಮಸ್ತ ಚರಾಚರದ ಮೇಲೆ ಬೀಸಿಕೊಂಡು ಹೋಗುತ್ತದೆ. ಪ್ರೇಮ ಸೌರಭದಿಂದ ತುಂಬಿ ಅರಳಲು ಆತುರರಾಗಿರುವ ಮುಗುಳುಗಳು ಅರಳಿ ಕಣ್ತೆರೆಯುತ್ತವೆ.

* * *

ಓಂ ! ಸಂಪೂರ್ಣಾನಂದವೇ ! ಹೆಜ್ಜೆ ಹೆಜ್ಜೆಗೂ ಧ್ಯೇಯ ಸಿದ್ಧಿ ; ಪ್ರತಿ ರಾತ್ರಿಯೂ ದೈಹಿಕ ಮರಣ ! ಪ್ರತಿದಿನವೂ ಹೊಸ ಜೀವನ !

೩೦-೮-೧೯೦೫ : ಆನಂದ ! ಶಾಂತಿ ಪ್ರೇಮ !

ಮೂರು ತಿಂಗಳಿಂದ ರಾಮನು ಜಗತ್ತಿನಲ್ಲೆಲ್ಲಾ ಅತ್ಯಂತ ಎತ್ತರವಾದ ಗೌರೀಶಂಕರದ ಎದುರುಗಡೆ ೮,೦೦೦ ಅಡಿ ಎತ್ತರವಿರುವ ಬೆಟ್ಟದ ಮೇಲಿದ್ದ. ನಾಳಿದ್ದು ತಪ್ಪಲಿಗೆ ಹೋಗುವನು. ಇಲ್ಲಿ ಐದು ಪುಸ್ತಕಗಳನ್ನು ಬರೆಯಲಾಯಿತು, ಇಪ್ಪತ್ತು ಗ್ರಂಥಗಳನ್ನು ಓದಲಾಯಿತು.

ರಾಮನ ಮನವು ಆನಂದ ಶಾಂತಿಗಳಿಂದ ತುಂಬಿತುಳುಕುತ್ತಿದೆ ; ಒಳಗಣ್ಣಿನಿಂದ ಜಗತ್ತು ಪೂರ್ಣ ಅಳಿಸಿಹೋಗಿದೆ !

ದೇವ ದೇವನೆ ಎಲ್ಲೆಲ್ಲು !
ಹೊರಗೂ ಒಳಗೂ ಹತ್ತಿರ ದೂರ
ಅವನೇ ಅವನೇ ! ಆನಂದ !!
ಮೈಯುಬ್ಬಿಸುವ ಸೌಖ್ಯದ ಶಾಂತಿ !
ಸ್ವರ್ಗ ಪ್ರೇಮದ ಹಬ್ಬದ ಕಾಂತಿ !

ವ್ಯಾಸಾಶ್ರಮದಲ್ಲಿ

೧೯೦೫ರ ನವೆಂಬರದ ವೇಳೆಗೆ ಸ್ವಾಮಿಗಳು ಹರಿದ್ವಾರಕ್ಕೆ ಆಗಮಿಸಿದರು. ಇಲ್ಲಿ ಕೆಲವು ದಿನಗಳಿರುವಲ್ಲಿ ಅವರ ಶರೀರವು ಕಠಿಣರೋಗಗ್ರಸ್ತವಾಯಿತು. ಆ ವರುಷದ ಜನವರಿಯಲ್ಲೇ ಸ್ವಾಮಿಗಳ ದರ್ಶನವನ್ನು ಮಾಡಿಕೊಂಡು, ಮುಂದೆ ಪ್ರಚಾರ ಕಾರ್ಯಕ್ಕಾಗಿ ಸಿಂಧ–ಹೈದರಾಬಾದ್‌ಗೆ ಹೋಗಿದ್ದ ಸ್ವಾಮಿ ನಾರಾಯಣರಿಗೆ ಈ ಸುದ್ದಿಯು ತಂತಿಮೂಲಕ ತಿಳಿಸಲ್ಪಟ್ಟಿತು. ಮೂರು ನಾಲ್ಕು ದಿನಗಳಲ್ಲಿಯೇ ಅವರೂ ಬಂದರು. ತಮ್ಮ ಎಂ.ಎ. ಪರೀಕ್ಷೆಯಾದ ನಂತರ ನಾರಾಯಣ ಸ್ವಾಮಿಗಳು 'ನೂತನ ಚಿಕಿತ್ಸಾ ಪದ್ಧತಿ'ಯನ್ನು ಸಾಕಷ್ಟು ವ್ಯಾಸಂಗಮಾಡಿದ್ದರಾದ ಕಾರಣ, ತಾವೇ ತಮ್ಮ ಗುರುವಿನ ಔಷಧೋಪಚಾರಗಳಿಗೆ ನಿಂತರು. ಕೆಲವು ದಿನಗಳ ಶುಶ್ರೂಷೆಯಿಂದ ಸ್ವಾಮಿಗಳ ದೇಹವು ಆರೋಗ್ಯಹೊಂದಿತು. ಈ ಮಧ್ಯೆ ನಾರಾಯಣಸ್ವಾಮಿಗಳು ಲಖ್‌ನವೂಗೆ ಹೋಗಿ ಹಲವು ಭಾಷಣಗಳನ್ನು ಮುಗಿಸಿಕೊಂಡು ಹಿಂದಿರುಗಿದರು.

ಆರೋಗ್ಯವಂತರಾದ ಸ್ವಾಮಿಗಳು ಮತ್ತೆ ಏಕಾಂತಸೇವನೆಯ ಬಯಕೆಯಿಂದ ನಾರಾಯಣಸ್ವಾಮಿಗಳೊಂದಿಗೆ ಹೊರಟು ವನಪ್ರಾಂತಗಳಿಗೆ ತೆರಳಿಬಿಟ್ಟರು. ಋಷೀಕೇಶದಿಂದ ಸುಮಾರು ೩೦ ಮೈಲಿ ದೂರದಲ್ಲಿ ವ್ಯಾಸಗುಡ್ಡವಿದೆ; ಬಳಿಯಲ್ಲೇ ವ್ಯಾಸಗಂಗೆಯು ಬಂದು ದೊಡ್ಡ ಗಂಗೆಯೊಂದಿಗೆ ಸಂಗಮವಾಗುತ್ತದೆ. ಇದರ ಎದುರುಗಡೆಯೇ ಟಿಹರಿರಾಜ್ಯದ ಸರಹದ್ದಿನಲ್ಲಿ ಒಂದು

ಭಯಾನಕ ವನವಿದೆ. ಇದನ್ನು "ಬೀ" ವನವೆಂದೂ ಕರೆಯುತ್ತಾರೆ. ಇದೇ ವನದಲ್ಲೇ ಮಹರ್ಷಿ ಕೃಷ್ಣದ್ವೈಪಾಯನ ವೇದವ್ಯಾಸ ಸ್ವಾಮಿಗಳು ತಪಸ್ಸು ಮಾಡಿದರಂತೆ; ಅಲ್ಲಿರುವ ಒಂದು ಮುರುಕಲು ಸ್ಥಳವನ್ನು ವ್ಯಾಸಾಶ್ರಮವೆಂದೇ ಕರೆಯುತ್ತಾರೆ. ಇಲ್ಲಿನ ಅತ್ಯುನ್ನತವಾದ ದಟ್ಟವಾದ ವೃಕ್ಷಗಳ ಕೆಳಗಡೆಯೇ ಅವರು ತಪಸ್ಸಿಗೆ ಕುಳಿತಿರುತ್ತಿದ್ದರಂತೆ. ಗಂಗೆಯನ್ನು ಹಗ್ಗದ ಸೇತುವೆಯಿಂದ ದಾಟಿ ಇಲ್ಲಿಗೆ ಬರುವುದೂ ಅತಿ ಕಷ್ಟ. ಭಯದ ಕಾರಣದಿಂದ ಹಗಲು ಹೊತ್ತೂ ಸಹ ಮನುಷ್ಯರು ಅತ್ತಕಡೆ ಸುಳಿಯುತ್ತಿರಲಿಲ್ಲ. ಇದರಿಂದಲೇ ತಮ್ಮ ಏಕಾಂತಸೇವನೆಗೆ ಸ್ವಾಮಿಗಳು ಈ ವನವನ್ನು ಆರಿಸಿದರು. ಅರ್ಧ ಮೈಲಿಗಳ ದೂರದಲ್ಲಿ ಎರಡು ಹುಲ್ಲಿನ ಝೋಪಡಿಗಳನ್ನು ಕಟ್ಟಿದ್ದಾಯಿತು. ಅಲ್ಲದೆ ಊಟಕ್ಕೆ ದಿನಕ್ಕೊಮ್ಮೆ ಒಂದೆಡೆಯಲ್ಲಿ ಒಮ್ಮೆ ಸೇರಬೇಕೆಂದೂ ಗೊತ್ತಾಯಿತು. ರಾಮರು ಒಂದು ಕುಟಿಯಲ್ಲಿ, ನಾರಾಯಣರು ಒಂದು ಕುಟಿಯಲ್ಲಿ ಹೋಗಿ ಆತ್ಮಚಿಂತನೆಯಲ್ಲಿ ಮಗ್ನರಾದರು, ಸ್ವಾಮಿಗಳು ಇಂಗ್ಲೀಷ್‌ನಲ್ಲಿ Dynamics of Mind (ಚಿತ್ತದ ಶಕ್ತಿಕಲಾ) ಎಂಬ ಗ್ರಂಥವನ್ನು ಬರೆಯಲು ಕಂಕಣಬದ್ಧರಾಗಿದ್ದರು. ಆದರೆ ಪ್ರಾಚೀನ ವಿಚಾರಗಳ ಮಹಾತ್ಮನೊಬ್ಬನು ವೇದ, ವೇದಾಂಗಗಳ ಪ್ರಮಾಣವನ್ನು ಉದ್ಧೃತಮಾಡದೆ ಬರೆದ ಇಂಗ್ಲೀಷ್ ಪುಸ್ತಕವು ಭಾರತ ವರ್ಷದ ನವಯುವಕರಿಗೆ ಲಾಭದಾಯಕ ವಲ್ಲವೆಂದು ಪುಷ್ಟೀಕರಿಸಿ ಹೇಳಿದ್ದನು. ಆದಕಾರಣ ಈಗ ರಾಮರು ಮತ್ತೆ ಕ್ರಮಬದ್ಧವಾದ ವೇದಾಧ್ಯಯನಕ್ಕೆ ಕೂತುಬಿಟ್ಟರು. ಕೆಲವು ತಿಂಗಳಲ್ಲೇ ಪ್ರಚಲಿತ ಭಾಷ್ಯ ನಿರುಕ್ತಗಳನ್ನು ಅಪೂರ್ವ ಧ್ಯಾನದಿಂದ ಎರಡು ಬಾರಿ, ಅಲ್ಲದೆ ಮತ್ತೆ ಮೊದಲಿನಿಂದ ಕಡೆಯವರೆಗೂ ಸಾಮವೇದವನ್ನೂ ಅಧ್ಯಯನ ಮಾಡಿದರು. ಈ ವರ್ಷಾಂತ್ಯದಲ್ಲಿ ಉದ್ದವಾದ ಗಡ್ಡ ಬೆಳೆದಿದ್ದಿತು. ದರ್ಶನಕ್ಕೆ ಬಂದವರೊಂದಿಗೆ "ರಾಮನಿಗೆ ವ್ಯಾಸರ ಗಡ್ಡ ಬಂದಿದೆ" ಎನ್ನುತ್ತಿದ್ದರು.

ಮುಂದೆ ಕೇವಲ ವೇದಮಂತ್ರಗಳ ರಚನೆ, ಅವುಗಳ ಶಬ್ದ ಮಾಧುರ್ಯ, ಅರ್ಥ ಸೌಂದರ್ಯಗಳ ಆನಂದದಲ್ಲೇ ಮೈಮರೆಯುತ್ತಿದ್ದರು. ಆ ಮಂತ್ರಗಳ ತಪ್ಪು ಟೀಕೆಗಳನ್ನು ಕಂಡಾಗಂತೂ ನಕ್ಕುಬಿಡುತ್ತಿದ್ದರು.

ಒಮ್ಮೆ ಪೂರ್ಣಸಿಂಹರೊಂದಿಗೆ ಸಂಭಾಷಿಸುತ್ತಾ "ಆ ದಿನ ರಾಮನು ಸ್ನಾನಮಾಡಿ ಕಲ್ಲುಬಂಡೆಯಮೇಲೆ ಕುಳಿತಿದ್ದ. ಆಕಾಶದಲ್ಲಿ ಮೋಡಗಳು

ಸೇರಿ ಗುಡುಗಿದುವು. ಹನಿ ಹಾಕತೊಡಗಿತು. ಆಗ ತಾನು ತನ್ನ ಪ್ರಿಯ ಪತಿ ಈಶ್ವರನ ಬರವಿಗಾಗಿ ಕಾದು ತಪಿಸುತ್ತಿರುವ ತರುಣಿಯೆಂದು ತಿಳಿದ ರಾಮ. ಅವನ ದೇಹದ ಕಣಕಣದಲ್ಲೂ ಆ ದಿವ್ಯಪ್ರೇಮದ ನಡುಕದ ದುಡಿತವೆದ್ದಿತು. ರಾಮನ ಶರೀರದ ನರನರವೂ ಪಿಟೀಲಿನ ತಂತಿಯಂತೆ ಝುಂಕಾರವಾಡಿತು. 'ಸೃಷ್ಟಿಯು ಅಪೂರ್ವ ರಮಣಿಯಂತೆ ಆಯಿತು. ತರುಣಿ ರಾಮ ಉನ್ಮತ್ತ ನಿರೀಕ್ಷಣಾನಂದದಿಂದ ತನ್ನ ಪತಿ ಈಶ್ವರನಿಗಾಗಿ ಕಾದಿದ್ದ. ಅಂದು ರಾಮನ ಹೃದಯಾಂತರಾಳದಿಂದ 'ಬಾ ! ದೇವನೇ! ನಿನ್ನನ್ನು ನನ್ನ ಗರ್ಭದಲ್ಲಿ ಧರಿಸ ಬಯಸುತ್ತೇನೆ. ನಿನ್ನಿಂದ ಜೀವಸಾರವನ್ನೆಲ್ಲಾ ಹೀರಲು ಬಯಸುತ್ತೇನೆ' ಎಂದು ಪ್ರಾರ್ಥನೆ ಹೊರಟಿತು. ಎದ್ದು ಬಂದು ಅಧ್ಯಯನಕ್ಕೆ ಕೂತಕೂಡಲೆ ತೆರೆದ ಮೊದಲನೇ ಪುಟದಲ್ಲಿ ದೃಷ್ಟಿ ಹೊರಳಿದ್ದ ಮೊದಲನೇ ಶ್ಲೋಕವು ಅಂದಿನ ಪ್ರಾತಃಕಾಲವಿದ್ದ ರಾಮನ ಮನಸ್ಸಿನ ಪರಿಸ್ಥಿತಿಯನ್ನೇ ವಿವರಿಸಿತ್ತು" ಎಂದರು.

ವರ್ಷೂ ಬಳಿಯ ಗಡ್ಡದ ಜನರು ಸ್ವಾಮಿಗಳಿಗೆ ಹಣ್ಣುಹಾಲುಗಳನ್ನು ತಂದುಕೊಡುತ್ತಿದ್ದರು. "ಸ್ವಾಮಿಗಳು ಮಾನವರಲ್ಲ - ದೇವರು" ಎನ್ನುತ್ತಿದ್ದರು. ಸ್ವಾಮಿಗಳ ತತ್ವದ ಒಂದು ಅಕ್ಷರವೂ ಅವರಿಗೆ ಅರ್ಥವಾಗದಿದ್ದರೂ ಸಹ, ಅವರ ವಾಸಕ್ಕಾಗಿ ಒಂದೇ ದಿನದಲ್ಲಿ ಗುಡಿಸಲನ್ನು ಕಟ್ಟಿಕೊಟ್ಟರು. ಅವರಿಗೆ ತಮ್ಮ ಕಾಣಿಕೆಯನ್ನು ತಂದು ಮುಂದಿಟ್ಟು, ಹರ್ಷವದನರಾಗಿ ಮಾತನಾಡಿಸುವಾಗ ಸ್ವಾಮಿಗಳು ತಮ್ಮ ಜೀವಗೆಳೆಯರಂತೆ ಅವರೊಂದಿಗೆ ಸಂಭಾಷಿಸುತ್ತಿದ್ದರು. ಪದ್ಮಾಸನಹಾಕಿ ದ್ವಂದ್ವಗಳಿಂದ ಅತೀತರಾಗಿ, ದೇಹದ ಇರುವಿಕೆಯ ಪ್ರಜ್ಞೆಯೇ ಇಲ್ಲದೆ ದಿನಗಟ್ಟಲೆ ಕೂತುಬಿಡುತ್ತಿದ್ದರು.

ಬೇಸಿಗೆ ಬರುತ್ತಲೇ ಅವರು ಹೀಗೆ ಹೊರಟು, ದೇವಪ್ರಯಾಗ, ಟಿಹರಿ ಮಾರ್ಗವಾಗಿ ಮೇಲೆ ಹೋಗುತ್ತಾ ಸಮುದ್ರ ಮಟ್ಟದಿಂದ ಹದಿಮೂರು ಸಾವಿರಡಿಗಳ ಎತ್ತರದಲ್ಲೂ, ಟಿಹರಿಯಿಂದ ಐವತ್ತು ಮೈಲಿಗಳ ದೂರದಲ್ಲಿ ಇರುವ ವಸಿಷ್ಠಾಶ್ರಮವೆಂಬಲ್ಲಿಗೆ ತಲುಪಿದರು. ಇಲ್ಲಿ ವಸಿಷ್ಠ ಮುನಿಗಳಿದ್ದರೆಂದು ಹೇಳುವ ಗುಹೆಯಲ್ಲಿ ಸ್ವಾಮಿಗಳು ೧೯೦೭ರ ಮಾರ್ಚಿಯಿಂದ ನಿಂತು ಮತ್ತೆ ಅಧ್ಯಯನದಲ್ಲಿ ತೊಡಗಿದರು. ಮತ್ತು ನಾರಾಯಣರನ್ನೂ ಕರೆದ

ಲ್ಲೆಲ್ಲಾ ಭಾಷಣ ಮಾಡಲು ತಮಗೆ ಪ್ರತಿಯಾಗಿ ಕಳುಹಿಸಿದರು. ಎರಡು ತಿಂಗಳಾದನಂತರ ಸ್ವಾಮಿಗಳಿಗೆ ದೇಹಾಲಸ್ಯವಾಗಲು ನಾರಾಯಣರು ಹಿಂದಿರುಗಬೇಕಾಯಿತು. ನಂತರ ಸ್ವಾಮಿಗಳು ತಮ್ಮ ನಿವಾಸವನ್ನು ಇನ್ನೂ ಮೇಲಿದ್ದ ಒಂದು ಗುಹೆಯಲ್ಲಿ ಮಾಡಿಕೊಂಡರು; ನಾರಾಯಣರು ಕಣಿವೆಯ ಕಡೆಗೆ ಬಂದು ನಿಂತರು. ಈ ಗುಹೆಯಿಂದ ಮೇಲೆ ಮತ್ತೊಂದು ದೊಡ್ಡ ಗುಹೆಯಿದೆ. ಅಲ್ಲಿ ಒಂದು ಘಟಸರ್ಪ ವಾಸಿಸುತ್ತಿತ್ತು. ಅಲ್ಲದೆ ರಾಮರ ಗುಹೆಯ ಎದುರು ಕಣಿವೆಯಲ್ಲಿನ ಒಂದು ದೊಡ್ಡ ಪೊದರಿನಲ್ಲಿ ಒಂದು ಹುಲಿಯು ವಾಸಿಸುತ್ತಿದ್ದಿತು. ಅದು ಆಗಾಗ ಇವರ ಗುಹೆಯ ಮುಂದು ಗಡೆಯೂ ಅಲೆದಾಡುತ್ತಿದ್ದಿತು. ಇವರ ಗುಹೆಯ ಬಾಗಿಲು ವಿಶಾಲ; ಕಾರಣವಾಗಿ ಕಾಡುಮೃಗಗಳ ಉಪಟಳದಿಂದಲೂ ಜಡಿ ಮಳೆಯ ಉಪದ್ರವದಿಂದಲೂ ಯಾವ ಬಗೆಯ ರಕ್ಷಣೆಯೂ ಇರಲಿಲ್ಲ. ಸ್ವಾಮಿಗಳು ಅನೇಕ ರಾತ್ರಿಗಳು ಬಟ್ಟೆಬರೆಯಲ್ಲಾ ನೆನೆದು ಎಚ್ಚರವಾಗಿಯೇ ಕಳೆಯುತ್ತಿದ್ದರು, "ಮಳೆಯ ನೆಪದಿಂದ ರಾತ್ರೆಯನ್ನೂ ನಿದ್ರೆಯಲ್ಲಿ ಕಳೆದುಕೊಳ್ಳದೆ ಈಶ್ವರನೊಂದಿಗೆ ಪ್ರೇಮ ವಿಹಾರದಲ್ಲಿ ಕಳೆಯುವುದೇ ಭಾಗ್ಯ....ರಾಮನು ಮತ್ಸ್ಯ ಕೂರ್ಮದ ಅವತಾರದ ಸವಿಗಾಣುತ್ತಿದ್ದಾನೆ" ಎಂದಿದ್ದಾರೆ.

ಮುಂದೆ ಈ ಸ್ಥಳವನ್ನೂ ಬಿಟ್ಟು ಕಣಿವೆಯಲ್ಲಿನ ಬಯಲಿಗೆ ಬಂದರು. ಅಲ್ಲಿ ಪರ್ವತ ನಿವಾಸಿಗಳು ಸ್ವಾಮಿಗಳಿಗಾಗಿ ಪುಟ್ಟ ಕುಟಿಯನ್ನು ಕಟ್ಟಿ ಸಿದ್ಧ ಮಾಡಿದರು. ಇಲ್ಲಿರುವಾಗ ಅವರು ಹೆಚ್ಚು ಹೆಚ್ಚು ಅಂತರ್ಮುಖಿಗಳಾಗುತ್ತಿದ್ದಂತೆ ಕಂಡುಬರುತ್ತದೆ. ನಡೆಯುವಾಗೇನಾದರೂ ಎಡವಿ ಜಾರಿ ಬಿದ್ದರೆ, "ಆಹಾ! ರಾಮನು ತನ್ನ ಪ್ರಿಯನನ್ನು ಮರೆಯುವುದರಲ್ಲಿದ್ದ; ಅದಕ್ಕೇ ಬಿದ್ದ. ಇಲ್ಲದಿದ್ದರೆ ಬೀಳುವುದೆಲ್ಲಿಂದ ಆಗಬೇಕು. ಮೊದಲು ಒಳಗೆ ಜಾರುತ್ತೇವೆ; ನಂತರ ಹೊರಗೆ ಮುಗ್ಗರಿಸುತ್ತೇವೆ. ಪ್ರಿಯನಿಲ್ಲದೆ ಒಂದು ಉಸಿರೂ ಆಡಕೂಡದು. ನಿನ್ನುಸಿರುಗಳನ್ನೆಲ್ಲಾ ಅವನಿಂದ ತುಂಬು" ಎಂದು ಒಡನಿದ್ದವರಿಗೆ ಹೇಳುವರು. ಸಂಜೆಯಾಗುತ್ತಲೇ ಕೈತಟ್ಟುತ್ತಾ, ಹಾಡುತ್ತಾ ಕುಣಿಯುವರು. ಕಂಡವರಿಗೆ ಚೈತನ್ಯಸ್ವಾಮಿಯ ನೆನಪಾಗುತ್ತಿತ್ತು. ಒಂದು ದಿನ ಸ್ನಾನಮಾಡುತ್ತಿರುವಾಗ "ವೇದಾಂತವನ್ನು ಸಂಪೂರ್ಣವಾಗಿ ಸಾಕ್ಷಾತ್ಕಾರ

ಮಾಡಿಕೊಂಡರೆ, ಈ ಭೌತಿಕ ಶರೀರವೇ ಅಮರವಾಗುವಂತೆ ಮಾಡಬಹುದು" ಎಂದರು.

ಓದುವುದೆಂದರೆ ಅವರಿಗೆ ಬಹು ಪ್ರೇಮ. ಇದನ್ನು ತಿಳಿದಿದ್ದ ಪೂರ್ಣ ಸಿಂಹರು ಇಲ್ಲಿಗೆ ಸ್ವಾಮಿಗಳನ್ನು ಕಾಣಲು ಬಂದಾಗ ಕೆಲವು ಪುಸ್ತಕಗಳನ್ನು ತಂದು ಸ್ವಾಮಿಗಳ ಮುಂದಿಟ್ಟರು. ಅವರು ತಮ್ಮ ಗುಡಿಸಿಲಿನಲ್ಲಿ ಪದ್ಮಾಸನ ದಲ್ಲಿ ಕುಳಿತಿರುವರು—ಇಲ್ಲದಿದ್ದರೆ ಮಲಗಿರುವರು. ಪೂರ್ಣ ಸಿಂಹರು ಎದು ರಿಗಿರುವ ಪುಸ್ತಕಗಳಲ್ಲಿ ಒಂದನ್ನೆತ್ತಿ ಅವರ ಕೈಗೆ ಕೊಟ್ಟರು. ಆದರೆ ಅದನ್ನು ಓದುವುದು ಸ್ವಾಮಿಗಳಿಗೆ ಬಹು ಕಷ್ಟವಾಗಿದ್ದಂತೆ ಕಂಡಿತು. ಪುಸ್ತಕವು ಹಾಗೇ ಅವರ ಕೈಯಿಂದ ಜಾರಿ ಬಿದ್ದಿತು; ಕಣ್ಣುಗಳಿಂದ ಕಂಬನಿ ಹರಿಯಿತು ಮೆಲ್ಲನೆಯಲ್ಲಿ "ರಾಮನು ಇನ್ನು ಓದಲಾರ" ಎಂದರು.

ನಾರಾಯಣರು ಸ್ವಾಮಿಗಳ ಆಲಸ್ಯವನ್ನು ಕಂಡು ಕುಪಿತರೂ, ಆದರು* "ಒಮ್ಮೆ ಎಲ್ಲರೂ ಪಯೋಲೀ ಕಾಂತ ಮಾರ್ಗವಾಗಿ ಬುದ್ಧ ಕೇದಾರ್ ಪರ್ವತಗಳಿಗೆ ಹೋಗಬೇಕೆಂದು ಪ್ರಸ್ತಾಪ ಮಾಡಿದೆವು. ಸ್ವಾಮಿಗ ಳೂ ಒಪ್ಪಿದರು. ಎಲ್ಲರೂ ಹೊರಟೆವು. ವಿಷೂರ್ ಪರ್ವತವನ್ನು ಹತ್ತಿದೆವು. ಮಂಜು ಮಟ್ಟವನ್ನು ದಾಟಿ ಮೇಲಿನ ಹುಲ್ಲು ತುಂಬಿದ ಮೈದಾನವನ್ನು ತಲ ಪುತ್ತಲೇ ಸಂಜೆಯಾಗುತ್ತಿತ್ತು. ಅಲ್ಲೊಬ್ಬ ಕುರುಬನ ಗುಡಿಸಲು ಕಾಣಿಸಿತು. ಅಲ್ಲಿಗೆ ಹೋಗಲು ಆತನು ನಮಗೆ ಆತಿಥ್ಯನೀಡಲು ಒಲ್ಲದೆಹೋದನು. ನಾನೂ ನಾರಾಯಣರೂ ಬೇಡಿಕೊಂಡೆವು. ಎಲ್ಲಾ ವ್ಯರ್ಥವಾಯಿತು. ಆದರೆ ಸ್ವಾಮಿಗಳು ಬಂದವರೇ ನೇರವಾಗಿ ಒಳಕ್ಕೆ ಪ್ರವೇಶಿಸಿದರು. ಹಿಂದೆ ನಾವೂ ಕೂಡ; ಆತನು ಸಾನಂದದಿಂದ ಸತ್ಕರಿಸಿದನು. ಆ ಹುಲ್ಲು ಗುಡಿಸಿಲಿನಲ್ಲಿ ರಾತ್ರಿಯನ್ನು ಕಳೆದೆವು. ಬೆಳಗಾಗುತ್ತಲೇ ಸ್ವಾಮಿಗಳು ಹೊರಗಡೆ ನಿಂತು, ಬದರೀನಾರಾಯಣದಿಂದ, ಜಮ್ನೋತ್ರಿವರೆಗಿನ ದಿವ್ಯಹಿಮಾಲಯದ ಮನೋ ಹರ ದೃಶ್ಯವನ್ನೂ ಸೂರ್ಯೋದಯದಿಂದ ಸುವರ್ಣಮಯವಾಗಿ ಕಾಣುತ್ತಿರುವ ಅವುಗಳ ಅಪೂರ್ವ ಸೌಂದರ್ಯವನ್ನೂ ನನಗೆ ತೋರಿಸುತ್ತಿದ್ದರು. ನಂತರ ಸ್ವಾಮಿಗಳು ಮುಂದೆ ನಡೆಯಲು ಇಷ್ಟಪಡಲಿಲ್ಲ. 'ನಾವು ಅವನನ್ನು (ಈಶ್ವರ

---

*ಹೀಗೆಂದು ಪೂರ್ಣಸಿಂಹರು ಬರೆದಿದ್ದಾರೆ.

ನನ್ನು) ಮರೆತು ಬೆಟ್ಟಗಳಮೇಲೆ ಅಲೆದಾಡಿದರೆ ಪ್ರಯೋಜನವೇನು ? ನಮ್ಮೊಂದಿಗೆ ಅವನಿರುವಲ್ಲಿ ಮನೆಯಲ್ಲಿದ್ದರೂ ಭಾಗ್ಯವೇ'' ಎಂದರು. ನಾನೂ ಕೂಡ ಬೊಬ್ಬೆ ಎದ್ದ ನನ್ನ ಹೆಜ್ಜೆಗಳನ್ನು ತೋರಿಸಿ ಮುಂದೆ ನಡೆಯಲಾರೆ ನೆಂದೆ ಅಂತೂ ಹಿಂದಿರುಗಿದೆವು.

ಒಮ್ಮೆ ಸ್ವಾಮಿಗಳನ್ನು ದೊಡ್ಡ ರಾಷ್ಟ್ರೀಯ ಪಂಥದವರೆಂದು ಬ್ರಿಟಿಷ್ ಸರ್ಕಾರವನ್ನುರುಳಿಸಲಿಚ್ಛಿಸುವರೆಂದೂ, ಅನುಮಾನಿಸಿ ಪೋಲೀಸ್‌ದಳದವರು ಅವರನ್ನು ಹುಡುಕುತ್ತಿರುವುದಾಗಿ ಪತ್ರಬಂದಿತು. ಅದಕ್ಕೆ ಸ್ವಾಮಿಗಳು "ನಾನು ನನ್ನನ್ನು ವಾದದಿಂದ ರಕ್ಷಿಸಿಕೊಳ್ಳುವುದಿಲ್ಲವೆಂದು ಹೇಳಿ. ಅವರು ನನ್ನನ್ನು ಮನಬಂದಂತೆ ಕಾಣಬಹುದು. ನಾನು ಏನಾಗಿದ್ದೇನೋ ಅದನ್ನು ಬಿಟ್ಟು ಬೇರೆಯಾಗಲು ಸಾಧ್ಯವಿಲ್ಲ. ಭಾರತೀಯನಾಗಿರುವ ನಾನು ನನ್ನ ದೇಶವು ಸ್ವತಂತ್ರವಾಗಲೆಂದು ಬಯಸುತ್ತೇನೆ. ಇಂದಲ್ಲ ನಾಳೆ ಸ್ವತಂತ್ರ ವಾಗೇ ಆಗುವುದು; ಆದರೆ ಆ ಸ್ವಾತಂತ್ರ್ಯವನ್ನು ಈ ರಾಮನು ಒದಗಿಸುತ್ತಾ ನೋ ಅಥವಾ ಇತರ ಸಹಸ್ರ ರಾಮರೋ - ಯಾರಿಗೂ ಗೊತ್ತಿಲ್ಲ" ಎಂದರು.

ಮತ್ತೊಂದೆಡೆ ಪೂರ್ಣಸಿಂಹರು ಹೇಳಿದ್ದಾರೆ. "ನಾನು ವಸಿಷ್ಠಾಶ್ರಮ ದಿಂದ ಹೊರಡುವ ದಿನ, ಅವರು ತಮ್ಮೊಂದಿಗೆ ಸ್ನಾನಮಾಡಲು ಕರೆದರು. ನಾನು ಅವರ ಕರಟ (ತೆಂಗಿನ ಚಿಪ್ಪು)ವನ್ನು ಟವಲನ್ನೂ ಹಿಡಿದು ಹೊರಟೆ. ನದಿಗೆ ಹೋದೆವು. ತಾವೇ ಏನೊಂದೂ ಮಾಡಲು ಅನುಮಾನಿಸುತ್ತಿದ್ದರು. ನಾನೇ ಅವರ ಬಟ್ಟೆಗಳನ್ನು ಬಿಚ್ಚಿ ನನ್ನ ಕೈಯಿಂದಲೇ ಸ್ನಾನಮಾಡಿಸಿದೆ. ಮುಂಜಾನೆಯೆಲ್ಲಾ ಮೋಡವಾಗಿಯೇ ಇದ್ದಿತು. ಗುಡಿಸಿಲಿಗೆ ಹಿಂದಿರುಗಿದೆವು. ನಾನು ಅವರನ್ನು ಬಿಟ್ಟು ಹೊರಡಬೇಕು. 'ಪೂರ್ಣಜೀ ನಿವು ಎಲ್ಲಿಹೋದರೂ ಸ್ವರ್ಣಭೂಮಿಯಲ್ಲಿ - ಅಂತಃ ಪ್ರಕಾಶದಲ್ಲಿ ವಾಸಿಸಿರಿ. ರಾಮನು ಆರಂಭಿಸಿದ ಕೆಲಸವನ್ನು ಮುಂದುವರಿಸಿರಿ. ಏಕೆಂದರೆ ರಾಮನು ಮೌನವಾಗುವ ಕಾಲವು ಸನ್ನಿಹಿತವಾಗಿದೆ; (ಮೌ್ ಹೋಜಾಯೇಗಾ) ಮೌನವಾಗುವನು' ಎಂದರು. ನಾನು 'ಸ್ವಾಮಿಜಿ ನಾನು ಮತ್ತೆ ಬಂದಾಗ ನೀವು ನಿಮ್ಮ ಮೌನವ್ರತವನ್ನು ಮುರಿದು ನಕ್ಕು ನುಡಿಯುವಂತೆ ಮಾಡುವೆ' ಎಂದೆ. ಅವರ ಕಣ್ಣುಗಳು ಕೆಂಪಾ ದುವು. ಧ್ವನಿ ಗಂಭೀರವಾಯಿತು; 'ಮೌನಿಯಾದವನನ್ನು ಯಾರು ಮಾತಾ ಡಿಸಬಲ್ಲರು?' ಎಂದರು. ನಾನು ಮರುಮಾತಾಡಲು ಭಯಗ್ರಸ್ತನಾದೆ.

"ಹೊರಟೆವು - ನಾನು, ನನ್ನ ಮಿತ್ರನೊಬ್ಬ, ನಮ್ಮೊಂದಿಗೆ ಹೋಗಬೇಕೆಂದು ಕಳುಹಿಸಲ್ಪಟ್ಟ ನಾರಾಯಣರು. ನಮ್ಮನ್ನು ಬೀಳ್ಕೊಡಲು ಸ್ವಾಮಿಗಳೂ ಬೆಟ್ಟವನ್ನಿಳಿದು ಬಂದರು. ಹೊಳೆಯಿಂದ ಹಿಂತಿರುಗಿದ್ದಂತೆಯೇ ಕೇವಲ ಒಂದು ತುಂಡು ಸುತ್ತಿದರು; ಹಾಗೆಯೇ ಬಂದರು. ಹನಿ ಹಾಕಲಾರಂಭಿಸಿತು. ನನ್ನ ಕಣ್ಣುಗಳು ಕಂಬನಿದುಂಬಿದುವು. ಅವರಿಗೆ ಪ್ರಣಾಮ ಮಾಡುತ್ತಲೇ, ಅವರು ಸರ್‍ರನೆ ಹಿಂತಿರುಗಿ ಬೆಟ್ಟದಮೇಲಕ್ಕೆ ಓಡಿಹೋಗುತ್ತಿದ್ದರು; ಒಮ್ಮೆ ಸಹ ಹಿಂತಿರುಗಿ ನೋಡಲಿಲ್ಲ; ನಮ್ಮ ಸಂಬಂಧವಾದ ಸಮಸ್ತ ಋಣಾನುಬಂಧವನ್ನೂ ಕಿತ್ತುಹಾಕಿದವರಂತೆ ವೇಗವಾಗಿ ಹೊರಟುಹೋದರು."

ಸಿಮ್ಲಾಸು ತೋಟದಲ್ಲಿ

ವಸಿಷ್ಠಾಶ್ರಮದಲ್ಲಿರುವಂದು ಸ್ವಾಮಿಗಳು ಕೇವಲ ಹಾಲಿನ ಆಹಾರದಲ್ಲೇ ಇದ್ದರು. ಸುತ್ತಣ ಹಳ್ಳಿಗಳವರು ತಂದುಕೊಡುತ್ತಿದ್ದ ಒಂದು ಬಗೆಯ ಕಾಳಿನ ಹಿಟ್ಟನ್ನು ರೊಟ್ಟಿಗಾಗಿ ಉಪಯೋಗಿಸಿದಾಗ ಅದು ಸ್ವಾಮಿಗಳ ದೇಹಕ್ಕೆ ತೊಂದರೆಯುಂಟುಮಾಡಿ, ಜ್ವರ - ಆಮಶಂಕೆಗಳನ್ನು ತಂದಿತ್ತು. ಆದಕಾರಣ ಅವರು ಅದರ ಸೇವನೆಯನ್ನು ಪೂರ್ಣವಾಗಿ ವರ್ಜಿಸಿಬಿಟ್ಟಿದ್ದರು. ಪೂರ್ಣಸಿಂಹರು ಮಿತ್ರರೊಂದಿಗೆ ಬಂದು ಅಲ್ಲಿ ನಿಂತಾಗ, ಸ್ವಾಮಿಗಳು ಭಿಕ್ಷೆ ಮಾಡಿದ ಹೊರತೂ, ತಾವು ಭುಜಿಸುವುದಿಲ್ಲವೆಂದ ಕಾರಣ, ಮತ್ತೆರಡು ದಿನ ಸ್ವಲ್ಪ ರೊಟ್ಟಿಯನ್ನೇ ತಿನ್ನಲು ಮತ್ತೆ ಜ್ವರಗ್ರಸ್ತರಾದರು. ನಂತರ ಕೇವಲ ಹಾಲಿನ ಆಹಾರದಲ್ಲೇ ಇದ್ದರೂ, ದೇಹವು ನಿರ್ಬಲವಾಗಿಯೇ ಇದ್ದಿತು. ಈ ಕಾರಣಗಳಿಂದ ಅವರು ಎಲ್ಲರ ಒತ್ತಾಯಕ್ಕೂ ಒಪ್ಪಿ ವಸಿಷ್ಠಾಶ್ರಮವನ್ನು ಬಿಟ್ಟು ಟಿಹರಿ ಸಂಸ್ಥಾನದ ಸಿಮ್ಲಾಸು ತೋಟಕ್ಕೆ ಬಂದು, ಎರಡು ವಾರಗಳು ನಿಂತು, ಆರೋಗ್ಯವಂತರಾದರು. ಮತ್ತೆ ಏಕಾಂತಸೇವನೆಯ ಲಾಭಕ್ಕಾಗಿ ವಾಸಸ್ಥಾನವನ್ನು ಹುಡುಕತೊಡಗಿದರು. ಮುಂದೆ ಮತ್ತೆ ಕದಲದಂತೆ, ಆ ಜೀವಪರ್ಯಂತವೂ ನೆಲೆಯಾಗಿ ದೇಹವನ್ನಿಟ್ಟು, ಆತ್ಮಾನಂದದಲ್ಲೇ ವಾಸಿಸಲು ಯೋಗ್ಯವಾದ ಏಕಾಂತ ಸ್ಥಾನವನ್ನು ಅರಸಲು ಬಯಸಿ ಹೊರಟರು. ತಮಗೆ

ಅತಿ ಪ್ರಿಯಳಾದ "ಗಂಗಿ"ಯ ದಡವನ್ನು ಬಿಟ್ಟು ಎಂದೂ ಆಗಲಲಾರದವ ರಾದ್ದರಿಂದ ಗಂಗಾತಡಿಯಲ್ಲೇ ನಡೆದುಹೊರಟರು. ಅಲ್ಲಲ್ಲಿ ಅನೇಕ ಸ್ಥಾನಗ ಳನ್ನು ಶಿಷ್ಯರು ತೋರಿಸಿದರು; ಆದರೆ ಒಂದೂ ಮನಸ್ಸಿಗೆ ಒಪ್ಪಿಗೆಯಾಗಲಿಲ್ಲ. ಕಡೆಗೆ ಮಾಲೀದೇವಲ್ ಗ್ರಾಮದಿಂದ ಮುಂದೆ ಒಂದು ದಿವ್ಯಸ್ಥಳವು ಅವರ ದೃಷ್ಟಿಗೆ ಗೋಚರವಾಯಿತು. ಇಲ್ಲಿ ಗಂಗೆಯು ದಕ್ಷಿಣಕ್ಕೆ ತಿರುಗಿದ್ದಾಳೆ; ಕಾರಣವಾಗಿ ಇಲ್ಲಿ ಈಕೆಯನ್ನು ಉತ್ತರವಾಹಿನೀ ಎಂದು ಕರೆಯುತ್ತಾರೆ. ಇಲ್ಲಿ ಗಂಗಾತಟದಲ್ಲಿನ ಮೈದಾನವೂ ಬೆಟ್ಟದವರೆಗೂ ಸಮತಲವಾಗಿ ವಿಶಾಲವಾ ಗಿದೆ. ಅಲ್ಲದೆ ಜನರ ಓಡಾಟದ ಬಹು ಹತ್ತಿರದ ಕಾಲುದಾರಿಯೂ ಸಹ ಒಂದು ಮೈಲಿ ದೂರದಲ್ಲಿದೆ. ಇಷ್ಟೇ ಅಲ್ಲದೆ ಈ ಪ್ರದೇಶವನ್ನು ಗಂಗೆಯು ಮೂರು ಕಡೆಯೂ ಸುತ್ತಿಕೊಂಡಿರುವುದರಿಂದ ಸುಂದರಪರ್ಯಾಯದ್ವೀಪ ದಂತಿದೆ. ಈ ಕಾರಣಗಳಿಂದ ಸ್ವಾಮಿಗಳಿಗೆ ಈ ಸ್ಥಳವು ಬಹು ಭವ್ಯವಾಗಿ ಕಂಡುಬಂದಿತು. ಅಲ್ಲೇ ನಿಂತು ತಮ್ಮ ಆಶ್ರಮದ ಕುಟಿಯ ಚಿತ್ರವನ್ನು ಕಾಗದದಮೇಲೆ ಗುರ್ತಿಸಿ ಅದರಂತೆ ಕಟ್ಟಲು ಶಿಷ್ಯರಿಗೆ ಆಜ್ಞೆಯನ್ನಿತ್ತರು. ಆದರೆ ಈ ವೇಳೆಗೆ ಟಿಹರಿಯ ಮಹಾರಾಜರಿಗೇನೇ ಈ ಸಮಾಚಾರವು ತಿಳಿದು ಬಿಟ್ಟ ಕಾರಣ, ಅವರು ತಮ್ಮ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟಿನ ಸೂಪರಿಂ ಟೆಂಡೆಂಟ್‌ರನ್ನು ಅಲ್ಲಿಗೆ ಕಳುಹಿಸಿ ಸ್ವಾಮಿಗಳ ನಕ್ಷೆಯಂತೆ ಕುಟೀರವನ್ನು ಸಿದ್ಧಪಡಿಸತೊಡಗಿದರು. ಮಹಾರಾಜರ ಪ್ರೇಮವನ್ನು ಅರಿತು ಸ್ವಾಮಿಗಳು "ಸಾಕು; ಇಂಥ ಪ್ರೇಮ ಮತ್ತು ಭಕ್ತಿಮೂರ್ತಿ ಮಹಾರಾಜರ ಸಂಸ್ಥಾನ ವನ್ನು ಬಿಟ್ಟು ರಾಮನು ಎಲ್ಲೂ ಹೋಗುವುದಿಲ್ಲ. ಯಾವಜ್ಜೀವವೂ ಇದೇ ಸ್ಥಾನದಲ್ಲೇ ಏಕಾಂತ ವಾಸಮಾಡುವನು' ಎಂದು ನುಡಿದರು.

ಅಲ್ಲಿಂದ ಮೂರುಮೈಲಿ ದೂರದಲ್ಲಿ 'ಬಶಿಷ್ಠಗೌಗೀ' ಎಂಬ ಗುಹೆ ಯೊಂದಿದೆ. ಅಲ್ಲಿ ಸ್ವಾಮಿಗಳು ಹಿಂದೆ ೧೯೦೧ರಲ್ಲಿ ಕೆಲವು ತಿಂಗಳು ಏಕಾಂತ ಸೇವನೆಯಲ್ಲಿದ್ದರು. ಈಗ ಅದರ ನೆನಪಾಗಲು ಶಿಷ್ಯ ನಾರಾಯಣ ಸ್ವಾಮಿಗೆ ಆ ಗುಹೆಯಲ್ಲಿ ನಿಂತು ಆತ್ಮಚಿಂತನೆಯಲ್ಲಿ ನಿರತನಾಗುವಂತೆ ಅಪ್ಪಣೆ ಯಿತ್ತರು.

ನಾರಾಯಣಸ್ವಾಮಿಗಳು ತಮ್ಮ ಬಟ್ಟೆಬರಗಳನ್ನು ಕಟ್ಟಿಕೊಂಡು 'ಬಶಿಷ್ಠಗೌಗೀ' ಗುಹೆಗೆ ಹೊರಡುವ ಮೊದಲು ಗುರುಗಳ ಚರಣದರ್ಶನಕ್ಕಾಗಿ

ಬಂದಾಗ, ಸ್ವಾಮಿಗಳು ಎಂದಿನಂತೆ ಆಶೀರ್ವದಿಸಿ ಕಳುಹಿಸಿಬಿಡುವುದಕ್ಕೆ ಪ್ರತಿಯಾಗಿ, ಬರಿಗಾಲು, ಬರಿತಲೆಯಲ್ಲೇ ಅವರೊಂದಿಗೆ ಹೊರಟು ಶಿಷ್ಯನೊಂದಿಗೆ ನಡೆಯುತ್ತಾ ಆತನಿಗೆ ಅನೇಕ ಉಪದೇಶಗಳನ್ನಿತ್ತರುತ್ತಾ, ಕಡೆಗೆ ಸಿವಾಲ್ಲಾಸು ತೋಟದಾಚೆಯ ಕಾಲುದಾರಿಯವರೆಗೂ ಬಂದುಬಿಟ್ಟರು. ಅಲ್ಲಿ ನಿಂತು ತಮ್ಮ ಕಡೆಯ ಆಶೀರ್ವಾದವನ್ನು ಹೀಗೆ ಅಪ್ಪಣೆಕೊಡಿಸಿದರು. "ನೋಡು ಮಗೂ! ಬಹುಶಃ ರಾಮನ ವಾಣಿಯು ಶೀಘ್ರವಾಗಿ ಮೂಕವಾಗಿಬಿಡಬಹುದು; ಲೇಖಣಿಯು ಬೇಸರದಿಂದ ನಿಂತುಬಿಡಬಹುದು. ಓದಿ ಬರೆಯುವುದೇ ಅಲ್ಲದೆ, ನಡೆನುಡಿಯೂ ನಿಶ್ಚಲವಾಗಿ ಬಿಡಬಹುದು. ಶರೀರವು ದುರ್ಬಲವಾಗುತ್ತಿದೆ. ಬಹುಶಃ ರಾಮನು ಮುಂದೆಂದೂ ಮೈದಾನಕ್ಕೆ ಇಳಿಯಲಾರ. ಶರೀರವು ಬೇಗ ಚೇಷ್ಟಾಶೂನ್ಯವಾಗುವಂತೆ ಕಂಡುಬರುತ್ತದೆ. ಆದಕಾರಣ ಗಂಗಾರಾಣಿಯ ತಟವನ್ನೆಂದಿಗೂ ಬಿಡುವುದಿಲ್ಲ. ಮುಂದೆಲ್ಲಿಗೆ ರಾಮನನ್ನು ಕರೆದರೂ ಅಲ್ಲಿಗೆಲ್ಲಾ ನೀನೇ ಹೋಗಬೇಕಾಗುವುದು. ಆದುದರಿಂದ ನನ್ನ ಪ್ರಿಯನೇ! ಹೋಗು; ಗುಹೆಯಲ್ಲಿ ಏಕಾಂತಾಭ್ಯಾಸಮಾಡು. ದಿನರಾತ್ರಿ ರಾಮನಲ್ಲಿ ಮಗ್ನನಾಗು! ಹೊರಬಂದಂದು ವೇದಾಂತದ ಮೂರ್ತಿಯಾಗಿರಬೇಕು! ಸದಾ ರಾಮನೊಂದಿಗಿರುವನೆಂದು ತಿಳಿ!....ಶೋಕಚಿಂತೆಗಳಿಗೆಡೆಗೊಡಬೇಡ! ನಿನ್ನ ತನುಮನಧನವೆಲ್ಲಾ ರಾಮನೆಂದು ತಿಳಿದು, ಅವನನ್ನೇ ನಿನ್ನ ತನುಮನವಾಗಿಸಿಕೋ. ಹೀಗೆ 'ಮೂರ್ತಿಮಾನ್ ರಾಮನಾಗಿ ಹೊರಗೆ ಬಾ!" ಈ ನುಡಿಗಳನ್ನು ಕೇಳುತ್ತಲೇ ಶಿಷ್ಯನ ಕಣ್ಣುಗಳಿಂದ ಧಾರೆಧಾರೆಯಾಗಿ ಕಂಬನಿ ಸುರಿಯತೊಡಗಿತು. ಸ್ವಾಮಿಗಳು ಆತನ ಬೆನ್ನುತಟ್ಟಿ "ಮಗುವೇ! ಗಾಬರಿಯಾಗಬೇಡ! ಗುಹೆಯಲ್ಲಿ ಏಕಾಂತಾಭ್ಯಾಸ-ಅಧ್ಯಯನಗಳನ್ನು ಚೆನ್ನಾಗಿ ಮಾಡು. ಆತ್ಮ ಚಿಂತನೆಯಲ್ಲಿ ನಿರತನಾಗಿರು ರಾಮನು ಈಗ ಬರೆಯುತ್ತಿರುವ ಲೇಖನವು ಮುಗಿಯುತ್ತಲೇ ಪ್ರತಿಲಿಪಿಮಾಡಲು ನಿನ್ನನ್ನು ಕರೆಸಲಾಗುತ್ತೆ. ಅಲ್ಲದೆ ಕುಟೀರವು ಸಿದ್ಧವಾದನಂತರ ರಾಮನು ಮಾಲಿದೇವಲ್ ಗ್ರಾಮದ ಬಳಿಗೇ ಬಂದಿರುತ್ತಾನೆ. ಆಗ ನೀನು ಪ್ರತಿ ಭಾನುವಾರವೂ ನಿಸ್ಸಂದೇಹವಾಗಿ ಅಲ್ಲಿಗೆ ಬಂದು ಅವನ ಸತ್ಸಂಗವನ್ನು ಹೊಂದಬಹುದು. ರಾಮನ ಶರೀರವು ಜಾಗ್ರತೆ ಗತಿಶೂನ್ಯವಾಗುವುದೆಂದು ಕಂಡುಬರುತ್ತದೆ; ಆದುದರಿಂದ ನೀನು ಈ ಶರೀರದ ಸೇವೆಯ ಭಾವವನ್ನು

ನಿನ್ನ ಮನಸ್ಸಿನಲ್ಲಿ ಪ್ರಬಲವಾಗಗೊಡಬೇಡ. ಕೇವಲ ನಿನ್ನ ಆತ್ಮೋನ್ನತಿಯ ಯೋಚನೆಯನ್ನೇ ನಿನ್ನ ಗುರಿಯಾಗಿಟ್ಟುಕೋ ; ಈಗ ಮತ್ತೆ ಯಾವುದರ ಆಸರೆಯನ್ನೂ ನೆನೆಯಬೇಡ. ನಿನ್ನ ಕಾಲುಗಳ ಮೇಲೆಯೇ ನೀನು ನಿಲ್ಲುವುದನ್ನು ಕಲಿ. ನೀನೇ ಮೂರ್ತಿಮತ್ ವೇದಾಂತವಾಗು ; ಆತ್ಮದಲ್ಲಿ ದೃಢ ವಿಶ್ವಾಸವಿಟ್ಟು ಅದರಲ್ಲೇ ಸ್ಥಿತನಾಗು" ಎಂದು ಹೇಳಿ ಶಿಷ್ಯನನ್ನು ಆಲಿಂಗನ ಮಾಡಿಕೊಂಡು ಕ್ಷಣಮಾತ್ರದಲ್ಲಿ ಆತನನ್ನು ಬಿಟ್ಟು ಗುಡ್ಡಗಳ ಕಡೆಗೆ ಸರಸರನೆ ಹೊರಟುಹೋಗಿ ಕಣ್ಮರೆಯಾದರು.

ನಾರಾಯಣ ಸ್ವಾಮಿಗಳು ಬರ್ಮರೌಗೀ ಗುಹೆಗೆ ಬಂದು ಐದು ದಿನಗಳಾಗಿದ್ದಿತು. ಸ್ವಾಮಿಗಳ ಅಡಿಗೆಯವನು ಬಂದು 'ಲೇಖನವು ಸಿದ್ಧವಾಗಿರುವುದಂತೆ ; ಆದಕಾರಣ ನೀವು ಸ್ವಾಮಿಗಳಲ್ಲಿಗೆ ಬರಬೇಕಂತೆ' ಎಂದು ಹೇಳಿ ಹೋದ. ನಾರಾಯಣ ಸ್ವಾಮಿಗಳು ಗುರುದರ್ಶನಾಕಾಂಕ್ಷಿಗಳಾಗಿ ಭಾನುವಾರವನ್ನೇ ಎದುರು ನೋಡುತ್ತಿರುವಲ್ಲಿ ಶನಿವಾರ ಸಂಜೆಗೇನೇ ಟಿಹರಿ ಮಹಾರಾಜರ ಭಟರು ಬಂದು "ರಾಮತೀರ್ಥ ಸ್ವಾಮಿಗಳ ದೇಹವು ಗಂಗೆಯಲ್ಲಿ ತೇಲಿಹೋಯಿತು" ಎಂಬ ಸುದ್ದಿಯನ್ನು ತಿಳಿಸಿದ್ದೇ, ನಾರಾಯಣ ಸ್ವಾಮಿಗಳು ಸಿಡಿಲು ಬಡಿದವರಂತೆ ಸ್ಥಂಭೀಭೂತರಾಗಿ ನಿಂತವರು ಕ್ಷಣಕಾಲ ನಂತರ ಅಲ್ಲಿಂದ ಓಡುತ್ತಾ ರಾತ್ರಿ ಎಂಟು ಘಂಟೆವೇಳೆಗೆ ಟಿಹರೀ ನಗರವನ್ನು ತಲುಪಿದರು. ರಾಮಪ್ರೇಮಿ ಸಜ್ಜನರೆಲ್ಲರೂ ದುಃಖದಲ್ಲಿ ಮುಳುಗಿಹೋಗಿದ್ದರು. ದಿಕ್ಕುತೋರದೆ ಸ್ವಾಮಿಗಳ ಅಡುಗೆಯ ಹುಡುಗ ಭೋಲಾದತ್ತನನ್ನು ಬರಮಾಡಿ ಕೇಳಲು ಅವನು ಸಂಗತಿಯನ್ನು ಹೀಗೆಂದು ವಿವರಿಸಿದ. [ಕೆಲವು ದಿನಗಳ ಹಿಂದೆ ಮಂಡಿಗೆ ಪೆಟ್ಟುತಾಕಿತಾದ್ದರಿಂದ ಸ್ವಾಮಿಗಳು ಗಂಗಾಜಲವನ್ನು ತಮ್ಮಲ್ಲಿಗೇ ತರಿಸಿಕೊಂಡು ಸ್ನಾನಮಾಡುತ್ತಿದ್ದವರು, ಅಂದು-ಮರೆಯಲಾಗದ ದೀಪಾವಳೀ ಅವರು ಹುಟ್ಟಿದ ದಿನದ ಹಿಂದಿನ ದಿನ ತಮ್ಮ ಮೂವತ್ತ ಮೂರನೇ ವರ್ಷದ ಹುಟ್ಟಿದ ಹಬ್ಬದ ಹಿಂದಿನ ದಿನ—ದೀಪಾವಳಿಯಾಗಿದ್ದರಿಂದ ತಾವೇ ಗಂಗೆಯಲ್ಲಿ ಸ್ನಾನಮಾಡಲು ಬಯಸಿದರು]

"ಮಧ್ಯಾಹ್ನವಾಗುತ್ತಿದ್ದುದರಿಂದ ನಾನು ಸ್ವಾಮಿಯವರನ್ನು ಸ್ನಾನಕ್ಕೆ ಎಬ್ಬಿಸುವ ಸಲುವಾಗಿ ಅವರ ಕೋಣೆಗೆ ಹೋದೆ. ಕೈಯಲ್ಲಿ ಕಾಗದ ಹಿಡಿದು ಕುಳಿತ್ತಿದ್ದರು. ಮುಖಮಂಡಲವು ಪ್ರಕಾಶಮಾನವಾಗಿದ್ದಿತು ; ಪ್ರಶಾಂತ

ವಾಗಿದ್ದಿತು.. ಅವರ ದೃಷ್ಟಿಯು ಈ ಲೋಕದಲ್ಲಿದ್ದಂತಿರಲಿಲ್ಲ. ನಾನು ಬಹು ಹೊತ್ತು ನಿಂತೆ, ಆದರೆ ನನ್ನ ಕಡೆಗೆ ದೃಷ್ಟಿಯನ್ನು ತಿರುಗಿಸಲಿಲ್ಲ. ಹನ್ನೊಂದು ಘಂಟೆ ಹೊಡೆಯುವುದಿತ್ತು. ಕೆಲವು ನಿಮಿಷಗಳಲ್ಲೇ ಕೈಯ್ಯಲ್ಲಿದ್ದ ಲೇಖಣಿಯೂ ಜಾರಿತು ; ಸ್ವಾಮಿಗಳು ಸಂಪೂರ್ಣ ಅಚೇತರಾದರು. ಕಾಗದವೂ ಕೆಳಕ್ಕೆ ಜಾರಿಬಿತ್ತು. ಬಹು ಹೊತ್ತು ನಿಂತು ನಿಂತು, ಕಡೆಗೆ ಧೈರ್ಯ ಮಾಡಿ ಮೆತ್ತನೆಯ ಧ್ವನಿಯಲ್ಲಿ 'ಮಹಾರಾಜ್! ಭಿಕ್ಷಾ ಸಿದ್ಧವಾಗಿದೆ' ಎಂದೆ. ಅದಕ್ಕುತ್ತರವಿಲ್ಲ. ನನಗೂ ಹಸಿವು ಹೆಚ್ಚುತ್ತಿದ್ದಿತು ; ಆದರೆ ಇನ್ನೂ ಸ್ವಲ್ಪ ಹೊತ್ತು ನಿಂತೆ. ಕೆಲವು ನಿಮಿಷಗಳ ನಂತರ ಪುನಃ 'ಭಿಕ್ಷಾ ಸಿದ್ಧವಾಗಿದೆ' ಎಂದು ಮೊದಲಿಗಿಂತ ಸ್ವಲ್ಪ ಗಟ್ಟಿಯಾಗಿ ನುಡಿದೆ. ಆಗ ಅವರು ಕಣ್ತೆರೆದು ನನ್ನನ್ನು ಕಂಡು 'ಪ್ರಿಯನೇ ! ಏನು ಹೇಳುತ್ತೀ ?' ಎಂದರು. ನಾನು 'ಮಹಾರಾಜ್! ಹನ್ನೊಂದು ಘಂಟೆಯಾಯಿತು; ಭಿಕ್ಷಾ ತಮ್ಮ ಹಾದಿನೋಡುತ್ತಿದೆ. ತಮ್ಮ ಸ್ನಾನಕ್ಕೆ ನೀರನ್ನು ನಾನೇ ಮೇಲೆ ತರಲೋ ? ಇಲ್ಲ ತಾವೇ ಗಂಗಾತಡಿಗೆ ನಡೆದು ಸ್ನಾನಮಾಡುವಿರೋ ?' ಎಂದು ಕೇಳಿದೆ. ಅವರು ಮುಗುಳ್ನಗೆಯಿಂದ 'ನೀನಿನ್ನೂ ಊಟಮಾಡಲಿಲ್ಲವೇ ?' ಎಂದು ಕೇಳಿದರು. ನಾನು 'ತಮ್ಮ ಸ್ನಾನಾನಂತರ ನಾನೂ ಸ್ನಾನಮಾಡಿ ಊಟಮಾಡಬೇಕೆಂದಿದ್ದೇನೆ' ಎಂದೆ. ಸ್ವಾಮಿಗಳು "ಪ್ರಿಯಾ ! ಇಂದು ನೀನೂ ಸ್ನಾನಮಾಡುವಿಯಾ ? ಅದೇನು ?'* ಎಂದರು. ನಾನು 'ಮಹಾರಾಜ್ ! ಈ ದಿನ ದೀಪಮಾಲಾ (ದೀಪಾವಳಿ) ; ಎರಡನೆಯದು ಸಂಕ್ರಾಂತಿ; ಮೂರನೆಯದು ಅಮಾವಾಸ್ಯೆ. ಇಂಥ ಪರ್ವದಿನ ಸ್ನಾನಮಾಡದೇ ಊಟಮಾಡುತ್ತೇನೆ'ಂದೆ. ಅವರು ತಮ್ಮ ಮುಂಡಿಯ ನೋವನ್ನೂ ಗಮನಿಸದೆ ಮಂದಸ್ಮಿತರಾಗಿ "ಓಹೋ ! ಇಂದು ಇಂಥ ಭಾರೀ ಪರ್ವದಿನವೇ ! ನಡೀ ಹಾಗಾದರೆ ಇಂದು ರಾಮನೂ ಗಂಗಾತಟಕ್ಕೆ ನಡೆದೇ ಸ್ನಾನಮಾಡುತ್ತಾನೆ. ಬಾ ! ಒಂದಿಗೆ ಹೋಗೋಣ ! ಎಂದು ಹೇಳಿ ಆ ಕಾಗದಗಳಲ್ಲೇ ಬಿಟ್ಟಿದ್ದು ಹೊರಟರು.

"ಸ್ವಾಮಿಜೀ ಮತ್ತು ನಾನು ಗಂಗಾಸ್ನಾನಕ್ಕೆಂದು ಹೊರಟೆವು. ನಾನು ಮೊದಲು ಜಾಗ್ರತೆ ಸ್ನಾನಮಾಡಿ ದಡದಲ್ಲಿ ಕುಳಿತೆ. ಸ್ವಾಮಿಗಳು ವ್ಯಾಯಾ

---

* ಸಹಿಸಲಾರದಷ್ಟು ಚಳಿ ಇರುವ ಆ ಪ್ರದೇಶದ ಕೊರೆತದಲ್ಲಿ ದಿನಾ ಸ್ನಾನಮಾಡುವ ವಾಡಿಕೆಯಿಲ್ಲ.

ನುಮಾಡುತ್ತಿದ್ದರು. ಸುಮಾರು ಹತ್ತುಹದಿನೈದು ನಿಮಿಷಗಳು ಚೆನ್ನಾಗಿ ವ್ಯಾಯಾಮಮಾಡಿ ಗಂಗೆಯಲ್ಲಿ ಮೀಯಲು ಪ್ರವಿಷ್ಟರಾದರು. ಪ್ರವಾಹವು ವೇಗವಾಗಿದ್ದಲ್ಲೇ ಸ್ನಾನಮಾಡುತ್ತಿದ್ದರು. ನೀರು ಸ್ವಾಮಿಗಳ ಕತ್ತಿನವರೆಗೂ ಆಳವಾಗಿದ್ದಿತು. ನಾನು 'ಮಹಾರಾಜ್! ಮುಂದೆ ಪ್ರವಾಹವು ಬಹು ವೇಗ ವಾಗಿದೆ; ಅಲ್ಲಿ ಹೋಗಬೇಡಿ' ಎಂದೆ. ಅದಕ್ಕೆ ಅವರು "ಪ್ರಿಯನೇ! ಏನೂ ಭಯವಿಲ್ಲ. ರಾಮನು ಚೆನ್ನಾಗಿ ಈಜಬಲ್ಲ' ಎಂದರು. ಅಲ್ಲೇ ಹೋಗಿ ಬಲವಾಗಿ ನಿಂತು ಕೈಕಾಲುಗಳನ್ನು ಚೆನ್ನಾಗಿ ತಿಕ್ಕಿಕೊಂಡು ಬಂದು ಮುಳುಗು ಹಾಕಿದರು; ಇಷ್ಟರಲ್ಲೇ ಕಾಲುಕೆಳಗಿದ್ದ ದೊಡ್ಡ ಗುಂಡು ಪ್ರವಾಹದ ವೇಗಕ್ಕೆ ಕೊಚ್ಚಿಹೋಯಿತು; ಕಾಲುಜಾರಿಬಿಟ್ಟಿತು. ಸ್ವಾಮಿಗಳು ನಿಲ್ಲಲಾರದೇ ಹೋದರು; ಪ್ರವಾಹದೊಂದಿಗೆ ತೇಲತೊಡಗಿದರು; ಮುಂದೆ ಕ್ಷಣಮಾತ್ರ ದಲ್ಲಿ ಅದು ಅವರನ್ನು ಸುಳಿಯುಮೇಲೆತಂದಿತ್ತು. ಇದನ್ನು ಕಾಣುತ್ತಲೇ ನಾನು ಗಟ್ಟಿಯಾಗಿ ಕಿರಿಚಿಕೊಂಡೆ; ಸ್ವಾಮಿಗಳು ಸುಳಿಯಿಂದ ಕೂಗಿ ಹೇಳಿ ದರು.—"ಪ್ರಿಯನೇ! ಗಾಬರಿಯಾಗಬೇಡ, ಈಗಲೇ ಈಜಿಕೊಂಡು ಬಂದು ಬಿಡುತ್ತೇನೆ' ನಾನು ಅವರನ್ನು ಸುಳಿಯಿಂದ ತಪ್ಪಿಸಲು ಪ್ರಯತ್ನಪಡುತ್ತಾ ಕೆಲವು ನಿಮಿಷಗಳು ನೋಡಿದೆ. ಆದರೆ ಅವರು ಕೈಕಾಲುಗಳನ್ನು ಸುಳಿ ಯಿಂದ ಎಳೆದುಕೊಳ್ಳುವ ಪ್ರಯತ್ನಮಾಡುತ್ತಿದ್ದಷ್ಟೂ ಜೋರಾಗಿ ಸುಳಿಯು ಅವರನ್ನು ಸುತ್ತಿಕೊಳ್ಳುತ್ತಿದ್ದಿತು. ಇದನ್ನು ನೋಡಿ ನನಗೆ ಗಾಬರಿಯಿಂದ ಪ್ರಜ್ಞೆತಪ್ಪುವಂತಾಯಿತು; ಅಲ್ಲಿ ಇಲ್ಲಿ ಸುತ್ತಲೂ ಓಡಾಡಿದೆ; ಸಹಾಯ ಕ್ಕಾಗಿ ಗಟ್ಟಿಯಾಗಿ ಕೂಗಿದೆ; ಕಿರಿಚಿದೆ. ದುರ್ಭಾಗ್ಯದಿಂದ ತೋಟದಲ್ಲಿ ಯಾರೂ ಇರಲಿಲ್ಲ. (ಹನ್ನೆರಡು ಘಂಟೆಯ ಸಮಯ—ಅಂದೇ ಟಿಹರಿಯ ಮಹಾರಾಜರು ತಮ್ಮ ಗಂಗೋತ್ರೀ ಯಾತ್ರೆಯನ್ನು ಮುಗಿಸಿಕೊಂಡು ರಾಜ ಧಾನಿಗೆ ಹಿಂದಿರುಗಿದ್ದರಾದುದರಿಂದ ಎಲ್ಲರೂ ಅವರ ಸ್ವಾಗತಕ್ಕಾಗಿ ಹೊರಟು ಹೋಗಿದ್ದರು.) ಇಷ್ಟುಹೊತ್ತಿಗೆ ಸ್ವಾಮಿಗಳು ಸರ್ರನೆ ಮುಳುಗುಹಾಕಿ ಸುಳಿ ಯಿಂದ ಹೊರಕ್ಕೆ ತಪ್ಪಿಸಿಕೊಂಡು ಬಂದರು; ಆದರೆ ಈಗ ಪ್ರವಾಹದ ಮಧ್ಯದ ಲ್ಲಿದ್ದರು. ಇಷ್ಟುಹೊತ್ತಿನ ಹೊಡೆದಾಟದಿಂದ ಶರೀರವು ದಣಿದಿದ್ದಿತೇನೋ! ಮಧ್ಯಪ್ರವಾಹಕ್ಕೆ ಬರುತ್ತಲೇ ಅವರ ಉಸಿರು ಸೋತಿತು; ಬಾಯಲ್ಲಿ ನೀರು ಸ್ವಲ್ಪಸ್ವಲ್ಪ ನುಗ್ಗತೊಡಗಿತು. ಹೀಗೆ ಶರೀರವು ನೀರಿನ ವಶವಾದದ್ದನ್ನು

ಕಂಡು ಸ್ವಾಮಿಗಳು ಅತಿ ಅಲಕ್ಷ್ಯದಿಂದ "ಹೋಗು! ಮತ್ತೆ ಅಮ್ಮನನ್ನು ನೆನೆಸಿಕೋ! ಹೀಗೆಯೇ ಹೋಗಬೇಕೆಂದು ನಿನ್ನ ವಿಧಿಲಿಖಿತವಿದ್ದಲ್ಲಿ ಹೋಗೇಬಿಡು" ಎಂದು ಜೋರಾಗಿ "ಓಂ! ಓಂ! ಓಂ!!" ಎಂದು ಮೂರುಬಾರಿ ಉಚ್ಚಾರಣೆಮಾಡುತ್ತಲೇ ಬಾಯಿತುಂಬ ನೀರು ನುಗ್ಗಿಬಿಟ್ಟಿತು. ಸ್ವಲ್ಪ ಹೊತ್ತಿಗೆ ಸುಳಿಯಿಂದ ಓಂಕಾರವು ಮೆಲ್ಲಗೆ ಕೇಳಿಬರುತ್ತಿದ್ದುದೂ ನಿಂತುಹೋಯಿತು. ಸ್ವಾಮಿಗಳ ಶರೀರವು ಪ್ರವಾಹದಲ್ಲಿ ಹರಿಯತೊಡಗಿತು. ಹರಿಯುತ್ತಿದ್ದಂತೆಯೇ ಸ್ವಾಮಿಗಳು ಕೈಕಾಲುಗಳನ್ನು ಜೋಡಿಸಿಕೊಂಡು ವೃತ್ತಿಯನ್ನು ಧ್ಯಾನದಲ್ಲಿ ಲೀನಮಾಡಿದರು. ಮುಂದೆ ಇನ್ನೂರು ಅಡಿಗಳ ದೂರದಲ್ಲಿದ್ದ ಗುಹೆಯೊಳಕ್ಕೆ ಶರೀರವು ತೇಲಿಹೋಯಿತು....ಸಿಡಿಲು ಬಡಿದವನಂತೆ ನಾನು ನೋಡುತ್ತಿರುವಾಗ ತೋಪುಗಳ ಸದ್ದು ಕೇಳಿಬಂದಿತು." (ಮಹಾರಾಜರು ತೀರ್ಥಯಾತ್ರೆಯಿಂದ ಹಿಂದಿರುಗಿ ರಾಜಧಾನಿಯಲ್ಲಿ ಪದಾರ್ಪಣಮಾಡಿದ ಗೌರವಕ್ಕಾಗಿ ತೋಪುಗಳು ಧ್ವನಿಮಾಡಿದುವು; ಸಂಯೋಗವಶದಿಂದ ಆ ಗಳಿಗೆಯಲ್ಲೇ ಸ್ವಾಮಿಗಳ ಶರೀರವು ಈ ನಶ್ವರ ಸಂಸಾರದಿಂದ ಮಹಾಪ್ರಸ್ಥಾನಮಾಡಿದ್ದಿತು. ಸುದ್ದಿಯನ್ನು ಕೇಳಿದ ಸಹಸ್ರಾರು ಕಣ್ಣುಗಳು ಕಂಬನಿಗರೆಯುತ್ತಿದ್ದುವು.)

ಹೀಗೆ ೧೯೦೬ನೇ ಅಕ್ಟೋಬರ್ ೧೭ನೇ ತಾರೀಖು ಮಧ್ಯಾಹ್ನದಲ್ಲಿ ಶ್ರೀ ಸ್ವಾಮಿ ರಾಮತೀರ್ಥರು ತಮ್ಮ ದೇಹವನ್ನು ತಮ್ಮ ಪ್ರಿಯ ಗಂಗೆಯ ಮಡಿಲಲ್ಲೇ ಸಮರ್ಪಿಸಿಬಿಟ್ಟು ಬ್ರಹ್ಮಲೀನರಾದರು. ಸುದ್ದಿಯು ಮಿಂಚಿನಂತೆ ದೇಶದೇಶಾಂತರಗಳಲ್ಲೆಲ್ಲಾ ಹರಡಿಬಿಟ್ಟಿತು. ಹಿಂದೂಸ್ಥಾನ, ಚೀನಾ, ಜರ್ಪಾ, ಅಮೆರಿಕಾ, ಈಜಿಪ್ಟ್ ಮೊದಲಾದ ಸಮಸ್ತ ದೇಶಗಳ ವರ್ತಮಾನ ಪತ್ರಿಕೆಗಳಲ್ಲೂ ದುಃಖಸಂತಾಪಗಳ ಕೂಗುಗಳು; ಊರೂರುಗಳಲ್ಲಿ ಸಂತಾಪಸೂಚಕ ಸಭೆಗಳು. ಸುದ್ದಿಯನ್ನು ಕೇಳಿದೊಡನೆಯೇ ಲಾಹೋರ್‌ನಲ್ಲಿದ್ದ ಪೂರ್ಣಸಿಂಹರು ಟೆಹರಿಗೆ ಓಡಿಬಂದರು. ದುಃಖದಲ್ಲಿ ಮುಳುಗಿದ್ದ ನಾರಾಯಣರೊಂದಿಗೆ ರಾಮರಿದ್ದ ಕೋಣೆಗೆ ಬಂದು ಅವರ ಕಾಗದ ಪತ್ರಗಳನ್ನು ಹುಡುಕುತ್ತಿರುವಲ್ಲಿ ಅವರು ಕಡೆಯದಾಗಿ ಬರೆಯುತ್ತಿದ್ದ ಕಾಗದದಹಾಳೆಯು ಕಣ್ಣಿಗೆ ಬಿದ್ದಿತು. ಆ ಉರ್ದು ಬರವಣಿಗೆಯಲ್ಲಿ ಕಡೆಯ ಪಂಕ್ತಿಯು ಪೆನ್ಸಿಲ್‌ನಲ್ಲಿ ಬರೆಯಲ್ಪಟ್ಟಿದೆ. ಅದರ ಅನುವಾದ ಹೀಗೆ:—

ಇಂದ್ರ, ರುದ್ರ, ಮರುತ್, ಬ್ರಹ್ಮಾ, ವಿಷ್ಣು, ಶಿವ, ಶಂಕರ್ ಇತ್ಯಾದಿ ಭಾರತಾ !

ಎಲೈ ಮರಣವೇ! ಬೇಶಕ್ ಈ ಶರೀರವನ್ನು ಹಾರಿಸಿಬಿಡು. ನನಗೆ ಇತರ ದೇಹಗಳಿಗೇನೂ ಕೊರತೆಯಿಲ್ಲ. ಚಂದ್ರನ ಕಿರಣಗಳನ್ನೇ, ಬೆಳ್ಳಿಯ ಚಿಕ್ಕಿಗಳನ್ನೇ ಧರಿಸಿ ಆನಂದದಿಂದಿರಬಲ್ಲೆ. ಪರ್ವತದ ನದೀನಾಲೆಗಳ ರೂಪವನ್ನು ಧರಿಸಿ ಹಾಡುತ್ತಾ ತಿರುಗುವೆ. ಅಲೆಗಳ ರೂಪವನ್ನುಟ್ಟು ಸರಿದಾಡುವೆ. ನಾನೇ ಪ್ರಭಾತದ ಉನ್ಮತ್ತಾನಂದ ಮಂದಮಾರುತ. ನನ್ನ ಈ ಲಾವಣ್ಯಮಯ ಮುಖಮಂಡಲವು ಸದಾ ಬದಲಾಯಿಸುತ್ತಿರುತ್ತದೆ. ಈ ರೂಪದಲ್ಲಿ ಪರ್ವತಗಳಿಂದಿಳಿದೆ. ಬಾಡಿದ ಗಿಡಗಳನ್ನು ಕಳಕಳಿಸುವಂತೆ ಸಗಿದೆ. ಪುಷ್ಪಗಳನ್ನು ನಗಿಸಿದೆ. ಬುಲ್‌ಬುಲ್‌ನ್ನು ಅಳಿಸಿದೆ. ಬಾಗಿಲುಗಳನ್ನು ಖಡಖಡಾಯಿಸಿದೆ (ಸದ್ದುಮಾಡಿದೆ) ನಿದ್ದೆಯಲ್ಲಿದ್ದವರನ್ನೆಬ್ಬಿಸಿದೆ. ಕೆಲವರ ಕಂಬಳಿ ಕ್ರೊಡೆದೆ; ಕೆಲವರ ಮುಸುಗು ಹಾರಿಸಿದೆ. ಅದನ್ನು ಎಚ್ಚರಿಸಿದೆ - ಇದನ್ನೆಚ್ಚರಿಸಿದೆ; ನಿನ್ನನ್ನೆಚ್ಚರಿಸಿದೆ. ಅದೋ ಹೋದೆ. ಅದೋ ಹೋದೆ. ಸಂಗಡ ಏನನ್ನೂ ಇಟ್ಟುಕೊಳ್ಳಲಿಲ್ಲ; ಯಾರ ಕೈಗೂ ಸಿಕ್ಕಲಿಲ್ಲ."

ಅಂದು - ಆ ದೀಪಾವಳೀ ರಾತ್ರೆ ಮಹಾರಾಜರು ತಮ್ಮ ಅರಮನೆಯಲ್ಲಿ ದೀಪಮಾಲೆಯು ಕೂಡದೆಂದು ಹೇಳಿ ದುಃಖಿತರಾದರು. ಶೀತ ಋತು ಮತ್ತು ಗಂಗೆಯ ಶೀತಜಲದ ಕಾರಣವಾಗಿ ಸ್ವಾಮಿಗಳ ದೇಹವು ತೇಲಲು ತಡವಾಯಿತು. ರಾಮಪ್ರೇಮಿಗಳೆಲ್ಲರೂ ಗಂಗಾ ತಡಿಗಳಲ್ಲಿ ಕಾದುಕುಳಿತಿದ್ದರು. ಒಂದು ವಾರದ ನಂತರ ದೇಹವು ತೇಲಿತು. ಅದನ್ನು ಆ ಮಧ್ಯಪ್ರವಾಹದಿಂದ ದಡಕ್ಕೆ ಪ್ರಯಾಸದಿಂದ ತಂದುದಾಯಿತು. ಶರೀರವು ಸಂಪೂರ್ಣ ಸಮಾಧಿಸ್ಥ ಸ್ಥಿತಿಯಲ್ಲಿದ್ದಿತು; ಕೈಗಳು ಒಂದಕ್ಕೊಂದು ಜೋತುಹಾಕಿಕೊಂಡಿದ್ದುವು; ಕಣ್ಣುಗಳು ಮುಚ್ಚಿದ್ದುವು. ಕತ್ತು ನೆಟ್ಟಗೆ ನಿಂತಿದ್ದಿತು. ಭಾಷಣಕಾಲದಲ್ಲಿ ಮಧ್ಯೆ ಮಧ್ಯೆ ಅವರು ಓಂಕಾರವನ್ನು ನುಡಿಯುತ್ತಿರುವರೋ ಎನ್ನುವಂತೆ ಬಾಯಿ ತೆರೆದಿದ್ದಿತು. ಕಾಲುಗಳು ಒಂದರಮೇಲೊಂದು ಬಗ್ಗಿತ್ತು. ಜಲಜಂತುಗಳು ಶರೀರವನ್ನು ಸೋಕಿಯೂ ಇರಲಿಲ್ಲ. ಈ ಶಿವಸಮಾಧಿಯಲ್ಲಿ ರಾಮರ ದೇಹವನ್ನು ಕಂಡು ಸಮಸ್ತರೂ ಓಂಕಾರೋಚ್ಚಾರಣೆ ಮಾಡಿದರು.

ಮತ್ತೆ ಅದನ್ನು ಒಂದು ಪೆಟ್ಟಿಗೆಯಲ್ಲಿಟ್ಟು ದೊಡ್ಡ ಗಂಗಾಭಾಗೀರಥಿಯಲ್ಲಿ ಅರ್ಪಣೆಮಾಡಿದ್ದಾಯಿತು.

ಹೀಗೆ ಸ್ವಾಮಿಗಳು ತಮ್ಮ ಕೇವಲ ಮೂವತ್ತುಮೂರು ವರ್ಷದ ಅಲ್ಪ ವಯಸ್ಸಿನಲ್ಲಿ ಬ್ರಹ್ಮಾಂಡವನ್ನೇ ಬೆರಗುಮಾಡಿ, ವಿದ್ಯುಜ್ಯೋತಿಯಂತೆ ಬೆಳಗಿ ಮತ್ತೆ ಅದೇ ವಿಶ್ವದಲ್ಲೇ ಅಂತರ್ಧಾನರಾದರು. ಅವರನ್ನು ನೋಡಿದವರು ಭಾಗ್ಯವಂತರು; ಸಂಭಾಷಿಸಿದವರು ಸೌಭಾಗ್ಯವಂತರು; ಅವರನ್ನು ಪ್ರೀತಿಸಿ ಸೇವಿಸಿದವರಂತೂ ಮಹಾಪುಣ್ಯಾತ್ಮರು. ಅವರ ಚರಿತ್ರೆಯನ್ನರಿತವರೇ ಧನ್ಯರು.

ಒಪ್ಪೋಲೆ

ಪುಟ	ಪಂಕ್ತಿ	ತಪ್ಪು	ಒಪ್ಪು
೩೧	೨೦	೬೧	೬
೪೫	೭	ಇಪ್ಪತ್ತೇಳು	ಇಪ್ಪತ್ತಮೂರು
೬೫	೩	ಅದಂ	ಅಹಂ
೬೫	೧೨	ವಿಫಲ	ವಿಪುಲ
೬೭	೨೦	ಘಟನಾವಳಿಗಳ	ಘಟಾವಳಿಗಳ
೬೯	೫	ಹಬ್ಬುತುಂಬಿ	ಹಬ್ಬುತುಬ್ಬಿ
೭೪	೭	ನೋವಾಗಿದೆಯೇ	ನೋವಾಗದೇ
೭೫	೨೨	ಪೂರ್ಣಗತವಾಗಿದ್ದುವು	ಪೂರ್ಣಕರಗತವಾಗಿದ್ದುವು
೮೦	೮	ಮಾಡಿದರು	ಭಾಷಣಮಾಡಿದರು
೮೦	೧೯	ಆತನ	ಅಲ್ಲಿನ
೮೫	೧೯	ಪತ್ನಿಯು ಸಿಡಿದು	ಪತ್ನಿಗೆ ಸಿಡಿಲು
೯೧	[illegible]	[illegible]	...ಕೂಲಗಳನ್ನು
೧೦೦	[illegible]	[illegible]	...ವ್ಮೊಬ್ಬೊಬ್ಬರಿಗೂ
೧೦೩	೨...	[illegible]	...ಸಲುವಾಗಿ ಸಹಾಯವಾ
			...ಕಾದ ಒಂದು ವಿಶ್ವವಿದ್ಯಾ